ಶುಕ್ರವಾರ, ಸೆಪ್ಟೆಂಬರ್ 23, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 264 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ನಿಶ್ವಿಕಾ ನಾಯ್ಡು ಇದೀಗ ಹಳ್ಳಿ ಹುಡುಗಿಯಾಗಿ ಮೇಷ್ಟ್ರ ಹಿಂದೆ ಬಿದ್ದಿದ್ದಾರೆ. ರವಿಚಂದ್ರನ್ ಅಭಿಮಾನಿ ಈ 'ಸೂಜಿ' ಹೇಳಿದ್ದು...

ಆಳ-ಅಗಲ
ಭಾರತಕ್ಕೆ ಮರಳಿ ಸಿಕ್ಕೀತೇ ಕೊಹಿನೂರ್ ವಜ್ರ?

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,119	17,629	₹51,160 (ಬೆಂಗಳೂರು)	₹58,100 (ಬೆಂಗಳೂರು)	80.79

'ಪೇಸಿಎಂ': ಪರಿಷತ್‌ನಲ್ಲಿ ಕೋಲಾಹಲ 5

ಪಿಎಫ್‌ಐ ಮೇಲೆ ದಾಳಿ

ಐಎಸ್ ಸೇರಲು ಪ್ರಚೋದನೆ • ಭಯೋತ್ಪಾದನೆ ಸಂಚು • ಏಳು ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾನೂನುಬಾಹಿರ ಚಟುವಟಿಕೆ ಹಾಗೂ ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸುತ್ತಿದ್ದ ಆರೋಪದಡಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯ ಕರ್ನಾಟಕದ ಕಚೇರಿ ಮತ್ತು ಮುಖಂಡರ ಮನೆಗಳ ಮೇಲೆ ತನಿಖಾ ಸಂಸ್ಥೆಗಳು ಗುರುವಾರ ದಾಳಿ ಮಾಡಿದ್ದು, ಪಿಎಫ್‌ಐ ಸಂಘಟನೆಯ ಏಳು ಮುಖಂಡರನ್ನು ಬಂಧಿಸಿವೆ.

ಮುಸ್ಲಿಂ ಯುವಕರನ್ನು ಪ್ರಚೋದಿಸಿ ಐಎಸ್ (ಇಸ್ಲಾಮಿಕ್ ಸ್ಟೇಟ್) ಉಗ್ರ ಸಂಘಟನೆಗೆ ಸೇರಿಸುತ್ತಿದ್ದ, ವಿದೇಶಗಳಿಂದ ಹಣ ಸಂಗ್ರಹಿಸಿ ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸುತ್ತಿದ್ದ ಹಾಗೂ ಭಯೋತ್ಪಾದನಾ ಕೃತ್ಯ ಎಸಗಲೆಂದು ತರಬೇತಿ ಕೊಡಿಸುತ್ತಿದ್ದ ಬಗ್ಗೆ ಎನ್‌ಐಎ ಮಾಹಿತಿ ಕಲೆಹಾಕಿತ್ತು. ಕೇಂದ್ರ ಗೃಹ ಇಲಾಖೆಯ ನಿರ್ದೇಶನದನ್ವಯ ಕಾನೂನು ಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆಯಡಿ (ಯುಪಿಎ) ಪಿಎಫ್‌ಐ ಸಂಘಟನೆ ಮುಖಂಡರು ಹಾಗೂ ಕಾರ್ಯಕರ್ತರ ವಿರುದ್ಧ 19 ಪ್ರಕರಣಗಳು ದಾಖಲಾಗಿದ್ದವು.

2022ರ ಏಪ್ರಿಲ್ 13ರಂದು ದಾಖಲಾಗಿರುವ ಪ್ರಕರಣದ ವಿಚಾರಣೆ ನಡೆಸುತ್ತಿರುವ ನವದೆಹಲಿಯ ಎನ್‌ಐಎ ವಿಶೇಷ ನ್ಯಾಯಾಲಯ, ಆರೋಪಿಗಳ ಕಚೇರಿ ಹಾಗೂ ಮನೆಗಳಲ್ಲಿ ಶೋಧ ನಡೆಸಲು ಸೆ. 21ರಂದು ವಾರಂಟ್ ಜಾರಿ ಮಾಡಿತ್ತು. ಅದರನ್ವಯ ರಾಷ್ಟ್ರೀಯ ತನಿಖಾ ದಳದ ಅಧಿಕಾರಿಗಳು, ಜಾರಿ ನಿರ್ದೇಶನಾಲಯ ಹಾಗೂ ಪೊಲೀಸರ ನೆರವಿನೊಂದಿಗೆ ಬೆಂಗಳೂರು, ಮಂಗಳೂರು, ಕಲಬುರಗಿ, ಮೈಸೂರು ಸೇರಿದಂತೆ 9 ಕಡೆಗಳಲ್ಲಿ ದಾಳಿ ಮಾಡಿದರು.

ಎನ್‌ಐಎ ನಡೆಸಿದ ಶೋಧ ಕಾರ್ಯಾಚರಣೆಯನ್ನು ವಿರೋಧಿಸಿ ಗುರುವಾರ ಹುಬ್ಬಳ್ಳಿಯಲ್ಲಿ ಪ್ರತಿಭಟನೆ ನಡೆಸಿದ ಪಿಎಫ್‌ಐ, ಎಸ್‌ಡಿಪಿಐ ಕಾರ್ಯಕರ್ತರನ್ನು ಪೊಲೀಸರು ಎಳೆದೊಯ್ದರು –ಪಿಟಿಐ ಚಿತ್ರ

ಮೊಹಮ್ಮದ್ ಸಾಕೀಬ್

ಯಾಸೀರ್ ಹಸನ್

10ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 10

ಬಂಧಿತ ಪಿಎಫ್‌ಐ ಮುಖಂಡರು

ಪಿಎಫ್‌ಐ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಯಾಸೀರ್ ಹಸನ್ ಅಲಿಯಾಸ್ ಯಾಸೀರ್ ಅರ್ಫತ್ ಹಸನ್, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳಾದ ಅನಿಸ್ ಅಹ್ಮದ್, ಮೊಹಮ್ಮದ್ ಸಾಕೀಬ್, ಕಾರ್ಯದರ್ಶಿ ಅಪ್ಸರ್ ಪಾಷಾ, ಉಪಾಧ್ಯಕ್ಷ ಅಬ್ದುಲ್ ವಾಹೀದ್ ಸೇಠ್, ಮೈಸೂರು ಘಟಕದ ಮಾಜಿ ಅಧ್ಯಕ್ಷ ಮೊಹಮ್ಮದ್ ಫಾರೂಕ್ ಉರ್ ರೆಹಮಾನ್, ಕಲಬುರ್ಗಿ ಜಿಲ್ಲಾ ಘಟಕದ ಖಜಾಂಚಿ ಶಾಹಿದ್ ನಾಸಿರ್.

93 ಸ್ಥಳಗಳಲ್ಲಿ ಶೋಧ, 106 ಬಂಧನ

ನವದೆಹಲಿ (ಪಿಟಿಐ): ರಾಷ್ಟ್ರೀಯ ತನಿಖಾ ಸಂಸ್ಥೆಯ ನೇತೃತ್ವದಲ್ಲಿ ವಿವಿಧ ತನಿಖಾ ಸಂಸ್ಥೆಗಳು ಮುಸ್ಲಿಂ ಸಂಘಟನೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ವಿರುದ್ಧ ಗುರುವಾರ ಭಾರಿ ಕಾರ್ಯಾಚರಣೆ ನಡೆಸಿವೆ. ಪಿಎಫ್‌ಐಗೆ ಸೇರಿದ 93 ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ. ಒಟ್ಟು 15 ರಾಜ್ಯಗಳಲ್ಲಿ ಕಾರ್ಯಾಚರಣೆ ನಡೆದಿದೆ. 106 ಕಾರ್ಯಕರ್ತರನ್ನು ಬಂಧಿಸಲಾಗಿದೆ. ಪಿಎಫ್‌ಐ ವಿರುದ್ಧ ನಡೆದ ಈವರೆಗಿನ ಅತ್ಯಂತ ದೊಡ್ಡ ಕಾರ್ಯಾಚರಣೆ ಇದು ಎಂದು ಎನ್‌ಐಎ ಅಧಿಕಾರಿಗಳು ಹೇಳಿದ್ದಾರೆ.

ಪಿಎಫ್‌ಐ ಗಮನಾರ್ಹ ನೆಲೆ ಹೊಂದಿರುವ ಕೇರಳದಲ್ಲಿ ಅತಿ ಹೆಚ್ಚು ಅಂದರೆ 22 ಜನರನ್ನು ಬಂಧಿಸಲಾಗಿದೆ. ಪಿಎಫ್‌ಐ ಅಧ್ಯಕ್ಷ ಒ.ಎಂ.ಎ. ಸಲಾಂ ಅವರೂ ಬಂಧಿತರಲ್ಲಿ ಸೇರಿದ್ದಾರೆ.

ಎನ್‌ಐಎ ಮತ್ತು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಹಾಗೂ ಆಯಾ ರಾಜ್ಯಗಳ ಪೊಲೀಸರು ಕಾರ್ಯಾ-ಚರಣೆಯಲ್ಲಿ ಭಾಗಿಯಾಗಿದ್ದಾರೆ.

ಬಿಎಂಎಸ್ ಶಿಕ್ಷಣ ಸಂಸ್ಥೆ: ಬೈ–ಲಾ ಉಲ್ಲಂಘಿಸಿ ನೇಮಕ

ಅಶ್ವತ್ಥನಾರಾಯಣ ರಾಜೀನಾಮೆಗೆ ಎಚ್‌.ಡಿ. ಕುಮಾರಸ್ವಾಮಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಎಂಎಸ್ ಶಿಕ್ಷಣ ಸಂಸ್ಥೆಯಲ್ಲಿ ಬೈಲಾ ಉಲ್ಲಂಘಿಸಿ ಟ್ರಸ್ಟಿಗಳ ನೇಮಕ, ಪ್ರವೇಶ ಪ್ರಕ್ರಿಯೆ, ಶುಲ್ಕ ವಸೂಲಿ ಮತ್ತು ಜಮೀನಿನಲ್ಲಿ ಅಕ್ರಮ ನಡೆದಿದ್ದು, ಇದರಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಶಾಮೀಲಾಗಿರುವುದ-ರಿಂದ ಅವರ ತಲೆದಂಡ ಆಗಲೇಬೇಕು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಒತ್ತಾಯಿಸಿದರು.

ವಿಧಾನಸಭೆಯಲ್ಲಿ ಗುರುವಾರ ನಿಯಮ 69ರ ಅಡಿ ಈ ವಿಷಯವನ್ನು ಪ್ರಸ್ತಾಪಿಸಿದ ಅವರು, ಈ ವಿಷಯದ ಬಗ್ಗೆ ಒಂದೂವರೆ ಗಂಟೆಗಳ ಕಾಲ ಸುದೀರ್ಘ ವಿವರಣೆ ನೀಡಿದರಲ್ಲದೇ ಸಮಗ್ರ ತನಿಖೆ ಆಗಬೇಕು ಎಂದು ಒತ್ತಾಯಿಸಿದರು. 'ಆರೋಪದಲ್ಲಿ ಯಾವುದೇ ಹುರುಳಿಲ್ಲ, ಆದ್ದರಿಂದ ತನಿಖೆಯ ಅಗತ್ಯವೇ ಇಲ್ಲ' ಎಂದು ಸಚಿವ ಅಶ್ವತ್ಥನಾರಾಯಣ ಹೇಳಿದರು

ಸಚಿವರ ಉತ್ತರವನ್ನು ಪ್ರತಿಭಟಿಸಿ ಜೆಡಿಎಸ್ ಸದಸ್ಯರು ಸಭಾಧ್ಯಕ್ಷರ ಪೀಠದ ಎದುರು ಧರಣಿಗೆ ಮುಂದಾದರು. ಆ ವೇಳೆ, ಕಲಾಪವನ್ನು ಶುಕ್ರವಾರಕ್ಕೆ ಮುಂದೂಡಲಾಯಿತು. ಅದನ್ನು ಒಪ್ಪದ ಜೆಡಿಎಸ್ ಸದಸ್ಯರು ಅಹೋರಾತ್ರಿ ಧರಣಿಗೆ ಕುಳಿತರು.

10ನೇ ಪುಟ ನೋಡಿ

ಗಾಳಿಯಲ್ಲಿ ಗುಂಡು: ಸಚಿವರ ವ್ಯಂಗ್ಯ

'ಬಿಎಂಎಸ್ ಶಿಕ್ಷಣ ಸಂಸ್ಥೆಯ ಟ್ರಸ್ಟ್ ಮೇಲೆ ಸರ್ಕಾರದ ಸಂಪೂರ್ಣ ಅಧಿಕಾರ ಇದೆ. ಟ್ರಸ್ಟ್‌ನಲ್ಲಿ ಸರ್ಕಾರದ ಪ್ರತಿನಿಧಿಯೂ ಇರುತ್ತಾರೆ. ಟ್ರಸ್ಟ್ ಡೀಡ್‌ನಲ್ಲಿ ಯಾವುದೇ ಬದಲಾವಣೆ ಮಾಡಬೇಕಾದರೂ ಸರ್ಕಾರದ ಅನುಮೋದನೆ ಪಡೆಯಬೇಕಾಗುತ್ತದೆ. ಕುಮಾರಸ್ವಾಮಿ ಗಾಳಿಯಲ್ಲಿ ಗುಂಡು ಹೊಡೆಯುತ್ತಿದ್ದಾರೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಹೇಳಿದರು.

'ಟ್ರಸ್ಟಿಗಳನ್ನು ನೇಮಕ ಮಾಡುವ ಅಧಿಕಾರವನ್ನು ಸರ್ಕಾರ ಈಗಲೂ ಹೊಂದಿದೆ. ಬೈಲಾಗೆ ಎಚ್.ಡಿ. ಕುಮಾರಸ್ವಾಮಿ ಸರ್ಕಾರದ ಅವಧಿಯಲ್ಲಿ ಆದ ತಿದ್ದುಪಡಿಗಳಿಗೆ ನಮ್ಮ ಸರ್ಕಾರ ಬಂದ ಮೇಲೆ ಒಪ್ಪಿಗೆ ನೀಡಿದೆ. ಟ್ರಸ್ಟ್ ಇರುವುದು ಶಿಕ್ಷಣದ ಉದ್ದೇಶಕ್ಕಾಗಿಯೇ ಹೊರತು, ವಾಣಿಜ್ಯ ಉದ್ದೇಶಕ್ಕಲ್ಲ. ಆ ಸಂಸ್ಥೆಗೆ ಸರ್ಕಾರ ಕೊಟ್ಟ ಜಮೀನು 2 ಎಕರೆ 28 ಗುಂಟೆ. ಬಿ.ಎಸ್.ನಾರಾಯಣ ಅವರು 15 ಎಕರೆ ಸ್ವಂತ ಜಮೀನಿನಲ್ಲಿ ಸಂಸ್ಥೆ ಆರಂಭಿಸಿದ್ದು. ಯಲಹಂಕದಲ್ಲಿ 21 ಎಕರೆ ಖರೀದಿಸಿ ಅಲ್ಲಿಯೂ ಶಿಕ್ಷಣ ಸಂಸ್ಥೆ' ಆರಂಭಿಸಿದರು.

10ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸಿಇಟಿ: ಪರಿಹಾರ ಸೂತ್ರ ಹೈಕೋರ್ಟ್‌ಗೆ ಸಲ್ಲಿಕೆ

ಬೆಂಗಳೂರು: 'ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ಪುನರಾವರ್ತಿತ ವಿದ್ಯಾರ್ಥಿಗಳ 2021ನೇ ಸಾಲಿನ ಪಿಯು ಅಂಕಗಳನ್ನು 2022ನೇ ಸಾಲಿನ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಪರಿಗಣಿಸುವ ವಿಚಾರದಲ್ಲಿ ಉದ್ಭವಿಸಿರುವ ಬಿಕ್ಕಟ್ಟು ಪರಿಹರಿಸಲು ಸಿದ್ಧಪಡಿಸ-ಲಾಗಿರುವ ಸೂತ್ರವನ್ನು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಸಲ್ಲಿಸಿದೆ.

ಈ ಕುರಿತ ಮೇಲ್ಮನವಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

10ನೇ ಪುಟ ನೋಡಿ

ಸಾರ್ವಕಾಲಿಕ ಕನಿಷ್ಠ ಮಟ್ಟದಲ್ಲಿ ರೂಪಾಯಿ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಗುರುವಾರ 83 ಪೈಸೆ ಕುಸಿದಿದೆ. ಇದು ಏಳು ತಿಂಗಳಲ್ಲಿ ರೂಪಾಯಿ ಒಂದೇ ದಿನದಲ್ಲಿ ಕಂಡ ಅತಿದೊಡ್ಡ ಕುಸಿತ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿಯು ಡಾಲರ್ ಎದುರು ₹ 80.79ರಂತೆ ವಿನಿಮಯವಾಗಿದೆ.

ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ಹೆಚ್ಚಿಸಿರುವುದು ಹಾಗೂ ಉಕ್ರೇನ್ ಬಿಕ್ಕಟ್ಟು ತೀವ್ರಗೊಂಡಿರುವುದು ರೂಪಾಯಿ ಮೌಲ್ಯದ ಮೇಲೆ ಪರಿಣಾಮ ಬೀರಿವೆ ಎಂದು ವರ್ತಕರು ತಿಳಿಸಿದ್ದಾರೆ. ಡಾಲರ್ ಬಲವರ್ಧನೆ, ದೇಶಿ ಷೇರುಮಾರುಕಟ್ಟೆಯಲ್ಲಿ ತೇಜಿ ವಹಿವಾಟು ಇಲ್ಲದಿರುವುದು ಕೂಡ ಕುಸಿತಕ್ಕೆ ಕಾರಣ ಎಂದಿದ್ದಾರೆ. ಅಮೆರಿಕದ ಡಾಲರ್ ಎದುರು ರೂಪಾಯಿಯು ಫೆಬ್ರುವರಿ 24ರಂದು ಒಂದೇ ದಿನದಲ್ಲಿ 99 ಪೈಸೆ ಕುಸಿದಿತ್ತು.

ಕರ್ನಾಟಕದಲ್ಲಿ ಕನ್ನಡವೇ ಅಧಿಕೃತ ಭಾಷೆ- ಮಸೂದೆ ಮಂಡಿಸಿದ ಸರ್ಕಾರ

ಕನ್ನಡ ಕಲಿತರಷ್ಟೇ ಸರ್ಕಾರಿ ಉದ್ಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಅಥವಾ ಸರ್ಕಾರದ ಅಧೀನ ಸಂಸ್ಥೆಗಳಲ್ಲಿ ಉದ್ಯೋಗ ಪಡೆಯಲು ಎಸ್‌ಎಸ್‌ಎಲ್‌ಸಿ ವರೆಗೆ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಅಧ್ಯಯನ ಮಾಡಿ, ಉತ್ತೀರ್ಣರಾಗಿರುವುದನ್ನು ಕಡ್ಡಾಯಗೊಳಿಸುವ 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆ–2022' ಅನ್ನು ವಿಧಾನಸಭೆಯಲ್ಲಿ ಗುರುವಾರ ಮಂಡಿಸಲಾಯಿತು.

ಕನ್ನಡವನ್ನು ಅಧಿಕೃತ ರಾಜ್ಯ ಭಾಷೆ ಎಂದು ತೀರ್ಮಾನಿಸುವ ಪ್ರಸ್ತಾವ ಮಸೂದೆಯಲ್ಲಿದೆ. ಸರ್ಕಾರದ ಎಲ್ಲ ವ್ಯವಹಾರಗಳಲ್ಲಿ ಹಾಗೂ ನ್ಯಾಯಾಲಯಗಳಲ್ಲಿ ಕನ್ನಡ ಬಳಕೆಯನ್ನು ಕಡ್ಡಾಯ-ಗೊಳಿಸುವ ಅಂಶ ಮಸೂದೆಯಲ್ಲಿದೆ. ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್ ಸದನದಲ್ಲಿ ಮಸೂದೆಯನ್ನು ಮಂಡಿಸಿದರು.

'ಒಬ್ಬ ವ್ಯಕ್ತಿ ಅಥವಾ ಆತನ ಪೋಷಕರು 15 ವರ್ಷಗಳಿಂದ ಕರ್ನಾಟಕದಲ್ಲಿ ನೆಲೆಸಿದ್ದಲ್ಲಿ ಮತ್ತು ಕನ್ನಡ ಓದಲು ಹಾಗೂ ಬರೆಯಲು ಬರುತ್ತಿದ್ದಲ್ಲಿ ಆತ ಕನ್ನಡಿಗ' ಎಂದು ಮಸೂದೆಯಲ್ಲಿ ತಿಳಿಸಲಾಗಿದೆ. ಮಸೂದೆಯಲ್ಲಿನ ಅಂಶಗಳ ಅನುಷ್ಠಾನಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯಕ್ಕೆ ಅಧಿಕೃತ ಭಾಷಾ ಜಾರಿ ನಿರ್ದೇಶನಾಲಯದ ಸ್ಥಾ-ನಮಾನವನ್ನೂ ನೀಡುವ ಪ್ರಸ್ತಾವವಿದೆ.

'ಕನ್ನಡದ ಅಭಿವೃದ್ಧಿಗಾಗಿ ಈ ಹಿಂದೆ ಕರ್ನಾಟಕ ರಾಜಭಾಷಾ ಕಾಯ್ದೆ–1963, ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಅಧಿಕೃತ ಭಾಷೆ) ಕಾಯ್ದೆ–1981 ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ–1994 ಜಾರಿಗೊಳಿಸಲಾಗಿತ್ತು. ಅವುಗಳ ಅನುಷ್ಠಾನದಿಂದ ಕನ್ನಡವನ್ನು ಅಧಿಕೃತ ಭಾಷೆಯನ್ನಾಗಿ ಜಾರಿಗೊಳಿಸುವ ಕೆಲಸ ಪೂರ್ಣ ಪ್ರಮಾಣದಲ್ಲಿ ಆಗಿಲ್ಲ. ಈ ಕಾರಣದಿಂದ ಮಸೂದೆ ತರಲಾಗಿದೆ' ಎಂದು ರಾಜ್ಯ ಸರ್ಕಾರ ವಿವರಿಸಿದೆ.

ಮಸೂದೆಯಲ್ಲಿರುವ ಅಂಶಗಳನ್ನು ಜಾರಿಗೊಳಿಸಲು ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಪ್ರಾಧಿಕಾರಗಳನ್ನು ನೇಮಿಸುವ ಪ್ರಸ್ತಾವವಿದೆ. ಈ ಮಸೂದೆಯ ಅನುಷ್ಠಾನದಿಂದ ಸರ್ಕಾರದ ಬೊಕ್ಕಸದ ಮೇಲೆ ₹ 3.21 ಕೋಟಿ ಹೊರೆ ಬೀಳಲಿದೆ.

ಕನ್ನಡ ಬಳಕೆ ಉಲ್ಲಂಘಿಸಿದರೆ ₹20 ಸಾವಿರ ದಂಡ

- ಕನ್ನಡ ಭಾಷೆಯ ಬಳಕೆ ವಿಚಾರದಲ್ಲಿ ನಿಯಮ ಉಲ್ಲಂಘನೆಗೆ ₹ 20,000ದವರೆಗೂ ದಂಡ.
- ಉನ್ನತ ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣದಲ್ಲಿ ಕನ್ನಡ ಭಾಷೆಯ ಬಳಕೆಗೆ ಉತ್ತೇಜನ.
- ಎಸ್‌ಎಸ್‌ಎಲ್‌ಸಿವರೆಗೆ ಕನ್ನಡವನ್ನು ಒಂದು ಭಾಷೆಯಾಗಿ ಕಲಿಯದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದಲ್ಲಿ ಕನ್ನಡ ಕಲಿಕೆ ಕಡ್ಡಾಯ.
- ಎಸ್‌ಎಸ್‌ಎಲ್‌ಸಿವರೆಗೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದವರಿಗೆ ಉನ್ನತ ಶಿಕ್ಷಣ, ತಾಂತ್ರಿಕ ಶಿಕ್ಷಣ ಮತ್ತು ವೃತ್ತಿಪರ ಶಿಕ್ಷಣದಲ್ಲಿ ಮೀಸಲಾತಿ.
- ಕೇಂದ್ರ ಹಾಗೂ ರಾಜ್ಯ ಸರ್ಕಾರದ ಕಚೇರಿಗಳು, ಖಾಸಗಿ ಸಂಸ್ಥೆಗಳು ಸೇರಿದಂತೆ ಎಲ್ಲ ಕಡೆಗಳಲ್ಲಿ ಕನ್ನಡ ಭಾಷೆಯ ಪ್ರಚಾರಕ್ಕೆ ಉತ್ತೇಜನ.
- ಇ– ಆಡಳಿತ ಮತ್ತು ಇ–ಟೆಂಡರ್ ಪ್ರಕ್ರಿಯೆಯಲ್ಲಿ ಕನ್ನಡದ ಬಳಕೆ.
- ಕನ್ನಡಿಗರಿಗೆ ನಿಗದಿತ ಪ್ರಮಾಣದ ಉದ್ಯೋಗ ನೀಡುವ ಉದ್ದಿಮೆಗಳಿಗೆ ಜಮೀನು ಮಂಜೂರಾತಿ ಮತ್ತು ತೆರಿಗೆ ರಿಯಾಯಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಬೃಹತ್ ನೀರು ಕಾಲುವೆ–ಪಶ್ಚಿಮ ವಲಯ, ಬೃಬೆಂಮಪಾ
9ನೇ ಮಹಡಿ, ವಾಣಿಜ್ಯ ಸಂಕೀರ್ಣ, 4ನೇ ಬ್ಲಾಕ್ ಜಯನಗರ, ಬೆಂಗಳೂರು – 560 011

ಸಂಖ್ಯೆ:ಕಾಪಾಅ/ಬೃನೀಕಾ/ಪಶ್ಚಿಮ/ಟೆಂಡರ್/04/2022–23 ದಿನಾಂಕ: 22.09.2022

ಪ್ರಸ್ತಾವನೆಗಾಗಿ ಕೋರಿಕೆ (ಆರ್‌ಎಫ್‌ಪಿ) ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬೃ.ನೀ.ಕಾ ಪಶ್ಚಿಮ ವಲಯ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರು ಈ ಕೆಳಕಂಡ ಕಾಮಗಾರಿಗಳನ್ನುಕೈಗೊಳ್ಳಲು ಪೂರ್ವ ಮತ್ತು ನಂತರದ ಹಂತಗಳಲ್ಲಿ ನಿರ್ಮಾಣ ಉಸ್ತುವಾರಿ, ಯೋಜನೆ ನಿರ್ವಹಣೆ, ಗುಣಮಟ್ಟ ನಿಯಂತ್ರಣಗಳಿಗೆ ಯೋಜನಾ ನಿರ್ವಹಣೆ ಸಲಹಾಸೇವೆಗಳನ್ನು ಒದಗಿಸಲು ಅರ್ಹ ನೋಂದಾಯಿತ/ಹೆಸರಾಂತ ಸಮಾಲೋಚಕ ಸಂಸ್ಥೆಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು	ಯೋಜನೆಯ ಅಂದಾಜು ಮೊತ್ತ (₹.ಲಕ್ಷಗಳಲ್ಲಿ)	ಇಎಂಡಿ (₹. ಗಳಲ್ಲಿ)
1	2022–23ನೇ ಸಾಲಿನ ಕರ್ನಾಟಕ ಸರ್ಕಾರದ ಅನುದಾನಗಳಡಿಯಲ್ಲಿ ಮಹಾಲಕ್ಷ್ಮಿ ಬಡಾವಣೆ ವಿಧಾನಸಭಾ ಕ್ಷೇತ್ರದ ಪಶ್ಚಿಮ ವಲಯದಲ್ಲಿ ಹರಡಿಕೊಂಡಿರುವ ಬೃ.ನೀ.ಕಾಲುವೆಗಳ ಪ್ರಾಥಮಿಕ, ದ್ವಿತೀಯ ಚರಂಡಿಗಳು, ಕಲ್ವರ್ಟ್‌ಗಳು/ಸೇತುವೆಗಳನ್ನು ನಿರ್ಮಾಣ/ನವೀಕರಣ ಮಾಡುವುದು ಹಾಗೂ ಎಲ್ಲಾ ಸಂಬಂಧಿತ ಪ್ಯಾಕೇಜ್ ಕಾಮಗಾರಿಗಳಿಗಾಗಿ ಯೋಜನೆ ನಿರ್ವಹಣೆ ಸಲಹೆ ಸೇವೆಗಳನ್ನು (ಪಿಎಂಸಿ ಸೇವೆಗಳು) ಒದಗಿಸುವುದು. (ಕ್ರಿಯಾ ಯೋಜನೆ ಸಂಖ್ಯೆ. 55, 56, 57, 58, 59, 60, 61, 62, 63, 64, 65, 66, 67, 68 & 69) (**ಪ್ಯಾಕೇಜ್–1**)	2000.00	50,000/-
2	2022–23ನೇ ಸಾಲಿನ ಕರ್ನಾಟಕ ಸರ್ಕಾರದ ಅನುದಾನಗಳಡಿಯಲ್ಲಿ ಗಾಂಧಿನಗರ ವಿಧಾನಸಭಾ ಕ್ಷೇತ್ರದ ಪಶ್ಚಿಮ ವಲಯದಲ್ಲಿ ವಿವಿಧ ಪ್ರದೇಶಗಳಲ್ಲಿ ಹರಡಿಕೊಂಡಿರುವ ಬೃ.ನೀ.ಕಾಲುವೆಗಳ ಪ್ರಾಥಮಿಕ, ದ್ವಿತೀಯ ವರ್ಗದ ಚರಂಡಿಗಳು, ಕಲ್ವರ್ಟ್‌ಗಳು/ಸೇತುವೆಗಳನ್ನು ನಿರ್ಮಾಣ/ನವೀಕರಣ ಮಾಡುವುದು ಹಾಗೂ ಇತರೆ ಎಲ್ಲಾ ಸಂಬಂಧಿತ ಪ್ಯಾಕೇಜ್ ಕಾಮಗಾರಿಗಳಿಗಾಗಿ ಯೋಜನೆ ನಿರ್ವಹಣೆ ಸಲಹೆ ಸೇವೆಗಳನ್ನು (ಪಿಎಂಸಿ ಸೇವೆಗಳು) ಒದಗಿಸುವುದು. (ಕ್ರಿಯಾ ಯೋಜನೆ ಸಂಖ್ಯೆ. 70, 71, 72, 73,74, 75, 76, 77, 78, 79, 80, 81, 82, 83, 84, 85 & 86) (**ಪ್ಯಾಕೇಜ್–2**)	2500.00	50,000/-
3	2022–23ನೇ ಸಾಲಿನ ಕರ್ನಾಟಕ ಸರ್ಕಾರದ ಅನುದಾನಗಳಡಿಯಲ್ಲಿ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ಪಶ್ಚಿಮ ವಲಯದಲ್ಲಿ ವಿವಿಧ ಪ್ರದೇಶಗಳಲ್ಲಿ ಹರಡಿಕೊಂಡಿರುವ ಬೃ.ನೀ.ಕಾಲುವೆಗಳ ಪ್ರಾಥಮಿಕ, ದ್ವಿತೀಯ ವರ್ಗದ ಚರಂಡಿಗಳು, ಕಲ್ವರ್ಟ್‌ಗಳು/ಸೇತುವೆಗಳನ್ನು ನಿರ್ಮಾಣ/ನವೀಕರಣ ಮಾಡುವುದು ಹಾಗೂ ಇತರೆ ಎಲ್ಲಾ ಸಂಬಂಧಿತ ಪ್ಯಾಕೇಜ್ ಕಾಮಗಾರಿಗಳಿಗಾಗಿ ಯೋಜನೆ ನಿರ್ವಹಣೆ ಸಲಹೆ ಸೇವೆಗಳನ್ನು (ಪಿಎಂಸಿ ಸೇವೆಗಳು) ಒದಗಿಸುವುದು. (ಕ್ರಿಯಾ ಯೋಜನೆ ಸಂಖ್ಯೆ. 87, 88, 89, 90, 91, 92, 93 & 94) (**ಪ್ಯಾಕೇಜ್–3**)	3000.00	60,000/-
4	2022–23ನೇ ಸಾಲಿನ ಕರ್ನಾಟಕ ಸರ್ಕಾರದ ಅನುದಾನಗಳಡಿಯಲ್ಲಿ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಪಶ್ಚಿಮ ವಲಯದಲ್ಲಿ ವಿವಿಧ ಪ್ರದೇಶಗಳಲ್ಲಿ ಹರಡಿಕೊಂಡಿರುವ ಬೃ.ನೀ.ಕಾಲುವೆಗಳ ಪ್ರಾಥಮಿಕ, ದ್ವಿತೀಯ ವರ್ಗದ ಚರಂಡಿಗಳು, ಕಲ್ವರ್ಟ್‌ಗಳು/ಸೇತುವೆಗಳನ್ನು ನಿರ್ಮಾಣ/ನವೀಕರಣ ಮಾಡುವುದು ಹಾಗೂ ಎಲ್ಲಾ ಸಂಬಂಧಿತ ಪ್ಯಾಕೇಜ್ ಕಾಮಗಾರಿಗಳಿಗಾಗಿ ಯೋಜನೆ ನಿರ್ವಹಣೆ ಸಲಹೆ ಸೇವೆಗಳನ್ನು (ಪಿಎಂಸಿ ಸೇವೆಗಳು) ಒದಗಿಸುವುದು. (ಕ್ರಿಯಾ ಯೋಜನೆ ಸಂಖ್ಯೆ. 95, 96, 97, 98, 99, 100 & 101) (**ಪ್ಯಾಕೇಜ್–4 & 5**)	2000.00	50,000/-
5	2022–23ನೇ ಸಾಲಿನ ಕರ್ನಾಟಕ ಸರ್ಕಾರದ ಅನುದಾನಗಳಡಿಯಲ್ಲಿ ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಪಶ್ಚಿಮ ವಲಯದಲ್ಲಿ ವಿವಿಧ ಪ್ರದೇಶಗಳಲ್ಲಿ ಹರಡಿಕೊಂಡಿರುವ ಬೃ.ನೀ.ಕಾಲುವೆಗಳ ಪ್ರಾಥಮಿಕ, ದ್ವಿತೀಯ ವರ್ಗದ ಚರಂಡಿಗಳು, ಕಲ್ವರ್ಟ್‌ಗಳು/ಸೇತುವೆಗಳನ್ನು ನಿರ್ಮಾಣ/ನವೀಕರಣ ಮಾಡುವುದು ಹಾಗೂ ಇತರೆ ಎಲ್ಲಾ ಸಂಬಂಧಿತ ಪ್ಯಾಕೇಜ್ ಕಾಮಗಾರಿಗಳಿಗಾಗಿ ಯೋಜನೆ ನಿರ್ವಹಣೆ ಸಲಹೆ ಸೇವೆಗಳನ್ನು (ಪಿಎಂಸಿ ಸೇವೆಗಳು) ಒದಗಿಸುವುದು. (ಕ್ರಿಯಾ ಯೋಜನೆ ಸಂಖ್ಯೆ. 102, 103, 104, 105, 106, 107, 108, 109, 110, 111, 112, 113, 114 & 115) (**ಪ್ಯಾಕೇಜ್–6**)	2100.00	42,000/-
6	2022–23ನೇ ಸಾಲಿನ ಕರ್ನಾಟಕ ಸರ್ಕಾರದ ಅನುದಾನಗಳಡಿಯಲ್ಲಿ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಪಶ್ಚಿಮ ವಲಯದಲ್ಲಿ ವಿವಿಧ ಪ್ರದೇಶಗಳಲ್ಲಿ ಹರಡಿಕೊಂಡಿರುವ ಬೃ.ನೀ.ಕಾಲುವೆಗಳ ಪ್ರಾಥಮಿಕ, ದ್ವಿತೀಯ ವರ್ಗದ ಚರಂಡಿಗಳು, ಕಲ್ವರ್ಟ್‌ಗಳು/ಸೇತುವೆಗಳನ್ನು ನಿರ್ಮಾಣ/ನವೀಕರಣ ಮಾಡುವುದು ಹಾಗೂ ಇತರೆ ಎಲ್ಲಾ ಸಂಬಂಧಿತ ಪ್ಯಾಕೇಜ್ ಕಾಮಗಾರಿಗಳಿಗಾಗಿ ಯೋಜನೆ ನಿರ್ವಹಣೆ ಸಲಹೆ ಸೇವೆಗಳನ್ನು (ಪಿಎಂಸಿ ಸೇವೆಗಳು) ಒದಗಿಸುವುದು. (ಕ್ರಿಯಾ ಯೋಜನೆ ಸಂಖ್ಯೆ. 118 & 124, 117, 123 & 125) (**ಪ್ಯಾಕೇಜ್–7, 8**)	2400.00	48,000/-
7	2022–23ನೇ ಸಾಲಿನ ಕರ್ನಾಟಕ ಸರ್ಕಾರದ ಅನುದಾನಗಳಡಿಯಲ್ಲಿ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಪಶ್ಚಿಮ ವಲಯದಲ್ಲಿ ವಿವಿಧ ಪ್ರದೇಶಗಳಲ್ಲಿ ಹರಡಿಕೊಂಡಿರುವ ಬೃ.ನೀ.ಕಾಲುವೆಗಳ ಪ್ರಾಥಮಿಕ, ದ್ವಿತೀಯ ವರ್ಗದ ಚರಂಡಿಗಳು, ಕಲ್ವರ್ಟ್‌ಗಳು/ಸೇತುವೆಗಳನ್ನು ನಿರ್ಮಾಣ/ನವೀಕರಣ ಮಾಡುವುದು ಹಾಗೂ ಇತರೆ ಎಲ್ಲಾ ಸಂಬಂಧಿತ ಪ್ಯಾಕೇಜ್ ಕಾಮಗಾರಿಗಳಿಗಾಗಿ ಯೋಜನೆ ನಿರ್ವಹಣೆ ಸಲಹೆ ಸೇವೆಗಳನ್ನು (ಪಿಎಂಸಿ ಸೇವೆಗಳು) ಒದಗಿಸುವುದು. (ಕ್ರಿಯಾ ಯೋಜನೆ ಸಂಖ್ಯೆ. 119, 116, 122, 129, 127, 128, 120, 121 & 126) (**ಪ್ಯಾಕೇಜ್–9, 10, 11**)	3100.00	62,000/-

ಟೆಂಡರ್ ವೇಳಾಪಟ್ಟಿ: (1) ಆರ್‌ಎಫ್‌ಪಿ ದಾಖಲೆಗಳನ್ನು ಇ–ಪ್ರೊಕ್ ವೆಬ್‌ಸೈಟ್‌ನಿಂದ ದಿನಾಂಕ **24.09.2022**ರ ಸಂಜೆ **4:00** ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **26.09.2022**ರ ಸಂಜೆ **4:00** ಗಂಟೆಯಿಂದ ನಡೆಸಲಾಗುವುದು. (3) ಟೆಂಡರ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **01.10.2022**ರ ಸಂಜೆ **4:00** ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ **03.10.2022** ರ ಸಂಜೆ **4:30** ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು – ಬೃ.ನೀ.ಕಾ ಪಶ್ಚಿಮ ವಲಯ

ಎಲ್ಲ ಮೇಲ್ಸೇತುವೆ ಸದೃಢ: ಬಿಬಿಎಂಪಿ ಮುಖ್ಯ ಆಯುಕ್ತ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯಲ್ಲಿರುವ 42 ಮೇಲ್ಸೇತುವೆಗಳು ಸದೃಢವಾಗಿದ್ದು, ನಾಗರಿಕರು ಯಾವುದೇ ರೀತಿಯಲ್ಲಿ ಆತಂಕಪಡಬೇಕಾಗಿಲ್ಲ' ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ.

'ಇಫ್ರಾ ಸಂಸ್ಥೆಯಿಂದ ಎಲ್ಲ ಮೇಲ್ಸೇತುವೆಗಳ ಸದೃಢತೆಯ ಪರೀಕ್ಷೆಯನ್ನು ಮಾಡಿಸಿದ್ದೇವೆ. ಎಲ್ಲವೂ ಸದೃಢವಾಗಿವೆ ಎಂಬ ವರದಿ ಬಂದಿದೆ. ಸುಮನಹಳ್ಳಿ ಮೇಲ್ಸೇತುವೆಯೂ ಸದೃಢವಾಗಿದ್ದು, ಮೇಲ್ಮೈನಲ್ಲಿ ಕಾಂಕ್ರೀಟ್ ಸಡಿಲಗೊಂಡಿದೆ. ಅದನ್ನು ತುರ್ತಾಗಿ ದುರಸ್ತಿಪಡಿಸುತ್ತೇವೆ' ಎಂದು ಮಾಧ್ಯಮಗಳಿಗೆ ಬಿಡುಗಡೆ ಮಾಡಿರುವ ವಿಡಿಯೊ ಸಂದೇಶದಲ್ಲಿ ತಿಳಿಸಿದ್ದಾರೆ.

'ಇಫ್ರಾ ಸಂಸ್ಥೆಗೆ ಮತ್ತೆ ಎಲ್ಲ ಮೇಲ್ಸೇತುವೆಗಳ ಸದೃಢತೆ ಬಗ್ಗೆ ವರದಿ ಸಲ್ಲಿಸಲು ಸೂಚಿಸಲಾಗಿದೆ. ಡಿಸೆಂಬರ್ ವೇಳೆಗೆ ಈ ವರದಿ ಬರಲಿದೆ. ಯಾವುದಾದರೂ ಸಮಸ್ಯೆ ಇದ್ದರೆ ದುರಸ್ತಿಪಡಿಸಲಾಗುವುದು' ಎಂದಿದ್ದಾರೆ.

ವಸ್ತ್ರಾಭರಣ ಪ್ರದರ್ಶನ, ಮಾರಾಟ ಮೇಳ

ಬೆಂಗಳೂರು: ಕರಕುಶಲ ಪರಿಷತ್ತಿನಿಂದ ಸೆಪ್ಟೆಂಬರ್ 29ರಿಂದ ಅಕ್ಟೋಬರ್ 3ರವರೆಗೆ ನಡೆಯುವ 30ನೇ ವಸ್ತ್ರಾಭರಣ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಚಿತ್ರಕಲಾ ಪರಿಷತ್‌ನಲ್ಲಿ ಆಯೋಜಿಸಲಾಗಿದೆ. ಈಶಾನ್ಯದ ಹೊಸ ನೇಯ್ಗೆಗಳನ್ನು ಹಿಲ್ಲಿವಾಲಿ ಮತ್ತು ಸಿಲ್ಕ್ ಚೇಂಬರ್ ಪ್ರದರ್ಶಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

ಭಾರತ ಸರ್ಕಾರ
ಬಾಹ್ಯಕಾಶ ಇಲಾಖೆ
ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ
ಇಸ್ರೋ ಟೆಲಿಮೆಟ್ರಿ ಟ್ರ್ಯಾಕಿಂಗ್ & ಕಮಾಂಡ್ ನೆಟ್‌ವರ್ಕ್ (ಐಎಸ್‌ಟಿಆರ್‌ಎಸಿ)
ನಿರ್ಮಾಣ ಮತ್ತು ನಿರ್ವಹಣೆ ಸಮೂಹ
ಪ್ಲಾಟ್ ನಂ. 12 & 13, 3ನೇ ಮುಖ್ಯ ರಸ್ತೆ, 2ನೇ ಫೇಸ್, ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು–58,
ಫ್ಯಾಕ್ಸ್: 080–28094180 ದೂರವಾಣಿ: 080–28094196, 4184, 4541

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗೆ ಸೂಕ್ತ ದರ್ಜೆಯ ಗುತ್ತಿಗೆದಾರರಿಂದ ಮೊಹರಾದ ಐಟಂದರದ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಎನ್‌ಐಟಿ ಸಂಖ್ಯೆ	ಐಎಸ್‌ಟಿಆರ್‌ಎಸಿ/ಸಿಎಂಜಿ/ಎಂಎಐಎನ್‌ಟಿ/ ಇ–ಟೆಂಡರ್–41/22–23 ದಿ: 22.09.2022
ಕೆಲಸದ ಹೆಸರು	ಜಿಎಸ್‌ಎನ್‌ಎ ಇಂಜಿನಿಯರ್ಸ್ ರೂಂ, ಎಸ್‌ಸಿಸಿ ಕ್ಯಾಂಪಸ್, ಐಎಸ್‌ಟಿಆರ್‌ಎಸಿ, ಬೆಂಗಳೂರು ಇಲ್ಲಿಗೆ ವರ್ಕ್ ಸ್ಟೇಷನ್‌ಗಳು, ಪಾರ್ಟೀಷನ್ಸ್‌ಗಳು, ಸ್ಟೋರೇಜ್ ಯೂನಿಟ್‌ಗಳು & ಅಲ್ಯೂಮಿನಿಯಂ ಫ್ರೇಮ್ಡ್ ವುಡನ್ ಕ್ಯಾಬಿನ್‌ಗಳನ್ನು ಒದಗಿಸುವುದು (ಸಿವಿಲ್ ಕಾಮಗಾರಿಗಳು)
ಟೆಂಡರ್‌ಗಿಟ್ಟ ಅಂದಾಜು ಮೊತ್ತ	ರೂ. 11.23 ಲಕ್ಷಗಳು
ಟೆಂಡರ್ ದಸ್ತಾವೇಜು ವಿವರಗಳು	ಇ–ಟೆಂಡರ್
ಪೂರ್ಣಗೊಳಿಸುವ ಅವಧಿ	ಒಂದು (01) ತಿಂಗಳು
ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	23.09.2022 ರಿಂದ 06.10.2022 ರವರೆಗೆ
ಬಿಡ್ ವಿಚಾರಣೆ	24.09.2022 ರಿಂದ 07.10.2022 ರ ವರೆಗೆ
ಬಿಡ್ ವಿಚಾರಣೆಗೆ ಪ್ರತಿಕ್ರಿಯೆ ನೀಡಲು ಕೊನೆಯ ದಿನಾಂಕ & ಸಮಯ	10.10.2022, 16.30 ಗಂಟೆಯವರೆಗೆ
ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ & ಸಮಯ	11.10.2022, 14.30 ಗಂಟೆಯವರೆಗೆ
ಟೆಂಡರ್ ತೆರೆಯುವ ದಿನಾಂಕ & ಸಮಯ	12.10.2022, 11.30 ಗಂಟೆಯ ನಂತರ
ಇಎಂಡಿ	ರೂ. 22,460/–

ಆಸಕ್ತಿಯುಳ್ಳ ಟೆಂಡರ್‌ದಾರರು ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗೆ ಟೆಂಡರ್ ಪ್ರಕಟಣೆಯನ್ನು ಪರಿವೀಕ್ಷಿಸಲು ವೆಬ್‌ಸೈಟ್: **www.isro.gov.in** ಭೇಟಿನೀಡಿ ಮತ್ತು ಟೆಂಡರ್ ದಸ್ತಾವೇಜುಗಳನ್ನು **www.tenderwizard.com/ISRO** ರಿಂದ ಡೌನ್‌ಲೋಡ್ ಮಾಡಿಕೊಳ್ಳಿ.

ಸಹಿ/– ಸಮೂಹ ಮುಖ್ಯಸ್ಥರು, ಸಿಎಂಜಿ,

₹400 ಕೋಟಿ ಪರಿಹಾರಕ್ಕೆ ಬಿಬಿಎಂಪಿ ಮನವಿ

ಮಳೆಗೆ 396 ಕಿ.ಮೀ. ರಸ್ತೆ ಹಾನಿ

• ಸ್ನೇಹ ರಮೇಶ್

ಬೆಂಗಳೂರು: ಮುಂಗಾರು ಮಳೆಯಿಂದ ನಗರದಲ್ಲಿ 396.72 ಕಿ.ಮೀ. ರಸ್ತೆ ಹಾನಿಯಾಗಿದ್ದು, ₹333.63 ಕೋಟಿ ನಷ್ಟವಾಗಿದೆ. ಒಟ್ಟಾರೆ ಸುಮಾರು ₹400 ಕೋಟಿ ಪರಿಹಾರ ನಿಧಿಯ ಅಗತ್ಯವಿದೆ ಎಂದು ಬಿಬಿಎಂಪಿ ಅಂದಾಜು ಮಾಡಿದೆ.

ಅತಿ ಹೆಚ್ಚು ಮಳೆಯಾಗಿರುವ ಮಹದೇವಪುರ ವಲಯದಲ್ಲಿ ಅಧಿಕ ಹಾನಿಯಾಗಿದೆ. ಈ ವಲಯದಲ್ಲಿ 165 ಕಿ.ಮೀ. ರಸ್ತೆಗೆ ಹಾನಿಯಾಗಿದ್ದು, ₹245 ಕೋಟಿ ನಷ್ಟವಾಗಿದೆ.

ಇದಲ್ಲದೆ, ಕಂದಾಯ ಇಲಾಖೆ ಅಧಿಕಾರಿಗಳು ನಡೆಸಿದ ಸಮೀಕ್ಷೆ ಪ್ರಕಾರ ಜೂನ್‌ನಿಂದ ಈವರೆಗೆ 7,700 ಮನೆಗಳು ಜಲಾವೃತಗೊಂಡಿದ್ದು, ₹16 ಕೋಟಿ ಪರಿಹಾರ ನೀಡಬೇಕಾಗಿದೆ.

ಬೊಮ್ಮನಹಳ್ಳಿ ವಲಯದಲ್ಲಿ ಮೂರು ಕಿ.ಮೀ. ಉದ್ದದ ಪಾದಚಾರಿ ಮಾರ್ಗ ಹಾನಿಯಾಗಿದ್ದು, ₹4 ಕೋಟಿ ನಷ್ಟವಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಶಾಲೆ, ಕಾಲೇಜುಗಳ 13 ಕಟ್ಟಡಗಳಿಗೆ, 170 ಮನೆಗಳಿಗೆ ಭಾಗಶಃ ಹಾನಿಯಾಗಿದೆ.

ಮುಖ್ಯಾಂಶಗಳು

- ಕಂದಾಯ ಇಲಾಖೆಯಿಂದ ನಡೆದ ಸಮೀಕ್ಷೆ
- ಮಹದೇವಪುರ ವಲಯದಲ್ಲಿ ಅಧಿಕ ಹಾನಿ
- ಶಾಲಾ–ಕಾಲೇಜುಗಳ 13 ಕಟ್ಟಡಗಳಿಗೆ ಹಾನಿ
- ಮೂಲಸೌಕರ್ಯ ದುರಸ್ತಿಗೆ ಅನುದಾನ ಕೋರಿಕೆ

'ಹಿಂದೆ ₹3,500 ಪರಿಹಾರ ನೀಡಲಾಗುತ್ತಿತ್ತು. ಇದೀಗ ₹10 ಸಾವಿರಕ್ಕೆ ಹೆಚ್ಚಿಸಿರುವುದರಿಂದ ಹೊರೆ ಮತ್ತಷ್ಟು ಹೆಚ್ಚಾಗಲಿದೆ. ಇದರಲ್ಲಿ ಒಂದಷ್ಟು ಭಾಗವನ್ನು ರಾಜ್ಯ ಸರ್ಕಾರ ಭರಿಸಬೇಕಾಗಿದ್ದು, ಇದಕ್ಕಾಗಿ ನಾವು ವರದಿ ಸಲ್ಲಿಸಿದ್ದೇವೆ' ಎಂದು ಬಿಬಿಎಂಪಿ ಯೋಜನೆಗಳ ವಿಭಾಗದ ವಿಶೇಷ ಆಯುಕ್ತ ಪಿ.ಎನ್. ರವೀಂದ್ರ ತಿಳಿಸಿದರು.

'ಪರಿಹಾರ ಹೊರತುಪಡಿಸಿ, ನಗರದಲ್ಲಿ ಮೂಲಸೌಕರ್ಯಗಳಿಗೆ ಆಗಿರುವ ಹಾನಿಯ ದುರಸ್ತಿ ಮಾಡಲು ಬಿಬಿಎಂಪಿಗೆ ಹಣ ಬೇಕಿದೆ. ನಾವು ಸಂಪೂರ್ಣ ವಿವರವಾದ ವರದಿಯನ್ನು ಕಂದಾಯ ಇಲಾಖೆಗೆ ಸಲ್ಲಿಸಿದ್ದೇವೆ. ಅದನ್ನು ಮುಖ್ಯಮಂತ್ರಿಯವರ ಗಮನಕ್ಕೂ ತರಲಾಗಿದೆ' ಎಂದು ಬಿಬಿಎಂಪಿ ಹಿರಿಯ ಅಧಿಕಾರಿ ತಿಳಿಸಿದರು.

'ಪ್ರವಾಹದ ಸಂದರ್ಭದಲ್ಲಿ ಈಗಾಗಲೇ ಬಿಬಿಎಂಪಿ ಹಣವನ್ನು ವೆಚ್ಚ ಮಾಡಿದೆ. ರಕ್ಷಣಾ ತಂಡ, ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್‌ಗಳಿಂದ ಕಾರ್ಯಾಚರಣೆ ನಡೆಸಿದ್ದೇವೆ. ಬೋಟ್ ಮತ್ತು ಇತರೆ ರಕ್ಷಣಾ ಸಾಮಗ್ರಿಗಳನ್ನು ತಂದಿದ್ದೇವೆ. ರಸ್ತೆಗಳೂ ಸಾಕಷ್ಟು ಹಾನಿಯಾಗಿದ್ದು, ಸರ್ಕಾರದಿಂದ ಹಣ ಪಡೆಯಲು ಪ್ರಸ್ತಾವವನ್ನು ಕಳುಹಿಸಿದ್ದೇವೆ' ಎಂದು ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಪುರಸಭೆ ಕಾರ್ಯಾಲಯ, ದೇವನಹಳ್ಳಿ

ಬೆಂಗಳೂರು ಗ್ರಾಮಾಂತರ ಜಿಲ್ಲೆ – 562 110.
ದೂರವಾಣಿ : 080 – 2768 2221.
E-Mail: itstaff_ulb_devanahalli@yahoo.co.in Website: www.devanahallitown.mrc.gov.in

ಸಂಖ್ಯೆ : ದೇ.ಪು/ತಾಂತ್ರಿಕ/ಟೆಂಡರ್–01/2022–23 ದಿನಾಂಕ : 20–09–2022

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ದೇವನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿ 2022–23 ನೇ ಸಾಲಿನ 15 ನೇ ಹಣಕಾಸು ಯೋಜನೆಯ ಮೂಲ ಅನುದಾನ ಮತ್ತು ಎಸ್.ಎಫ್.ಸಿ. ಹಾಗೂ ಪುರಸಭಾ ಅನುದಾನದಲ್ಲಿ ತೆಗೆದು ಕೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆಧ್ಯಾದೇಶ 1999–2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ನ್ನು ಈ ಕೆಳಗಡೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅರ್ಹ IIIನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ಕರೆದಿರುವ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ನಲ್ಲಿ ಭಾಗವಹಿಸಬಹುದು. ಮುಂದುವರೆದಂತೆ (1) ಇಂಡೆಂಟ್ ನಂ. 137032 (ರೂ. 22.00 ಲಕ್ಷಗಳು), (2) ಇಂಡೆಂಟ್ ನಂ. 137038 (ರೂ. 23.80 ಲಕ್ಷಗಳು), (3) ಇಂಡೆಂಟ್ ನಂ. 137040 (ರೂ. 17.50 ಲಕ್ಷಗಳು) ಮತ್ತು (4) ಇಂಡೆಂಟ್ ನಂ. 137465 (ರೂ. 31.20 ಲಕ್ಷಗಳು), (5) ಇಂಡೆಂಟ್ ನಂ. 137047 (ಎಸ್.ಸಿ.) (ರೂ. 23.50 ಲಕ್ಷಗಳು), (6) ಇಂಡೆಂಟ್ ನಂ. 137051 (ರೂ. 27.50 ಲಕ್ಷಗಳು), (7) ಇಂಡೆಂಟ್ ನಂ. 137055 (ಎಸ್.ಟಿ.) (ರೂ. 28.40 ಲಕ್ಷಗಳು), (8) ಇಂಡೆಂಟ್ ನಂ. 137207 (ರೂ. 7.30 ಲಕ್ಷಗಳು), (9) ಇಂಡೆಂಟ್ ನಂ. 137212 (ರೂ. 3.00 ಲಕ್ಷಗಳು), (10) ಇಂಡೆಂಟ್ ನಂ. 137214 (ಎಸ್.ಸಿ.) (ರೂ. 8.25 ಲಕ್ಷಗಳು) ಮತ್ತು (11) ಇಂಡೆಂಟ್ ನಂ. 137854 (ರೂ. 3.00 ಲಕ್ಷಗಳು), (12) ಇಂಡೆಂಟ್ ನಂ. 137863 (ರೂ. 5.00 ಲಕ್ಷಗಳು) ಗಳಿದ್ದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ಡೌನ್‌ಲೋಡ್ ಮಾಡಿಕೊಂಡು ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಟೆಂಡರ್ ದಾಖಲಾತಿಗಳಲ್ಲಿ ತಿಳಿಸಿರುವ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಹೆಚ್ಚಿನ ವಿವರಗಳನ್ನು ಈ ಕಛೇರಿಯ ತಾಂತ್ರಿಕ ಶಾಖೆಯಿಂದ ಪಡೆಯಬಹುದು.

ಸಹಿ/– ಅಧ್ಯಕ್ಷರು, ಪುರಸಭೆ, ದೇವನಹಳ್ಳಿ. | ಸಹಿ/– ಉಪಾಧ್ಯಕ್ಷರು, ಪುರಸಭೆ, ದೇವನಹಳ್ಳಿ. | ಸಹಿ/– ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ದೇವನಹಳ್ಳಿ. | ಸಹಿ/– ಮುಖ್ಯಾಧಿಕಾರಿ, ಪುರಸಭೆ, ದೇವನಹಳ್ಳಿ.

ವಾಸಾಸಂಇ/ಉನಿಕ/ಬೆಂಗ್ರಾಜಿ/ಮಣಿಪಾಲ್/2322/2021–22

ಎಫ್‌ಡಿಎ ಮಾಯಣ್ಣ ವಿರುದ್ಧ ಎಫ್‌ಐಆರ್

ಬೆಂಗಳೂರು: ಬಿಬಿಎಂಪಿ ಅಧಿಕಾರಿ ಹಾಗೂ ನೌಕರರ ಸಂಘದ ಹೆಸರಿನಲ್ಲಿ ಲೆಟರ್ ಹೆಡ್ ಸೃಷ್ಟಿಸಿ ವಂಚಿಸುತ್ತಿರುವ ಆರೋಪದಡಿ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಮಾಯಣ್ಣ ವಿರುದ್ಧ ಹಲಸೂರು ಗೇಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಬಿಬಿಎಂಪಿ ದ್ವಿತೀಯ ದರ್ಜೆ ಸಹಾಯಕ ಕೆ. ನರಸಿಂಹ ದೂರು ನೀಡಿದ್ದಾರೆ. ವಂಚನೆ (ಐಪಿಸಿ 420), ಸಹಿ ನಕಲು (ಐಪಿಸಿ 465), ನಕಲಿ ದಾಖಲೆಗಳನ್ನು ಅಸಲಿ ಎಂದು ಬಳಸಿದ (ಐಪಿಸಿ 471) ಆರೋಪದಡಿ ಮಾಯಣ್ಣ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಿಬಿಎಂಪಿ ಅಧಿಕಾರಿ ಹಾಗೂ ನೌಕರರ ಸಂಘಕ್ಕೆ ಈವರೆಗೂ ಚುನಾವಣೆ ನಡೆದಿಲ್ಲ. ಯಾವುದೇ ಸದಸ್ಯರೂ ಇಲ್ಲ. ನವೀಕರಣ ಸಹ ಆಗಿಲ್ಲ. ಇಂಥ ಸ್ಥಿತಿಯಲ್ಲೇ ಆರೋಪಿ ಮಾಯಣ್ಣ, ಸಂಘದ ಸ್ವಯಂಘೋಷಿತ ಅಧ್ಯಕ್ಷನೆಂದು ಹೇಳಿಕೊಂಡು ಓಡಾಡುತ್ತಿದ್ದಾರೆ. ಸಂಘದ ಹೆಸರಿನಲ್ಲಿ ಲೆಟರ್ ಹೆಡ್ ಸೃಷ್ಟಿಸಿ, ಉನ್ನತ ಅಧಿಕಾರಿಗಳು ಹಾಗೂ ಇತರರನ್ನು ವಂಚಿಸುತ್ತಿದ್ದಾರೆ' ಎಂಬುದಾಗಿ ದೂರುದಾರ ನರಸಿಂಹ ಆರೋಪಿಸಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

Sri Rakum High School
421/I, Sri Krishna Temple Road, Indiranagar 1st stage, Bengaluru-560038
Tel: 080 - 25215705
Email: rakumarakum@yahoo.com
Wanted
Science, Maths, English and Social science Teacher, for Primary & High School Students
Female Teacher - Rs.15000- 20000

Multiple Vacancy

REQUIRED, TEAMLEADER, & FieldExecutive For BankLoan collection. direct recruitment to company. Contact: 9620206756, 9620200756.

Marketing & Sales

WANTED COUNTER Sales Executives (M/F) for Two Wheeler Showroom Koramanagala, JPNagar, Rajajinagar. Salary + Incentives. 9945083900, 9731028676.

Wanted

INDIA'S BEST Financial Brand offers a Revolutionary opportunity for Senior Citizens, Retd, VRS, NRI & Housewives. Limited seats only. 9591583662/ 9972169164.

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

WANTED BUSINESS DEVELOPMENT MANAGER, Earn more than 1,00,000/ month, Part-time/ Full-time/ Freshers/ Retired. 9341313141

REAL ESTATE SELLING

Flat

J P Nagar

NEW_FLATS for_Sale 2BHK,`J.P.Nagar 9th_Phase,`Old Rate_55 Lakhs,New Rate`45 Lakhs 'A'Katha,Bank loan_available: 9108853139 (only few`flats)

R T Nagar

SALE 1550 sft Two Bed Room Flat with open space RT Nagar, Devagowda Road 9886725924

Residential/ Commercial

Out-Station

BUY FLOOD free land to build your dream home in Sulthan Bathery, Wayanad, Kerala. Call- 9447546440

Sites

Kumaraswamy Layout

KUMARASWAMY LAYOUT First Stage, 1383 sft (41.4x33) North East Corner Site for Sale, 18,000 Sft, Slightly negotiable, No Brokers. Contact: 9448057634.

Multiple Locations

SADHASHIVNAGAR, RMV, Sanjaynagar, Hebbal, Manyata, Telecom layout SALE 30x40, 40x60, 50x90, 90x120 2% commision. 9845004307.

Vishweshwariah Layout

BDA SITE Sale Vishweshwaraiah Layout 40x60 6th Block North 6500, 5th Block 30x40 South 7000, Contact: 8892901567/ 9341733480

RENTAL PROPERTIES

Accommodation Available

Commercial

AVAILABLE- FULLY Furnished office space for rent 1300 sqft on 2nd floor with lift on Madras bank road (off St Marks Road). Cont: 9448397461, 9482585944

House

1BHK FLAT in Ganganagar for family. Immediate occupancy. Rent 10k. Contact 9632542001.

BUSINESS

Business Offers

Finance

OPPORTUNITY FOR Retired Officials, Bankers, Professionals, Teachers, Homemakers, CAs. Work part time/ full time. Earn unlimited income. Please call: 9008403686/ 9945114828.

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

DH DECCAN HERALD ಪ್ರಜಾವಾಣಿ

BOOK YOUR CLASSIFIEDS ADVERTISEMENT

DECCAN HERALD & PRAJAVANI CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	80	125	95	150

CD Per Sqcm	Single Col	Double Col	Multi Col
	535	500	515

SPECIAL OFFER					
PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 |
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

CONNECT ಕ್ಲಾಸಿಫೈಡ್ಸ್

ನಿಮ್ಮ ಮನೆಯ ಸೌಕರ್ಯದಿಂದ ಅಡುಗೆ ಮಾಡುವ ಮೂಲಕ ನಿಯಮಿತ ಆದಾಯವನ್ನು ಗಳಿಸಿ.
ನೂರಾರು ಗೃಹಿಣಿಯರೊಂದಿಗೆ ಸೇರಿ ಮತ್ತು ನಮ್ಮ ಅಡಿಗೆ ಪಾಲುದಾರರಾಗಿ, ಆಕರ್ಷಕ ಸಾಪ್ತಾಹಿಕ ಆದಾಯವನ್ನು ಗಳಿಸಿ.
503+ ಅಡಿಗೆ ಪಾಲುದಾರರು | 40+ ನಗರಗಳು | 5 ರಾಜ್ಯಗಳು
FREE REGISTRATION LIMITED SEATS
ಪ್ರಪಂಚದ 1 ನೇ ಬ್ರಾಂಡ್ ಹೋಮ್‌ಗೆ ಸೇರಿ - ಇಂದು ಆಹಾರ ವೇದಿಕೆ!
September 24,2022 | 3-6 PM Aurick Boutique Hotel, JP Nagar , Bangalore
FREE ENTRY FOR LADIES To Register, Call 72003 62932

2nd PU Failed?
Don't be left behind!
A golden opportunity to study degree under Bangalore University this academic year and save one precious year of your life.
BBA B.Com BCA BA
Limited seats. For admissions call:
2ನೇ ಪಿಯುಸಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಸುವರ್ಣ ಅವಕಾಶ. ಸಂಪರ್ಕಿಸಿ:
7846000222

PERSONAL

Change of Name

CHANGE OF NAME
I, Mrs. ZAHIDA KAUSER, R/o. Flat No. 403, Silhouette Enclave, S R Compound, Mico Layout 2nd Stage, Arekere, Bengaluru - 76, have changed my son's name from Amaan Mohammed alias Mohammed Amaan S to AMAAN AHMED, vide Affidavit Dated September 21, 2022. Sworn before Notary B.M. Chandrashekar, Bangalore.

I, INDUMATHI legal W/o #14826623Y Rank Sep / MT / Ex Name Chandrashekhar Talawar R/at #12, Srisainivas, Mallappa Layout, Seegehalli, K.R.Puram, Bangalore- 560049. Have changed my name To INDUMATHI. C & D.O.B from 10/05/1981 to 10/05/1980 Vide affidavit dated 17.05.2022 before notary GangaRaju B.N,Bengaluru

L.V. TRAVELS
www.lvbusbooking.com
Contact: 9148222999, 8217804223
Book Ticket @ www.lvbusbooking.com
GET 5% DISCOUNT
LV Park, #734, Ring Road, Papareddypalya, Nagarabhavi 2nd Stage Near Bus Stop, Bengaluru - 560072.

CHANGE OF NAME
I, Mrs. ZAHIDA KAUSER, R/o. Flat No. 403, Silhouette Enclave, S R Compound, Mico Layout 2nd Stage, Arekere, Bengaluru - 76, have changed my son's name from Ayaan Mohammed Shahazam alias Mohammed Ayaan S to AYAAN AHMED, vide Affidavit Dated September 21, 2022. Sworn before Notary B.M. Chandrashekar, Bangalore.

I, RENCY resident of 345, Munireddy Garden, Bellandur, Bengaluru, Karnataka- 560103 have changed my name to RENCY ANOOP vide affidavit dated 22/09/2022 sworn before notary B.M.Chandrashekar, Bangalore

CHANGE OF NAME
I, Mrs. ZAHIDA KAUSER, R/o. Flat No. 403, Silhouette Enclave, S R Compound, Mico Layout 2nd Stage, Arekere, Bengaluru - 76, have changed my son's name from Mohammed Afraz alias Mohammed Afraz S to AFRAZ AHMED, vide Affidavit Dated September 21, 2022, Sworn before Notary B.M. Chandrashekar, Bangalore.

I, SRINIVASA. V s/o Venkatachala Shetty, R/at No. 210, 1st Cross, 6th Cross, Bapuji Nagar, Mysore Road, Bengaluru, have changed my name from SRINIVASA. V to SRINIVAS. V vide affidavit dated 22/09/2022 sworn before K.P. Ramesh, Notary, Bengaluru

PUC FAIL - WHAT NEXT?
PUC - Fail / Pass | SSLC - Pass .. | ITI - Pass
ADMISSIONS FOR 10th PASS or PUC FAIL / PASS
Call / WhatsApp Principal "HELLO SIR" 99166 46466
2 Years Diploma Course - PUC / 12th / ITI Pass
3 Years Diploma Course - 10th Pass / PUC Fail
CS | IS | EC | EE | Civil | Mech | Auto | CP | FT
R.E.S. POLYTECHNIC
(Estd:1986) Recognised by Govt. of Karnataka & Approved by AICTE.
(Inst. Code: 450 # 5, Sunkadakatte, Magadi Main Road, Hegganahalli Cross, Bengaluru-91 Phone: 080-23484814
RES-22320

I, M. ANISHA D/o M. Venkataramanaiah, residing at No.161, 4th Cross, Andhra Colony, A Narayanapura, Doorvaninagar, Bangalore - 560016 have changed my name to ZOYA FATHIMA vide affidavit dated 03/02/2022 before Notary Meer Hassan, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Lost

LOST
I, Rakesh B. have lost my property document Bearing No. ANK-1-14875-2003-04, Site No. 225, Khata No. 278 while shifting the house.
Finders please contact: 78990 61716

PROPERTY
To Place your Classified Ads Contact
9845114560

‘ಡಿಜಿಟಲ್ ಅನುವಾದ ಸಂಪದ’ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ವತಿಯಿಂದ ಇಂಗ್ಲಿಷ್‌ನಿಂದ ಭಾರತೀಯ ಭಾಷೆಗಳಿಗೆ ಅನುವಾದವಾಗುವ ಶೈಕ್ಷಣಿಕ ಸಂಪನ್ಮೂಲಗಳ ಆನ್‌ಲೈನ್ ರೂಪದ ‘ಅನುವಾದ ಸಂಪದ’ವನ್ನು ಬುಧವಾರ ಬಿಡುಗಡೆ ಮಾಡಲಾಯಿತು.

‘ಇದೊಂದು ವಿನೂತನ ಪ್ರಯತ್ನವಾಗಿದ್ದು, ದೇಶದಲ್ಲಿರುವ ಶೈಕ್ಷಣಿಕ ಸಂಪನ್ಮೂಲಗಳು ಮುಕ್ತವಾಗಿ ಮತ್ತು ವ್ಯಾಪಕವಾಗಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಲಭ್ಯವಾಗಬೇಕು ಎಂಬ ಉದ್ದೇಶದೊಂದಿಗೆ ಈ ಡಿಜಿಟಲ್ ಸಂಪದವನ್ನು ಬಿಡುಗಡೆ ಮಾಡಲಾಗಿದೆ’ ಎಂದು ವಿಶ್ವವಿದ್ಯಾಲಯದ ಕುಲಪತಿ ಇಂದು ಪ್ರಸಾದ್ ಅವರು ಮಾಹಿತಿ ನೀಡಿದರು.

‘ಈ ಅನುವಾದ ಸಂಪದವು ಪ್ರಸ್ತುತ ಕನ್ನಡ ಮತ್ತು ಹಿಂದಿ ಭಾಷೆಗಳಲ್ಲಿ ಲಭ್ಯವಿದ್ದು, ಶೈಕ್ಷಣಿಕ ಸಂಪನ್ಮೂಲಗಳಿಗೆ ಸಂಬಂಧಿಸಿ 2000ಕ್ಕೂ ಹೆಚ್ಚಿನ ಲೇಖನಗಳು ಇವೆ’ ಎಂದು ಅವರು ವಿವರಣೆ ನೀಡಿದರು.

‘ಭಾರತೀಯ ಭಾಷೆಗಳಲ್ಲಿ ಉನ್ನತ ಗುಣಮಟ್ಟದ ಶೈಕ್ಷಣಿಕ ಸಂಪನ್ಮೂಲಗಳ ಕೊರತೆ ಇದ್ದು, ಇದು ಅಂತಹ ಕೊರತೆಯನ್ನು ತುಂಬಲಿದೆ. ಇದರಿಂದ ದೇಶದ ಯಾವುದೇ ಮೂಲೆಯಲ್ಲಿರುವ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ವಿಜ್ಞಾನ, ಸಮಾಜ ವಿಜ್ಞಾನ, ಮತ್ತು ಭಾಷಾ ವಿಷಯಗಳ ಶೈಕ್ಷಣಿಕ ಸಂಪನ್ಮೂಲಗಳನ್ನು ಹುಡುಕಿ, ಬಳಸಿ, ಮರುಬಳಕೆ ಮಾಡಲು ಸಾಧ್ಯವಾಗಲಿದೆ’ ಎಂದರು.

‘ಹಿಂದಿ ಮತ್ತು ಕನ್ನಡದಲ್ಲಿ ಸ್ವಾತಂತ್ರವಾದ ಹೊಸ ಬರವಣಿಗೆ ಓದು, ಚರ್ಚೆ ಮತ್ತು ಸಂವಾದವನ್ನು ಉತ್ತೇಜಿಸಲು ಈ ಸಂಪದ ಸಹಕಾರಿಯಾಗಲಿದೆ’ ಎಂದು ಕುಲಪತಿ ಅವರು ತಿಳಿಸಿದರು.

ಇಂಧನ ಸಚಿವಾಲಯದ ಬ್ಯೂರೊ ಆಫ್ ಎನರ್ಜಿ ಎಫಿಶಿಯೆನ್ಸಿ ಸಂಸ್ಥೆಯ ನಿರ್ದೇಶಕ ಡಾ. ಅಶೋಕ್ ಕುಮಾರ್ ಅವರು ಬ್ಯಾರೀಸ್ ಗ್ರೂಪ್ ಅಧ್ಯಕ್ಷ ಮಝುರ್ ಬ್ಯಾರಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು

ಬ್ಯಾರೀಸ್ ಗ್ರೂಪ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾರೀಸ್ ಗ್ರೂಪ್‌ಗೆ ಸೇರಿರುವ, ವೈಟ್‌ಫೀಲ್ಡ್‌ನಲ್ಲಿನ ಬ್ಯಾರೀಸ್ ಗ್ಲೋಬಲ್ ರಿಸರ್ಚ್ ಟ್ರಯಾಂಗಲ್ (ಬಿ.ಜಿ.ಆರ್.ಟಿ) 2021, 2022 ಹಾಗೂ 2023ನೇ ಸಾಲಿಗೆ ‘ಸಿಐಐ ಶ್ರೇಷ್ಠ ಇಂಧನ ನಿರ್ವಹಣೆಗಾಗಿ ರಾಷ್ಟ್ರೀಯ ಪ್ರಶಸ್ತಿ’ ಪಡೆದಿದೆ. ಅಲ್ಲದೆ, ‘ನ್ಯಾಷನಲ್ ಎನರ್ಜಿ ಲೀಡರ್’ ಗೌರವಕ್ಕೆ ಪಾತ್ರವಾಗಿದೆ.

‘ಬಿ.ಜಿ.ಆರ್.ಟಿ’ ಭಾರತದ ಮೊದಲ ಲೀಡ್ ಪ್ರಮಾಣೀಕೃತ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರವಾಗಿದೆ. ಶ್ರೇಷ್ಠ ನಿರ್ಮಾಣಕ್ಕೆ ಮಾನದಂಡ ಎಂದು ಪರಿಗಣಿಸುವಂತಹ ಯೋಜನೆ ಇದು ಎಂದು ಉದ್ಯಮ ವಲಯ ಹಾಗೂ ತಜ್ಞರಿಂದ ಮನ್ನಣೆ ಪಡೆದಿದೆ ಎಂದು ಕಂಪನಿಯ ಪ್ರಕಟಣೆ ಹೇಳಿದೆ.

ನವದೆಹಲಿಯಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಸರ್ಕಾರದ ಇಂಧನ ಸಚಿವಾಲಯದ ಬ್ಯುರೋ ಆಫ್ ಎನರ್ಜಿ ಎಫಿಷಿಯನ್ಸಿಯ ನಿರ್ದೇಶಕ ಡಾ. ಅಶೋಕ್ ಕುಮಾರ್ ಅವರು ಬ್ಯಾರೀಸ್ ಗ್ರೂಪ್‌ನ ಕಾರ್ಯನಿರ್ವಾಹಕ ನಿರ್ದೇಶಕ ಮಝುರ್ ಬ್ಯಾರಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ಬೆಂಗಳೂರಿನಲ್ಲಿ ಬುಧವಾರ 105 ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಸತ್ವ ಮೀಡಿಯಾ ಆ್ಯಂಡ್ ಕನ್ಸಲ್ಟಿಂಗ್ ಮಧ್ಯೆ ಒಪ್ಪಂದ ಮಾಡಿಕೊಳ್ಳಲಾಯಿತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಸಚಿವ ಬಿ.ಸಿ.ನಾಗೇಶ್, ರಾಜ್ಯ ಯೋಜನಾ ನಿರ್ದೇಶಕಿ ಬಿ.ಬಿ. ಕಾವೇರಿ, ಸತ್ವ ಮೀಡಿಯಾ ಮುಖ್ಯಸ್ಥ ಶ್ರೀಕೃಷ್ಣ ಇದ್ದರು

105 ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿ ಆಶಯಗಳಿಗೆ ಪೂರಕವಾಗಿ ರಾಜ್ಯದ 105 ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ‘ಸತ್ವ ಮೀಡಿಯಾ ಆ್ಯಂಡ್ ಕನ್ಸಲ್ಟಿಂಗ್’ ಜತೆ ಒಪ್ಪಂದ ಮಾಡಿಕೊಂಡಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಸಚಿವ ಬಿ.ಸಿ.ನಾಗೇಶ್ ಸಮ್ಮುಖದಲ್ಲಿ ರಾಜ್ಯ ಯೋಜನಾ ನಿರ್ದೇಶಕಿ ಬಿ.ಬಿ. ಕಾವೇರಿ, ಸತ್ವ ಮೀಡಿಯಾ ಆ್ಯಂಡ್ ಕನ್ಸಲ್ಟಿಂಗ್ ಮುಖ್ಯಸ್ಥ ಶ್ರೀಕೃಷ್ಣ ಅವರು ಸಹಿ ಹಾಕಿದರು. ಸ್ಟಾರ್ಟಪ್ ವಿಷನ್ ಗ್ರೂಪ್‌ನ ಅಧ್ಯಕ್ಷ ಪ್ರಶಾಂತ್ ಪ್ರಕಾಶ್ ಇದ್ದರು.

ರಾಜ್ಯದ ಯಾದಗಿರಿ, ಹಾವೇರಿ, ತುಮಕೂರು ಹಾಗೂ ದಾವಣಗೆರೆ ಜಿಲ್ಲೆಗಳ 105 ಸರ್ಕಾರಿ ಶಾಲೆಗಳನ್ನು ಒಪ್ಪಂದದ ಅನ್ವಯ ಅಭಿವೃದ್ಧಿಪಡಿಸಲಾಗುತ್ತದೆ ಎಂದು ಸಚಿವ ನಾಗೇಶ್ ಮಾಹಿತಿ ನೀಡಿದರು.

ಸ್ಪೋಕನ್ ಇಂಗ್ಲೀಷ್, ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಗಣಿತ ಲ್ಯಾಬ್, ನೈತಿಕ ವಿಜ್ಞಾನ ತರಗತಿ, ಉದ್ಯಮಶೀಲತೆ ಗುಣಗಳು, ಆಲೋಚನೆಗಳ ಕುರಿತು ತರಬೇತಿ, ಕೌಶಲ ಮತ್ತು ಭವಿಷ್ಯದಲ್ಲಿ ವೃತ್ತಿ ಜೀವನ ರೂಪಿಸಿಕೊಳ್ಳುವ ಬಗ್ಗೆ ಮಕ್ಕಳಿಗೆ ಕಾರ್ಯಕ್ರಮ ನಡೆಸಲಾಗುತ್ತದೆ ಎಂದರು.

‘ಮಾಧ್ಯಮದಲ್ಲಿ ಭಾಷಾ ಕೌಶಲ’ ಶಿಬಿರ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫ್ಲೇರ್ ಮೀಡಿಯಾ, ಭಾರತೀಯ ವಿದ್ಯಾಭವನ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಜಂಟಿಯಾಗಿ ಶನಿವಾರ ಬೆಳಿಗ್ಗೆ 10.30ಕ್ಕೆ ‘ಮಾಧ್ಯಮದಲ್ಲಿ ಭಾಷಾ ಕೌಶಲ’ ಶೀರ್ಷಿಕೆಯಡಿ ತರಬೇತಿ ಶಿಬಿರ ಹಮ್ಮಿಕೊಂಡಿವೆ.

ಭಾರತೀಯ ವಿದ್ಯಾಭವನದ ಕೆ.ಆರ್.ಜಿ. ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಉದ್ಘಾಟಿಸಲಿದ್ದಾರೆ. ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು ಉಪನ್ಯಾಸ ನೀಡಲಿದ್ದಾರೆ. ಮುಖ್ಯ ಅತಿಥಿಯಾಗಿ ಭಾರತೀಯ ವಿದ್ಯಾಭವನದ ನಿರ್ದೇಶಕ ಎಚ್.ಎನ್. ಸುರೇಶ್ ಭಾಗವಹಿಸಲಿದ್ದಾರೆ. ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ ಅಧ್ಯಕ್ಷತೆ ವಹಿಸಲಿದ್ದಾರೆ.

ಗೋಷ್ಠಿಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮಾಧ್ಯಮ ಸಲಹೆಗಾರ ಶ್ರೀನಾಥ್ ಜೋಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಡಾ.ಸಿ.ಎ. ಕಿಶೋರ್, ಮಾಧ್ಯಮ ಭಾರತಿ ನಿರ್ದೇಶಕ ಎನ್.ಎಸ್. ಶ್ರೀಧರಮೂರ್ತಿ ಹಾಗೂ ಪತ್ರಕರ್ತ ತಿಮ್ಮಪ್ಪ ಭಟ್ ಅವರು ಭಾಗವಹಿಸಲಿದ್ದಾರೆ.

25ಕ್ಕೆ ‘ಐಕ್ಯತಾ ಸಮಾವೇಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ವತಿಯಿಂದ ಸೆಪ್ಟೆಂಬರ್ 25ರಂದು ಐತಿಹಾಸಿಕ ಪುಣೆ ಒಪ್ಪಂದದ ನೆನಪಿನ ಅಂಗವಾಗಿ ಶೋಷಿತ ಸಮುದಾಯಗಳ ‘ಐಕ್ಯತಾ ಸಮಾವೇಶ’ವನ್ನು ಟೌನ್‌ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ.

‘ರಾಜ್ಯದಲ್ಲಿ ದಲಿತ, ಹಿಂದುಳಿದ ಹಾಗೂ ಅಲ್ಪ ಸಂಖ್ಯಾತ ಸಮುದಾಯಗಳಲ್ಲಿ ರಾಜಕೀಯ ಜಾಗೃತಿ ಮೂಡಿಸಲು ಪರ್ಯಾಯ ರಾಜಕೀಯ ಶಕ್ತಿಯ ಅವಶ್ಯಕತೆ ಇದೆ. ಆದ್ದರಿಂದ ಈ ಸಮಾವೇಶವನ್ನು ಆಯೋಜಿಸಲಾಗಿದ್ದು, ಮುಂಬರುವ ವಿಧಾನಸಭೆ ಚುನಾವಣೆಯ ಕುರಿತು ಸಾಧಕ-ಬಾಧಕಗಳನ್ನು ಚರ್ಚಿಸಲಾಗುವುದು ಎಂದು ಗುರುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಆರ್. ಮೋಹನ್‌ರಾಜು ತಿಳಿಸಿದರು.



ನಗರದಲ್ಲಿ ಇಂದು

104ನೇ ಫ್ಲೈಯಾ ದಿನದ ಆಚರಣೆ: ಅತಿಥಿಗಳು: ಆರಗ ಜ್ಞಾನೇಂದ್ರ, ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಬಿ.ಕೆ. ರಿಷ್ಟಾಲ್, ಆನಂದ್ ಸಿಂಗ್, ರವಿ ಮುರುಗನ್, ಇಂದ್ರಾಣಿ ದೇವಿ, ಹರ್‌ಪ್ರೀತ್ ಸಂಧು, ಆಯೋಜನೆ: ದಿ ಮೈಸೂರು ಲ್ಯಾನ್ಸರ್ ಹೆರಿಟೇಜ್ ಫೌಂಡೇಷನ್, ಸ್ಥಳ: ಮೈಸೂರು ಲ್ಯಾನ್ಸರ್ ಮೆಮೋರಿಯಲ್, ಜೆ.ಸಿ. ನಗರ, ಬೆಳಿಗ್ಗೆ 8

ರಾಷ್ಟ್ರೀಯ ಆಯುರ್ವೇದ ಸಮ್ಮೇಳನ: ಉದ್ಘಾಟನೆ: ಡಾ.ಕೆ. ಸುಧಾಕರ್, ಗೋಪಿನಾಥ್ ಮೋಹನ್, ಪ್ರಮೋದಾ ದೇವಿ ಒಡೆಯರ್, ದರ್ಶನ್ ಶಂಕರ್, ಆಯೋಜನೆ ಮತ್ತು ಸ್ಥಳ: ದಿ ಟ್ರಾನ್ಸ್ ಡಿಸಿಪ್ಲಿನರಿ ಹೆಲ್ತ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ ಯೂನಿವರ್ಸಿಟಿ, ಜಾರಕಬಂಡೆ ಕಾವಲ್, ಬೆಳಿಗ್ಗೆ 10

ಉಪನ್ಯಾಸ ಮಾಲಿಕೆ: ವಿಷಯ: ಮತಾಂತರ ನಿಷೇಧ ಕಾಯ್ದೆ, ಉಪನ್ಯಾಸ: ಅನಂತ್ ನಾಯಕ್ ಎನ್., ಆಯೋಜನೆ ಮತ್ತು ಸ್ಥಳ: ಸಮುದಾಯ, ಮೈಸೂರು ಬ್ಯಾಂಕ್ ಕಾಲೊನಿ, ಶ್ರೀನಿವಾಸನಗರ, ಸಂಜೆ 6

'ನೆರಳಿಗೇಕೆ ಕೋಡಿಲ್ಲ' ನಾಟಕದ ದೃಶ್ಯ

'ನೆರಳಿಗೇಕೆ ಕೋಡಿಲ್ಲ' ನಾಟಕ ಪ್ರದರ್ಶನ: ಆಯೋಜನೆ: ಸಂಚಾರಿ ಥಿಯೇಟರ್, ಸ್ಥಳ: ರಂಗಶಂಕರ, ಸಂಜೆ 7.30

'ಅಗ್ನಿಪರೀಕ್ಷೆ ಹರಿಭಕ್ತ ಚಂಡಿ ಚಾಮುಂಡಿ' ಯಕ್ಷಗಾನ ಪ್ರದರ್ಶನ: ಆಯೋಜನೆ: ಧಾರ್ಮಿಕ್ ಸಂಸ್ಥೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ರಾತ್ರಿ 9.30

ಶಾಂತಿನಿಕೇತನ ಮತ್ತು ಪಾಪಯ್ಯರೆಡ್ಡಿ ಬಡಾವಣೆಯಲ್ಲಿ ಬಿಬಿಎಂಪಿ ಕಾರ್ಯಾಚರಣೆ

ನಾಲ್ಕು ಅಂತಸ್ತಿನ ಕಟ್ಟಡ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರದ ಮುನ್ನೇಕೊಳಾಲುವಿನ ಶಾಂತಿನಿಕೇತನ ಬಡಾವಣೆಯಲ್ಲಿ ರಾಜಕಾಲುವೆ ಒತ್ತುವರಿ ಮಾಡಿಕೊಂಡು ನಿರ್ಮಿಸಿದ್ದ ಒಂದು ಅಂತಸ್ತು ಹಾಗೂ ಪಾಪಯ್ಯರೆಡ್ಡಿ ಬಡಾವಣೆಯಲ್ಲಿ ನಾಲ್ಕು ಅಂತಸ್ತಿನ ಕಟ್ಟಡವನ್ನು ಬಿಬಿಎಂಪಿ ಸಿಬ್ಬಂದಿ ಗುರುವಾರ ತೆರವುಗೊಳಿಸಿದ್ದಾರೆ.

ಶಾಂತಿನಿಕೇತನ ಬಡಾವಣೆಯಲ್ಲಿ ರಾಜಕಾಲುವೆ ಮೇಲೆ ಕಟ್ಟಡ ನಿರ್ಮಾಣವಾಗಿದೆ. ಮನೆ ಖಾಲಿ ಮಾಡಲು ಕಂದಾಯ ಇಲಾಖೆಯ ತಹಶೀಲ್ದಾರ್ ವತಿಯಿಂದ ನೋಟಿಸ್ ನೀಡಲಾಗಿತ್ತು. ಅವರು ಖಾಲಿ ಮಾಡಿದ ಬಳಿಕ ಸಂಪೂರ್ಣ ಕಟ್ಟಡವನ್ನು ನೆಲಸಮಗೊಳಿಸಲಾಗಿದೆ.

ಪಾಪಯ್ಯರೆಡ್ಡಿ ಬಡಾವಣೆಯಲ್ಲಿ ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಂಡಿದ್ದ 4 ಅಂತಸ್ತಿನ ಕಟ್ಟಡದ(ಜಿ + 4) ಕಾಂಪೌಂಡ್ ಅನ್ನು ಸೆ.13ರಂದು ಒಡೆಯಲಾಗಿ, ಮನೆಯಲ್ಲಿದ್ದವರಿಗೆ ಬೇರೆಡೆ ಸ್ಥಳಾಂತರವಾಗಲು ತಹಶೀಲ್ದಾರ್ ವತಿಯಿಂದ ನೋಟಿಸ್ ನೀಡಲಾಗಿತ್ತು. ಅವರು ಅಲ್ಲಿಂದ ತೆರಳಿದ್ದಾರೆ. ಅಕ್ಕಪಕ್ಕದ ಮನೆಗಳಿಗೆ ಹಾನಿಯಾಗದಂತೆ ಅಗತ್ಯ ಸಲಕರಣೆಗಳನ್ನು ಬಳಸಿಕೊಂಡು ಸಂಪೂರ್ಣ ಕಟ್ಟಡವನ್ನು ನೆಲಸಮಗೊಳಿಸಲಾಗುತ್ತಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ಈ ತೆರವು ಕಾರ್ಯಾಚರಣೆ ನಡೆಯುವ ಸಂದರ್ಭದಲ್ಲಿ ಮಹದೇವಪುರ ವಲಯ ಆಯುಕ್ತ ಡಾ. ತ್ರಿಲೋಕ್ ಚಂದ್ರ, ವಲಯ ಜಂಟಿ ಆಯುಕ್ತ ವೆಂಕಟಾಚಲಪತಿ, ಮುಖ್ಯ ಎಂಜಿನಿಯರ್ ಬಸವರಾಜ್ ಕಬಾಡೆ ಇದ್ದರು.

'ಶಾಂತಿನಿಕೇತನ ಹಾಗೂ ಪಾಪಯ್ಯ ರೆಡ್ಡಿ ಬಡಾವಣೆಯಲ್ಲಿ ಸುಮಾರು 500 ಮೀಟರ್ ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ. ಎಲ್ಲವನ್ನೂ ತ್ವರಿತವಾಗಿ ತೆರವುಗೊಳಿಸಲಾಗಿದೆ. ಅಗತ್ಯ ಯಂತ್ರೋಪಕರಣ ಹಾಗೂ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳಿ, ರಾಜಕಾಲುವೆ ನಿರ್ಮಾಣಕ್ಕೂ ಕ್ರಮ ಕೈಗೊಳ್ಳಿ' ಎಂದು ಅಧಿಕಾರಿಗಳಿಗೆ ತ್ರಿಲೋಕ್ ಚಂದ್ರ ಸೂಚನೆ ನೀಡಿದರು.

ಸ್ಲ್ಯಾಬ್ ತೆರವು: ಸರ್ಜಾಪುರ ರಸ್ತೆಯ ಗ್ರೀನ್‌ವುಡ್ ರೆಸಿಡೆನ್ಸ್ ಬಳಿ ರಾಜಕಾಲುವೆ ಮೇಲೆ ಅಳವಡಿಸಿರುವ ಸ್ಲ್ಯಾಬ್ ತೆರವು ಕಾರ್ಯ ಗುರುವಾರವೂ ಮುಂದುವರಿದಿತ್ತು. ಶುಕ್ರವಾರವೂ ಕಾರ್ಯಾಚರಣೆ ನಡೆಸಲಾಗುತ್ತದೆ. ಮಾರತಹಳ್ಳಿ ಪೊಲೀಸ್ ಠಾಣೆಯ ಹಿಂಭಾಗ, ಜಲಮಂಡಳಿ ಎಸ್.ಟಿ.ಪಿ ಬಳಿ ರಾಜಕಾಲುವೆಯ ಮೇಲೆ ನಿರ್ಮಾಣ ಮಾಡಿರುವ ಸೇತುವೆ ತೆರವು ಕಾರ್ಯಾಚರಣೆಯನ್ನು ಪೂರ್ಣಗೊಳಿಸಲಾಗಿದೆ ಎಂದು ಎಂಜಿನಿಯರ್‌ಗಳು ತಿಳಿಸಿದರು.

ಮಹದೇವಪುರದ ಪಾಪಯ್ಯರೆಡ್ಡಿ ಬಡಾವಣೆಯಲ್ಲಿ ನಾಲ್ಕು ಅಂತಸ್ತಿನ ಕಟ್ಟಡವನ್ನು ಬಿಬಿಎಂಪಿ ಸಿಬ್ಬಂದಿ ಗುರುವಾರ ತೆರವುಗೊಳಿಸಿದರು

ಮಹದೇವಪುರದ ಮುನ್ನೇಕೊಳಾಲುವಿನ ಶಾಂತಿನಿಕೇತನ ಬಡಾವಣೆಯಲ್ಲಿ ರಾಜಕಾಲುವೆ ಒತ್ತುವರಿ ಮಾಡಿಕೊಂಡಿದ್ದ ಕಟ್ಟಡವನ್ನು ಬಿಬಿಎಂಪಿ ಸಿಬ್ಬಂದಿ ಗುರುವಾರ ನೆಲಸಮ ಮಾಡಿದರು

130 ನೋಟಿಸ್ ಜಾರಿ...

'ಬೆಂಗಳೂರು ಪೂರ್ವ ತಾಲ್ಲೂಕಿಗೆ ಸಂಬಂಧಿಸಿದಂತೆ 130ಕ್ಕೂ ಹೆಚ್ಚು ನೋಟಿಸ್ ಜಾರಿ ಮಾಡಿ, ಸ್ಥಳ ಖಾಲಿ ಮಾಡಲು ಸೂಚಿಸಲಾಗಿದೆ' ಎಂದು ಪೂರ್ವ ತಾಲ್ಲೂಕು ತಹಶೀಲ್ದಾರ್ ಅಜಿತ್ ಕುಮಾರ್ ತಿಳಿಸಿದರು.

'ಐದು ಪ್ರಮುಖ ಕಟ್ಟಡಗಳ ತೆರವಿಗೆ ಆದೇಶ ನೀಡಲಾಗಿದೆ. ಇನ್ನು ಕೆಲವು ದಿನಗಳಲ್ಲಿ ಮತ್ತಷ್ಟು ಆದೇಶ ನೀಡಲಾಗುತ್ತದೆ. ಸ್ಥಳ ಪರಿಶೀಲನೆ, ಸರ್ವೆ ನಡೆಸಿ, ಅಳತೆ ಗುರುತಿಸಿದ ಮೇಲೆ ಕೂಡಲೇ ಸಂಬಂಧಿಸಿದ ಒತ್ತುವರಿದಾರರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಈ ಪ್ರಕ್ರಿಯೆ ಇಂದಿಗೂ ನಡೆಯುತ್ತಿದೆ. ಎಲ್ಲ ರೀತಿಯ ಒತ್ತುವರಿಯ ತೆರವಿಗೆ ಆದೇಶ ನೀಡಲಾಗುತ್ತದೆ. ಕೆಲವು ತೆರವು ಪ್ರಕರಣಗಳಿಗೆ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದೆ. ಸೂಕ್ತ ದಾಖಲೆಗಳನ್ನು ನೀಡಿ ತಡೆಯಾಜ್ಞೆ ತೆರವುಗೊಳಿಸಲು ಮನವಿ ಮಾಡಲಾಗುತ್ತದೆ' ಎಂದರು.

ಆದೇಶ ಬಂದ ಕೂಡಲೇ ಕ್ರಮ...

'ಪ್ರತಿಷ್ಠಿತರಿಂದ ಒತ್ತುವರಿಯಾಗಿದ್ದರೆ ಅದನ್ನು ಬಿಡಲಾಗುತ್ತಿದೆ ಎಂಬ ಮಾತಿಲ್ಲ. ವಿಪ್ರೊ, ಬಾಗಮನೆ, ಇಕೊಸ್ಪೇಸ್, ನಲಪಾಡ್ ಸೇರಿದಂತೆ ಹಲವರ ಒತ್ತುವರಿಯನ್ನು ತೆರವುಗೊಳಿಸಲಾಗಿದೆ. ವಿಪ್ರೊ ಮತ್ತು ಬಾಗಮನೆ ಕಂಪನಿಗಳವರು ತಾವೇ ಒತ್ತುವರಿ ತೆರವುಗೊಳಿಸಿಕೊಂಡಿದ್ದಾರೆ. ರೈನ್‌ಬೊ ಡ್ರೈವ್‌ನಲ್ಲಿ ಸಾಕಷ್ಟು ಒತ್ತುವರಿಯಿದ್ದು, ತಹಶೀಲ್ದಾರ್ ಅವರಿಂದ ಆದೇಶ ಬಂದ ಕೂಡಲೇ ತೆರವು ಮಾಡಲಾಗುತ್ತದೆ' ಎಂದು ಮಹದೇವಪುರ ವಲಯ ಆಯುಕ್ತ ಡಾ. ತ್ರಿಲೋಕ್ ಚಂದ್ರ ತಿಳಿಸಿದರು.

'ತಹಶೀಲ್ದಾರರು 5 ತೆರವು ಆದೇಶ ನೀಡಿದ್ದರು. ಅದರಂತೆ ನಾವು ಎಲ್ಲವನ್ನೂ ತೆರವುಗೊಳಿಸಿದ್ದೇವೆ. ತೆರವು ಆದೇಶ ಬಂದ ನಂತರ ನಾವು ತಡ ಮಾಡುವುದಿಲ್ಲ. ಈ ಬಗ್ಗೆ ಕ್ಷಿಪ್ರ ಕ್ರಮಕ್ಕೆ, ವಲಯ ಜಂಟಿ ಆಯುಕ್ತ ಹಾಗೂ ಮುಖ್ಯ ಎಂಜಿನಿಯರ್ ಅವರಿಗೂ ಸೂಚಿಸಲಾಗಿದೆ' ಎಂದರು.

ಸುದ್ದಿ 2 ನಿಮಿಷ

ವಾಯುಪಡೆ ತರಬೇತಿಯಲ್ಲಿದ್ದ ಅಭ್ಯರ್ಥಿ ಸಾವು: ಕೊಲೆ ಶಂಕೆ

ಬೆಂಗಳೂರು: ವಾಯುಪಡೆಗೆ ಆಯ್ಕೆಯಾಗಿ ತರಬೇತಿ ಪಡೆಯುತ್ತಿದ್ದ ಅಂಕಿತಕುಮಾರ್ ಝಾ (27) ಎಂಬುವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ಸಂಬಂಧಿಕರು ಕೊಲೆ ಶಂಕೆ ವ್ಯಕ್ತಪಡಿಸಿದ್ದಾರೆ.

'ದೆಹಲಿಯ ಅಂಕಿತಕುಮಾರ್ ಇತ್ತೀಚೆಗಷ್ಟೇ ವಾಯುಪಡೆಗೆ ಆಯ್ಕೆಯಾಗಿದ್ದರು. ಜಾಲಹಳ್ಳಿಯ ವಾಯುಪಡೆ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿದ್ದರು. ಇವರ ಸಾವಿನ ಬಗ್ಗೆ ಸಹೋದರ ದೂರು ನೀಡಿದ್ದಾರೆ. ಕೊಲೆ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಗಂಗಮ್ಮನಗುಡಿ ಠಾಣೆ ಪೊಲೀಸರು ಹೇಳಿದರು.

'ಕೇಂದ್ರದ ಕ್ವಾರ್ಟರ್ಸ್‌ನಲ್ಲಿ ಅಂಕಿತಕುಮಾರ್ ವಾಸವಿದ್ದರು. ಕೊಠಡಿಯ ಫ್ಯಾನ್‌ಗೆ ನೇಣು ಬಿಗಿದ ಸ್ಥಿತಿಯಲ್ಲಿ ಬುಧವಾರ ಸಂಜೆ ಮೃತದೇಹ ಪತ್ತೆಯಾಗಿದೆ. ಇದೊಂದು ಆತ್ಮಹತ್ಯೆ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ತನಿಖೆಯಿಂದಲೇ ಸತ್ಯಾಂಶ ಹೊರಬರಬೇಕಿದೆ' ಎಂದು ತಿಳಿಸಿದರು.

'ಮೃತದೇಹ ಸಿಕ್ಕ ಸ್ಥಳದಲ್ಲಿ ಮರಣಪತ್ರ ಪತ್ತೆಯಾಗಿದ್ದು, ಪರಿಶೀಲಿಸಲಾಗುತ್ತಿದೆ' ಎಂದು ಹೇಳಿದರು.

ಸ್ವಯಂ ಸೇವಾ ಸಂಸ್ಥೆ ಸಿಬ್ಬಂದಿ ಪ್ರತಿಭಟನೆ

ಬೆಂಗಳೂರು: ಸಮಾನ ವೇತನಕ್ಕೆ ಆಗ್ರಹಿಸಿ ಕರ್ನಾಟಕ ನಗರ ಮತ್ತು ಗ್ರಾಮಾಭ್ಯುದಯ ಸ್ವಯಂ ಸೇವಾ ಸಂಸ್ಥೆಗಳ ಸಿಬ್ಬಂದಿ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಸ್ವಯಂ ಸೇವಾ ಸಂಸ್ಥೆಗಳ ಕಾರ್ಯಕರ್ತರು, ಸಿಬ್ಬಂದಿಯ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶೈಕ್ಷಣಿಕ ಸಹಾಯಧನ ಜಾರಿಗೊಳಿಸಬೇಕು. ಗರ್ಭಿಣಿಯರಿಗೆ ಪೌಷ್ಟಿಕ ಆಹಾರ, ಹೆರಿಗೆ ಭತ್ಯೆಯ ಜತೆಗೆ ರಜೆ ಸಹಿತ ವೇತನ ನೀಡಬೇಕು ಎಂದು ಒತ್ತಾಯಿಸಿದರು.

ಸ್ವಯಂ ಸೇವಾ ಸಂಸ್ಥೆಗಳ ಕಾರ್ಯಕರ್ತರು ಮತ್ತು ಸಿಬ್ಬಂದಿಗೆ ಕೌಟುಂಬಿಕ ಆರೋಗ್ಯ ವಿಮೆ ಮತ್ತು ಅಪಘಾತ ವಿಮೆ ಜಾರಿಗೊಳಿಸಬೇಕು. ಸ್ವಯಂ ಸೇವಾ ಸಂಸ್ಥೆಗಳ ಕಾರ್ಯಕರ್ತರು ಮತ್ತು ಸಿಬ್ಬಂದಿಗೆ ವಸತಿ ಸೌಲಭ್ಯ, ಗೃಹ ನಿರ್ಮಾಣಕ್ಕಾಗಿ ಧನಸಹಾಯ ಹಾಗೂ ನಿವೇಶನ ಮೀಸಲಿಡಬೇಕು ಎಂದು ಆಗ್ರಹಿಸಿದರು.

ಸ್ವಯಂ ಸೇವಾ ಕ್ಷೇತ್ರದಲ್ಲಿ 15 ವರ್ಷಕ್ಕೂ ಹೆಚ್ಚು ಸೇವೆ ಸಲ್ಲಿಸಿದ ಸಾಮಾಜಿಕ ಕಾರ್ಯಕರ್ತರಿಗೆ ಮಾಸಾಶನ ಜಾರಿಗೊಳಿಸಬೇಕು. ಸಾಮಾಜಿಕ ಸೇವಾ ಕ್ಷೇತ್ರದ ಅಭಿವೃದ್ಧಿ ನಿರ್ವಹಣೆಗಾಗಿ ಸ್ವಾಯತ್ತ ಸಾಮಾಜಿಕ–ಸೇವಾ ಅಭಿವೃದ್ಧಿ ಮಂಡಳಿ ರಚಿಸಿ ಕನಿಷ್ಠ ₹100 ಕೋಟಿ ಮೀಸಲಿಡಬೇಕು ಎಂದು ಮನವಿ ಮಾಡಿದರು.

'ಭ್ರಷ್ಟಾಚಾರ, ನಿರುದ್ಯೋಗ ಸಮಸ್ಯೆಗೆ ದುರಾಸೆ ಕಾರಣ'

ನಿರುದ್ಯೋಗಿ ಯುವಜನರ ರಾಜ್ಯಮಟ್ಟದ ಸಮಾವೇಶದಲ್ಲಿ ಸಂತೋಷ್ ಹೆಗ್ಡೆ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶವನ್ನು ಕಾಡುತ್ತಿರುವ ಭ್ರಷ್ಟಾಚಾರ ಮತ್ತು ನಿರುದ್ಯೋಗ ಸಮಸ್ಯೆಗೆ ಆಡಳಿತ ನಡೆಸುವವರ ದುರಾಸೆಯೇ ಕಾರಣ' ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಅಭಿಪ್ರಾಯಪಟ್ಟರು.

ಅಖಿಲ ಭಾರತ ನಿರುದ್ಯೋಗಿ ಯುವಜನರ ಹೋರಾಟ ಸಮಿತಿ-(ಎಐಯುವೈಎಸ್‌ಸಿ) ಆಯೋಜಿಸಿದ್ದ ನಿಯರುದ್ಯೋಗಿ ಯುವಜನರ ರಾಜ್ಯ ಮಟ್ಟದ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿನ ರಾಜಕೀಯ ವ್ಯವಸ್ಥೆಯನ್ನು ನೋಡಿ ಈ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ ಎಂಬ ಭರವಸೆಯೇ ಹೋಗಿದೆ. 50ರ ದರಶಕದಲ್ಲಿ ಜೀಪ್ ಹಗರಣದಲ್ಲಿ ದೇಶಕ್ಕೆ ₹52 ಲಕ್ಷ ನಷ್ಟವಾಯಿತು. 60ರ ದಶಕದಲ್ಲಿ ಬೋಫೋರ್ಸ್ ಹಗರಣದಿಂದ ₹64 ಕೋಟಿ, 70ರ ದಶಕದಲ್ಲಿ ಕಾಮನ್‌ವೆಲ್ತ್ ಹಗರಣದಿಂದ ₹70 ಸಾವಿರ ಕೋಟಿ, 2010ರಲ್ಲಿ ಕಲ್ಲಿದ್ದಲು ಹಗರಣದಿಂದ ₹1.76 ಲಕ್ಷ ಕೋಟಿ, 2ಜಿ ಹಗರಣದಲ್ಲಿ ₹1.84 ಲಕ್ಷ ಕೋಟಿ ನಷ್ಟವಾಯಿತು. ರಫೆಲ್ ರೀತಿ ಇತ್ತೀಚಿನ ಹಗರಣದಲ್ಲಿ ಸೋರಿಹೋದ ಹಣ ₹2 ಲಕ್ಷ ಕೋಟಿಯನ್ನು ದಾಟುತ್ತಿದೆ. ಇದೆಲ್ಲವೂ ದುರಾಸೆಯ ಪರಮಾವಧಿಯ ಫಲ ಎಂದು ಹೇಳಿದರು.

'ನ್ಯಾಯಾಂಗ ಪದ್ಧತಿಯಲ್ಲೂ ನ್ಯೂನತೆಗಳಿವೆ. ತ್ವರಿತವಾಗಿ ನ್ಯಾಯ ಸಿಗುವ ಪರಿಸ್ಥಿತಿ ಇಲ್ಲ. ನ್ಯಾಯ ಸಿಗುವ ವೇಳೆಗೆ ಬಹಳಷ್ಟು ಪ್ರಕರಣಗಳಲ್ಲಿ ಕಕ್ಷಿದಾರ ಜೀವಂತ ಇರುವುದೇ ಇಲ್ಲ. ಇದರಿಂದಾಗಿ ನ್ಯಾಯಾಂಗದ ಬಗ್ಗೆ ಕಾರ್ಯಾಂಗಕ್ಕೆ ಹೆದರಿಕೆಯೇ ಇಲ್ಲ. ಇವೆಲ್ಲವನ್ನೂ ನೋಡಿ ನಿರಾಶಾವಾದಿ ಆಗಿದ್ದೇನೆ. ಆದರೂ, ಇವುಗಳ ವಿರುದ್ಧ ಶಾಂತಿಯುತವಾಗಿ ಪ್ರತಿಭಟನೆಗಳನ್ನು ನಡೆಸಬೇಕು. ಗುರಿ ತಲುಪುವ ಪ್ರಯತ್ನ ಮಾಡಬೇಕು' ಎಂದು ತಿಳಿಸಿದರು.

ಲೇಖಕ ಮಂಗ್ಳೂರು ವಿಜಯ ಮಾತನಾಡಿ, 'ಸರ್ಕಾರ ನಮಗೆ ಉಚಿತವಾಗಿ ಏನನ್ನೂ ಕೊಡುವುದು ಬೇಡ. ದುಡಿಯುವ ಕೈಗಳಿಗೆ ಉದ್ಯೋಗ ನೀಡಬೇಕು. ಉದ್ಯೋಗ ನೀಡದ ಸರ್ಕಾರದ ವಿರುದ್ಧ ಯುವ ಸಮೂಹ ಎಚ್ಚೆತ್ತು ಹೋರಾಟ ನಡೆಸಬೇಕಿದೆ' ಎಂದರು.

ನಿರುದ್ಯೋಗಿ ಯುವಕರು ಜೈಲಿಗೆ ಹೋಗುವ ಹೋರಾಟ ಹಮ್ಮಿಕೊಳ್ಳಬೇಕು. ಪ್ರತಿಭಟನೆ ಸಂದರ್ಭದಲ್ಲಿ ಬಂಧಿಸಿ ಬಳಿಕ ಬಿಡುಗಡೆ ಮಾಡುವುದು ಪ್ರತೀತಿ. ಅದಕ್ಕೆ ಒಪ್ಪದೆ ಕೆಲಸ ಕೊಡಿ ಇಲ್ಲವೇ, ಜೈಲಿನಲ್ಲಿ ಇರಿಸಿ ಎಂಬ ಹೋರಾಟ ನಡೆಸಬೇಕು. ಆಗಲಾದರೂ ಸರ್ಕಾರಗಳಿಗೆ ನಿರುದ್ಯೋಗದ ಗಂಭೀರತೆ ಅರ್ಥವಾಗಬಹುದು ಎಂದು ಹೇಳಿದರು.

ಸಮಾವೇಶದಲ್ಲಿ ಯುವಜನರೊಂದಿಗೆ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಮತ್ತು ಮಂಗ್ಳೂರು ವಿಜಯ ಸಮಾಲೋಚನೆ ನಡೆಸಿದರು. ಎಐಯುವೈಎಸ್‌ಸಿ ಅಖಿಲ ಭಾರತ ಘಟಕದ ಅಧ್ಯಕ್ಷ ಇ.ವಿ. ಪ್ರಕಾಶ್, ರಾಜ್ಯ ಕಾರ್ಯದರ್ಶಿ ಚನ್ನಬಸಪ್ಪ ಜಾನೇಕಲ್, ರಾಜ್ಯ ಘಟಕದ ಅಧ್ಯಕ್ಷ ವಿಜಯಕುಮಾರ್, ಎಐಡಿವೈಒ ರಾಜ್ಯ ಕಾರ್ಯದರ್ಶಿ ಸಿದ್ದಲಿಂಗ ಬಾಗೇವಾಡಿ, ಉಪಾಧ್ಯಕ್ಷ ಜಿ.ಎಸ್.ಕುಮಾರ್ ಇದ್ದರು —ಪ್ರಜಾವಾಣಿ ಚಿತ್ರ

'ಭಯೋತ್ಪಾದಕರಿಗೆ ರಾಜಕೀಯ ರಕ್ಷಣೆ'

ವಿಶ್ವಸಂಸ್ಥೆ: 'ವಿಶ್ವದ ದೊಡ್ಡಮಟ್ಟದ ಭಯೋತ್ಪಾದಕರನ್ನು ಶಿಕ್ಷಿಸುವ ವಿಚಾರಕ್ಕೆ ಸಂಬಂಧಿಸಿದಂತೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ದಂಡನೆಯಿಂದ ವಿನಾಯಿತಿ ನೀಡುತ್ತಿರುವುದು, ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುತ್ತಿರುವುದು ಮತ್ತು ರಾಜಕೀಯ ರಕ್ಷಣೆ ನೀಡುತ್ತಿರುವುದು ವಿಷಾದನೀಯ' ಎಂದು ಭಾರತವು ಗುರುವಾರ ಹೇಳಿದೆ.

15 ರಾಷ್ಟ್ರಗಳ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಮಾತನಾಡಿದ ಭಾರತದ ವಿದೇಶಾಂಗ ಸಚಿವ ಜೈಶಂಕರ್, 'ಶಾಂತಿ ಮತ್ತು ನ್ಯಾಯವನ್ನು ಭದ್ರಪಡಿಸುವ ನಿಟ್ಟಿನಲ್ಲಿ ದಂಡನೆಯಿಂದ ವಿನಾಯಿತಿ ನೀಡುವುದರ ವಿರುದ್ಧದ ಹೋರಾಟವು ನಿರ್ಣಾಯಕವಾದ ಅಂಶವಾಗಿದೆ. ಭದ್ರತಾ ಮಂಡಳಿಯು ಇಂಥ ಸಂದಿಗ್ಧ ಸಂದರ್ಭಗಳಲ್ಲಿ ಸ್ಪಷ್ಟವಾದ ಮತ್ತು ತಪ್ಪು ಕಲ್ಪನೆಗೆ ಅವಕಾಶವಿಲ್ಲದ ಸಂದೇಶವನ್ನು ನೀಡುವುದು ಅಗತ್ಯವಾಗಿದೆ' ಎಂದು ಪ್ರತಿಪಾದಿಸಿದರು.

ಪಾಕಿಸ್ತಾನದ ಮೂಲದ ನಿಷೇಧಿತ ಉಗ್ರ ಸಂಘಟನೆಗಳ ಉಗ್ರರನ್ನು ಕಪ್ಪುಪಟ್ಟಿಗೆ ಸೇರಿಸಲು ಮುಂದಾಗುವ ಸಂದರ್ಭದಲ್ಲಿ ಚೀನಾ ತಡೆಯೊಡ್ಡುವುದನ್ನು ಗಮನದಲ್ಲಿಟ್ಟುಕೊಂಡು, ಭಾರತ ಈ ರೀತಿ ಪ್ರತಿಕ್ರಿಯೆ ನೀಡಿದೆ.

ವಿದ್ಯುತ್ ಬಿಲ್: ಸುಳ್ಳು ಮಾಹಿತಿ ನೀಡಿದ ವ್ಯಕ್ತಿ ವಿರುದ್ಧ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಸಿಕ ವಿದ್ಯುತ್ ಬಿಲ್‌ನಲ್ಲಿ ನಮೂದಿಸಿರುವ ನಿಗದಿತ ಶುಲ್ಕ ಮತ್ತು ಇಂಧನ ಹೊಂದಾಣಿಕೆ ಶುಲ್ಕದ ಕುರಿತು ಸತ್ಯಕ್ಕೆ ದೂರವಾದ ಮಾಹಿತಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ವ್ಯಕ್ತಿಯೊಬ್ಬರು ಹರಿಬಿಟ್ಟಿದ್ದಾರೆ. ಇಂತಹ ಸುಳ್ಳು ಸುದ್ದಿಗಳಿಗೆ ಸಾರ್ವಜನಿಕರು ಕಿವಿಗೊಡಬಾರದು' ಎಂದು ಬೆಸ್ಕಾಂ ಗ್ರಾಹಕರಿಗೆ ಮನವಿ ಮಾಡಿದೆ.

'ಮಾಸಿಕ ಬಿಲ್‌ನಲ್ಲಿ ನಮೂದಿಸಲಾಗುವ ನಿಗದಿತ ಶುಲ್ಕವನ್ನು ಸಂಗ್ರಹಿಸಲು ಬೆಸ್ಕಾಂಗೆ ಯಾವುದೇ ಅಧಿಕಾರವಿಲ್ಲ ಮತ್ತು ಇಂಧನ ಹೊಂದಾಣಿಕೆ ಶುಲ್ಕ ವಿಧಿಸಿ ಗ್ರಾಹಕರನ್ನು ವಂಚಿಸಲಾಗುತ್ತಿದೆ ಎಂದು ಪುಟ್ಟೇಗೌಡ ಎಂಬ ವ್ಯಕ್ತಿ ವಿಡಿಯೊ ಮಾಡಿ ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ. ಈ ವ್ಯಕ್ತಿ ವಿರುದ್ಧ ಕಾನೂನು ಕ್ರಮ ಜರುಗಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ' ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಮನವಿ ಮಾಡಿದ್ದಾರೆ.

'ಬಿಲ್‌ನಲ್ಲಿ ನಮೂದಿಸಿರುವ ನಿಗದಿತ ಶುಲ್ಕವು 1 ಕಿಲೋ ವ್ಯಾಟ್‌ಗೆ ₹100 ಇದ್ದು, 2 ಕಿಲೋ ವ್ಯಾಟ್‌ಗೆ ₹220 ಅನ್ನು ಕೆಇಆರ್‌ಸಿ ನಿಗದಿಪಡಿಸಿದೆ. ನಿಗದಿತ ಶುಲ್ಕವು ಗ್ರಾಹಕರು ಬಳಸುವ ವಿದ್ಯುತ್ ಬಳಕೆ ಮೇಲೆ ವಿಧಿಸುವ ಶುಲ್ಕವಾಗಿರುವುದಿಲ್ಲ. ಗ್ರಾಹಕರು ವಿದ್ಯುತ್ ಬಳಸದಿದ್ದರೂ ಅವರು ನಿಗದಿತ ಶುಲ್ಕ ಪಾವತಿಸಬೇಕಾಗುತ್ತದೆ. ಗ್ರಾಹಕರಿಗೆ ವಿದ್ಯುತ್ ಸಂಪರ್ಕ ಮತ್ತು ಅದನ್ನು ಪೂರೈಸಲು ಬೆಸ್ಕಾಂ ಒದಗಿಸುವ ಮೂಲಸೌಕರ್ಯದ ನಿರ್ವಹಣಾ ವೆಚ್ಚಕ್ಕಾಗಿ ನಿಗದಿತ ಶುಲ್ಕವನ್ನು ವಿಧಿಸಲಾಗುತ್ತದೆ' ಎಂದು ವಿವರಿಸಿದ್ದಾರೆ.

ಮಹಾಂತೇಶ ಬೀಳಗಿ

'ಇದೇ ರೀತಿ ಇಂಧನ ಹೊಂದಾಣಿಕೆ ಶುಲ್ಕವನ್ನು ಕಲ್ಲಿದ್ದಲು ಖರೀದಿ ವೆಚ್ಚದ ಆಧಾರದ ಮೇಲೆ ಕೆಇಆರ್‌ಸಿ ಕಾಲಕಾಲಕ್ಕೆ ಪರಿಷ್ಕರಿಸುತ್ತದೆ ಇಂಧನ ಹೊಂದಾಣಿಕೆ ಶುಲ್ಕವನ್ನು ಕೆಇಆರ್‌ಸಿ ಪ್ರತಿ 3 ತಿಂಗಳಿಗೊಮ್ಮೆ ಪರಿಷ್ಕರಿಸುತ್ತದೆ' ಎಂದು ಸ್ಪಷ್ಟಪಡಿಸಿದ್ದಾರೆ. 'ಹಾಗೆಯೇ ಬಿಲ್‌ನಲ್ಲಿ ನಮೂದಿಸಿರುವ ದಂಡವು ಗ್ರಾಹಕರು ತಾವು ಪಡೆದ ವಿದ್ಯುತ್ ಪ್ರಮಾಣದ ಸಾಮರ್ಥ್ಯಕ್ಕಿಂತ (ಉದಾಹರಣೆಗೆ 3 ಕಿ.ವ್ಯಾಟ್) ಹೆಚ್ಚಿನ ವಿದ್ಯುತ್ ಸಾಮರ್ಥ್ಯವನ್ನು ಬಳಸಿದ್ದರೆ ಮಾತ್ರ ದಂಡ ವಿಧಿಸಲಾಗುತ್ತದೆ' ಎಂದು ತಿಳಿಸಿದ್ದಾರೆ.

'ವಿದ್ಯುತ್ ಬಿಲ್‌ನಲ್ಲಿ ನಮೂದಿಸಿರುವ ಬಡ್ಡಿಯನ್ನು ನಿಗದಿತ ಅವಧಿಯೊಳಗೆ ವಿದ್ಯುತ್ ಶುಲ್ಕ ಪಾವತಿಸದಿದ್ದರೆ ಮಾತ್ರ ವಿಧಿಸಲಾಗುತ್ತದೆ. ಬಿಲ್‌ನಲ್ಲಿ ಉಲ್ಲೇಖಿಸಿರುವ ತೆರಿಗೆಯನ್ನು ಸರ್ಕಾರದ ಪರವಾಗಿ ಬೆಸ್ಕಾಂ ಸಂಗ್ರಹಿಸುತ್ತಿದೆ. ತೆರಿಗೆ ದರವನ್ನು ಕೆಇಆರ್‌ಸಿ ಪರಿಷ್ಕರಿಸುತ್ತದೆ' ಎಂದು ವಿವರಿಸಿದ್ದಾರೆ.

ಚಿಕ್ಕನಾಗಮಂಗಲ ಕಸ ಸಂಸ್ಕರಣಾ ಘಟಕ: 2 ತಿಂಗಳಲ್ಲಿ ವರದಿಗೆ ನಿರ್ದೇಶನ

ಎನ್‌ಜಿಟಿಗೆ ತಪ್ಪು ಮಾಹಿತಿ ಕೊಟ್ಟ ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಆನೇಕಲ್ ತಾಲ್ಲೂಕಿನ ಚಿಕ್ಕನಾಗಮಂಗಲ ಕಸ ಸಂಸ್ಕರಣ ಘಟಕದಲ್ಲಿ ಲಿಚೆಟ್ ಉತ್ಪಾದನೆಯಾಗುತ್ತಿರುವ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ತಪ್ಪು ಮಾಹಿತಿ ನೀಡಿದೆ ಎಂದು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ (ಎನ್‌ಜಿಟಿ) ಪ್ರಧಾನ ಪೀಠವು ತರಾಟೆಗೆ ತೆಗೆದುಕೊಂಡಿದೆ.

ಘಟಕದಿಂದ ಆಗುತ್ತಿರುವ ತೊಂದರೆಗಳ ಬಗ್ಗೆ ಗ್ರಾಮಸ್ಥರು ಬಿಬಿಎಂಪಿಗೆ ಮನವಿ ಸಲ್ಲಿಸಿದ್ದರು.

ಈ ಬಗ್ಗೆ ಮಾಧ್ಯಮಗಳಲ್ಲಿ ವರದಿ ಪ್ರಕಟವಾಗಿತ್ತು.

ಪ್ರಧಾನ ಪೀಠವು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿತ್ತು. ನ್ಯಾಯ ಮಂಡಳಿಯು ಬಿಬಿಎಂಪಿಗೆ ನೋಟಿಸ್ ನೀಡಲಾಗಿತ್ತು. ಈ ಸಂಬಂಧ ಪಾಲಿಕೆಯು ಎನ್‌ಜಿಟಿಗೆ ಪ್ರಮಾಣಪತ್ರ ಸಲ್ಲಿಸಿತ್ತು. ಈ ಬಗ್ಗೆ ತೀರ್ಪು ನೀಡಿರುವ ನ್ಯಾಯಮೂರ್ತಿ ಆದರ್ಶ ಕುಮಾರ್ ಗೋಯೆಲ್ ಅವರನ್ನು ಒಳಗೊಂಡಿರುವ ಪೀಠವು, 'ಬಿಬಿಎಂಪಿ ಪ್ರಮಾಣಪತ್ರವು ದ್ವಂದ್ವಗಳಿಂದ ಕೂಡಿದೆ. ಅದನ್ನು ಒಪ್ಪಲು ಸಾಧ್ಯವಿಲ್ಲ' ಎಂದು ಹೇಳಿದೆ.

ಘಟಕದ ವಾಸ್ತವ ಸ್ಥಿತಿ ಅರಿಯಲು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ನಿರ್ದೇಶಕರು, ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯದ ಪ್ರಾದೇಶಿಕ ಅಧಿಕಾರಿ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳನ್ನು ಒಳಗೊಂಡ ಜಂಟಿ ಸಮಿತಿಯನ್ನು ರಚಿಸಲು ಪೀಠ ಆದೇಶಿಸಿದೆ. ಈ ಸಮಿತಿಯು ಒಂದು ತಿಂಗಳಲ್ಲಿ ಸಭೆ ಸೇರಿ ಕ್ರಿಯಾಯೋಜನೆಯನ್ನು ಸಿದ್ಧಪಡಿಸಬೇಕು. ಎರಡು ತಿಂಗಳಲ್ಲಿ ವರದಿ ಸಲ್ಲಿಸಬೇಕು ಎಂದೂ ನಿರ್ದೇಶನ ನೀಡಿದೆ.

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಒಪ್ಪಿಗೆ ಪಡೆದು ಈ ಘಟಕವನ್ನು 2015ರಲ್ಲಿ ಸ್ಥಾಪಿಸಲಾಗಿದೆ. ಘಟಕದಲ್ಲಿ ಪ್ರತಿನಿತ್ಯ 300 ಟನ್ ಕಸ ಸಂಸ್ಕರಣೆ ಮಾಡಲಾಗುತ್ತಿದೆ. ಘನತ್ಯಾಜ್ಯ ನಿರ್ವಹಣೆ ನಿಯಮ 2016ರ ಪ್ರಕಾರ, ಈ ಘಟಕವನ್ನು 15.3 ಎಕರೆ ಘಟಕದಲ್ಲಿ ಸ್ಥಾಪಿಸಲಾಗಿದ್ದು, ಕಲುಷಿತ ನೀರು ಅಂತರ್ಜಲ ಸೇರದಂತೆ ತಡೆಯಲಾಗಿದೆ. ಲಿಚೆಟ್ ಘಟಕ ನಿರ್ಮಾಣಕ್ಕೆ ಕಾರ್ಯಾದೇಶ ನೀಡಲಾಗಿದ್ದು, ಆರು ತಿಂಗಳಲ್ಲಿ ಘಟಕ ಕಾರ್ಯಾರಂಭ ಮಾಡಲಿದೆ ಎಂದು ಪಾಲಿಕೆ ಪ್ರಮಾಣಪತ್ರ ಸಲ್ಲಿಸಿತ್ತು.

ಈ ಬಗ್ಗೆ ಪೀಠವು ಆಕ್ಷೇಪ ವ್ಯಕ್ತಪಡಿಸಿ, 'ಸಂಸ್ಕರಣಾ ಘಟಕದಿಂದ ಕೊಳಚೆ ನೀರು ಸೋರಿಕೆಯಾಗುತ್ತಿಲ್ಲ ಎಂಬುದನ್ನು ಒಪ್ಪಲು ಸಾಧ್ಯವಿಲ್ಲ' ಎಂದಿದೆ. ಲಿಚೆಟ್ ಘಟಕ ನಿರ್ಮಾಣಕ್ಕೆ ಈಗ ಕಾರ್ಯಾದೇಶ ನೀಡಲಾಗಿದೆ ಎಂದು ಬಿಬಿಎಂಪಿ ಈಗ ಹೇಳುತ್ತಿದೆ. ಸದ್ಯ ಲಿಚೆಟ್ ಅನ್ನು ಸರಿಯಾಗಿ ಸಂಸ್ಕರಣೆ ಮಾಡುತ್ತಿಲ್ಲ ಎಂಬುದು ಇದರ ಅರ್ಥ ಎಂದೂ ಪೀಠ ಹೇಳಿದೆ.

ನಿತ್ಯ 300 ಟನ್ ಒಣ ತ್ಯಾಜ್ಯ ಘಟಕದಲ್ಲಿ ಸಂಸ್ಕರಣೆ ಮಾಡಲಾಗುತ್ತದೆ. ಅದರಲ್ಲಿ ಶೇ 80ರಷ್ಟು ಲಿಚೆಟ್ ಆಗಿ ಉತ್ಪಾದನೆ ಆಗುತ್ತದೆ. ಮೊದಲು ಜಲಮಂಡಳಿಯ ತ್ಯಾಜ್ಯ ನೀರು ಸಂಸ್ಕರಣಾ ಘಟಕದ ನೆರವಿನಿಂದ ಲಿಚೆಟ್ ವಿಲೇವಾರಿ ಮಾಡಲಾಗುತ್ತಿತ್ತು. ಘಟಕಕ್ಕೆ ನಿರ್ಮಾಣ ನೀಡಿರುವ ಷರತ್ತಿಗೆ ವಿರುದ್ಧವಾಗಿ ಖಾಸಗಿ ಸಂಸ್ಥೆ ಸಹಯೋಗದಲ್ಲಿ ಲಿಚೆಟ್ ವಿಲೇ ವಾರಿ ಮಾಡಲಾಗುತ್ತಿದೆ. ಪರಿಸರ ನಿಯಮಗಳಿಗೆ ಅನುಗುಣವಾಗಿ ವಿಲೇವಾರಿ ಮಾಡಲಾಗಿದೆಯಾ ಎಂಬು ದರ ಬಗ್ಗೆ ಸ್ಪಷ್ಟತೆ ಇಲ್ಲ ಎಂದೂ ಪೀಠ ತಿಳಿಸಿದೆ.

ಮುಖ್ಯಾಂಶಗಳು

- ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದ ಎನ್‌ಜಿಟಿ
- ಘಟಕದ ಬಗ್ಗೆ ವರದಿ ಸಲ್ಲಿಸಿದ್ದ ಬಿಬಿಎಂಪಿ
- ಜಂಟಿ ಸಮಿತಿ ರಚಿಸಿದ ಎನ್‌ಜಿಟಿ

3.59 ಲಕ್ಷ ಟನ್ ಕಸ ವಿಲೇವಾರಿ

ಘಟಕದಲ್ಲಿ 2015ರಿಂದ ಇಲ್ಲಿಯವರೆಗೆ 3.59 ಲಕ್ಷ ಟನ್ ಕಸ ವಿಲೇವಾರಿ ಮಾಡಲಾಗಿದೆ ಎಂದು ಬಿಬಿಎಂಪಿ ತಿಳಿಸಿದೆ.

ಘಟಕದಲ್ಲಿ ದಿನಕ್ಕೆ 500 ಟನ್ ಕಸ ವಿಲೇವಾರಿ ಮಾಡಬಹುದು. ಆದರೆ, ಘಟಕದಲ್ಲಿ ಪ್ರತಿನಿತ್ಯ ಸರಾಸರಿ 145 ಟನ್ ಕಸ ವಿಲೇವಾರಿ ಮಾಡಲಾಗಿದೆ. ಪ್ರಸ್ತುತ 300 ಟನ್ ಒಣ ಕಸ ವಿಲೇವಾರಿ ಮಾಡಲಾಗುತ್ತಿದೆ. ಘಟಕದ ಶೆಡ್‌ನಲ್ಲಿ ಬೆಂಕಿ ಅನಾಹುತ ಸಂಭವಿಸಿದ ಕಾರಣ 2016ರ ನವೆಂಬರ್‌ನಿಂದ 2018ರ ಜನವರಿ ವರೆಗೆ ಘಟಕ ಸ್ಥಗಿತಗೊಳಿಸಲಾಗಿತ್ತು ಎಂದು ಪಾಲಿಕೆ ತಿಳಿಸಿದೆ.

'ವಿಮಾ ಪರಿಹಾರ ನೀಡಬೇಕು'

ಬೆಂಗಳೂರು: 'ವಾಹನ ನಿಲುಗಡೆಯಾಗಿದ್ದ ಸಮಯದಲ್ಲಿ ಚಾಲಕ ವಾಹನದಲ್ಲೇ ಹೃದಯಾಘಾತದಿಂದ ಮೃತಪಟ್ಟಿದ್ದರೆ, ವಿಮಾ ಕಂಪನಿ ಪರಿಹಾರ ನೀಡುವ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವಂತಿಲ್ಲ' ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ನ್ಯಾಷನಲ್ ಇನ್ಶೂರೆನ್ಸ್ ಕಂಪನಿಯ ವಿಭಾಗೀಯ ವ್ಯವಸ್ಥಾಪಕ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿದ್ದ ಧಾರವಾಡದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಮೃತ ಚಾಲಕ ಈರಣ್ಣ ಅವರ ಉತ್ತರಾಧಿಕಾರಿಗಳಿಗೆ ವಿಮಾ ಕಂಪನಿಯು ಶೇ 12ರ ಬಡ್ಡಿ ಸಹಿತ ₹ 3,03620 ಮೊತ್ತದ ಪರಿಹಾರವನ್ನು ನೀಡಬೇಕೆಂಬ ಕಾರ್ಮಿಕ ಆಯುಕ್ತರ ಆದೇಶವನ್ನು ನ್ಯಾಯಪೀಠ ಎತ್ತಿಹಿಡಿದಿದೆ.

ಪ್ರಕರಣವೇನು?: ಲಾರಿ ಚಾಲಕ ಈರಣ್ಣ ಸುರತ್ಕಲ್ ಸಮೀಪದ ಇಡ್ಯಾ ಗ್ರಾಮದ ಬಳಿ ಲಾರಿ ನಿಲ್ಲಿಸಿಕೊಂಡಿದ್ದ ವೇಳೆ ಸ್ಥಳದಲ್ಲೇ ಹೃದಯಾಘಾತದಿಂದ ಮೃತಪಟ್ಟಿದ್ದರು. ಮೃತರ ಅಪ್ರಾಪ್ತ ವಯಸ್ಸಿನ ಮಕ್ಕಳು ಪರಿಹಾರ ಕೋರಿ ಕಾರ್ಮಿಕ ಆಯುಕ್ತರಿಗೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಆಯುಕ್ತರು, 2009ರಲ್ಲಿ ಶೇ 12ರ ಬಡ್ಡಿ ಸಹಿತ ₹ 3.03 ಲಕ್ಷ ಪರಿಹಾರ ನೀಡುವಂತೆ ವಿಮಾ ಕಂಪನಿಗೆ ಆದೇಶಿಸಿದ್ದರು. ಈ ಆದೇಶವನ್ನು ವಿಮಾ ಕಂಪನಿ ಹೈಕೋರ್ಟ್‌ನಲ್ಲಿ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿತ್ತು.

ಹಣ ಪಾವತಿಸಿ ಲಸಿಕೆ ಪಡೆದುಕೊಳ್ಳಲು ಜನರ ನಿರಾಸಕ್ತಿ

ಕೋವಿಡ್ ಲಸಿಕೆ: ಖಾಸಗಿ ಕೇಂದ್ರಗಳು ಸ್ಥಗಿತ

• ವರುಣ ಹೆಗಡೆ

ಬೆಂಗಳೂರು: ಸರ್ಕಾರಿ ಕೇಂದ್ರಗಳಲ್ಲಿಯೇ ಉಚಿತ ಕೋವಿಡ್ ಲಸಿಕೆ ದೊರೆಯುತ್ತಿರುವುದರಿಂದ ನಗರದ ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆ ಪಡೆದುಕೊಳ್ಳಲು ಜನರು ಮುಂದಾಗುತ್ತಿಲ್ಲ. ಇದರಿಂದಾಗಿ ಕೇವಲ ಎರಡು ತಿಂಗಳಲ್ಲಿ 80ಕ್ಕೂ ಅಧಿಕ ಖಾಸಗಿ ಕೇಂದ್ರಗಳು ಲಸಿಕೆ ವಿತರಣೆ ಸ್ಥಗಿತಗೊಳಿಸಿವೆ.

ನಗರದಲ್ಲಿ 2021ರ ಜ.16ರಿಂದ ಕೋವಿಡ್ ಲಸಿಕೆ ವಿತರಣೆ ಪ್ರಾರಂಭವಾಗಿದೆ. 2022ರ ಜ.10ರಿಂದ ಮೂರನೇ ಡೋಸ್ ವಿತರಿಸಲಾಗುತ್ತಿದೆ. ಎರಡು ಡೋಸ್ ಲಸಿಕೆ ಪಡೆದು ಆರು ತಿಂಗಳಾದವರಿಗೆ ಮುನ್ನೆಚ್ಚರಿಕೆ ಡೋಸ್ ಲಸಿಕೆ ನೀಡಲಾಗುತ್ತಿದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ಸರ್ಕಾರವು 2022ರ ಜು.15ರಿಂದ 'ಕೋವಿಡ್ ಲಸಿಕಾ ಅಮೃತ ಮಹೋತ್ಸವ' ಹಮ್ಮಿಕೊಂಡಿದೆ.

ಈ ತಿಂಗಳ 30ರವರೆಗೂ ಈ ಅಭಿಯಾನ ನಡೆಯಲಿದ್ದು, 18 ವರ್ಷಗಳು ಮೇಲ್ಪಟ್ಟವರಿಗೆ ಸರ್ಕಾರಿ ಕೇಂದ್ರಗಳಲ್ಲಿ ಉಚಿತವಾಗಿ ಕೋವಿಡ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್ ವಿತರಿಸಲಾಗುತ್ತಿದೆ. ಇದರಿಂದಾಗಿ ಖಾಸಗಿ ಕೇಂದ್ರಗಳಲ್ಲಿ ಲಸಿಕೆ ಪಡೆಯುವವರ ಸಂಖ್ಯೆ ಗಣನೀಯ ಇಳಿಕೆಯಾಗಿದೆ.

ನಗರದಲ್ಲಿ ಕಳೆದ ಜುಲೈ ವೇಳೆಗೆ 150ಕ್ಕೂ ಅಧಿಕ ಖಾಸಗಿ ಕೇಂದ್ರಗಳಲ್ಲಿ ಮುನ್ನೆಚ್ಚರಿಕೆ ಡೋಸ್‌ಗಳನ್ನು ವಿತರಿಸಲಾಗುತ್ತಿತ್ತು. ಸರ್ಕಾರಿ ಕೇಂದ್ರಗಳಲ್ಲಿ ಉಚಿತವಾಗಿ ಲಸಿಕೆ ವಿತರಣೆ ಪ್ರಾರಂಭವಾಗುತ್ತಿದ್ದಂತೆ ಖಾಸಗಿ ಕೇಂದ್ರಗಳ ಸಂಖ್ಯೆ ಇಳಿಕೆಯಾಗಿದೆ. ಕೋವಿನ್ ಪೋರ್ಟಲ್‌ನಲ್ಲಿ ಲಸಿಕೆಯನ್ನು ಮುಂಚಿತವಾಗಿ ಕಾಯ್ದಿರಿಸಲು ಅವಕಾಶವಿದ್ದರೂ ಫಲಾನುಭವಿಗಳು ನಿರಾಸಕ್ತಿ ತಾಳಿದ್ದಾರೆ. ಇದರಿಂದಾಗಿ ಕೇಂದ್ರಗಳು ಹೊಸದಾಗಿ ಲಸಿಕೆ ಖರೀದಿಸುತ್ತಿಲ್ಲ. ಸದ್ಯ 66 ಖಾಸಗಿ ಕೇಂದ್ರಗಳಲ್ಲಿ ಲಸಿಕೆ ದೊರೆಯುತ್ತಿದೆ. 387 ಸರ್ಕಾರಿ ಕೇಂದ್ರಗಳು ಲಸಿಕೆ ಒದಗಿಸುತ್ತಿವೆ.

ಲಸಿಕೆ ಉಳಿಕೆ: ಈ ಮೊದಲು 18ರಿಂದ 59 ವರ್ಷದವರಿಗೆ ಖಾಸಗಿ ಕೇಂದ್ರಗಳಲ್ಲಿ ಮಾತ್ರ ಮುನ್ನೆಚ್ಚರಿಕೆ ಡೋಸ್‌ಗಳನ್ನು ವಿತರಿಸಲಾಗುತ್ತಿತ್ತು. 60 ವರ್ಷಗಳು ಮೇಲ್ಪಟ್ಟವರು, ಆರೋಗ್ಯ ಕಾರ್ಯಕರ್ತರು ಹಾಗೂ ಕೋವಿಡ್ ಯೋಧರಿಗೆ ಸರ್ಕಾರಿ ಕೇಂದ್ರಗಳಲ್ಲಿ ಉಚಿತವಾಗಿ ಒದಗಿಸಲಾಗುತ್ತಿತ್ತು. ಕೋವಿಶೀಲ್ಡ್ ಹಾಗೂ ಕೋವ್ಯಾಕ್ಸಿನ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್‌ಗಳನ್ನು ಲಸಿಕೆ ತಯಾರಿಕಾ ಕಂಪನಿಗಳು ₹ 225ಕ್ಕೆ ಖಾಸಗಿ ಆಸ್ಪತ್ರೆಗಳಿಗೆ ಒದಗಿಸುತ್ತಿವೆ. ಸೇವಾ ಶುಲ್ಕ ಸಹಿತ ಒಂದು ಡೋಸ್ ಲಸಿಕೆಗೆ ಆಸ್ಪತ್ರೆಗಳು ₹ 386 ಪಡೆಯುತ್ತಿವೆ.

ಸಕ್ರಾ ಪ್ರೀಮಿಯಂ ಕ್ಲಿನಿಕ್, ಪ್ರಕ್ರಿಯಾ ಆಸ್ಪತ್ರೆ, ಅಪೋಲೊ ಕ್ಲಿನಿಕ್, ಕೊಲಂಬಿಯಾ ಏಷ್ಯಾ ಆಸ್ಪತ್ರೆ, ಸುಗುಣಾ, ಮಣಿಪಾಲ್, ಫೋರ್ಟಿಸ್ ಸೇರಿ ಪ್ರಮುಖ ಆಸ್ಪತ್ರೆಗಳಲ್ಲಿಯೇ ಲಸಿಕೆ ಕಾಯ್ದಿರಿಸುವ ಪೋರ್ಟಲ್‌ನಲ್ಲಿ ನಿಗದಿಪಡಿಸಲಾದ ಬಹುತೇಕ ಎಲ್ಲ ಸ್ಲಾಟ್‌ಗಳು ಖಾಲಿ ಉಳಿದಿವೆ. ಆಸ್ಪತ್ರೆಗಳು ಲಸಿಕೆಯ ದಾಸ್ತಾನಿಗೆ ನಿರಾಸಕ್ತಿ ತಾಳಿದ್ದು, ಕೆಲ ಆಸ್ಪತ್ರೆಗಳು ಅಷ್ಟೂ ಡೋಸ್‌ಗಳು ಖಾಲಿಯಾದ ಬಳಿಕ ಖರೀದಿಸುತ್ತಿವೆ.

ಪ್ರಜಾವಾಣಿ ವಿಶೇಷ

ನಗರದ ಕೋವಿಡ್ ಲಸಿಕೆ ವಿತರಣೆ

1.11 ಕೋಟಿ	ಈವರೆಗೆ ಮೊದಲ ಡೋಸ್ ಪಡೆದವರು
1.09 ಕೋಟಿ	ಎರಡನೇ ಡೋಸ್ ಪಡೆದವರು
15.88 ಲಕ್ಷ	ಮೂರನೇ ಡೋಸ್ ಪಡೆದವರು
453	ಲಸಿಕೆ ವಿತರಿಸುತ್ತಿರುವ ಕೇಂದ್ರಗಳು

ಮುನ್ನೆಚ್ಚರಿಕೆ ಡೋಸ್‌ಗೆ ನಿರಾಸಕ್ತಿ

ಬಿಬಿಎಂಪಿ ವ್ಯಾಪ್ತಿಯಲ್ಲಿ 18ರಿಂದ 44 ವರ್ಷದವರಲ್ಲಿ 56.51 ಲಕ್ಷ ಮಂದಿ ಎರಡು ಡೋಸ್ ಲಸಿಕೆ ಪಡೆದಿದ್ದಾರೆ. 45 ವರ್ಷಗಳು ಮೇಲ್ಪಟ್ಟವರಲ್ಲಿ 26.40 ಲಕ್ಷಕ್ಕೂ ಅಧಿಕ ಮಂದಿ ಎರಡನೇ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ. 18ರಿಂದ 60 ವರ್ಷದೊಳಗಿನವರಲ್ಲಿ 6.69 ಲಕ್ಷ ಮಂದಿ ಮಾತ್ರ ಮೂರನೇ ಡೋಸ್ ಲಸಿಕೆ ಪಡೆದಿದ್ದಾರೆ. 60 ವರ್ಷಗಳು ಮೇಲ್ಪಟ್ಟವರಲ್ಲಿ 3.89 ಲಕ್ಷ ಮಂದಿಗೆ ಮುನ್ನೆಚ್ಚರಿಕೆ ಡೋಸ್ ಲಸಿಕೆ ಹಾಕಲಾಗಿದೆ.

ಸರ್ಕಾರಿ ಕೇಂದ್ರಗಳಲ್ಲಿಯೇ ಉಚಿತ ಲಸಿಕೆ ದೊರೆಯುತ್ತಿರುವ ಕಾರಣ ಖಾಸಗಿ ಕೇಂದ್ರಗಳಿಗೆ ಜನ ಬರುತ್ತಿಲ್ಲ. ಕೆಲವೆಡೆ ಲಸಿಕೆ ವ್ಯರ್ಥವಾಗಿದೆ.

ಡಾ.ಎಚ್.ಎಂ. ಪ್ರಸನ್ನ, ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಅಧ್ಯಕ್ಷ

ಶಾಲಾ ಬ್ಯಾಗ್ ತೂಕ: ಪಿಐಎಲ್

ಬೆಂಗಳೂರು: 'ಪ್ರಾಥಮಿಕ ಶಾಲಾ ಮಕ್ಕಳ ಬ್ಯಾಗ್ ತೂಕ ಇಳಿಕೆ ಮಾಡಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಲಾಗಿದೆ.

ವಕೀಲ ಎಲ್. ರಮೇಶ್ ನಾಯಕ್ ಸಲ್ಲಿಸಿರುವ ಅರ್ಜಿ ಇನ್ನಷ್ಟೇ ವಿಚಾರಣೆಗೆ ಬರಬೇಕಿದೆ. 'ಮಕ್ಕಳ ಬ್ಯಾಗ್ ತೂಕದ ಮಿತಿ ಇಷ್ಟೇ ಇರಬೇಕೆಂದು 2020ರಲ್ಲಿ ಕೇಂದ್ರ ಸರ್ಕಾರ ರೂಪಿಸಿರುವ ನಿಯಮ ಪಾಲನೆಯಾಗುತ್ತಿಲ್ಲ' ಎಂದು ಅರ್ಜಿದಾರರು ದೂರಿದ್ದಾರೆ.

'ಆರೋಗ್ಯ ತಜ್ಞರ ಪ್ರಕಾರ ಭಾರಿ ತೂಕದ ಶಾಲಾ ಬ್ಯಾಗ್ ಮಕ್ಕಳ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ' ಎಂದು ಹೇಳಿದ್ದಾರೆ.

ಜಾತಿ ನಿಂದನೆ ಸುಳ್ಳು ದೂರು: ₹ 25 ಸಾವಿರ ದಂಡ

ಬೆಂಗಳೂರು: 'ನಿರ್ವಹಣಾ ಶುಲ್ಕ ಪಾವತಿ ಮಾಡಿಲ್ಲ' ಎಂಬ ಕಾರಣಕ್ಕೆ ಫ್ಲ್ಯಾಟ್‌ಗೆ ಕಲ್ಪಿಸಲಾಗಿದ್ದ ವಿದ್ಯುತ್ ಸಂಪರ್ಕ ಮತ್ತು ಅಗತ್ಯ ಸೇವೆಗಳನ್ನು ಸ್ಥಗಿತಗೊಳಿಸಿದ ಅಪಾರ್ಟ್‌ಮೆಂಟ್ ಮಾಲೀಕರ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳ ವಿರುದ್ಧ ಜಾತಿ ನಿಂದನೆಯ ಸುಳ್ಳು ದೂರು ದಾಖಲಿಸಿದ ವ್ಯಕ್ತಿಗೆ ಹೈಕೋರ್ಟ್ ₹ 25 ಸಾವಿರ ದಂಡ ವಿಧಿಸಿದೆ.

'ನಮ್ಮ ವಿರುದ್ಧ ದಾಖಲಾಗಿರುವ ಜಾತಿ ನಿಂದನೆಯ ಪ್ರಕರಣ ರದ್ದುಗೊಳಿಸಬೇಕು' ಎಂದು ಕೋರಿ ನಗರದ, 'ಕೈಲಾಶ್ ಅಪಾರ್ಟ್‌ಮೆಂಟ್ ಮಾಲೀಕರ ಕ್ಷೇಮಾಭಿವೃದ್ಧಿ ಸಂಘ'ದ ಅಧ್ಯಕ್ಷೆ ಅರುಣಾ ಕಣ್ಣೂರು, ಕಾರ್ಯದರ್ಶಿ ರಾಮಲಿಂಗಯ್ಯ ಮತ್ತು ಅಪಾರ್ಟ್‌ಮೆಂಟ್ ನಿವಾಸಿ ಬಿ.ಎನ್. ಅಭಿಷೇಕ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ. ಅರ್ಜಿದಾರರ ವಿರುದ್ಧದ ಖಾಸಗಿ ದೂರು ಮತ್ತು ಎಫ್‌ಐಆರ್ ರದ್ದುಪಡಿಸಿದೆ.

ಮೈಸೂರು ರಸ್ತೆಯ ಕೈಲಾಶ್ ಅಪಾರ್ಟ್‌ಮೆಂಟ್ ನಿವಾಸಿ ರವಿಕುಮಾರ್ 2018ರಿಂದ ನಿರ್ವಹಣಾ ಶುಲ್ಕ ಪಾವತಿ ಮಾಡಿರಲಿಲ್ಲ. ಶುಲ್ಕ ಪಾವತಿಸುವಂತೆ ಅಪಾರ್ಟ್‌ಮೆಂಟ್ ಮಾಲೀಕರ ಕ್ಷೇಮಾಭಿವೃದ್ಧಿ ಸಂಘ ಹಲವು ಬಾರಿ ಸೂಚಿಸಿ ನಂತರ ನೋಟಿಸ್ ಜಾರಿ ಮಾಡಿತ್ತು. ಆದರೂ, ಶುಲ್ಕ ಪಾವತಿಸದೇ ಹೋದ ಕಾರಣಕ್ಕೆ ಸಂಘದ ನಿಯಮಗಳ ಪ್ರಕಾರ ರವಿಕುಮಾರ್ ಫ್ಲ್ಯಾಟ್‌ಗೆ ವಿದ್ಯುತ್ ಸೇರಿದಂತೆ ಇತರೆ ಸೌಲಭ್ಯಗಳನ್ನು ಸ್ಥಗಿತಗೊಳಿಸಲಾಗಿತ್ತು.

ಇದಕ್ಕೆ ಪ್ರತಿಯಾಗಿ ರವಿಕುಮಾರ್, 'ನನ್ನ ಜಾತಿ ಕಾರಣದಿಂದಾಗಿ ನನ್ನ ಫ್ಲ್ಯಾಟ್‌ಗೆ ಮೂಲ ಸೌಕರ್ಯ ಸೇವೆ ಸ್ಥಗಿತಗೊಳಿಸಲಾಗಿದೆ' ಎಂದು ಆರೋಪಿಸಿ ಸಹಕಾರ ಸಂಘಗಳ ರಿಜಿಸ್ಟ್ರಾರ್, ರಾಜ್ಯ ಮಾನವ ಹಕ್ಕುಗಳ ಆಯೋಗ, ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗಕ್ಕೆ ದೂರು ಸಲ್ಲಿಸಿದ್ದರು. ವಿಚಾರಣಾ ನ್ಯಾಯಾಲಯದಲ್ಲೂ ಖಾಸಗಿ ದೂರೊಂದನ್ನು ಸಲ್ಲಿಸಿದ್ದರು. ನ್ಯಾಯಾಲಯದ ನಿರ್ದೇಶನದ ಅನುಸಾರ ಕೆಂಗೇರಿ ಠಾಣಾ ಪೊಲೀಸರು ಅರ್ಜಿದಾರರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರು. ಪ್ರಕರಣ ರದ್ದು ಕೋರಿ ಸಂಘದ ಪದಾಧಿಕಾರಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು.

‘ಬಾಲ್ಯ ವಿವಾಹ: ಹೆಣ್ಣುಮಕ್ಕಳ ಹಕ್ಕು ಕಸಿದುಕೊಳ್ಳುವ ಹೇಯ ಕೃತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲ್ಯ ವಿವಾಹವನ್ನು ತಡೆಗಟ್ಟಿ ಮಕ್ಕಳ ಹಕ್ಕುಗಳನ್ನು ಖಾತರಿಗೊಳಿಸಲು ಇಮೇಜ್ ಯೋಜನೆ, ರೀಡ್ಸ್ ಮತ್ತು ಬಾಲ ಕಾರ್ಮಿಕ ಪದ್ಧತಿ ವಿರೋಧಿ ಆಂದೋಲನ ಸಂಸ್ಥೆಗಳು ಹಕ್ಕೊತ್ತಾಯ ಮಂಡಿಸಿದವು.

‘ಬಾಲ್ಯ ವಿವಾಹವೆಂಬುದು ಹೆಣ್ಣುಮಕ್ಕಳ ಹಕ್ಕುಗಳನ್ನು ಕಸಿದುಕೊಳ್ಳುವ ಹೇಯ ಕೃತ್ಯವಾಗಿದೆ. ಇದನ್ನು ತಡೆಯುವುದು ಎಲ್ಲರ ಜವಾಬ್ದಾರಿ ಮತ್ತು ಕರ್ತವ್ಯ’ ಎಂದು ಚೈಲ್ಡ್ ರೈಟ್ಸ್ ಟ್ರಸ್ಟ್ ಕಾರ್ಯಕಾರಿ ನಿರ್ದೇಶಕ ವಾಸುದೇವ ಶರ್ಮಾ.ಎನ್.ವಿ. ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ರಾಜ್ಯದಲ್ಲಿ ಬಾಲ್ಯವಿವಾಹ ನಿರ್ಮೂಲನೆಗೆ ಸಮಗ್ರ ನೀಲ–ನಕ್ಷೆ ತಯಾರಿಸಬೇಕು. ರಾಜ್ಯ ಮತ್ತು ಜಿಲ್ಲಾ ಕ್ರಿಯಾಯೋಜನೆ ತಯಾರಿಸಿ ಅನುಷ್ಠಾನಕ್ಕೆ ತರಬೇಕು. ಅದರ ಉಸ್ತುವಾರಿಯನ್ನು ಜಿಲ್ಲಾ ಮಕ್ಕಳ ಸಂರಕ್ಷಣಾ ಸಮಿತಿಗೆ ವಹಿಸಬೇಕು’ ತಿಳಿಸಿದರು.

‘ಕರ್ನಾಟಕ ರಾಜ್ಯ ಶಾಲಾ ಮಕ್ಕಳ ಸುರಕ್ಷತಾ ನೀತಿ–2016ನ್ನು ಶಿಕ್ಷಣ ಇಲಾಖೆ ಮತ್ತು ಇತರ ಇಲಾಖೆಗಳ ಸಹಯೋಗದಲ್ಲಿ ಅಳವಡಿಸಬೇಕು. ಇದರ ಅಡಿಯಲ್ಲಿ ಬಾಲ್ಯವಿವಾಹದ ಅಪಾಯದಲ್ಲಿರುವ ಮಕ್ಕಳನ್ನು ಗುರುತಿಸಿ ಅವರ ರಕ್ಷಣೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಹೇಳಿದರು.

‘15ನೇ ಹಣಕಾಸಿನ ಯೋಜನೆ ಅಡಿಯಲ್ಲಿ ನಿರ್ಬಂಧಿತ ಮತ್ತು ಅನಿರ್ಬಂಧಿತ ಯೋಜನೆ ರೂಪಿಸುವಲ್ಲಿ ಮಕ್ಕಳ ಗ್ರಾಮ ಸಭೆಗಳಿಂದ ಬಂದಂತಹ ಬೇಡಿಕೆಗಳನ್ನು ಈಡೇರಿಸಬೇಕು. ಈ ಬಗ್ಗೆ ಗ್ರಾಮ ಪಂಚಾಯಿತಿಗಳಿಗೆ ಸರ್ಕಾರ ಸೂಕ್ತ ನಿರ್ದೇಶನ ನೀಡಬೇಕು’ ಎಂದರು.

ಬಾಲಕಾರ್ಮಿಕ ಪದ್ಧತಿ ವಿರೋಧಿ ಆಂದೋಲನದ ಸದಸ್ಯೆ ಸರಸ್ವತಿ ಮಾತನಾಡಿ, ‘ಬಾಲ್ಯವಿವಾಹಗಳನ್ನು ಗುರುತಿಸಿ ತಡೆಗಟ್ಟುವ ಮತ್ತು ಪ್ರಕರಣಗಳನ್ನು ದಾಖಲಿಸುವ ವಿವಾಹಿತ ಬಾಲಕಿಯರ ರಕ್ಷಣೆಗೆ ಶ್ರಮಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳನ್ನು ಗುರುತಿಸಬೇಕಿದೆ. ಇದು ತಳ ಹಂತದ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ಪೂರಕವಾಗಿದೆ ಎಂಬ ಅಂಶವನ್ನು ಸರ್ಕಾರ ತಳಹಂತದ ಇಲಾಖೆಗಳಿಗೆ ಮನವರಿಕೆ ಮಾಡಿಕೊಡಬೇಕು’ ಎಂದು ಒತ್ತಾಯಿಸಿದರು.

‘ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಸಹಯೋಗ, ಸಹಭಾಗಿತ್ವದಲ್ಲಿ ಬಾಲ್ಯವಿವಾಹವನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು. ಸದ್ಯ ರಾಜ್ಯದಲ್ಲಿ ಅತಿಹೆಚ್ಚು ಬಾಲ್ಯ ವಿವಾಹಗಳಾಗುತ್ತಿವೆ’ ಎಂದು ಕಳವಳ ವ್ಯಕ್ತಪಡಿಸಿದರು.

ದೆಹಲಿ ನಾಯಕರ ಭೇಟಿಯೇ ಕಷ್ಟ: ಯತ್ನಾಳ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೆಹಲಿ ನಾಯಕರು, ಕೇಂದ್ರ ಸಚಿವರನ್ನು ಭೇಟಿ ಮಾಡಲು ಶಾಸಕರು, ಸಂಸದರು ಸಹ ತಿಂಗಳವರೆಗೆ ಕಾಯುವ ಸ್ಥಿತಿ ಇದೆ. ಅನಂತಕುಮಾರ್ ಇದ್ದಾಗ ಒಂದೇ ದಿನದಲ್ಲಿ ಅವಕಾಶ ಕಲ್ಪಿಸುತ್ತಿದ್ದರು ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಹೇಳಿದರು.

ಮಾಜಿ ಕೇಂದ್ರ ಸಚಿವ ಅನಂತಕುಮಾರ್ ಅವರ 63ನೇ ಜನ್ಮದಿನದ ಪ್ರಯುಕ್ತ ಅದಮ್ಯ ಚೇತನ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ, ಕರ್ನಾಟಕದ ವಿಶಿಷ್ಟ 63 ದೇವಸ್ಥಾನಗಳ ಮಾಹಿತಿ, ಅನಂತಪಥ ಮಾಸ ಪತ್ರಿಕೆ ಬಿಡುಗಡೆ, ಪ್ರಮುಖ ಒಡನಾಡಿ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

ಸಚಿವರು, ನಾಯಕರ ಭೇಟಿಗಳೂ ಇಂದು ಕಮರ್ಶಿಯಲ್ ರಾಜಕಾರಣಕ್ಕೆ ಸೀಮಿತವಾಗಿವೆ. ನಮಸ್ಕಾರ, ಧನ್ಯವಾದಗಳಲ್ಲೇ ಎಲ್ಲ ಮುಗಿಯುತ್ತಿದೆ. ಅನಂತಕುಮಾರ್ ಅವರು ಅದರಾಚೆಗೂ ಬಾಂಧವ್ಯ ಇಟ್ಟುಕೊಳ್ಳುತ್ತಿದ್ದರು. ಸಮಸ್ಯೆಗಳು ಸೃಷ್ಟಿಯಾದಾಗ ಟ್ರಬಲ್‌ಶೂಟರ್ ಆಗಿರುತ್ತಿದ್ದರು. ಪ್ರಣವ್ ಮುಖರ್ಜಿ ಬಿಟ್ಟರೆ ಅಂತಹ ಶಕ್ತಿ ಇದ್ದ ಧೀಮಂತ ನಾಯಕ ಅವರು. ಈಗ ಸಮಸ್ಯೆಗಳು ಎದುರಾದಾಗ ಗತಿ ಇಲ್ಲ ಎನ್ನುವ ಸ್ಥಿತಿ ಇದೆ ಎಂದು ಬೇಸರ ತೋಡಿಕೊಂಡರು.

ಅನಂತಕುಮಾರ್ ನಂತರ ಅವರ ಪತ್ನಿಗೆ ಪಕ್ಷ ಟಿಕೆಟ್ ನೀಡಬೇಕಿತ್ತು. ಆ ಕುರಿತು ಬೇರೆ ನಾಯಕರು ಧ್ವನಿಯನ್ನೇ ಎತ್ತಲಿಲ್ಲ. ಅನಂತ್ ಅವರ ಯಶಸ್ಸಿನ ಹಿಂದೆ ತೇಜಸ್ವಿನಿ ಅವರ ಶ್ರಮವಿತ್ತು ಎಂದು ಶ್ಲಾಘಿಸಿದರು.

ಶಾಸಕ ಜಗದೀಶ ಶೆಟ್ಟರ್ ಮಾತನಾಡಿ, ಅನಂತಕುಮಾರ್ ತಾವಷ್ಟೇ ನಾಯಕರಾಗಲಿಲ್ಲ. ನೂರಾರು ನಾಯಕರನ್ನು ಬೆಳೆಸಿದರು. ನನಗೂ ಅವರು ರಾಜಕೀಯ ಗುರು. ಉತ್ತರ ಕರ್ನಾಟಕದ ಅಭಿವೃದ್ಧಿಯಲ್ಲೂ ಅವರ ಕೊಡುಗೆ ಅಪಾರ ಎಂದು ಸ್ಮರಿಸಿದರು.

ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ಅನಂತಕುಮಾರ್ ಅವರು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಕೊಂಡಿಯಂತೆ ಕೆಲಸ ಮಾಡಿದರು. ಎಲ್ಲರನ್ನೂ ಸಮಚಿತ್ತದಿಂದ ಕಾಣುತ್ತಿದ್ದರೂ ಎಂದರು.

ನಿವೃತ್ತ ನ್ಯಾಯಮೂರ್ತಿ ಎನ್.ಕುಮಾರ್, ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ ಪಿ.ವಿ.ಕೃಷ್ಣಭಟ್, ತೇಜಸ್ವಿನಿ ಅನಂತಕುಮಾರ್ ಉಪಸ್ಥಿತರಿದ್ದರು.

ಅ.15–16ಕ್ಕೆ ರಾಜ್ಯಮಟ್ಟದ ವಿಚಾರ ಸಂಕಿರಣ

ಬೆಂಗಳೂರು: ಕನ್ನಡ ಜನಶಕ್ತಿ ಕೇಂದ್ರವು ಕನ್ನಡ ಚಿಂತನೆಯ ಬಹುಮುಖಿ ನೆಲೆಗಳ ಶೋಧಕ್ಕೆ ‘ಕನ್ನಡವೆಂದರೆ ಬರಿನುಡಿಯಲ್ಲ’ ಎಂಬ ಶೀರ್ಷಿಕೆಯಡಿ ಅ.15 ಹಾಗೂ 16ಕ್ಕೆ ರಾಜ್ಯಮಟ್ಟದ ವಿಚಾರ ಸಂಕಿರಣ ಹಮ್ಮಿಕೊಂಡಿದೆ.

ಬಸವನಗುಡಿಯ ನ್ಯಾಷನಲ್ ಕಾಲೇಜಿನ ಎಚ್.ಎನ್. ಮಲ್ಟಿಮೀಡಿಯಾ ಹಾಲ್‌ನಲ್ಲಿ ಬೆಳಿಗ್ಗೆ 10ರಿಂದ ಈ ವಿಚಾರ ಸಂಕಿರಣ ನಡೆಯಲಿದ್ದು, ವಿದ್ವಾಂಸ ವಿವೇಕ ರೈ ಉದ್ಘಾಟಿಸಲಿದ್ದಾರೆ. ಸಾಹಿತಿ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಆಶಯ ನುಡಿಯಲಿದ್ದಾರೆ. ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ ಅವರು ವಿಚಾರ ಸಂಕಿರಣದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ.

‘ಅಕ್ಷರ ಭಾಷೆಯಾಗಿ ಕನ್ನಡ’ ಸಂವಾದದಲ್ಲಿ ರಾಜೇಂದ್ರ ಚೆನ್ನಿ, ಎಚ್.ಎಸ್. ಗೋಪಾಲರಾವ್, ಸ್ಮಿತಾ ರೆಡ್ಡಿ, ಲತಾ ಮೈಸೂರು ಭಾಗವಹಿಸಲಿದ್ದಾರೆ. ಎಂ.ಆರ್. ಸತ್ಯನಾರಾಯಣ ಅವರು ಹಳಗನ್ನಡ ಕಾವ್ಯಗಳನ್ನು ಪ್ರಸ್ತುತಪಡಿಸಲಿದ್ದಾರೆ. ರಹಮತ್ ತರೀಕೆರೆ ಅವರು ‘ಕನ್ನಡ ಭಾಷೆ: ಬಹುತ್ವದ ಚಹರೆಗಳು’ ವಿಷಯದ ಬಗ್ಗೆ ಉಪನ್ಯಾಸ ನೀಡಲಿದ್ದಾರೆ. ‘ಕನ್ನಡ ಪ್ರಜ್ಞೆ: ಸಾಹಿತ್ಯದ ಮಾದರಿಗಳು’ ವಿಚಾರ ಸಂಕಿರಣದಲ್ಲಿ ಬಿ.ಪಿ. ವೀರೇಂದ್ರ ಕುಮಾರ್, ವೆಂಕಟಗಿರಿ ದಳವಾಯಿ, ಪಿ. ಚಂದ್ರಿಕಾ ಹಾಗೂ ನಾರಾಯಣಸ್ವಾಮಿ ಕೆ.ವೈ. ಪಾಲ್ಗೊಳ್ಳಲಿದ್ದಾರೆ. ‘ಅಧ್ಯಾತ್ಮದ ಭಾಷೆಯಾಗಿ ಕನ್ನಡ’ ವಿಷಯದ ಬಗ್ಗೆ ಲಕ್ಷ್ಮೀಶ ತೋಳ್ಪಾಡಿ ಉಪನ್ಯಾಸ ನೀಡಲಿದ್ದಾರೆ.

ಎರಡನೇ ದಿನವಾದ ಭಾನುವಾರ ‘ಅರಿವಿನ ಭಾಷೆಯಾಗಿ ಕನ್ನಡ’ ವಿಷಯದ ಬಗ್ಗೆ ಮಹಾಬಲೇಶ್ವರ ರಾವ್, ದೇವೇಂದ್ರ ಬೆಳೆಯೂರು, ಅಪ್ಪಗೆರೆ ಸೋಮಶೇಖರ ಹಾಗೂ ಮುರಳೀಧರ ವೈ.ಜಿ. ಚರ್ಚಿಸಲಿದ್ದಾರೆ. ‘ಅನ್ನದ ಭಾಷೆಯಾಗಿ ಕನ್ನಡ’ ವಿಷಯದ ಬಗ್ಗೆ ವಸುಧೇಂದ್ರ, ಉದಯಶಂಕರ ಪುರಾಣಿಕ್, ಸತೀಶ್ ಚಪ್ಪರಿಕೆ ಹಾಗೂ ಬೇಳೂರು ಸುದರ್ಶನ್ ಮಾತನಾಡಲಿದ್ದಾರೆ. ‘ಅಧಿಕಾರದ ಭಾಷೆಯಾಗಿ ಕನ್ನಡ’ ವಿಷಯದ ಬಗ್ಗೆ ಇಸ್ಮಾಯಿಲ್, ಅಜಯ್‌ಕುಮಾರ್ ಸಿಂಗ್, ಐ.ಎಂ. ವಿಠಲಮೂರ್ತಿ ಹಾಗೂ ಕೆ.ಪುಟ್ಟಸ್ವಾಮಿ ಚರ್ಚಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ದೇವಸ್ಥಾನ, ರಸ್ತೆ, ಖಾಸಗಿ ವ್ಯಕ್ತಿಗಳಿಂದ ಅತಿ ಹೆಚ್ಚು ಪ್ರಮಾಣದಲ್ಲಿ ಒತ್ತುವರಿ

ಪಶ್ಚಿಮದಲ್ಲಿ ಕಣಿವೆಗಳಿಗೇ ಮಣ್ಣು

• ಆರ್. ಮಂಜುನಾಥ್

ಬೆಂಗಳೂರು: ನಗರದ ಪಶ್ಚಿಮ ವಲಯದಲ್ಲಿ ವೃಷಭಾವತಿ ಹಾಗೂ ಹೆಬ್ಬಾಳ ಕಣಿವೆಗಳನ್ನೇ ಅತಿಕ್ರಮಿಸಲಾಗಿದೆ. ದೇವಸ್ಥಾನಗಳಿಗಾಗಿ ಒತ್ತುವರಿಯೂ ಸಾಕಷ್ಟಿದೆ. ಖಾಸಗಿ ಒತ್ತುವರಿಗಳ ಜೊತೆಗೆ ಬಿಬಿಎಂಪಿ, ಬಿಡಿಎ ವತಿಯಿಂದ ರಸ್ತೆ ನಿರ್ಮಿಸಲಾಗಿದೆ. ಇದಕ್ಕಾಗಿ ಕಣಿವೆಯ ಮಾರ್ಗವನ್ನೇ ಬದಲಿಸಲಾಗಿದೆ. ಪಶ್ಚಿಮದಲ್ಲಿ ರಾಜಕಾಲುವೆಗಳಿಗೆ ಮಣ್ಣು ಸುರಿದು ಮುಚ್ಚಲಾಗುತ್ತಿದೆ.

ರಾಜಾಜಿನಗರ ರಾಮಮಂದಿರದಲ್ಲಿ ಕರಿಮಾರಿಯಮ್ಮ ದೇವಸ್ಥಾನ (101 ಚ.ಮೀ), ಪ್ರಕಾಶನಗರ ಕೇತಮಾರನಹಳ್ಳಿಯಲ್ಲಿ ಕೋದಂಡರಾಮ ದೇವಸ್ಥಾನ (890 ಚ.ಮೀ) ಗಾಂಧಿನಗರದಲ್ಲಿ ಅಂಗಾಲ ಪರಮೇಶ್ವರಿ ದೇವಸ್ಥಾನ (263 ಚ.ಮೀ) ವೃಷಭಾವತಿ ಕಣಿವೆಯನ್ನು ಒತ್ತುವರಿ ಮಾಡಿಕೊಂಡಿವೆ. ರಸ್ತೆಗಳ ನಿರ್ಮಾಣದಲ್ಲಿ ಅಧಿಕ ಪ್ರಮಾಣದಲ್ಲಿ ಹೆಬ್ಬಾಳ ಹಾಗೂ ವೃಷಭಾವತಿ ಕಣಿವೆಯನ್ನು ಈ ವಲಯದ ಎಲ್ಲ ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲೂ ಒತ್ತುವರಿ ಮಾಡಿಕೊಳ್ಳಲಾಗಿದೆ.

ಶಿವನಹಳ್ಳಿ ಕೆರೆಯನ್ನು ಮುಚ್ಚಿ, ನಂತರ ಕಾಲುವೆಗಳನ್ನೂ ಬೇಕಾದ್ದೆಲ್ಲ ಮಾಡಿರುವುದರಿಂದ ಬಸವೇಶ್ವರನಗರದ ಈ ಭಾಗದಲ್ಲಿ ಆಗಾಗ್ಗೆ ತೊಂದರೆ ಆಗುತ್ತಲಿರುತ್ತದೆ. ಮಹಾಕವಿ ಕುವೆಂಪು ರಸ್ತೆ, ಮೋದಿ ಆಸ್ಪತ್ರೆ ಸುತ್ತಮುತ್ತ ಕೂಡ ರಾಜಕಾಲುವೆ ಕಣ್ಮರೆಯಾಗಿವೆ. ಮಾಗಡಿ ರಸ್ತೆಗ ಹೊಂದಿಕೊಂಡಂತಿದ್ದ ಕಾಮಾಕ್ಷಿ ಪಾಳ್ಯ ಕೆರೆಯನ್ನು ಹುಡುಕಬೇಕಾದ ಸ್ಥಿತಿ ಇದೆ. ನಾಗರಬಾವಿ, ಮಾಲಗಾಲದಲ್ಲಿ ಸ್ಥಿತಿ ಭಿನ್ನವಾಗೇನೂ ಇಲ್ಲ. ತುಮಕೂರು ರಸ್ತೆಗೆ ಸೇರುವ ಸಿ.ವಿ. ರಾಮನ್ ರಸ್ತೆ ಇಕ್ಕೆಲಗಳಲ್ಲಿ ರಾಜಕಾಲುವೆ ಮುಚ್ಚಿಹೋಗಿದೆ.

ರಾಜಕಾಲುವೆಗಳ ಜೊತೆಗೆ ಕಣಿವೆಗಳಿಗೂ ಮಣ್ಣು ಮುಚ್ಚಿರುವುದು ದೊಡ್ಡಮಳೆಯಾದಂತಹ ಸಂದರ್ಭದಲ್ಲಿ ಅನಾಹುತಕ್ಕೆ ಎಡೆಮಾಡಿಕೊಟ್ಟಂತೆ. ಮಳೆ ನೀರು ಸರಾಗವಾಗಿ ಹರಿಯಬೇಕೆಂದರೆ ಕಾಲುವೆಗಳು ಎಂದಿನ ಸ್ಥಿತಿಗೆ ಬರಬೇಕೆಂಬುದು ನಾಗರಿಕರ ಆಗ್ರಹ.

ಪಹರೆ ಹಾಕಿ ರಕ್ಷಿಸಬೇಕು..

ವೃಷಭಾವತಿ ಕಣಿವೆಯೂ ನಾಶ ಆಗುತ್ತಿದೆ. ಪಹರೆ ಹಾಕಿ ರಕ್ಷಣೆ ಆಗಬೇಕಾಗಿದೆ. ಸಿಸಿಟಿವಿ ಕ್ಯಾಮೆರಾ ಅಳವಡಿಸಿ ಅನಾಹುತ ತಪ್ಪಿಸಬಹುದು. ಕಣಿವೆಗಳಿಗೆ ಗೋಡೆ ಕಟ್ಟಿದರೆ ನೆರೆ ಬಂದು ತಪ್ಪು ಒಪ್ಪು ನೋಡದೇ ಎಲ್ಲರ ಗೋರಿ ತಾನೇ ಕಟ್ಟುತ್ತದೆ. ದೂರ ಸಂವೇದಿ ತಂತ್ರ ಜ್ಞಾನದ ದತ್ತಾಂಶಗಳನ್ನು ಪಡೆದು ‘ಡಿಜಿಟಲ್ ಎಲೇವೇಷನ್ ಮಾಡೆಲ್’ ತಯಾರಿಸಲಾಗಿದೆ. ಇದು ಅಲ್ಲಿನ ಉಬ್ಬು ತಗ್ಗುಗಳ ಚಿತ್ರಣ ಕೊಟ್ಟಿದೆ. ಇದರ ಮೇಲೆ ಟೋಪೋ ಮ್ಯಾಪಿನ ಕೆರೆ ಕುಂಟೆ ಕಾಲುವೆಗಳನ್ನು ಹೊಂದಿಸಿ ನೋಡಿದಾಗ ನಮ್ಮ ಪೂರ್ವಿಕರು ಆಯಕಟ್ಟಿನ ಜಾಗಗಳಲ್ಲಿ ಕೆರೆ ಕುಂಟೆ ಕಟ್ಟಿಸಿದ್ದರು. ಕಾಲುವೆಗಳಿಂದ ಅನತಿ ದೂರದಲ್ಲಿ ಹೊಲ, ತೋಟ ಹೊಂದಿದ್ದರು. ಕರಾಬು ಎಂದರೆ ಸಣ್ಣ ಹಳ್ಳಗಳು ಬಹಳ ಮುಖ್ಯ ಎಂದು ಭಾವಿಸಿದ್ದರು. ಈ ಕಾಲದ ಬಫರ್ ಝೋನ್ ನಿರ್ಬಂಧ ತಾವೇ ಮಾಡಿಕೊಂಡಿದ್ದರು. ಈಗ ಮೇಲೆ ತೋರಿಸಿರುವಂತೆ ಹಳ್ಳಗಳು ನಾಶವಾಗಿವೆ. ಲೇಔಟ್‌ಗಳಿಗೆ ಅನುಮತಿ ಕೊಡುವಾಗ ಅವಾಂತರ ಆಗಿದೆ ಎನ್ನುತ್ತಾರೆ ಭೂವಿಜ್ಞಾನ ನಿವೃತ್ತ ಪ್ರಾಧ್ಯಾಪಕ ಮತ್ತು ಬೆಂಗಳೂರು ವಿವಿ ಜೈವಿಕ ವನ ಸಂಯೋಜಕರಾಗಿದ್ದ ಡಾ.ಟಿ ಜೆ. ರೇಣುಕಾ ಪ್ರಸಾದ್.

ಎಲ್ಲೆಲ್ಲಿ ಒತ್ತುವರಿ?

ವಿಧಾನಸಭೆ ಕ್ಷೇತ್ರ: ಗಾಂಧಿನಗರ, ಮಲ್ಲೇಶ್ವರ, ಚಾಮರಾಜಪೇಟೆ, ರಾಜಾಜಿನಗರ, ಗೋವಿಂದರಾಜನಗರ, ಮಹಾಲಕ್ಷ್ಮಿ ಬಡಾವಣೆ.

ಪ್ರದೇಶಗಳು: ಸುಭಾಷ್‌ನಗರ, ಬಿನ್ನಿಪೇಟೆ, ರಾಜಾಜಿನಗರ– ರಾಮಮಂದಿರ, ಪ್ರಕಾಶ್‌ನಗರ, ಆಜಾದ್‌ನಗರ, ಅರಮನೆ ನಗರ, ನಾಗರಬಾವಿ, ಮಾಳಗಾಲ, ಮತ್ತಿಕೆರೆ, ನಂದಿನಿ ಬಡಾವಣೆ, ಲಗ್ಗೆರೆ, ಮಾರಪ್ಪನಪಾಳ್ಯ, ಶಂಕರಪುರ.

ಪೂರ್ವ ವಲಯ

71	ಒಟ್ಟು ಒತ್ತುವರಿ ಸ್ಥಳ
12	ತೆರವು
59	ಬಾಕಿ ಒತ್ತುವರಿ





ಅರಣ್ಯ ಇಲಾಖೆಯಿಂದಲೇ ಸ್ಯಾಂಕಿ ಕೆರೆ ಒತ್ತುವರಿ

ಸದನ ಸಮಿತಿ ಸೂಚನೆಯಂತೆ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಆಯುಕ್ತರ 2015–16ರ ಆದೇಶದಂತೆ ಸ್ಯಾಂಕಿ ಕೆರೆ ವ್ಯಾಪ್ತಿಯ ಸರ್ವೆ ನಡೆಸಿ, ಅಳತೆ ಮಾಡಿ ನಕ್ಷೆ ತಯಾರಿಸಲಾಗಿದೆ. ಇದರಂತೆ, ಅರಣ್ಯ ಇಲಾಖೆಯವರು 37 ಗುಂಟೆ ಕೆರೆ ಪ್ರದೇಶವನ್ನು ಒತ್ತುವರಿ ಮಾಡಿಕೊಂಡು ರಸ್ತೆ ನಿರ್ಮಿಸಿಕೊಂಡಿದ್ದಾರೆ.

‘ಅರಣ್ಯ ಇಲಾಖೆಗೆ ಸೇರಿದ ಪ್ರದೇಶದಲ್ಲಿ ಹೊಟ್ಟೆಪಾಡಿಗೆ ರೈತರು ಒಂದು ಅಡಿಯಷ್ಟು ಒತ್ತುವರಿ ಮಾಡಿಕೊಂಡರೂ ಅವರಿಗೆ ಅಧಿಕಾರಿಗಳು ನೀಡುವ ಕಿರುಕುಳ ಅಷ್ಟಿಷ್ಟಲ್ಲ. ಆದರೆ, ಐಷಾರಾಮಿ ಕಚೇರಿಗಾಗಿ ಬೆಂಗಳೂರಿನ ಪ್ರತಿಷ್ಠಿತ ಹಾಗೂ ಅಭಿವೃದ್ಧಿಗಾಗಿ ಈಗಲೂ ಕೋಟ್ಯಂತರ ವೆಚ್ಚವಾಗುತ್ತಿರುವ ಸ್ಯಾಂಕಿ ಕೆರೆಯಲ್ಲಿ ಅರಣ್ಯ ಇಲಾಖೆಯೇ ಒತ್ತುವರಿ ಮಾಡಿಕೊಂಡಿದೆ. ಎಲ್ಲ ರೀತಿಯ ದಾಖಲೆಗಳಿಲ್ಲದಿದ್ದರೂ ಯಾರೂ ಕ್ರಮ ಕೈಗೊಂಡಿಲ್ಲ’ ಎಂದು ಪರಿಸರ ಕಾರ್ಯಕರ್ತ ಪ್ರಸಾದ್ ಅಸಮಾಧಾನ ವ್ಯಕ್ತಪಡಿಸಿದರು.

‘ಮೂರು ಕಾರು ಶೆಡ್, ಎರಡು ಕಚೇರಿ ಕ್ವಾರ್ಟರ್ಸ್ ಕೂಡ ನಿರ್ಮಿಸಿಕೊಂಡಿದ್ದು, ರಾಜಕಾಲುವೆಗಳ ಬಫರ್‌ಝೋನ್ ಅನ್ನೂ ಅರಣ್ಯ ಇಲಾಖೆಯವರು ಬಿಟ್ಟಿಲ್ಲ. ಇಷ್ಟೇ ಅಲ್ಲದೆ, ಈ ಭಾಗದ ಒಳಚರಂಡಿ ನೀರು ಕೂಡ ನೇರವಾಗಿ ಕೆರೆಗೇ ಸೇರಿಕೊಳ್ಳುತ್ತಿದೆ. ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಗಮನಕ್ಕೆ ಇದು ಬಂದಿದ್ದರೂ ಕ್ರಮ ತೆಗೆದುಕೊಂಡಿಲ್ಲ. ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೂ ಪತ್ರ ಬರೆಯಲಾಗಿದೆ’ ಎಂದರು.

ಚಿತ್ರಾವಳಿ

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂ ಪರಭಾರೆ ನಿಷೇಧ ಕಾಯ್ದೆಯ(ಪಿಟಿಸಿಎಲ್) ಸಮಗ್ರ ತಿದ್ದುಪಡಿಗೆ ಆಗ್ರಹಿಸಿ ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟ ನಡೆಸುತ್ತಿರುವ ಅಹೋರಾತ್ರಿ ಧರಣಿ 10ನೇ ದಿನವೂ ಮುಂದುವರಿದಿದೆ. ಶಾಸಕ ಎಂ.ಪಿ.ಕುಮಾರಸ್ವಾಮಿ ಪ್ರತಿಭಟನಾ ಸ್ಥಳಕ್ಕೆ ಗುರುವಾರ ಭೇಟಿ ನೀಡಿ ಬೆಂಬಲ ವ್ಯಕ್ತಪಡಿಸಿದರು

ಮಾಗಡಿ ತಾಲ್ಲೂಕಿನ ಸೋಲೂರಿನ ಆರ್ಯ ಈಡಿಗರ ಮಹಾಸಂಸ್ಥಾನದ ನಾರಾಯಣ ಗುರುಮಠದ ಆವರಣದಲ್ಲಿ ಬ್ರಹ್ಮಶ್ರೀ ನಾರಾಯಣಗುರು ಪುತ್ಥಳಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ಆರ್ಯ ಈಡಿಗರ ಮಹಾ ಸಂಸ್ಥಾನ ಮಠಾಧೀಶ ವಿಖ್ಯಾತಾನಂದ ಸ್ವಾಮೀಜಿ ಪೂಜೆಯಲ್ಲಿ ಭಾಗವಹಿಸಿದ್ದರು

ಮೈಸೂರು ರೇಸ್

ಮಿಲಾಸ್ ಗೆಲ್ಲುವ ನಿರೀಕ್ಷೆ

ಸಿವಿಲ್ ಸರ್ವೀಸಸ್ ಟ್ರೋಫಿ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಿಲಾಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30 ರಿಂದ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ನ್ಯೂಸ್‌ಮೇಕರ್ 8, ಸ್ಪಿರಿಚ್ಯುಯಲ್ ಕ್ವೀನ್ 11, ಫೆಸ್ಟಿವ್ ಸ್ಟಾರ್ 1
2ನೇ ರೇಸ್: ಬೆಲ್ಲಿಸಿಮೊ 9, ಸಿಲ್ವರ್ ಡೇಸ್ ಎಗೈನ್ 1, ಡಿ ಫೈಟರ್ 8
3ನೇ ರೇಸ್: ಪಿನಾಕಲ್ ಪಾಯಿಂಟ್ 3, ಕ್ಲೆವರ್ ಹ್ಯಾನ್ಸ್ 7, ಫಾಸ್‌ಬೈಂಡರ್ 2
4ನೇ ರೇಸ್: ಮಿಲಸ್ 8, ಓ ಕನ್ನಯ್ಯ 3, ಮೀಡೊ ಫ್ಲವರ್ 7
5ನೇ ರೇಸ್: ಮೆಮೊರೈಟರ್ 5, ಒಸಿರಿಸ್ 11, ಫರ್ನೆಟ್ ಬ್ರ್ಯಾಂಕಾ 2
6ನೇ ರೇಸ್: ಏಬಲ್ ಒನ್ 5, ಆಲ್ಯೂರ್ 2, ದಿ ಕಿಂಗ್ ಎನ್ ಐ 9

ಉತ್ತಮ ಬೆಟ್: ನ್ಯೂಸ್ ಮೇಕರ್

ಜಾಕ್‌ಪಾಟ್	1ನೇ ಟ್ರಬಲ್	2ನೇ ಟ್ರಬಲ್
2,3,4,5,6	1,2,3	4,5,6

ಹಲವು ಏಳು ಬೀಳುಗಳ ನಡುವೆ ಕೊನೆಗೂ ಉಳಿದ ಕೆರೆ ಒಡಲು

30 ವರ್ಷದ ಬಳಿಕ ಬೈರಸಂದ್ರ ಕೆರೆಗೆ ಮರುಜೀವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಳಿವೇ ಇಲ್ಲದಂತಾಗಿದ್ದ ಬೈರಸಂದ್ರ ಕೆರೆ ಈಗ ಒಡಲು ತುಂಬಿ ನಳನಳಿಸುತ್ತಿದೆ. ಹಲವು ಏಳು–ಬೀಳುಗಳನ್ನು ಕಂಡು 30 ವರ್ಷಗಳ ನಂತರ ಮರುಜೀವ ಪಡೆದಿದೆ.

ಜಯನಗರ ಮೂರನೇ ಬ್ಲಾಕ್‌ನಲ್ಲಿ(ಪೂರ್ವ) 15 ಎಕರೆ 11 ಗುಂಟೆ ಪ್ರದೇಶದಲ್ಲಿ ಕೆರೆ ಇದೆ. 1977ರಲ್ಲಿ ಕೆರೆ ಜಾಗದಲ್ಲೇ ಮನೆ ನಿರ್ಮಿಸಿಕೊಂಡು ಜನರು ನೆಲೆಸಲು ಪ್ರಾರಂಭಿಸಿದರು. ಕಾಲಕ್ರಮೇಣ 1985ರಲ್ಲಿ ಎನ್. ಲಕ್ಷ್ಮಣರಾವ್ ಸಮಿತಿ ವರದಿ ಆಧರಿಸಿ ಅರಣ್ಯ ಇಲಾಖೆ ರಕ್ಷಣೆ ಮಾಡಿತ್ತು. 1991ರ ನಂತರ ಮತ್ತೆ ಕೆರೆಯಲ್ಲಿ ನೀರು ನಿಲ್ಲದಂತೆ ಮಾಡಲಾಯಿತು. ಬಳಿಕ ಕಟ್ಟಡಗಳ ಅವಶೇಷಗಳನ್ನು ಸುರಿದು ಕೆರೆಯನ್ನೇ ನಾಶಪಡಿಸುವ ಪ್ರಯತ್ನ ನಡೆದವು.

ಕೆರೆ ನಿರ್ನಾಮ ಆಗುವುದನ್ನು ತಪ್ಪಿಸಲು ಸ್ಥಳೀಯರು 1996ರಲ್ಲಿ ನ್ಯಾಯಾಲಯದಲ್ಲಿ ಮೊರೆ ಹೋದರು. 1998ರಲ್ಲಿ ಆದೇಶ ಹೊರಡಿಸಿದ ನ್ಯಾಯಾಲಯ, ಜನರ ವಾಸದಿಂದ ಕೆರೆಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳುವಂತೆ ಸೂಚಿಸಿತು. ಕೆಲ ವರ್ಷಗಳ ಕಾಲ ಎಲ್ಲವೂ ಸರಿಯಾಗಿತ್ತು. 2005ರಲ್ಲಿ ಮತ್ತೆ ಕೆರೆ ಜಾಗ ಹರಾಜು ಮಾಡುವ ಪ್ರಯತ್ನಗಳು ನಡೆದವು. ಅದರ ವಿರುದ್ಧ ಸ್ಥಳೀಯರು ಹೈಕೋರ್ಟ್ ಮೊರೆಹೋದರು. ಅದರ ನಡುವೆಯೇ ₹7.60 ಕೋಟಿಗೆ ಕೆರೆ ಜಾಗ ಮಾರಾಟವೇ ಆಗಿಬಿಟ್ಟಿತು. ಹರಾಜು ಪ್ರಕ್ರಿಯೆ ಅಸಿಂಧುಗೊಳಿಸಿದ ಹೈಕೋರ್ಟ್, ಕೆರೆಯನ್ನು ಬಿಬಿಎಂಪಿ ನಿರ್ವಹಿಸಬೇಕು ಎಂದು ತಾಕೀತು ಮಾಡಿತು. ಕಾನೂನು ಹೋರಾಟದ ವೆಚ್ಚ ಭರಿಸಲು ಶಾಸಕ ರಾಮಲಿಂಗಾರೆಡ್ಡಿ ₹50 ಸಾವಿರ ನೀಡಿದ್ದರು. ವಕೀಲ ಬಿ.ಎಸ್.ವಿಶ್ವೇಶ್ವರಯ್ಯ, ಜಿ.ವಿ. ಚಂದ್ರಶೇಖರ್, ಎ.ಮಧುಸೂದನ ರಾವ್ ಕಾನೂನು ಹೋರಾಟದ ಫಲವಾಗಿ ಕೆರೆ ಉಳಿಯಿತು ಎಂದು ಆರ್‌ಬಿಐ ಕಾಲೊನಿ ನಿವಾಸಿಗಳು ಹೇಳುತ್ತಾರೆ.

ಅಭಿವೃದ್ಧಿಗೊಂಡಿರುವ ಬೈರಸಂದ್ರ ಕೆರೆ

ನಾಡಪ್ರಭು ಕೆಂಪೇಗೌಡರು ದೂರದೃಷ್ಟಿಯಿಂದ ಕೆರೆ ಕಟ್ಟಿದ್ದರು. ಅದು ನಶಿಸಿ ಹೋಗುತ್ತಿತ್ತು. ಸ್ಥಳೀಯರು ಕಾನೂನು ಹೋರಾಟ ನಡೆಸಿ ಕೆರೆ ಉಳಿಸಿದ್ದಾರೆ. ಮೇಯರ್ ಆಗಿದ್ದಾಗ ಅನುದಾನ ನೀಡಿ ಅಭಿವೃದ್ಧಿಪಡಿಸಿದ್ದು ನನಗೆ ಹೆಮ್ಮೆ ಎನಿಸುತ್ತದೆ. ಕೆರೆ ಉಳಿವಿನ ಹಿಂದೆ ಹಲವರ ಪರಿಶ್ರಮ ಇದೆ.

ಗಂಗಾಂಬಿಕೆ ಮಲ್ಲಿಕಾರ್ಜುನ್, ಮಾಜಿ ಮೇಯರ್

ಒಳ್ಳೆ ಸುದ್ದಿ

‘ಮರು ಜನ್ಮದ ಕತೆ ಹೇಳುವೆ... ಕೇಳಿ’

ಹಲವು ಏಳು ಬೀಳುಗಳ ನಡುವೆ ಕೆರೆ ಉಳಿದ ಕತೆಯ ಬಗ್ಗೆ ಕೈಪಿಡಿಯೊಂದನ್ನು ಆರ್‌ಬಿಐ ಕಾಲೊನಿ ನಿವಾಸಿಗಳ ಸಂಘ ಮುದ್ರಿಸಿದೆ.

ಕೆರೆಯೇ ತನ್ನ ಕತೆ ಹೇಳಿಕೊಳ್ಳುವ ಮಾದರಿಯಲ್ಲಿ ನಿರೂಪಣೆ ಮಾಡಲಾಗಿದೆ. ‘ನಾನು ಮರು ಜನ್ಮ ಪಡೆಯಲು ಕಾರಣರಾದ ರಾಮಲಿಂಗಾರೆಡ್ಡಿ, ಕೇಂದ್ರದ ಮಾಜಿ ಸಚಿವ ದಿ. ಅನಂತ್ ಕುಮಾರ್, ಮಾಜಿ ಶಾಸಕರಾದ ಹೇಮಚಂದ್ರ ಸಾಗರ್, ಆರ್.ವಿ.ದೇವರಾಜ್, ಶಾಸಕ ಉದಯ್ ಬಿ. ಗರುಡಾಚಾರ್ ಅವರಿಗೆ ಧನ್ಯವಾದಗಳು. ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ ನಿವಾಸಿಗಳ ಸಂಘದ ಅಧ್ಯಕ್ಷ ವೆಂಕಟಸುಬ್ಬಾರಾವ್, ಪಿ.ಎಲ್. ಚಂದ್ರಶೇಖರ್ ಅವರಿಗೆ ಧನ್ಯವಾದ’ ಎಂದು ಕೆರೆಯೇ ಹೇಳುವಂತೆ ಚಿತ್ರ ಸಹಿತ ಕೈಪಿಡಿಯನ್ನು ಮುದ್ರಿಸಲಾಗಿದೆ.

₹5 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ

2013ರಲ್ಲಿ ಅರಣ್ಯ ಇಲಾಖೆಯಿಂದ ಬಿಡಿಎ ವ್ಯಾಪ್ತಿಗೆ ಕೆರೆ ಹಸ್ತಾಂತರವಾಯಿತು. 2018ರಲ್ಲಿ ಮೇಯರ್ ಆಗಿದ್ದ ಗಂಗಾಂಬಿಕೆ ಮಲ್ಲಿಕಾರ್ಜುನ್ ಅವರು ಬಿಬಿಎಂಪಿ ವ್ಯಾಪ್ತಿಗೆ ಕೆರೆ ಹಸ್ತಾಂತರ ಮಾಡಿಸಿದರು. ₹5 ಕೋಟಿ ಮಂಜೂರು ಮಾಡಿಸಿ ಕೆರೆ ಅಭಿವೃದ್ಧಿಗೆ ಚಾಲನೆ ನೀಡಿದರು.

ಈಗ ಕೆರೆ ಮತ್ತೊಮ್ಮೆ ಮರು ಜೀವ ಪಡೆದುಕೊಂಡಿದೆ. ಕಲುಷಿತ ನೀರಿನಿಂದ ಮುಕ್ತವಾಗಿದೆ. ಒತ್ತುವರಿಯಾಗದಂತೆ ಸುತ್ತಲೂ ತಡೆಗೋಡೆ ನಿರ್ಮಾಣವಾಗಿದೆ. ಹೊರಾಂಗಣ ವ್ಯಾಯಾಮ, ಮಕ್ಕಳ ಆಟಿಕೆಗಳನ್ನು ಅಳವಡಿಸಲಾಗಿದೆ. ಸುತ್ತಲೂ ಪಾದಚಾರಿ ಪಥ, ಉದ್ಯಾನ ನಿರ್ಮಾಣವಾಗಿವೆ. ಹೂವಿನ ಗಿಡಗಳು ಕಂಗೊಳಿಸುತ್ತಿದ್ದು, ಕೆರೆಯ ಸುತ್ತಲೂ ಅಹ್ಲಾದಕರ ವಾತಾವರಣ ನಿರ್ಮಾಣವಾಗಿದೆ ಎಂದು ಸ್ಥಳೀಯರು ಸಂತಸ ವ್ಯಕ್ತಪಡಿಸುತ್ತಾರೆ.

ರಸ್ತೆಯಲ್ಲಿ ಶವ ಇಟ್ಟು ಪ್ರತಿಭಟನೆ

ಬಿಡದಿ: ಇಲ್ಲಿನ ಕೈಗಾರಿಕಾ ಪ್ರದೇಶದಲ್ಲಿರುವ ಇನೊವೇಟಿವ್ ಫಿಲ್ಮ್ ಸಿಟಿ ಬಳಿಯ ರಸ್ತೆಯಲ್ಲಿ ಬೈಕ್ ಸ್ಕಿಡ್ ಆಗಿ ಬಿದ್ದು ಮೃತಪಟ್ಟ ಯುವಕನ ಶವವನ್ನು ಕುಟುಂಬ ಸದಸ್ಯರು ಗುರುವಾರ ಬಿಡದಿ ಕೈಗಾರಿಕಾ ಸಂಘದ ಕಚೇರಿ ಎದುರು ಇಟ್ಟು ಪ್ರತಿಭಟಿಸಿದರು.

ಪತ್ನಿಯನ್ನು ಬುಧವಾರ ಸಂಜೆ ಬೈಕ್‌ನಲ್ಲಿ ಮನೆಗೆ ಕರೆದೊಯ್ಯುವಾಗ ಜಾರಿ ಬಿದ್ದು ಅಬ್ಬನಕುಪ್ಪೆ ಗ್ರಾಮದ ಆನಂದ್ (33) ಗಾಯಗೊಂಡಿದ್ದರು. ಚಿಕಿತ್ಸೆಗೆ ಸ್ಪಂದಿಸದೆ ಕೊನೆಯುಸಿರೆಳೆದರು.

ರಸ್ತೆ ದುರವಸ್ಥೆಯೇ ಸಾವಿಗೆ ಕಾರಣ ಎಂದು ಕುಟುಂಬದ ಸದಸ್ಯರು ಮತ್ತು ಅಬ್ಬನಕುಪ್ಪೆ ಗ್ರಾಮಸ್ಥರು ಆರೋಪಿಸಿದರು. ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಿ ರಸ್ತೆ ದುರಸ್ತಿಗೆ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ದೇವಸ್ಥಾನ ಪ್ರವೇಶಿಸಿದ್ದ ಪರಿಶಿಷ್ಟ ಸಮಾಜದ ಮಗು

ಮರಳಿ ಊರು ಸೇರದ ಕುಟುಂಬ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಮಿಯಾಪುರ ಗ್ರಾಮದಲ್ಲಿ ಮೂರು ವರ್ಷದ ಮಗು ದೇವಸ್ಥಾನ ಪ್ರವೇಶಿಸಿದ ಕಾರಣಕ್ಕೆ ಸವರ್ಣೀಯರು ಮಗುವಿನ ತಂದೆಗೆ ₹ 25 ಸಾವಿರ ದಂಡ ವಿಧಿಸಿದ್ದರು. ಈ ಘಟನೆ ನಡೆದು ಒಂದು ವರ್ಷವಾದರೂ ಆ ಕುಟುಂಬಕ್ಕೆ ದೊಡ್ಡ ಪ್ರಮಾಣದಲ್ಲಿ ಸರ್ಕಾರದಿಂದ ಪರಿಹಾರ ಸಿಕ್ಕಿಲ್ಲ. ನೆಮ್ಮದಿಯ ಜೀವನ ನಡೆಸಲಾಗದೇ ಕುಟುಂಬ ಈಗಲೂ ಸಂಕಷ್ಟದಲ್ಲಿದೆ.

2021ರ ಸೆಪ್ಟೆಂಬರ್‌ನಲ್ಲಿ ಪರಿಶಿಷ್ಟ ಸಮಾಜದ ಚಂದ್ರಶೇಖರ ಶಿವಪ್ಪ ದಾಸರ ಮತ್ತು ವಿಶ್ವಕರ್ಮ ಸಮಾಜದ ಲಲಿತಾ ದಂಪತಿಯ ಮಗು ಆಟವಾಡುತ್ತಾ ದೇವಾಲಯ ಪ್ರವೇಶಿಸಿತ್ತು. ಆಗ ಸವರ್ಣೀಯರು ಮಗುವಿನ ತಂದೆಗೆ ದಂಡ ವಿಧಿಸಿದ್ದರು.

> **ಅಸ್ಪೃಶ್ಯತೆ ನಿವಾರಿಸಲು ಯಾವ ಸರ್ಕಾರಕ್ಕೂ ಕಾಳಜಿ ಇಲ್ಲ. ನೋವುಂಡ ಯಾವ ಕುಟುಂಬಕ್ಕೂ ನ್ಯಾಯಸಮ್ಮತ ಪರಿಹಾರ ಸಿಕ್ಕಿಲ್ಲ**
> **ಬಸವರಾಜ ಶೀಲವಂತರ**
> ಹೋರಾಟಗಾರ, ಕೊಪ್ಪಳ

ಈ ಪ್ರಕರಣ ರಾಜ್ಯದಾದ್ಯಂತ ಸಂಚಲನ ಮೂಡಿಸಿ, ಅಸ್ಪೃಶ್ಯತೆ ಆಚರಣೆಯ ಕರಾಳ ಮುಖ ಅನಾವರಣ ಮಾಡಿತ್ತು. ನಂತರ ರಾಜ್ಯ ಸರ್ಕಾರ ಸಮಾಜ ಕಲ್ಯಾಣ ಇಲಾಖೆ ಮೂಲಕ ‘ವಿನಯ ಸಾಮರಸ್ಯ’ ಎಂಬ ಹೊಸ ಯೋಜನೆ ಘೋಷಿಸಿತು. ಆದರೆ, ಈ ಕುಟುಂಬದ ಸ್ಥಿತಿ ಮಾತ್ರ ಬದಲಾಗಲಿಲ್ಲ.

ಮಿಯಾಪುರ ಗ್ರಾಮಸ್ಥರ ನಡೆಗೆ ಬೇಸತ್ತು ಊರು ತೊರೆದು ಕುಷ್ಟಗಿಗೆ ಬಂದು ನೆಲೆಸಿರುವ ಚಂದ್ರಶೇಖರ ಈಗಲೂ ಬದುಕು ಕಟ್ಟಿಕೊಳ್ಳಲು ಪರದಾಡುತ್ತಿದ್ದಾರೆ. ಹಲವು ಬಾರಿ ಸ್ಥಳ ಬದಲಿಸಿದ್ದಾರೆ. ಲಕ್ಷಾಂತರ ರೂಪಾಯಿ ಸಾಲ ಮಾಡಿ, ಕಾರು ಸ್ವಚ್ಛಗೊಳಿಸುವ ಶೆಡ್ ಹಾಕಿದ್ದಾರೆ. ಇದ್ದ ಅಲ್ಪ ಆಸ್ತಿಯನ್ನೂ ಕಳೆದುಕೊಂಡಿದ್ದಾರೆ.

ಘಟನೆ ಮಾನಸಿಕವಾಗಿ ಸಾಕಷ್ಟು ಹೈರಾಣ ಮಾಡಿದ್ದರಿಂದ ಚಂದ್ರಶೇಖರ ಸ್ವ ಗ್ರಾಮಕ್ಕೆ ಹೋಗುತ್ತಿಲ್ಲ. ‘ಅಲ್ಲಿನ ಜನರ ಮನಸ್ಸು ಬದಲಾಗಿಲ್ಲ. ಆಗುವುದೂ ಇಲ್ಲ. ಅಲ್ಲಿ ಹೋಗಿ ಏನು ಪ್ರಯೋಜನ’ ಎನ್ನುತ್ತಾರೆ ಅವರು.

‘ಘಟನೆ ನಡೆದು ಒಂದೆರಡು ದಿನಗಳ ಮಟ್ಟಿಗೆ ಎಲ್ಲರೂ ಬಂದು ಸಾಂತ್ವನ ಹೇಳುತ್ತಾರೆ. ಸರ್ಕಾರದಿಂದ ನೆರವು ಕೊಡಿಸುವುದಾಗಿ ಭರವಸೆ ನೀಡುತ್ತಾರೆ. ನಂತರ ಯಾರೂ ಕೇಳುವುದಿಲ್ಲ. ತನಿಖೆಯೂ ನಡೆಯಲ್ಲ. ಸರ್ಕಾರದ ನೆರವಿನಿಂದ ಸ್ವಂತ ಉದ್ಯೋಗ ಮಾಡಲು ಬಯಸಿದ್ದೆ. ಸರ್ಕಾರದಿಂದ ಬಂದಿದ್ದೇ ₹1 ಲಕ್ಷ. ಈ ಹಣದಿಂದ ನನ್ನ ಸಾಲವನ್ನೂ ಮುಟ್ಟಿಸಲು ಆಗುವುದಿಲ್ಲ’ ಎಂದು ಚಂದ್ರಶೇಖರ ‘ಪ್ರಜಾವಾಣಿ’ಗೆ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಸಿಗದ ವೀಸಾ: ಎಂಜಿನಿಯರಿಂಗ್ ಪದವೀಧರ ಆತ್ಮಹತ್ಯೆ

ಸನ್ಮಿತ್

ಮಾಗಡಿ: ಉನ್ನತ ವಿದ್ಯಾಭ್ಯಾಸಕ್ಕೆ ವಿದೇಶದಲ್ಲಿ ತೆರಳಲು ವೀಸಾ ಸಿಗದ ಕಾರಣ ಮನನೊಂದು ಎಂಜಿನಿಯರಿಂಗ್ ಪದವೀಧರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮಾಗಡಿಯ ಕನ್ನಿಕಾಪರಮೇಶ್ವರಿ ರಸ್ತೆ ನಿವಾಸಿ ಸನ್ಮಿತ್ (22) ಮನೆಯ ಮೊದಲ ಮಹಡಿಯಲ್ಲಿ ನೇಣು ಹಾಕಿಕೊಂಡಿದ್ದಾರೆ. ಸನ್ಮಿತ್ ಆರ್ಕಿಟೆಕ್ಚರ್ ಎಂಜಿನಿಯರಿಂಗ್ ಪದವಿ ಪಡೆದಿದ್ದರು. ಗೌರಮ್ಮನಕೆರೆ ಬಳಿಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು. ಪೊಲೀಸರು ಯುವಕನ ಮೊಬೈಲ್ ವಶಕ್ಕೆ ಪಡೆದಿದ್ದಾರೆ.

ಬ್ರಹ್ಮೋಸ್ ಏರೋಸ್ಪೇಸ್ ಜತೆ ಒಪ್ಪಂದ

ನವದೆಹಲಿ: ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬನೆಗೆ ಮತ್ತಷ್ಟು ಉತ್ತೇಜನ ನೀಡುವ ನಿಟ್ಟಿನಲ್ಲಿ ಕೇಂದ್ರ ರಕ್ಷಣಾ ಸಚಿವಾಲಯವು ಗುರುವಾರ ದ್ವಿಪಾತ್ರ ಸಾಮರ್ಥ್ಯವುಳ್ಳ ಬ್ರಹ್ಮೋಸ್ ಕ್ಷಿಪಣಿಗಳಿಗೆ ಸಂಬಂಧಿಸಿದಂತೆ ಬ್ರಹ್ಮೋಸ್ ಏರೋಸ್ಪೇಸ್ ಪ್ರೈವೇಟ್ ಲಿಮಿಟೆಡ್ (ಬಿಎಪಿಎಲ್) ಜತೆಗೆ ಒಪ್ಪಂದಕ್ಕೆ ಸಹಿ ಹಾಕಿದೆ. ಸುಮಾರು ₹1,700 ಕೋಟಿ ಮೊತ್ತದ ಒಪ್ಪಂದ ಇದಾಗಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ರಕ್ಷಣಾ ಸಚಿವಾಲಯವು, ಮೇಲ್ಮೈಯಿಂದ ಮೇಲ್ಮೈಗೆ ಹಾರುವ ಈ ಕ್ಷಿಪಣಿಗಳ ಸೇರ್ಪಡೆಯು ಭಾರತೀಯ ನೌಕಾಪಡೆಯ ಕಾರ್ಯಾಚರಣೆಯ ಸಾಮರ್ಥ್ಯವನ್ನು ಗಮನಾರ್ಹವಾಗಿ ವರ್ಧಿಸಲಿದೆ ಎಂದು ತಿಳಿಸಿದೆ. ಈ ಒಪ್ಪಂದವು ಸ್ಥಳೀಯ ಉದ್ಯಮದ ಸಕ್ರಿಯ ಭಾಗವಹಿಸುವಿಕೆಯ ಜತೆಗೆ ನಿರ್ಣಾಯಕ ಶಸ್ತ್ರಾಸ್ತ್ರ ವ್ಯವಸ್ಥೆ ಮತ್ತು ಮದ್ದುಗುಂಡುಗಳ ಸ್ಥಳೀಯ ಉತ್ಪಾದನೆಗೆ ಮತ್ತಷ್ಟು ಉತ್ತೇಜನವನ್ನು ನೀಡಲಿದೆ ಎಂದೂ ಸಚಿವಾಲಯವು ಹೇಳಿದೆ. ಭಾರತ ಮತ್ತು ರಷ್ಯಾದ ಜಂಟಿ ಸಹಭಾಗಿತ್ವದಲ್ಲಿ ಬ್ರಹ್ಮೋಸ್ ಏರೋಸ್ಪೇಸ್ ಪ್ರೈವೇಟ್ ಲಿಮಿಟೆಡ್ ಕಾರ್ಯ ನಿರ್ವಹಿಸುತ್ತದೆ.

ಬಿಎಂಎಸ್ ಸಂಸ್ಥೆಯ ಮೇಲಿನ ಆರೋಪ; ವಿಧಾನಸಭೆಯಲ್ಲಿ ದಾಖಲೆ ಬಿಡುಗಡೆ

ಎಚ್‌ಡಿಕೆ–ಅಶ್ವತ್ಥನಾರಾಯಣ ವಾಗ್ವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಎಸ್ ಸಂಸ್ಥೆಯ ಮೇಲಿನ ಆರೋಪ ಕುರಿತಂತೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಮತ್ತು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಆವೇಶ ಭರಿತರಾಗಿ ವಿಧಾನಸಭೆಯಲ್ಲಿ ಪರಸ್ಪರ ವಾಕ್ಸಮರ ನಡೆಸಿದರು.

ಕುಮಾರಸ್ವಾಮಿ ಮಾತನಾಡುವಾಗ ಶಾಂತವಾಗಿಯೇ ಆಲಿಸುತ್ತಿದ್ದ ಅಶ್ವತ್ಥನಾರಾಯಣ ತಮ್ಮ ಬಗ್ಗೆ ಆರೋಪ ಮಾಡಿದಾಗ ತಿರುಗೇಟು ನೀಡಲು ಮುಂದಾದರು. ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಶಾಂತಗೊಳಿಸಿ ಕೂರಿಸಿದರು.

ಕುಮಾರಸ್ವಾಮಿ ತಮ್ಮ ಮಾತಿನ ಆರಂಭದಲ್ಲಿ, 'ಸಚಿವರೊಬ್ಬರು ರಾಮನಗರಕ್ಕೆ ಬಂದು ದಮ್ಮಿದೆಯೇ, ತಾಕತ್ತಿದೆಯಾ? ಯಾವನವನು ಕುಮಾರ. ವಿಧಾನಸೌಧಕ್ಕೆ ಬರುವುದಿಲ್ಲ ಎಂದು ಟೀಕಿಸಿದ್ದರು. ಅದಕ್ಕಾಗಿಯೇ ದಾಖಲೆ ಸಮೇತ ಬಂದಿದ್ದೇನೆ' ಎಂದು ಕುಟುಕಿದರು.

ಇದಕ್ಕೆ ಉತ್ತರ ನೀಡುವಾಗ ತಿರುಗೇಟು ನೀಡಿದ ಅಶ್ವತ್ಥನಾರಾಯಣ, 'ನಾನು ಯಾವುದೇ ರಾಜಕೀಯ ವಂಶದಿಂದ ಬಂದವನಲ್ಲ. ರಾಜಕಾರಣ ಮಾಡಲೆಂದು ಬಂದವನು. ಆದರೆ, ವಾಮಮಾರ್ಗದಿಂದ ಬಂದವನಲ್ಲ. ಯಾರ ಮನೆ ಹಾಳು ಮಾಡಿಲ್ಲ. ದ್ವೇಷ ರಾಜಕಾರಣ ಮಾಡಬೇಡಿ. ವ್ಯಕ್ತಿತ್ವಕ್ಕೆ ಮಸಿ ಬಳಿಯಬೇಡಿ. ಕೆಲವು ದಿನಗಳಿಂದ ಟೀಸರ್, ಟ್ರೈಲರ್ ಬಿಡ್ತೇನೆ ಎಂದು ಈಗ ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ. ಆರೋಪದಲ್ಲಿ ಏನೂ ಇಲ್ಲ' ಎಂದರು.

'ಜನ ಪ್ರತಿನಿಧಿಯಾಗಿ ನಾವು ರಾಜಕೀಯವಾಗಿ ಎಲ್ಲ ಮಾತನಾಡಬಾರದಾ? ನಾವೇನು ಜನಪ್ರತಿನಿಧಿಗಳಲ್ವಾ? ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಕೆಲಸ ಮಾಡಲು ಬಂದಿದ್ದೇನೆ. ತನಿಖೆ ಮಾಡಿಸಿ, ಇಲಾಖೆಯಲ್ಲಿ ಒಂದೇ ಒಂದು ಕಡತ ಉಳಿಸಿಲ್ಲ' ಎಂದು ಅವರು ಹೇಳಿದರು.

'ನಾನು ದ್ವೇಷಕ್ಕಾಗಿ ವಿಷಯ ಪ್ರಸ್ತಾಪಿಸಿಲ್ಲ. ರಾಜ ವಂಶದಿಂದಲೂ ಬಂದಿಲ್ಲ. ಒಂದು ಉತ್ತಮ ಶಿಕ್ಷಣ ಸಂಸ್ಥೆ ರಿಯಲ್ ಎಸ್ಟೇಟ್ ಉದ್ಯಮಿಗಳ ಪಾಲಾಗಬಾರದು ಮತ್ತು ನ್ಯಾಯದ ಪರವಾಗಿ ಧ್ವನಿ ಎತ್ತಬೇಕು ಎಂಬುದಷ್ಟೇ ನನ್ನ ಕಳಕಳಿ' ಎಂದು ಕುಮಾರಸ್ವಾಮಿ ಪ್ರತಿಕ್ರಿಯಿಸಿದರು.

'ನನ್ನ ಬಗ್ಗೆ ಮಾತನಾಡಲು ನಿನಗೆ ಯೋಗ್ಯತೆ ಇದೆಯಾ. ನಾನು ಯಾರ ಮನೆಯನ್ನು ಹಾಳು ಮಾಡಿದ್ದೇನೆ' ಎಂದು ಪ್ರಶ್ನಿಸಿದರು.

ಈ ಹಂತದಲ್ಲಿ ಸಿಟ್ಟಿಗೆದ್ದ ಅಶ್ವತ್ಥನಾರಾಯಣ ಅವರು, 'ನನ್ನ ಬಗ್ಗೆ ಮಾತನಾಡಲು ನಿಮಗೆ ಯೋಗ್ಯತೆ ಇಲ್ಲ' ಎಂದು ಗುಡುಗಿದರು. ಆಗ ಜೆಡಿಎಸ್ ಮತ್ತು ಬಿಜೆಪಿ ಸದಸ್ಯರ ಮಧ್ಯೆ ಮಾತಿನ ಚಕಮಕಿ ನಡೆದು, ಗದ್ದಲ ಸೃಷ್ಟಿಯಾಯಿತು.

ಬಿಎಂಎಸ್ ಶಿಕ್ಷಣ ಸಂಸ್ಥೆ ಸಂಪೂರ್ಣ ಖಾಸಗಿ ಸಂಸ್ಥೆ ಅಲ್ಲ. ಸರ್ಕಾರ ಅನುದಾನ ನೀಡುತ್ತಿದೆ. ಒಂದು ವೇಳೆ ಅಲ್ಲಿ ಅಕ್ರಮ ನಡೆದಿದ್ದರೆ ಅದು ಅಪರಾಧ. ನಮಗೆ ಟಿಎಂಎ ಪೈ, ಟಿ.ಎ.ಪೈ, ಮೋಹನ್‌ದಾಸ್ ಪೈ ಗೊತ್ತು ಈ ದಯಾನಂದ ಪೈ ಯಾರು?

ಕೆ.ಆರ್.ರಮೇಶ್ ಕುಮಾರ್, ಕಾಂಗ್ರೆಸ್

ಬಿಎಂಎಸ್ ಸಂಸ್ಥೆ ಬಸವನ ಗುಡಿಯಲ್ಲಿ ಕಾರಂಜಿ ಆಂಜನೇಯ ಮತ್ತು ದೊಡ್ಡ ಬಸವಣ್ಣ ದೇವಸ್ಥಾನದ ಆಸ್ತಿ ಒತ್ತುವರಿ ಮಾಡಿದೆ. ಭೂಮಿಗೆ ಬಾಡಿಗೆ ಹಣ ಕೊಟ್ಟಿಲ್ಲ. ಲೀಸ್ ಜಾಗದ ಅವಧಿ ಮುಗಿದು ಹೋಗಿದ್ದರೂ, ನವೀಕರಿಸಿಲ್ಲ

ಕೃಷ್ಣ ಬೈರೇಗೌಡ, ಕಾಂಗ್ರೆಸ್

ಆರೋಗ್ಯವಾಗಿದ್ದೇನೆ: ಎಚ್‌.ಡಿ. ದೇವೇಗೌಡ



ಬೆಂಗಳೂರು: 'ನನ್ನ ಆರೋಗ್ಯ ಉತ್ತಮವಾಗಿದ್ದು, ಪಕ್ಷದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದೇನೆ' ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ತಿಳಿಸಿದ್ದಾರೆ.

ತಮ್ಮ ಆರೋಗ್ಯದ ಸ್ಥಿತಿ ಕುರಿತು ಗುರುವಾರ ಪತ್ರಿಕಾ ಹೇಳಿಕೆ ಮೂಲಕ ಸ್ಪಷ್ಟನೆ ನೀಡಿರುವ ಅವರು, 'ಸ್ವಲ್ಪ ಅನಾರೋಗ್ಯ ಉಂಟಾದ ಕಾರಣಕ್ಕೆ ವೈದ್ಯರು ವಿಶ್ರಾಂತಿಗೆ ಸಲಹೆ ನೀಡಿದ್ದರು. ಈ ಕಾರಣದಿಂದ ಕೆಲ ಕಾಲ ಮನೆಯಲ್ಲೇ ವಿಶ್ರಾಂತಿ ಪಡೆಯಬೇಕಾಯಿತು. ಇನ್ನು ಕೆಲ ದಿನ ಮನೆಯಲ್ಲೇ ಇದ್ದು ವಿಶ್ರಾಂತಿ ಪಡೆಯುವಂತೆ ವೈದ್ಯರು ಸಲಹೆ ಮಾಡಿದ್ದಾರೆ' ಎಂದು ಹೇಳಿದ್ದಾರೆ.

'ಮನೆಯಿಂದಲೇ ಎಲ್ಲ ರಾಜಕೀಯ, ಸಂಸದೀಯ ಹಾಗೂ ಪಕ್ಷದ ಜವಾಬ್ದಾರಿಗಳನ್ನು ನಿರ್ವಹಣೆ ಮಾಡಲಿದ್ದೇನೆ. ಹೀಗಾಗಿ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು ಕೆಲವು ದಿನಗಳ ಮಟ್ಟಿಗೆ ನನ್ನ ಭೇಟಿಗೆ ಬರುವುದು ಬೇಡ. ಕೆಲವು ದಿನಗಳ ನಂತರ ಪಕ್ಷದ ಕಚೇರಿಗೆ ಭೇಟಿ ನೀಡುತ್ತೇನೆ. ಪಕ್ಷದ ಕಾರ್ಯಕ್ರಮದಲ್ಲಿ ಭಾಗವಹಿಸುವೆ. ಯಾವುದೇ ಕಾರಣಕ್ಕೂ ಮುಖಂಡರು, ಕಾರ್ಯಕರ್ತರು ಅನ್ಯಥಾ ಭಾವಿಸಬಾರದು ಎಂದು ಕೋರುತ್ತೇನೆ' ಎಂದು ತಿಳಿಸಿದ್ದಾರೆ.

'ನನ್ನ ನಿವಾಸಕ್ಕೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕಂದಾಯ ಸಚಿವ ಆರ್. ಅಶೋಕ ಸೇರಿ ಎಲ್ಲರಿಗೂ ಆಭಾರಿಯಾಗಿದ್ದೇನೆ' ಎಂದು ಹೇಳಿದ್ದಾರೆ.

'ಜಿಎಸ್‌ಟಿ ಪರಿಹಾರ ₹14 ಸಾವಿರ ಕೋಟಿ ತನ್ನಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬರಬೇಕಿರುವ ₹14,100 ಕೋಟಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಬಾಕಿಯನ್ನು ತನ್ನಿ. ಈ ಮೊತ್ತವನ್ನು ತಕ್ಷಣ ನೀಡುವಂತೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಿ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಕಾಂಗ್ರೆಸ್ ಶಾಸಕರು ಆಗ್ರಹಿಸಿದರು.

ಪೂರಕ ಅಂದಾಜುಗಳ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಕಾಂಗ್ರೆಸ್‌ನ ಕೃಷ್ಣ ಬೈರೇಗೌಡ, ದಿನೇಶ್ ಗುಂಡೂರಾವ್ ಮತ್ತು ಎಚ್‌.ಕೆ. ಪಾಟೀಲ, 'ಕೇಂದ್ರದಿಂದ ಬಾಕಿ ಮೊತ್ತ ತಂದರೆ ರಾಜ್ಯ ಸರ್ಕಾರ ಇನ್ನಷ್ಟು ಅಭಿವೃದ್ಧಿ ಕೆಲಸ ಮಾಡಬಹುದು' ಎಂದರು.

ಉತ್ತರ ನೀಡಿದ ಮುಖ್ಯಮಂತ್ರಿ, '₹ 6,000 ಕೋಟಿಗೆ ಸಂಬಂಧಿಸಿದಂತೆ ಜಿಎಸ್‌ಟಿ ಮಂಡಳಿಯು ಲೆಕ್ಕಪರಿಶೋಧನಾ ವರದಿಯನ್ನು ನೀಡಿರುತ್ತದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ನಿರೀಕ್ಷಿತ ₹ 5,000 ಕೋಟಿಗೆ ಎದುರಾಗಿ ₹ 8,633 ಕೋಟಿ ಪರಿಹಾರ ಬಂದಿದೆ. ಪೂರ್ಣ ಪ್ರಮಾಣದ ಪರಿಹಾರ ರಾಜ್ಯಕ್ಕೆ ಬರಲಿದೆ' ಎಂದರು.

'ಕಲ್ಲು, ಮರಳು ಸೇರಿ ಉಪ ಖನಿಜಗಳ ಗಣಿಗಾರಿಕೆಯಲ್ಲಿ ದೊಡ್ಡ ಮೊತ್ತದ ಸೋರಿಕೆ ಆಗುತ್ತಿದೆ. ಮಹಾಲೇಖಪಾಲರ (ಸಿಎಜಿ) ಪ್ರಕಾರ, ಶೇ 90ರಷ್ಟು ರಾಜಧನ ವಂಚನೆ ಆಗುತ್ತಿದೆ. ಅದನ್ನು ತಡೆಯಲು ಕ್ರಮ ಕೈಗೊಳ್ಳಬೇಕು. ತಂತ್ರಜ್ಞಾನ ಬಳಸಿ ಈ ಕೆಲಸ ಮಾಡಿದರೆ ಸರ್ಕಾರದ ಬೊಕ್ಕಸಕ್ಕೆ ದೊಡ್ಡ ಪ್ರಮಾಣದ ವರಮಾನ ದೊರಕಲಿದೆ' ಎಂದು ಕೃಷ್ಣ ಬೈರೇಗೌಡ ಸಲಹೆ ನೀಡಿದರು.

ಪ್ರತಿಕ್ರಿಯಿಸಿದ ಬೊಮ್ಮಾಯಿ, 'ಈ ವಿಚಾರ ನನ್ನ ಗಮನಕ್ಕೂ ಬಂದಿದೆ. ಡ್ರೋನ್ ಕ್ಯಾಮೆರಾ, ಉಪಗ್ರಹ ಚಿತ್ರ ಸೇರಿ ತಂತ್ರಜ್ಞಾನ ಬಳಸಿ ಅಕ್ರಮಕ್ಕೆ ಕಡಿವಾಣ ಹಾಕುವ ಪ್ರಸ್ತಾವವಿದೆ' ಎಂದರು.

ಆನೆಗಳ ಭ್ರೂಣಹತ್ಯೆ ಮಾಡಿ: ಶಾಸಕ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನೆಗಳ ಭ್ರೂಣಹತ್ಯೆ ಮಾಡುವ ಮೂಲಕ ಅವುಗಳ ಹಾವಳಿ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಬಿಜೆಪಿಯ ಎಂ.ಪಿ. ಕುಮಾರಸ್ವಾಮಿ ಸರ್ಕಾರವನ್ನು ಆಗ್ರಹಿಸಿದರು.

ಆನೆ ಹಾವಳಿ ಕುರಿತು ವಿಧಾನಸಭೆಯಲ್ಲಿ ಗುರುವಾರ ಪ್ರಶ್ನೆ ಕೇಳಿದ ಅವರು, 'ನಾವು ಪರಿಹಾರ ಕೊಡ್ತೀವಿ, ನೀವು ಸಾಯಲು ಸಿದ್ಧರಾಗಿರಿ ಎಂಬಂತಿದೆ ಸರ್ಕಾರದ ನಿಲುವು. ಆನೆಗಳಿಂದ ಅತ್ತ ಜನರಿಗೂ ನೆಮ್ಮದಿ ಇಲ್ಲ, ನಮಗೂ (ಶಾಸಕರಿಗೆ) ನೆಮ್ಮದಿ ಇಲ್ಲ. ಆನೆಗಳ ಸಂಖ್ಯೆ ನಿಯಂತ್ರಿಸಲು ಭ್ರೂಣಹತ್ಯೆ ಜಾರಿಗೆ ತನ್ನಿ. ಉಪಟಳ ನೀಡುವ ಆನೆಗಳನ್ನು ನಮ್ಮ ಭಾಗದಿಂದ ಹಿಡಿದು ಸಾಗಿಸಿ' ಎಂದರು.

ಮುಖ್ಯಮಂತ್ರಿಯವರ ಪರವಾಗಿ ಉತ್ತರ ನೀಡಿದ ಕಾರ್ಮಿಕ ಸಚಿವ ಶಿವರಾಂ ಹೆಬ್ಬಾರ್, 'ಆನೆಗಳ ಭ್ರೂಣಹತ್ಯೆ ಮಾಡುವ ಪ್ರಸ್ತಾವ ಇಲ್ಲ. ಆನೆಗಳ ಹಾವಳಿಯಿಂದ ಸಂಭವಿಸುವ ಮಾನವ ಜೀವಹಾನಿ ಮತ್ತು ಬೆಳೆ ಹಾನಿಗೆ ನೀಡುವ ಪರಿಹಾರವನ್ನು ದ್ವಿಗುಣಗೊಳಿಸುವುದಾಗಿ ಮುಖ್ಯಮಂತ್ರಿ ಪ್ರಕಟಿಸಿದ್ದಾರೆ. ಮೂಡಿಗೆರೆ ಭಾಗದಲ್ಲಿ ಹಾವಳಿ ನೀಡುತ್ತಿರುವ 'ಮೂಡಿಗೆರೆ ಬೈರ' ಎಂಬ ಆನೆಯನ್ನು ಸ್ಥಳಾಂತರಿಸಲು ಕಾರ್ಯಾಚರಣೆ ಆರಂಭಿಸಲಾಗಿದೆ' ಎಂದು ಹೇಳಿದರು.

'ಬೇರೆ ಕಡೆ ಪುಂಡಾಟ ನಡೆಸುವ ಆನೆಗಳನ್ನು ಹಿಡಿದು ತಂದು ಚಾಮರಾಜನಗರ ಜಿಲ್ಲೆಯಲ್ಲಿ ಬಿಡುತ್ತಾರೆ. ಅವು ನಮ್ಮ ಊರೊಳಗೆ ಇರುತ್ತವೆ. ಇನ್ನು ಮುಂದೆ ಹಾಗಾಗದಂತೆ ಕ್ರಮ ವಹಿಸಿ' ಎಂದು ಕಾಂಗ್ರೆಸ್‌ನ ನರೇಂದ್ರ ಮತ್ತು ಎಚ್‌.ಪಿ. ಮಂಜುನಾಥ್ ಆಗ್ರಹಿಸಿದರು.

'ಡಯಾಲಿಸಿಸ್ ಸಮಸ್ಯೆಗೆ ಶೆಟ್ಟಿ ಕಂಪನಿ ಕಾರಣ': 'ರಾಜ್ಯದ ಹಲವು ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೇವೆಯಲ್ಲಿ ವ್ಯತ್ಯಯ ಆಗಿರುವುದಕ್ಕೆ ಉದ್ಯಮಿ ಬಿ.ಆರ್. ಶೆಟ್ಟಿ ಒಡೆತನದ ಕಂಪನಿ ದಿವಾಳಿ ಆಗಿರುವುದು ಕಾರಣ. ಎರಡು ತಿಂಗಳೊಳಗೆ ಹೊಸ ಗುತ್ತಿಗೆದಾರರನ್ನು ನೇಮಕ ಮಾಡಲಾಗುವುದು' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಕಾಂಗ್ರೆಸ್‌ನ ಶ್ರೀನಿವಾಸ್ ಮಾನೆ ಪ್ರಶ್ನೆಗೆ ಉತ್ತರಿಸಿದ ಅವರು, 'ರಾಜ್ಯದ ಆಸ್ಪತ್ರೆಗಳಲ್ಲಿನ ಡಯಾಲಿಸಿಸ್ ಘಟಕಗಳ ನಿರ್ವಹಣೆಯನ್ನು ಎರಡು ಕಂಪನಿಗಳಿಗೆ ಗುತ್ತಿಗೆಗೆ ನೀಡಲಾಗಿತ್ತು. ಬಿ.ಆರ್. ಶೆಟ್ಟಿ ಒಡೆತನದ ಕಂಪನಿಗೆ ಗುತ್ತಿಗೆಗೆ ನೀಡಿದ್ದ ಘಟಕಗಳಲ್ಲಿ ಸಮಸ್ಯೆಯಾಗಿದೆ. ಈ ಘಟಕಗಳ ನಿರ್ವಹಣೆಯನ್ನೂ ಎಸ್ಕಾಗ್ ಎಂಬ ಮತ್ತೊಂದು ಕಂಪನಿಗೆ ತಾತ್ಕಾಲಿಕವಾಗಿ ನೀಡಲಾಗಿದೆ' ಎಂದರು.

ಹೊಸ ಗುತ್ತಿಗೆದಾರರ ನೇಮಕಕ್ಕೆ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ. ಎರಡು ತಿಂಗಳೊಳಗೆ ಪ್ರಕ್ರಿಯೆ ಪೂರ್ಣಗೊಳಿಸಲಾಗುವುದು ಎಂದು ತಿಳಿಸಿದರು.

'ಎಂಜಿನಿಯರಿಂಗ್ ಕಾಲೇಜು ಆರಂಭ ಪ್ರಸ್ತಾವವಿಲ್ಲ'

ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಆರಂಭಿಸುವ ಪ್ರಸ್ತಾವ ಸರ್ಕಾರದ ಮುಂದ ಇಲ್ಲ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ವಿಧಾನಸಭೆಯಲ್ಲಿ ಜೆಡಿಎಸ್‌ನ ಕೆ.ಎಸ್. ಲಿಂಗೇಶ್ ಪ್ರಶ್ನೆಗೆ ಗುರುವಾರ ಉತ್ತರಿಸಿದ ಅವರು, 'ಈಗ ರಾಜ್ಯದಲ್ಲಿ 16 ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಿವೆ. ಅಲ್ಲಿ 3,670 ಸೀಟುಗಳಿದ್ದು, 2,086 ಮಾತ್ರ ಭರ್ತಿಯಾಗಿವೆ. 1,584 ಸೀಟುಗಳು ಭರ್ತಿಯಾಗದೆ ಉಳಿದಿವೆ. ಈ ಕಾರಣದಿಂದ ಹೊಸ ಎಂಜಿನಿಯರಿಂಗ್ ಕಾಲೇಜು ಆರಂಭಿಸುವುದಿಲ್ಲ' ಎಂದರು.



ಪರಿಶಿಷ್ಟ ಬಾಲಕನಿಗೆ ದಂಡ; 'ಪ್ರಜಾವಾಣಿ' ವರದಿ ಉಲ್ಲೇಖ

ಸ್ವಯಂಪ್ರೇರಿತ ದೂರು ದಾಖಲು

ಪ್ರಜಾವಾಣಿ ವಾರ್ತೆ

ಕೋಲಾರ: ಮಾಲೂರು ತಾಲ್ಲೂಕಿನ ಉಳ್ಳೇರಹಳ್ಳಿಯಲ್ಲಿ ದೇವರ ಗುಜ್ಜ ಕೋಲು ಮುಟ್ಟಿದ ಕಾರಣಕ್ಕೆ ಪರಿಶಿಷ್ಟ ಜಾತಿಯ ಬಾಲಕನ ಮೇಲೆ ಗ್ರಾಮದ ಕೆಲವು ಮುಖಂಡರು ಹಲ್ಲೆ ಮಾಡಿ, ದಂಡ ವಿಧಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದೆ.

ಈ ಸಂಬಂಧ 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ವರದಿ ಉಲ್ಲೇಖಿಸಿ, ವರದಿಯ ಜೆರಾಕ್ಸ್ ಪ್ರತಿ ಲಗತ್ತಿಸಿದೆ.

ಶುಕ್ರವಾರ (ಸೆ. 23ರಂದು) ಬೆಳಗ್ಗೆ ಉಳ್ಳೇರಹಳ್ಳಿಗೆ ಭೇಟಿ ನೀಡಿ ಪರಿಶೀಲಿಸುತ್ತಿರುವುದಾಗಿ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷೆ ಜಯಶ್ರೀ ಹೇಳಿದ್ದಾರೆ.

ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಇನ್ನಿತರ ಅಧಿಕಾರಿಗಳೊಂದಿಗೆ ಸಭೆ ಆಯೋಜಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಸೂಚನೆ ನೀಡಿದ್ದಾರೆ.

'ಇಲಾಖೆ ಕೈಗೊಂಡಿರುವ ಕ್ರಮಗಳ ಮಾಹಿತಿಯನ್ನು ಭೇಟಿಯ ಸಂದರ್ಭದಲ್ಲಿ ಆಯೋಗಕ್ಕೆ ನೀಡಬೇಕು' ಎಂದು ಸೂಚಿಸಿದ್ದಾರೆ.

ಉಳ್ಳೇರಹಳ್ಳಿಯಲ್ಲಿ ಕುಟುಂಬಕ್ಕೆ ನಿವೇಶನ ಗುರುತಿಸಿದ್ದು, ಸಮತಟ್ಟು ಮಾಡುವ ಕೆಲಸ ನಡೆಯುತ್ತಿದೆ. ಉಪ ವಿಭಾಗಾಧಿಕಾರಿ ವೆಂಕಟಲಕ್ಷ್ಮಿ ನೇತೃತ್ವದಲ್ಲಿ ಗುರುವಾರ ಗ್ರಾಮದಲ್ಲಿ ಶಾಂತಿ ಸಭೆ ನಡೆಯಿತು. ಬಾಲಕನ ನಿವಾಸಕ್ಕೆ ಶಾಸಕ ಕೆ.ವೈ. ನಂಜೇಗೌಡ ಭೇಟಿ ನೀಡಿ ಊಟ ಮಾಡಿದರು. ಬಾಲಕನ ತಾಯಿಗೆ ಧೈರ್ಯ ತುಂಬಿದರು.

ದೇಗುಲದ ಬೀಗ ಒಡೆದು ದೇವರ ದರ್ಶನ: ಗ್ರಾಮ ದೇವತೆ ಭೂತಮ್ಮ ದೇಗುಲದ ಬೀಗ ಒಡೆದು ಚೇತನ್ ಹಾಗೂ ಆತನ ತಾಯಿ ಶೋಭಾ ಅವರಿಗೆ ದೇವರ ದರ್ಶನ ಮಾಡಿಸಲಾಗಿದೆ. ವಿಶೇಷ ಪೂಜೆ ಕೂಡ ನಡೆಯಿತು.

ದೇವಸ್ಥಾನದ ಗೇಟ್ ಹಾಗೂ ಬಾಗಿಲಿಗೆ ಬೀಗ ಹಾಕಿಕೊಂಡು ದೇಗುಲದ ಅರ್ಚಕ ಕೀ ಜೊತೆ ನಾಪತ್ತೆಯಾಗಿದ್ದ. ಹೀಗಾಗಿ, ಜಿಲ್ಲಾಧಿಕಾರಿ ವೆಂಕಟ್ ರಾಜಾ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ. ದೇವರಾಜ್ ಸಮ್ಮುಖದಲ್ಲಿ ದೇಗುಲದ ಬೀಗ ಒಡೆಯಲಾಯಿತು.

ಎಂಟು ಆರೋಪಿಗಳ ಬಂಧನ

ಪರಿಶಿಷ್ಟ ಜಾತಿಯ ಬಾಲಕನ ಮೇಲೆ ಹಲ್ಲೆ ಮಾಡಿ, ದಂಡ ವಿಧಿಸಿರುವ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ಉಳ್ಳೇರಹಳ್ಳಿಯ ಎಂಟು ಆರೋಪಿಗಳನ್ನು ಪೊಲೀಸರು ಗುರುವಾರ ತಮಿಳುನಾಡಿನಲ್ಲಿ ಬಂಧಿಸಿ, ಕರೆ ತಂದಿದ್ದಾರೆ.

'ನಾರಾಯಣಸ್ವಾಮಿ, ರಮೇಶ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ನಾರಾಯಣಸ್ವಾಮಿ, ವೆಂಕಟೇಶಪ್ಪ, ಕೋಟೆಪ್ಪ, ಚಲಪತಿ, ಅರ್ಚಕ ಮೋಹನರಾವ್, ಚಿನ್ನಯ್ಯ ಅವರನ್ನು ಬಂಧಿತರು. ತನಿಖೆ ಮುಂದುವರಿದಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ. ದೇವರಾಜ್ ಹೇಳಿದರು.

ಉಪನ್ಯಾಸಕರ ನೇಮಕ ಹಗರಣ: ಸಿಗದ ನ್ಯಾಯ

ಡಾ. ಅಂಬಣ್ಣ ಧವಳಾರ

ವಿಜಯಪುರ: 'ಕರ್ನಾಟಕ ಲೋಕ ಸೇವಾ ಆಯೋಗವು 2008-09ರಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಉಪನ್ಯಾಸಕರ ನೇಮಕ ಪ್ರಕ್ರಿಯೆಯಲ್ಲಿ ನಡೆದ ಹಗರಣದ ವಿರುದ್ಧ ನಿರಂತರ ಹೋರಾಟ ನಡೆಸಿದರೂ ಯಾವುದೇ ಪ್ರಯೋಜನವಾಗಿಲ್ಲ' ಎಂದು ಸಿಂದಗಿ ತಾಲ್ಲೂಕಿನ ನೊಂದ ಅಭ್ಯರ್ಥಿ ಡಾ.ಅಂಬಣ್ಣ ಧವಳಾರ ಹತಾಸೆ ವ್ಯಕ್ತಪಡಿಸಿದ್ದಾರೆ.

'ಉಪನ್ಯಾಸಕರಾಗಿ ನೇಮಕವಾಗಿರುವ ಅನೇಕರು ನಕಲಿ ಪದವಿ ಮತ್ತು ಜಾತಿ ಪ್ರಮಾಣ ಪತ್ರ ಹಾಗೂ ಲಂಚ ಕೊಟ್ಟು ಆಯ್ಕೆಯಾಗಿರುವುದನ್ನು ಸಾಕ್ಷ್ಯಾಧಾರಗಳ ಸಹಿತ ಬಯಲು ಮಾಡಿದರೂ ನನ್ನ ಹೋರಾಟಕ್ಕೆ ಸರ್ಕಾರ ಸ್ಪಂದಿಸಲ್ಲ' ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಅರ್ಹರನ್ನು ಕೈಬಿಟ್ಟು, ಹೊರ ರಾಜ್ಯಗಳ ವಿವಿಗಳಿಂದ ದೂರ ಶಿಕ್ಷಣ, ಅಂಚೆ ಹಾಗೂ ಬಾಹ್ಯ ಪರೀಕ್ಷೆಗಳ ಮೂಲಕ ಹಣ ಕೊಟ್ಟು ಶೈಕ್ಷಣಿಕ ಪದವಿಗಳನ್ನು ಪಡೆದವರನ್ನು ಉಪನ್ಯಾಸಕ ಹುದ್ದೆಗಳಿಗೆ ನೇಮಿಸಿ, ಯುಜಿಸಿ ನಿಯಮ ಗಾಳಿಗೆ ತೂರಲಾಗಿದೆ. ಅನೇಕ ಉಪನ್ಯಾಸಕರ ನಕಲಿ ಜಾತಿ ಪ್ರಮಾಣ ಪತ್ರ ರದ್ದಾದರೂ ಉನ್ನತ ಶಿಕ್ಷಣ ಇಲಾಖೆ ಅಂತವರ ವಿರುದ್ಧ ಕ್ರಮಕೈಗೊಂಡಿಲ್ಲ' ಎಂದು ಅವರು ಆರೋಪಿಸಿದ್ದಾರೆ.

'ವಿಧಾನಮಂಡಲ ಅಧಿವೇಶನದಲ್ಲಿ ಚರ್ಚೆಯಾಗಲಿ. ಹಗರಣವನ್ನು ಸಿಐಡಿ ತನಿಖೆಗೆ ನೀಡಬೇಕು ಎಂದು ಆಗ್ರಹಿಸಿದ್ದಾರೆ. 'ನಿರಂತರ ಹೋರಾಟದಿಂದ ಅನಾರೋಗ್ಯಕ್ಕೆ ಈಡಾಗಿ, 22 ದಿನಗಳಿಂದ ವಿಜಯಪುರ ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದೇನೆ. ನನ್ನ ಗೋಳು ಯಾರೂ ಕೇಳುತ್ತಿಲ್ಲ' ಎಂದು ಅವರು ತಿಳಿಸಿದ್ದಾರೆ.

42,114 ಹೆಕ್ಟೇರ್ ಅರಣ್ಯ ಖಾಸಗಿ ವ್ಯಕ್ತಿಗಳಿಗೆ

ಬೆಂಗಳೂರು: ರಾಜ್ಯದಲ್ಲಿ 2.04 ಲಕ್ಷ ಎಕರೆ ಅರಣ್ಯ ಪ್ರದೇಶವು ಒತ್ತುವರಿಯಾಗಿದೆ.

ವಿಧಾನಪರಿಷತ್‌ನಲ್ಲಿ ಗುರುವಾರ ಪ್ರಶ್ನೋತ್ತರ ವೇಳೆಯಲ್ಲಿ ಜೆಡಿಎಸ್‌ನ ಟಿ.ಎ. ಶರವಣ ಅವರ ಪ್ರಶ್ನೆಗೆ ಗದ್ದಲದ ನಡುವೆಯೇ ಮುಖ್ಯಮಂತ್ರಿ ಪರವಾಗಿ ಉತ್ತರಿಸಿದ ಕಂದಾಯ ಸಚಿವ ಆರ್. ಅಶೋಕ, ಈ ವಿಷಯ ತಿಳಿಸಿದರು.

ಒತ್ತುವರಿ ಕುರಿತ ವಿವರಗಳ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲೂ ಪ್ರಮಾಣಪತ್ರ ಸಲ್ಲಿಸಲಾಗಿದೆ. ಅರಣ್ಯ ಇಲಾಖೆ ನೀಡಿರುವ ಮಾಹಿತಿಯಂತೆ 42,114 ಹೆಕ್ಟೇರ್ ಕಾಯ್ದಿಟ್ಟ ಅರಣ್ಯ ಪ್ರದೇಶವನ್ನು ಖಾಸಗಿಯವರಿಗೆ ಮಂಜೂರು ಮಾಡಲಾಗಿದೆ ಎಂದು ಅವರು ವಿವರಿಸಿದರು.

ಅರಣ್ಯ ಪ್ರದೇಶವನ್ನು ಅರಣ್ಯೇತರ ಉದ್ದೇಶಕ್ಕಾಗಿ ಮಂಜೂರು ಮಾಡಿರುವುದು ಕಾನೂನುಬಾಹಿರ. ಈ ಮಂಜೂರಾತಿಗಳನ್ನು ರದ್ದುಪಡಿಸಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದರು.

ಸರ್ಕಾರಕ್ಕೆ ಸವಾಲು ಎಸೆದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ

ಪೋಸ್ಟರ್ ಅಂಟಿಸುವೆ, ತಾಕತ್ತಿದ್ದರೆ ಬಂಧಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿರುವ ಬಿಜೆಪಿ ಸರ್ಕಾರದ ಲಂಚಗುಳಿತನದ ಬಗ್ಗೆ ಪಕ್ಷದ ಕಾರ್ಯಕರ್ತರ ಜೊತೆ ನಾನೇ ಪೋಸ್ಟರ್ ಅಂಟಿಸುತ್ತೇನೆ, ತಾಕತ್ತಿದ್ದರೆ ಬಂಧಿಸಿ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸವಾಲು ಎಸೆದಿದ್ದಾರೆ.

ಕಾಂಗ್ರೆಸ್ ಕಾರ್ಯಕರ್ತರ ಬಂಧನ ವಿರೋಧಿಸಿ 'ಪೇಸಿಎಂ' ಹ್ಯಾಷ್‌ಟ್ಯಾಗ್‌ನಡಿ ಸರಣಿ ಟ್ವೀಟ್ ಮಾಡಿರುವ ಅವರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರೇ ಬೇರೆಯವರಿಗೆ ಚುಚ್ಚಿದಾಗ ಖುಷಿಪಟ್ಟಿರಿ. ಯಾರೋ ನಿಮಗೆ ಚುಚ್ಚಿದ್ದಕ್ಕೆ ನೋವಾಯಿತೇ ಎಂದು ಕುಟುಕಿದ್ದಾರೆ.

'ನನ್ನ ಮತ್ತು ಡಿ.ಕೆ. ಶಿವಕುಮಾರ್ ಬಗ್ಗೆ ಪೋಸ್ಟರ್ ಅಂಟಿಸಿದ್ದಾರಲ್ಲ. ಅದರ ಬಗ್ಗೆ ನೀವು ಯಾಕೆ ಮೌನವಾಗಿದ್ದೀರಿ. ಪೊಲೀಸರ ಕಣ್ಣು ಯಾಕೆ ಕುರುಡಾಗಿದೆ' ಎಂದು ಪ್ರಶ್ನಿಸಿರುವ ಅವರು, 'ಬಿಜೆಪಿ ರಾಜ್ಯ ಘಟಕದ ಅಧಿಕೃತ ಸಾಮಾಜಿಕ ಜಾಲತಾಣಗಳಲ್ಲಿ ನನ್ನ ವಿರುದ್ಧದ ಕುತ್ಸಿತ ಹೇಳಿಕೆಗಳು, ವಿರೂಪಗೊಳಿಸಿರುವ ವಿವರಗಳನ್ನು ಕೊಡುತ್ತೇನೆ. ಅವರನ್ನೂ ಬಂಧಿಸಿ' ಎಂದೂ ಆಗ್ರಹಿಸಿದ್ದಾರೆ.

'ನನ್ನ ವಿರುದ್ಧ ಆರೋಪ ಮಾಡಿರುವವರ ವಿರುದ್ಧ ನಾನು ಅಧಿಕಾರದಲ್ಲಿದ್ದಾಗಲೇ ಪೊಲೀಸರಿಗೆ ದೂರು ಕೊಟ್ಟಿಲ್ಲ. ಇದು ನಾನು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕೊಟ್ಟ ಗೌರವ' ಎಂದೂ ಅವರು ಹೇಳಿದ್ದಾರೆ.

ರಾಜಕೀಯ ವ್ಯವಸ್ಥೆಯಲ್ಲಿ ಇಂತಹ ಆರೋಪ-ಪ್ರತ್ಯಾರೋಪ ಸಹಜ ವಿದ್ಯಮಾನವಾದರೂ ಇದನ್ನು ಇಷ್ಟೊಂದು ಕೀಳು ಮಟ್ಟಕ್ಕೆ ತಂದು ನಿಲ್ಲಿಸಿದ ಕೀರ್ತಿ ಕರ್ನಾಟಕದ ಬಿಜೆಪಿಗೆ ಸಲ್ಲುತ್ತದೆ. ಬಿಜೆಪಿ ಗೆಲುವಿನ ಸೂತ್ರವೇ ಸುಳ್ಳು ಮಾಹಿತಿಗಳ ಅಪಪ್ರಚಾರ, ವಿರೋಧಿಗಳ ಚಾರಿತ್ರ್ಯಹನನ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ ಎಂದು ಟೀಕಿಸಿದ್ದಾರೆ.

'ಕರ್ನಾಟಕದಲ್ಲಿ ಹೊಸ ಕಾನೂನು ಜಾರಿಯಾಗಿದೆ. ಇಲ್ಲಿ ಲಂಚ ತಿಂದರೆ ಅಪರಾಧ ಅಲ್ಲ, ಲಂಚ ತಿಂದದ್ದನ್ನು ಹೇಳಿದರೆ ಅಪರಾಧ. ಪೊಲೀಸರ ಮೂಲಕ ಎಷ್ಟು ಜನರ ಬಾಯಿ ಮುಚ್ಚಿಸುತ್ತೀರಿ? ಎಷ್ಟು ಮಂದಿಯನ್ನು ಜೈಲಿಗೆ ಹಾಕ್ತೀರಿ? ರಾಜ್ಯದ ತುಂಬಾ ಜೈಲು ಕಟ್ಟಿಸ್ತಿರಾ? ಜನ ಬಂಡೆದಿದ್ದಾರೆ, ಎಚ್ಚರ..!' ಎಂದು ಅವರು ಹೇಳಿದ್ದಾರೆ.

'ಸರ್ಕಾರಿ ಕಚೇರಿಗಳಲ್ಲಿ ಪೇಸಿಎಂ ಭಿತ್ತಿಚಿತ್ರ'

'ಪೇಸಿಎಂ' ಅಭಿಯಾನ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರನ್ನು ಬಂಧಿಸಿರುವುದಕ್ಕೆ ಕಿಡಿಕಾರಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ನಮ್ಮ ಎಲ್ಲಾ ಶಾಸಕರು ಸೇರಿ ಪೇಸಿಎಂ ಪೋಸ್ಟರ್ ಅನ್ನು ಸರ್ಕಾರಿ ಕಚೇರಿಗಳಲ್ಲಿ ಶುಕ್ರವಾರ ಅಂಟಿಸುತ್ತೇವೆ' ಎಂದು ಘೋಷಿಸಿದ್ದಾರೆ.

ಕಾರ್ಯಕರ್ತರನ್ನು ವಶಕ್ಕೆ ಪಡೆದಿದ್ದ ಹೈಗ್ರೌಂಡ್ ಪೊಲೀಸ್ ಠಾಣೆಗೆ ಭೇಟಿ ನೀಡಿದ ಬಳಿಕ ಮಾತನಾಡಿದ ಅವರು, 'ಮುಖ್ಯಮಂತ್ರಿಗಳು ಪೋಸ್ಟರ್ ವಿಚಾರಕ್ಕೆ ಇಷ್ಟು ತಲೆ ಕೆಡಿಸಿಕೊಂಡು ಗಾಬರಿಯಾಗಿರುವುದು ಏಕೆ? ಈ ಪೋಸ್ಟರ್ ಅಂಟಿಸುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿರುವುದು ಏಕೆ? ಇದು ಅಧಿಕಾರ ದುರ್ಬಳಕೆ, ಭಯ, ದ್ವೇಷದ ರಾಜಕಾರಣವಾಗಿದೆ' ಎಂದರು.

'ಬಿಜೆಪಿ ಅವರು ನಮ್ಮ ಬಗ್ಗೆಯೂ ಕ್ಯೂಆರ್ ಕೋಡ್ ಹಾಕಿದ್ದಾರೆ. ನಾನು ವಿಚಾರಣೆಗೆ ಹೋದ ಸಮಯದಲ್ಲಿ ಕಂಬಿ ಹಿಂದೆ ಇರುವಂತೆ ಸಾಮಾಜಿಕ ಮಾಧ್ಯಮಗಳಲ್ಲಿ ಫೋಟೋ ಹಾಕಿದ್ದರು. ಹಾಗೆಂದು ನಾನು ಅವರ ವಿರುದ್ಧ ದೂರು ನೀಡಲು ಸಾಧ್ಯವೇ? ರಾಜಕೀಯದಲ್ಲಿ ಇರುವವರನ್ನು ಜನ ಪ್ರಶ್ನಿಸುವುದು, ಟೀಕಿಸುವುದು ಸಹಜ. ಅಧಿಕಾರದಲ್ಲಿ ಇರುವವರು ಇದನ್ನು ಜೀರ್ಣಿಸಿಕೊಳ್ಳಬೇಕು' ಎಂದು ಹೇಳಿದರು.

'ಬಿಜೆಪಿ ಅವರು ನಮ್ಮ ವಿರುದ್ಧ ಇಂತಹ ನೂರಾರು ಪೋಸ್ಟರ್ ಮಾಡಿದ್ದು, ಅವರ ವಿರುದ್ಧ ಕ್ರಮ ಕೈಗೊಂಡಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'40 % ಕಮಿಷನ್ ಆರೋಪವನ್ನು ನಾವು ಮಾಡಿದ್ದೇವಾ? ಸಿಎಂ ಹುದ್ದೆಗೆ ₹2500 ಕೋಟಿ ನೀಡಬೇಕು ನಿಮ್ಮ ಶಾಸಕ ಯತ್ನಾಳ್ ಅವರೇ ಹೇಳಿದ್ದಾರೆ' ಎಂದು ಹೇಳಿದರು.

ವಿಧಾನ ಪರಿಷತ್ ಕಲಾಪದಲ್ಲಿ ಗುರುವಾರ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರು ಪರಸ್ಪರ ವಿರುದ್ಧವಾದ ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು —ಪ್ರಜಾವಾಣಿ ಚಿತ್ರ:ಎಂ.ಎಸ್‌ಮಂಜುನಾಥ್

ಪರಿಷತ್‌ನಲ್ಲಿ ಕೋಲಾಹಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೇಸಿಎಂ' ಪೋಸ್ಟರ್ ಪ್ರಕರಣ ಗುರುವಾರ ವಿಧಾನಪರಿಷತ್‌ನಲ್ಲಿ ಕೋಲಾಹಲ ಸೃಷ್ಟಿಸಿತು.

ಗದ್ದಲ, ಧರಣಿ ನಡುವೆಯೇ ಪ್ರಶ್ನೋತ್ತರ ಮತ್ತು ವಿಶ್ವವಿದ್ಯಾಲಯ ತಿದ್ದುಪಡಿ ಮಸೂದೆಗೆ ಅನುಮೋದನೆ ಪಡೆಯಲಾಯಿತು. ಸಭಾಪತಿಗಳ ಧೋರಣೆ ಖಂಡಿಸಿ ಕಾಂಗ್ರೆಸ್ ಸದಸ್ಯರು ಪೀಠಕ್ಕೆ ಮುತ್ತಿಗೆ ಹಾಕಿ, ಧಿಕ್ಕಾರ ಹಾಕಿದರು.

ಬೆಳಿಗ್ಗೆ ಸದನ ಆರಂಭವಾಗುತ್ತಿದ್ದಂತೆ, ಕಾಂಗ್ರೆಸ್ ಸದಸ್ಯರು 'ಶೇ 40ರ ಸರ್ಕಾರ' ಎನ್ನುವ ಮಾಸ್ಕ್‌ಗಳನ್ನು ಧರಿಸಿ ಸಭಾಪತಿ ಪೀಠದ ಮುಂದೆ ಧರಣಿ ನಡೆಸಿದರು. ತಮ್ಮ ಪಕ್ಷದ ಸಾಮಾಜಿಕ ಜಾಲತಾಣ ಘಟಕದ ಇಬ್ಬರು ಕಾರ್ಯಕರ್ತರನ್ನು ಬಂಧಿಸಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಹಾಕಿದರು. ಜತೆಗೆ, 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ವರದಿ ಪ್ರದರ್ಶಿಸಿದರು.

'ಸರ್ಕಾರ ಏಕಪಕ್ಷೀಯವಾಗಿ ನಡೆದುಕೊಂಡಿದೆ. ಮಧ್ಯರಾತ್ರಿ ಮನೆಗೆ ತೆರಳಿ ಅಮಾಯಕರನ್ನು ಬಂಧಿಸಲಾಗಿದೆ. ಅವರೇನು ಭಯೋತ್ಪಾದಕರಾ? ಬಿಜೆಪಿಯವರು ಸಹ ಕಾಂಗ್ರೆಸ್ ನಾಯಕರ ಪೋಸ್ಟರ್‌ಗಳನ್ನು ಅಂಟಿಸಿದ್ದರೂ ಕ್ರಮಕೈಗೊಂಡಿಲ್ಲ. ಎಲ್ಲರಿಗೂ ಒಂದೇ ಕಾನೂನು. ನಿಮಗೆ ದಮ್ ಇದ್ದರೆ ಕ್ರಮಕೈಗೊಳ್ಳಿ' ಎಂದು ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಒತ್ತಾಯಿಸಿದರು.

ಇದಕ್ಕೆ ಪ್ರತಿಯಾಗಿ ಎದ್ದು ನಿಂತ ಬಿಜೆಪಿ ಸದಸ್ಯರು, 'ಕಾಂಗ್ರೆಸ್‌ನವರು ಹೇಡಿಗಳು' ಎಂದು ಟೀಕಿಸಿದರು. 'ನೀವು ರಣಹೇಡಿಗಳು. ಇ.ಡಿ, ಸಿಬಿಐ ದುರ್ಬಳಕೆ ಮಾಡಿಕೊಳ್ಳುವ ಹೇಡಿಗಳು' ಎಂದು ಕಾಂಗ್ರೆಸ್ ಸದಸ್ಯರು ವಾಗ್ದಾಳಿ ನಡೆಸಿದರು.

ಗದ್ದಲ ಉಂಟಾಗಿದ್ದರಿಂದ ಸಭಾಪತಿ ರಘುನಾಥ ರಾವ್ ಮಲ್ಕಾಪುರೆ ಅವರು ಸದನದ ಕಲಾಪವನ್ನು 10 ನಿಮಿಷಗಳ ಕಾಲ ಮುಂದೂಡಿದರು. ಕಲಾಪ ಮತ್ತೆ ಆರಂಭವಾದಾಗಲೂ ಧರಣಿ ಮುಂದುವರಿಯಿತು. ಆಗ ಬಿಜೆಪಿ ಸದಸ್ಯರು ಕಾಂಗ್ರೆಸ್ ಅವಧಿಯಲ್ಲಿನ ಭ್ರಷ್ಟಾಚಾರದ ಆರೋಪಗಳ ಫಲಕಗಳನ್ನು ಪ್ರದರ್ಶಿಸಿದರು.

ಕುರ್ಚಿ ಮೇಲೆ ಎದ್ದು ನಿಂತ ವಿರೋಧ ಪಕ್ಷದ ಮುಖ್ಯ ಸಚೇತಕ ಪ್ರಕಾಶ್ ರಾಠೋಡ್ ಭಿತ್ತಿಪತ್ರ ಪ್ರದರ್ಶಿಸಿದರು.

'ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರ ಪೋಸ್ಟರ್ ಗಳನ್ನು ಅಂಟಿಸಿರುವ ಬಗ್ಗೆ ದೂರುಗಳನ್ನು ನೀಡಿದರೆ ಸರ್ಕಾರ ಕ್ರಮಕೈಗೊಳ್ಳುತ್ತದೆ. ಮುಖ್ಯಮಂತ್ರಿ ಅವರ ಚಾರಿತ್ರ್ಯವಧೆ ನೋಡಿಕೊಂಡು ಸುಮ್ಮನೆ ಕೂರಬೇಕಾ?' ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಪ್ರಶ್ನಿಸಿದರು.

ಬಸವರಾಜ ಬೊಮ್ಮಾಯಿ, 'ಶೇ 40 ಏಕೆ? ಶೇ 100ರವರೆಗೂ ಚರ್ಚೆಗೂ ಸಿದ್ಧ. ಪ್ರಶ್ನೋತ್ತರಕ್ಕೆ ಅಡ್ಡಿಪಡಿಸಿ ಧರಣಿ ಮಾಡಬೇಡಿ' ಎಂದರು.

ಆರೋಪ–ಪ್ರತ್ಯಾರೋಪ ಗದ್ದಲದ ಮಧ್ಯೆಯೇ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ (ತಿದ್ದುಪಡಿ) ಮಸೂದೆಗೂ ಯಾವುದೇ ರೀತಿ ಚರ್ಚೆ ಇಲ್ಲದೆಯೇ ಧ್ವನಿಮತದ ಮೂಲಕ ಅನುಮೋದನೆ ಪಡೆಯಲಾಯಿತು.

ಐವರ ಬಂಧನ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾವಚಿತ್ರವಿದ್ದ 'ಪೇಸಿಎಂ (PayCm)' ಹೆಸರಿನ ಪೋಸ್ಟರ್ ಅಂಟಿಸಿದ್ದ ಪ್ರಕರಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸೇರಿ ಐವರನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಗುರುವಾರ ಬಂಧಿಸಿದ್ದಾರೆ.

'ಲಗ್ಗೆರೆಯ ಕಾಳಕಯ್ಯ ಸ್ವಾಮಿ ಅಲಿಯಾಸ್ ಸಂಜಯ್ (23), ಕೆ. ವಿಶ್ವಮೂರ್ತಿ(33), ಸಿದ್ದಯ್ಯ (21), ವಿ. ವಿನೋದ್ ಕುಮಾರ್ (18) ಹಾಗೂ ರಾಜಗೋಪಾಲನಗರದ ಎನ್. ಮದನ್‌ಕುಮಾರ್ ಬಂಧಿತರು.

ಇವರೆಲ್ಲರೂ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ.

'ಹೈಕೋರ್ಟ್ ಆದೇಶ ಅನ್ವಯ ಸಾರ್ವಜನಿಕ ಸ್ಥಳದಲ್ಲಿ ಪೋಸ್ಟರ್ ಅಂಟಿಸುವಂತಿಲ್ಲ. ಆದರೆ, ರೇಸ್‌ಕೋರ್ಸ್ ರಸ್ತೆ ಹಲವೆಡೆ 'ಪೇಸಿಎಂ' ಪೋಸ್ಟರ್ ಅಂಟಿಸಲಾಗಿತ್ತು. ಇದನ್ನು ಗಮನಿಸಿದ್ದ ಬಿಬಿಎಂಪಿ ವಸಂತನಗರದ ಕಂದಾಯ ಅಧಿಕಾರಿ ಬಿ.ವಿ.ವೀಣಾ ದೂರು ನೀಡಿದ್ದರು' ಎಂದು ಪೊಲೀಸರು ಹೇಳಿದರು.

ಸಭಾಪತಿ ಧೋರಣೆಗೆ ಕಾಂಗ್ರೆಸ್ ಸದಸ್ಯರು ಆಕ್ರೋಶ ವ್ಯಕ್ತಪಡಿಸಿ ಧಿಕ್ಕಾರ ಹಾಕಿದರಲ್ಲದೇ, ಸಭಾಪತಿ ಪೀಠಕ್ಕೆ ಮುತ್ತಿಗೆ ಹಾಕಿ ಸುತ್ತುವರಿದರು. ತಕ್ಷಣವೇ ಮಾರ್ಷಲ್‌ಗಳು ಸಭಾಪತಿ ರಕ್ಷಣೆ ಧಾವಿಸಿದರು. ವಿರೋಧ ಪಕ್ಷದ ಮುಖ್ಯ ಸಚೇತಕ ಪ್ರಕಾಶ್ ರಾಠೋಡ್, ಜೆಡಿಎಸ್‌ನ ಮರಿತಿಬ್ಬೇಗೌಡ, ಕಾಂಗ್ರೆಸ್‌ನ ಸುನೀಲ್‌ಗೌಡ ಪಾಟೀಲ ಅವರು ಕುರ್ಚಿ ಮೇಲೆ ನಿಂತು ಧಿಕ್ಕಾರ ಕೂಗಿ ಭಿತ್ತಿಫಲಕ ಪ್ರದರ್ಶಿಸಿದರು.

'ಪೇಸಿಎಂ' ಅಂದರೆ 'ಪೇ ಕಾಂಗ್ರೆಸ್ ಮೇಡಂ': ಕಟೀಲ್

ಬಿಜೆಪಿಯಿಂದ 'ಸ್ಕ್ಯಾಮ್ ರಾಮಯ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಆರಂಭಿಸಿರುವ 'ಪೇಸಿಎಂ' ಅಭಿಯಾನ ಎಂದರೆ 'ಪೇ ಕಾಂಗ್ರೆಸ್ ಮೇಡಂ' ಎಂದರ್ಥ' ಎಂದು ವ್ಯಂಗ್ಯವಾಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಸಿದ್ದರಾಮಯ್ಯ ಅಧಿಕಾರ ಅವಧಿಯಲ್ಲಿ ಶೇ 100 ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿ 'ಸ್ಕ್ಯಾಮ್ ರಾಮಯ್ಯ' ಪುಸ್ತಕ ಬಿಡುಗಡೆ ಮಾಡಿದ್ದಾರೆ.

ಪುಸ್ತಕ ಬಿಡುಗಡೆ ಬಳಿಕ ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಕಟೀಲ್, 'ಕಾಂಗ್ರೆಸ್ ಮೇಡಂಗೆ ಮಾಡುವ ಪೇಮೆಂಟ್ ಬಗ್ಗೆ 'ಪೇಸಿಎಂ'ನಲ್ಲಿ ಉಲ್ಲೇಖವಿದೆ. ಶಿವಕುಮಾರ್ ಹಿಂದೆ ಚೀಟಿ ನುಂಗಿದ್ದು, ಅವರು ಅವರು ಚೀಟಿ ಶಿವಕುಮಾರ್ ಆಗಿದ್ದಾರೆ' ಎಂದೂ ಗೇಲಿ ಮಾಡಿದರು.

'ಕಾಂಗ್ರೆಸ್ಸಿನ 'ಪೇಸಿಎಂ' ಅಭಿಯಾನ ಕರ್ನಾಟಕಕ್ಕೆ ಮಾಡುತ್ತಿರುವ ಅವಮಾನ. ಕೋರ್ಟ್‌ನ ಆದೇಶದನ್ವಯ ಸಿದ್ದರಾಮಯ್ಯ ಬಂಧನಕ್ಕೆ ಒಳಗಾಗಲಿದ್ದಾರೆ' ಎಂದರು.

'ಕಾಂಗ್ರೆಸ್‌ನ ರಾಷ್ಟ್ರೀಯ, ರಾಜ್ಯ ನಾಯಕರು ಹಗರಣಗಳಲ್ಲಿ ಸಿಲುಕಿದ್ದಾರೆ. ತನಿಖೆಯ ಫಲಿತಾಂಶಗಳು ಕಾಂಗ್ರೆಸ್ ಅನ್ನು ಮುಜುಗರಕ್ಕೀಡು ಮಾಡಿವೆ' ಎಂದು ದೂರಿದರು.

'ವಕ್ಫ್ ಆಸ್ತಿ ಕಬಳಿಕೆ ಪ್ರಕರಣಕ್ಕೆ ಸಂಬಂಧಿಸಿದ ಅನ್ವರ್ ಮಾಣಿಪ್ಪಾಡಿ ವರದಿ ₹ 2.5 ಲಕ್ಷ ಕೋಟಿ ಮೊತ್ತದ ಹಗರಣವನ್ನು ಬಹಿರಂಗ ಪಡಿಸಲಿದೆ. ಅರ್ಕಾವತಿ, ಮೊಟ್ಟೆ, ಹಾಸಿಗೆ, ದಿಂಬು ಸೇರಿ ಅನೇಕ ಹಗರಣಗಳು ಕಾಂಗ್ರೆಸ್ ಅವಧಿಯಲ್ಲಿ ನಡೆದಿದ್ದವು. ಇವೆಲ್ಲವುಗಳನ್ನು ಮುಚ್ಚಿಡಲು ಆ ಪಕ್ಷ ಯತ್ನಿಸಿತ್ತು. ಸಿದ್ದರಾಮಯ್ಯ ಅವಧಿಯಲ್ಲಿ ಡ್ರಗ್ ದಂಧೆ, ಮರಳು ಮಾಫಿಯಾಗಳು ಸರ್ಕಾರವನ್ನು ನಡೆಸುತ್ತಿದ್ದವು. ಆ ದಂಧೆಗಳನ್ನು ನಮ್ಮ ಸರ್ಕಾರ ನಿಯಂತ್ರಿಸಿದೆ' ಎಂದು ವಿವರಿಸಿದರು.

ಬಿಜೆಪಿ ಬಿಡುಗಡೆ ಮಾಡಿದ 'ಸ್ಕ್ಯಾಮ್ ರಾಮಯ್ಯ' ಪುಸ್ತಕದ ಮುಖಪುಟ

'ರಾಜ್ಯ ಸರ್ಕಾರ ಕಾಂಗ್ರೆಸ್ ಅಧಿಕಾರ ಅವಧಿಯ ಎಲ್ಲ ಹಗರಣಗಳನ್ನು ತನಿಖೆಗೆ ಒಪ್ಪಿಸಲಿದೆ. ತಪ್ಪಿತಸ್ಥರ ಬಂಧನ ಖಚಿತ' ಎಂದ ಕಟೀಲ್, 'ರಾಜ್ಯ ಸರ್ಕಾರದ ಸಾಧನೆ, ಅಭಿವೃದ್ಧಿಗಳನ್ನು ನೋಡಿ ಆತಂಕಗೊಂಡ ಕಾಂಗ್ರೆಸ್ ಸುಳ್ಳು ಆರೋಪ ಮಾಡುತ್ತಿದೆ' ಎಂದೂ ದೂರಿದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ತಿನ ಸದಸ್ಯರಾದ ಎನ್. ರವಿಕುಮಾರ್, ಛಲವಾದಿ ನಾರಾಯಣಸ್ವಾಮಿ, ಮುಖ್ಯವಕ್ತಾರ ಎಂ.ಜಿ. ಮಹೇಶ್, ಸಿದ್ಧರಾಜು ಪಾಲ್ಗೊಂಡಿದ್ದರು.

ಮುಂದುವರಿದ ಕದನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೇಸಿಎಂ' ಪೋಸ್ಟರ್ ಪ್ರಕರಣ ಗುರುವಾರವೂ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ವಾಕ್ಸಮರಕ್ಕೆ ಕಾರಣವಾಯಿತು.

ಪೋಸ್ಟರ್ ಅಂಟಿಸಿದ ಪ್ರಕರಣದಲ್ಲಿ ಬಿಬಿಎಂಪಿ ನೀಡಿದ ದೂರು ಆಧರಿಸಿ ಕಾಂಗ್ರೆಸ್‌ನ ಐವರು ಕಾರ್ಯಕರ್ತರನ್ನು ಬಂಧಿಸಲಾಯಿತು.

ಸರ್ಕಾರದ ಕ್ರಮಕ್ಕೆ ಆಕ್ರೋಶ ವ್ಯಕ್ತಪಡಿಸಿರುವ ಕಾಂಗ್ರೆಸ್, 'ಪೇಸಿಎಂ' ಅಭಿಯಾನ ಮತ್ತಷ್ಟು ತೀವ್ರಗತಿಯಲ್ಲಿ ಜನರ ಬಳಿ ಕೊಂಡೊಯ್ಯುವುದಾಗಿ ತಿಳಿಸಿದೆ.

ವಿಧಾನಸಭೆಯಲ್ಲಿ ಗುರುವಾರ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಪಿ. ರಾಜೀವ್, 'ಪೇ–ಸಿಎಂ ಎಂದು ಸಿ.ಎಂ ಭಾವಚಿತ್ರ ಬಳಸಿ ಪೋಸ್ಟರ್ ಅಂಟಿಸಿರುವುದು ದುರದೃಷ್ಟಕರ. ಒಂದು ರಾಜಕೀಯ ಪಕ್ಷ ಇಂತಹ ಆಂದೋಲನ ಆರಂಭಿಸಿದೆ. ಇದು ಕರ್ನಾಟಕದ ರಾಜಕಾರಣ ಅಧಃ ಪತನಕ್ಕೆ ಕುಸಿಯುತ್ತಿರುವುದರ ಸಾಕ್ಷಿ' ಎಂದರು.

ಮಧ್ಯ ಪ್ರವೇಶಿಸಿದ ಕಾಂಗ್ರೆಸ್‌ನ ಕೃಷ್ಣ ಬೈರೇಗೌಡ, 'ರಾಜಕೀಯವನ್ನು ಸರಿಯಾಗಿ ಮಾಡಲಿ. ಕಾನೂನಿನಲ್ಲಿ ಅವಕಾಶವಿದ್ದರೆ ಕ್ರಮ ಜರುಗಿಸಿ. ನಾವು ಎದುರಿಸಲು ಸಿದ್ಧ. ಮೈ ಪರಚಿಕೊಳ್ಳುವುದು ಏಕೆ' ಎಂದು ಅವರು ಪ್ರಶ್ನಿಸಿದರು.

ಕಾಂಗ್ರೆಸ್– ಬಿಜೆಪಿ ಸದಸ್ಯರು ವಾಕ್ಸಮರಕ್ಕೆ ಇಳಿದರು.

'ಮುಖ್ಯಮಂತ್ರಿಯನ್ನು ಈ ರೀತಿ ಚಿತ್ರಿಸಿರುವುದು ಸರಿಯಲ್ಲ. ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಸಮರ್ಥಿಸಿಕೊಂಡಿದ್ದಾರೆ' ಎಂದು ರಾಜೀವ್ ಹೇಳಿದರು.

'ಹಿಂದೆ ನಿಮ್ಮ ಪ್ರಧಾನಿ ಕಾಂಗ್ರೆಸ್ ಸರ್ಕಾರವನ್ನು ಹತ್ತು ಪರ್ಸೆಂಟ್ ಸರ್ಕಾರ ಎಂದಿದ್ದರು. ಏನು ಆಧಾರವಿತ್ತು' ಎಂದು ಕೃಷ್ಣ ಬೈರೇಗೌಡ ಅವರು ಕೇಳಿದರು.

ಗದ್ದಲ ಜೋರಾಗುತ್ತಿದ್ದಂತೆ ಮಧ್ಯ ಪ್ರವೇಶಿಸಿದ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, 'ಜನಸೇವೆಯ ಉದ್ದೇಶದಿಂದ ರಾಜಕೀಯಕ್ಕೆ ಬಂದಿದ್ದೇವೆ. ಮಾಧ್ಯಮ, ಸಿನಿಮಾ, ಬರಹಗಳಲ್ಲಿ ರಾಜಕಾರಣಿಗಳನ್ನು ಚಿತ್ರಿಸುತ್ತಿರುವ ಪರಿ ನೋಡಿದರೆ ಬೇಸರ ಆಗುತ್ತದೆ. ಸೈಬರ್ ಮತ್ತು ಆಡಿಯೊ ರೆಕಾರ್ಡಿಂಗ್ ನಿಯಂತ್ರಿಸಲು ಕ್ರಮ ಅಗತ್ಯ' ಎಂದರು.

'ಇದರ ಹಿಂದೆ ಯಾರಿದ್ದಾರೆ ಎನ್ನುವುದು ತನಿಖೆಯಿಂದ ಹೊರ ಬರುತ್ತದೆ. ಎಲ್ಲರೂ ಆತ್ಮಸಾಕ್ಷಿಯನ್ನು ಪ್ರಶ್ನಿಸಿಕೊಳ್ಳಲಿ. ನಾವು ಮಾಡಿದ್ದರೆ ನಾವೇ ಅನುಭವಿಸುತ್ತೇವೆ. ಅವರು (ಕಾಂಗ್ರೆಸ್‌ನವರು) ಮಾಡಿದ್ದರೆ ಅವರು ಅನುಭವಿಸುತ್ತಾರೆ' ಎಂದು ವಾಗ್ವಾದಕ್ಕೆ ತೆರೆ ಎಳೆದರು.

ದಸರೆಯಲ್ಲಿ ಅಪ್ಪುಗೆ ವಿಶೇಷ ನಮನ

ನಾಡಹಬ್ಬದಲ್ಲಿ ಕಲಾವಿದನಿಗೆ ಹಲವು ಕಾರ್ಯಕ್ರಮ ಅರ್ಪಣೆ ಇದೇ ಮೊದಲು

• ಎಂ.ಮಹೇಶ

ಮೈಸೂರು: ದಸರಾ ಮಹೋತ್ಸವದಲ್ಲಿ ಇದೇ ಮೊದಲ ಬಾರಿಗೆ ನಟ ಪುನೀತ್ ರಾಜ್‌ಕುಮಾರ್ ಅವರಿಗೆ ವಿಶೇಷ ನಮನ ಸಲ್ಲಿಸಲಾಗುತ್ತಿದೆ. ಸೆ.26ರಿಂದ ಅ.5ರವರೆಗೆ ನಡೆಯಲಿರುವ ಉತ್ಸವದ ಪ್ರಮುಖ ಕಾರ್ಯಕ್ರಮಗಳು ಪುನೀತ್ ನೆನಪನ್ನು ಹೊತ್ತು ತರಲಿವೆ.

ಮಾನಸ ಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ನಡೆಯುತ್ತಿರುವ 'ಯುವ ಸಂಭ್ರಮ'ದಲ್ಲಿ 'ಪವರ್ ಸ್ಟಾರ್'ಗೆ ನಿತ್ಯವೂ ಒಂದಿಲ್ಲೊಂದು ರೀತಿಯಲ್ಲಿ ಗೌರವ ಸಲ್ಲಿಸಲಾಗುತ್ತಿದೆ. ಸೆ.27ರಿಂದ ಶುರುವಾಗಲಿರುವ 'ಯುವ ದಸರಾ'ದಲ್ಲಿ ಒಂದು ದಿನದ ಕಾರ್ಯಕ್ರಮವನ್ನು ಪುನೀತ್‌ಗೆ ಸಮರ್ಪಿಸಲಾಗಿದೆ. ಅಂದು ಸಂಜೆ 7ರಿಂದ ರಾತ್ರಿ 10.30ರವರೆಗೆ ಅವರ ಹಾಡುಗಳು ಮಹಾರಾಜ ಕಾಲೇಜು ಮೈದಾನವನ್ನು ತುಂಬಲಿವೆ. ಖ್ಯಾತ ಗಾಯಕರಾದ ಗುರುಕಿರಣ್, ವಿಜಯಪ್ರಕಾಶ್, ಕುನಾಲ್ ಗಾಂಜಾವಾಲಾ ಧ್ವನಿಯಾಗಲಿದ್ದಾರೆ. ಅವರು ಹಾಡಿದ ಹಾಡುಗಳೂ ಕೇಳಿ ಬರಲಿವೆ.

ದಸರಾ ಅಂಗವಾಗಿ ಮೈಸೂರಿನ ಮಾನಸ ಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ನಡೆಯುತ್ತಿರುವ 'ಯುವ ಸಂಭ್ರಮ' ಕಾರ್ಯಕ್ರಮದಲ್ಲಿ ಸಾರ್ವಜನಿಕರು ಮೊಬೈಲ್ ಫೋನ್ ಟಾರ್ಚ್ ಆನ್ ಮಾಡಿ ಪುನೀತ್‌ಗೆ ನಮನ ಸಲ್ಲಿಸಿದರು – ಪ್ರಜಾವಾಣಿ ಚಿತ್ರ

ಅಶ್ವಿನಿ ಅವರಿಂದ ವೀಕ್ಷಣೆ: ದಸರಾ ಚಲನಚಿತ್ರೋತ್ಸವದಲ್ಲೂ 'ಅಪ್ಪು ದಿನ'ದಲ್ಲಿ 'ಬೆಟ್ಟದ ಹೂವು', 'ಅಂಜನಿಪುತ್ರ', 'ರಾಜಕುಮಾರ', 'ಮೈತ್ರಿ', 'ಪೃಥ್ವಿ' ಹಾಗೂ 'ಯುವರತ್ನ' ಚಿತ್ರಗಳು ಪ್ರದರ್ಶನಗೊಳ್ಳಲಿವೆ. ನಟ ಶಿವರಾಜ್‌ಕುಮಾರ್ ಭಾಗವಹಿಸಲಿರುವ ಚಲನಚಿತ್ರೋತ್ಸವ ಉದ್ಘಾಟನ ಕಾರ್ಯಕ್ರಮದಲ್ಲಿ ಅಪ್ಪುಗೆ ವಿಶೇಷ ನಮನ ಸಲ್ಲಿಸಲಾಗುತ್ತದೆ. ಪತ್ನಿ ಅಶ್ವಿನಿ 'ಶಕ್ತಿಧಾಮದ' ಮಕ್ಕಳೊಂದಿಗೆ ಸೆ.27ರಂದು 'ಬೆಟ್ಟದ ಹೂವು' ವೀಕ್ಷಿಸಲಿದ್ದಾರೆ.

ಬರೋಬ್ಬರಿ ₹ 4.50 ಕೋಟಿ ವೆಚ್ಚದಲ್ಲಿ ನಗರವನ್ನು ವಿದ್ಯುತ್ ದೀಪಾಲಂಕಾರಗಳಿಂದ ಝಗಮಗಿಸುವಂತೆ ಮಾಡಲಾಗುತ್ತಿದ್ದು, ಅಲ್ಲಿಯೂ ವಿದ್ಯುತ್ ದೀಪಗಳಿಂದಲೇ ಅಪ್ಪುವಿನ ಮುಖಚಿತ್ರವೂ ಹೊಳೆಯಲಿದೆ. ಪ್ರವಾಸಿಗರು ಈ ಬಾರಿ ರಾಜ-ಮಹಾರಾಜರು ಮತ್ತು ನಾಡಿಗೆ ಕೊಡುಗೆ ನೀಡಿದ ಮಹಾನ್ ವ್ಯಕ್ತಿಗಳೊಂದಿಗೆ ಪುನೀತ್ 'ಬೆಳಕಿನ ರೂಪಕ'ಗಳನ್ನೂ ಕಣ್ತುಂಬಿಕೊಳ್ಳಬಹುದು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರವು ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ರೂಪಿಸುತ್ತಿರುವ 'ಸ್ವಾಡ್ ಮ್ಯೂಸಿಯಂ'ನಲ್ಲೂ ಪುನೀತ್ ಪ್ರತಿಕೃತಿಗಳು ಮೂಡಲಿವೆ. ಸ್ವಾತಂತ್ರ್ಯದ ಅಮೃತ ಮಹೋತ್ಸವ ಬಿಂಬಿಸುವ ಪ್ರಸಂಗಗಳು, ಪ್ರಧಾನಿ ನರೇಂದ್ರ ಮೋದಿ ಮೊದಲಾದವರ ಪ್ರತಿಕೃತಿಗಳೊಂದಿಗೆ ಪುನೀತ್ ಮರಳು ಶಿಲ್ಪವೂ ಗಮನ ಸೆಳೆಯಲಿದೆ. ದಸರಾ ಫಲಪುಷ್ಪ ಪ್ರದರ್ಶನದಲ್ಲೂ 'ಯುವರತ್ನ'ನನ್ನು ಹೂವುಗಳಿಂದಲೇ ಅಲಂಕರಿಸಲಾಗುತ್ತಿದೆ.

ಮೂವರು ಡಿಬಾರ್ • ಕಿರಿಯ ಎಂಜಿನಿಯರ್ ಪರೀಕ್ಷೆಯಲ್ಲೂ ಅಕ್ರಮ?

ಕಳ್ಳಮಾರ್ಗಕ್ಕೆ 'ಬ್ಲೂ ಟೂತ್'

• ರಾಜೇಶ್ ರೈ ಚಟ್ಲ

ಬೆಂಗಳೂರು: ಎಲೆಕ್ಟ್ರಾನಿಕ್ ಉಪಕರಣ 'ಬ್ಲೂ ಟೂತ್' ಬಳಸಿ, ಕಳ್ಳಮಾರ್ಗದ ಮೂಲಕ ಲೋಕೋಪಯೋಗಿ ಇಲಾಖೆಯ (ಪಿಡಬ್ಲ್ಯುಡಿ) ಸಹಾಯಕ ಎಂಜಿನಿಯರ್ (ಎಇ) ಹುದ್ದೆ ಗಿಟ್ಟಿಸಲು ಮೂವರು ಅಭ್ಯರ್ಥಿಗಳು ಯತ್ನಿಸಿರುವುದು ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸಿದ ಆಂತರಿಕ ತನಿಖೆಯಲ್ಲಿ ದೃಢಪಟ್ಟಿದೆ.

ಪಿಡಬ್ಲ್ಯುಡಿ ಕಿರಿಯ ಎಂಜಿನಿಯರ್ (ಜೆಇ) 330 ಮತ್ತು ಸಹಾಯಕ ಎಂಜಿನಿಯರ್ 660 ಹುದ್ದೆಗಳಿಗೆ ಕೆಪಿಎಸ್‌ಸಿ ಇತ್ತೀಚೆಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿತ್ತು.

ಈ ಬಗ್ಗೆ 'ಪ್ರಜಾವಾಣಿ' ಜೊತೆ ಮಾತನಾಡಿದ ಕೆಪಿಎಸ್‌ಸಿ ಕಾರ್ಯದರ್ಶಿ ವಿಕಾಸ್ ಕಿಶೋರ್ ಸುರಳ್ಕರ್, 'ಪರೀಕ್ಷಾ ಅಕ್ರಮ ಎಸಗಿರುವುದು ಸಾಬೀತಾದ ಕಾರಣ ಮೂವರು ಅಭ್ಯರ್ಥಿಗಳು ಮುಂದಿನ ದಿನಗಳಲ್ಲಿ ಯಾವುದೇ ಸರ್ಕಾರಿ ಹುದ್ದೆಗೆ ಅನರ್ಹರಾಗುವಂತೆ ಡಿಬಾರ್ ಮಾಡಲಾಗುವುದು. ಜೆಇ ಹುದ್ದೆಗೆ ನಡೆದ ಪರೀಕ್ಷೆಯಲ್ಲೂ ಕೆಲವರು ಅಕ್ರಮ ನಡೆಸಿರುವ ಅನುಮಾನವಿದ್ದು, ಆಂತರಿಕ ತನಿಖೆ ನಡೆಯುತ್ತಿದೆ' ಎಂದರು.

ಎಇ ಹುದ್ದೆಗಳ ನೇಮಕಾತಿಗೆ 2021ರ ಡಿ. 14ರಂದು ಬೆಂಗಳೂರಿನ ನಾಗರಬಾವಿಯ ಪಾಪರೆಡ್ಡಿ ಪಾಳ್ಯದಲ್ಲಿರುವ ಸೆಂಟ್ ಜಾನ್ ಪ್ರೌಢ

ನಾವು ಈಗಾಗಲೇ ಪ್ರಕಟಿಸಿದ ವೇಳಾಪಟ್ಟಿಯಂತೆ ಫಲಿತಾಂಶಗಳನ್ನು ನೀಡುತ್ತಿದ್ದೇವೆ. ಪಿಡಬ್ಲ್ಯುಡಿ ಜೆಇ ಹುದ್ದೆಗೆ ನಡೆದ ಪರೀಕ್ಷೆಯ ಫಲಿತಾಂಶ ಶುಕ್ರವಾರ (ಸೆ. 23) ಪ್ರಕಟವಾಗಲಿದೆ

ವಿಕಾಸ್ ಕಿಶೋರ್ ಸುರಳ್ಕರ್
ಕೆಪಿಎಸ್‌ಸಿ ಕಾರ್ಯದರ್ಶಿ

ಶಾಲೆಯ ಕೇಂದ್ರದಲ್ಲಿ ಬ್ಲೂ ಟೂತ್ ಬಳಸಿ ಪರೀಕ್ಷೆ ಬರೆಯುತ್ತಿದ್ದ ವೀರೇಂದ್ರಗೌಡ ದೇವೇಂದ್ರಪ್ಪ ಚಿಕ್ಕನಗೌಡ ಎಂಬಾತನನ್ನು ಅನ್ನಪೂರ್ಣೇಶ್ವರಿ ನಗರ ಠಾಣೆಯ ಪೊಲೀಸರು ಬಂಧಿಸಿದ್ದರು. ಈತ ನೀಡಿದ ಮಾಹಿತಿಯಂತೆ ಇತರ ಇಬ್ಬರು ಅಭ್ಯರ್ಥಿಗಳನ್ನು ಬಂಧಿಸಲಾಗಿತ್ತು. ಪೊಲೀಸ್ ತನಿಖೆ ನಡೆಯುತ್ತಿರುವ ಮಧ್ಯೆ, ಪರೀಕ್ಷಾ ಕೇಂದ್ರಗಳ ಮೇಲ್ವಿಚಾರಕರು ನೀಡಿದ ವರದಿ ಆಧರಿಸಿ ಕೆಪಿಎಸ್‌ಸಿ ಆಂತರಿಕವಾಗಿ ವಿಚಾರಣೆ ನಡೆಸಿತ್ತು.

ಈ ಮಧ್ಯೆ, ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಹುದ್ದೆ ಗಿಟ್ಟಿಸಿಕೊಳ್ಳಲು ಒಎಂಆರ್ ಹಾಳೆ ತಿದ್ದುಪಡಿ ಮಾಡಿ ಅಕ್ರಮ ಎಸಗಿರುವ ಮಾದರಿಯಲ್ಲೇ ಲೋಕೋಪಯೋಗಿ ಇಲಾಖೆಯ ಎಇ ಮತ್ತು ಜೆಇ ಹುದ್ದೆ ಗಿಟ್ಟಿಸಿಕೊಳ್ಳಲು ಯತ್ನಿಸಿರುವ ಸಂದೇಹ ವ್ಯಕ್ತಪಡಿಸಿರುವ ಉದ್ಯೋಗಾಕಾಂಕ್ಷಿಗಳು, ತಾತ್ಕಾಲಿಕ ಪಟ್ಟಿಗೆ ಆಯ್ಕೆಯಾದ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆಯ ವೇಳೆ ಒಎಂಆರ್ ಹಾಳೆಯ ಕಾರ್ಬನ್ ಪ್ರತಿ ಕಡ್ಡಾಯವಾಗಿ ಪರಿಶೀಲಿಸಬೇಕು ಎಂದು ಕೆಪಿಎಸ್‌ಸಿ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

'ಕೆಪಿಎಸ್‌ಸಿ ಹೊರಡಿಸಿರುವ ಪರೀಕ್ಷೆಯ ಸೂಚನಾ ಪತ್ರದಲ್ಲಿ, ಒಎಂಆರ್ ಹಾಳೆಯ ಕಾರ್ಬನ್ ಪ್ರತಿಯನ್ನು ಅಂತಿಮ ಆಯ್ಕೆ ಪಟ್ಟಿ ಪ್ರಕಟವಾಗುವವರೆಗೂ ಅಭ್ಯರ್ಥಿಗಳು ಸಂರಕ್ಷಿಸಿ ಇಡಬೇಕು. ಆಯೋಗ ಯಾವುದೇ ಸಂದರ್ಭದಲ್ಲಿ ಹಾಜರುಪಡಿಸುವಂತೆ ಸೂಚಿಸಿದರೆ ತಪ್ಪದೆ ಅದರ ಪ್ರತಿಯನ್ನು ಹಾಜರುಪಡಿಸುವಂತೆ ಸೂಚಿಸಿದೆ. ನೇಮಕಾತಿಯನ್ನು ಪಾರದರ್ಶಕವಾಗಿ ಮಾಡಲು ಜೆಇ ಮತ್ತು ಎಇ ಹುದ್ದೆಗಳ ನೇಮಕಾತಿಯ ದಾಖಲಾತಿಗಳ ಪರಿಶೀಲನೆಯ ವೇಳೆ ಒಎಂಆರ್ ಹಾಳೆಯ ಕಾರ್ಬನ್ ಪ್ರತಿಯನ್ನು ಅಭ್ಯರ್ಥಿಗಳು ಕಡ್ಡಾಯವಾಗಿ ಸಲ್ಲಿಸುವಂತೆ ತಿಳಿಸಬೇಕು. ಒಎಂಆರ್ ತಿದ್ದಿ ಕಳ್ಳ ಮಾರ್ಗದ ಮೂಲಕ ಹುದ್ದೆ ಗಿಟ್ಟಿಸಿಕೊಳ್ಳುವ ಅಭ್ಯರ್ಥಿಗಳನ್ನು ಈ ಮೂಲಕ ಸುಲಭವಾಗಿ ಗುರುತಿಸಿ, ಆಯ್ಕೆಪಟ್ಟಿಯಿಂದ ಹೊರಗಿಡಬಹುದು' ಎಂದೂ ಪತ್ರದಲ್ಲಿ ಕೋರಿದ್ದಾರೆ.

'ಸಂದರ್ಶನಕ್ಕೆ ಕನಿಷ್ಠ, ಗರಿಷ್ಠ ಅಂಕ ನಿಗದಿಪಡಿಸಬೇಕು'

ಗೆಜೆಟೆಡ್ ಪ್ರೊಬೆಷನರಿ 106 ಹುದ್ದೆಗಳ ನೇಮಕಾತಿಗೆ ಇತ್ತೀಚೆಗೆ ನಡೆದ ಸಂದರ್ಶನದಲ್ಲಿ ಪಿ.ಸಿ. ಹೋಟಾ ಸಮಿತಿಯ ನಿಯಮದಂತೆ, 1:3 ಅನುಪಾತದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ 50 ಅಂಕಗಳಿಗೆ ಸಂದರ್ಶನ ನಡೆಸಿ, ಕನಿಷ್ಠ ಶೇ 40 (20) ಮತ್ತು ಗರಿಷ್ಠ ಶೇ 80 (40) ಅಂಕಗಳನ್ನು ನೀಡಲಾಗಿದೆ. ಅದೇ ನಿಯಮವನ್ನು ಎಇ ಹುದ್ದೆಗಳ ಸಂದರ್ಶನಕ್ಕೂ ಅನ್ವಯಿಸಬೇಕು. 2020ರಲ್ಲಿ ಅಧಿಸೂಚನೆ ಹೊರಡಿಸಿದ್ದ ಜಲಸಂಪನ್ಮೂಲ ಇಲಾಖೆಯ ಸಹಾಯಕ ಎಂಜಿನಿಯರ್ ಹುದ್ದೆಗಳಿಗೆ 2021ರ ನವೆಂಬರ್‌ನಲ್ಲಿ ನಡೆದ ಸಂದರ್ಶನದಲ್ಲಿ ಈ ನಿಯಮ ಅನ್ವಯಿಸಿಲ್ಲ. ಹೀಗಾಗಿ, ಕನಿಷ್ಠ 8, 9 ಅಂಕಗಳಿಂದ 48, 49 ಅಂಕ ಗಳಿಸಿದವರು ಆಯ್ಕೆ ಆಗಿದ್ದಾರೆ. ಇದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಹೀಗಾಗಿ, ಲೋಕೋಪಯೋಗಿ ಇಲಾಖೆಯ ಸಂದರ್ಶನದಲ್ಲಿ ಯಾವುದೇ ಅನುಮಾನಗಳಿಗೆ ಎಡೆ ಆಗದಂತೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು' ಎಂದೂ ಕೆಪಿಎಸ್‌ಸಿ ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ ಹುದ್ದೆ ಆಕಾಂಕ್ಷಿಗಳು ಕೋರಿದ್ದಾರೆ.

ಶಿಕ್ಷಕರ ವರ್ಗಾವಣೆ ಮಸೂದೆಗೆ ಅಸ್ತು

ಬೆಂಗಳೂರು: ಶಿಕ್ಷಕರ ವರ್ಗಾವಣೆಯಲ್ಲಿ ಸುಧಾರಣೆ ತರುವ ಉದ್ದೇಶದಿಂದ ರಾಜ್ಯ ಸರ್ಕಾರ ತಂದಿರುವ ಮಸೂದೆಗೆ ವಿಧಾನಸಭೆ ಅಂಗೀಕಾರ ನೀಡಿತು. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ತಿದ್ದುಪಡಿ ಮಸೂದೆ ಒಪ್ಪಿಗೆ ನೀಡಲಾಯಿತು.

ಸರ್ಪ ಸಂಸ್ಕಾರ ಸೇವಾ ದರ ₹1 ಸಾವಿರ ಹೆಚ್ಚಳ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಗೊಳಪಟ್ಟಿರುವ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ, ಸರ್ಪ ಸಂಸ್ಕಾರದ ಸೇವಾ ದರವನ್ನು ₹4,200ಕ್ಕೆ ಏರಿಸಲಾಗಿದೆ. ಸರ್ಪ ದೋಷ ನಿವಾರಣೆಯ ನಂಬಿಕೆಯಿಂದ ಇಲ್ಲಿ ಸರ್ಪ ಸಂಸ್ಕಾರ ನಡೆಯುತ್ತಿದ್ದು, ಈ ಹಿಂದೆ ₹3,200 ದರ ಇತ್ತು.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬಾಗಲಕೋಟೆ ಪ್ರಾದೇಶಿಕ ವಿಭಾಗ, ಬಾಗಲಕೋಟೆ

ದೂರವಾಣಿ ಸಂಖ್ಯೆ: 08354-235769, ಇ-ಮೇಲ್ : dcftbagalkot@gmail.com

ಸಂಖ್ಯೆ: ಬಿ1/ಬಿಯುಡಿ/ಕಾಂಪಾ/ಇ-ಟೆಂಡರ್/22-23 ದಿನಾಂಕ: 21-09-2022

ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, 2022-23ನೇ ಸಾಲಿಗೆ ಬಾಗಲಕೋಟೆ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ವಲಯಗಳಲ್ಲಿ ಮುಂಗಡ ಕಾಮಗಾರಿಗಳನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ www.eproc.karnataka.gov.in ನಲ್ಲಿ ಪ್ರಕಟಿಸಿದಂತೆ, ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: **05-10-2022** ರಂದು ಮಧ್ಯಾಹ್ನ **1-00** ಗಂಟೆಗೆ, ತಾಂತ್ರಿಕ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: **06-10-2022** ರಂದು ಮಧ್ಯಾಹ್ನ **3-00** ಗಂಟೆಗೆ ತೆರೆಯಲಾಗುವುದು. ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಇ-ಟೆಂಡರ್‌ಗಾಗಿ ಭಾಗವಹಿಸಬಹುದು. ಸದರಿ ದಿನಾಂಕಗಳಂದು ಟೆಂಡರ್ ಸ್ವೀಕೃತವಾಗದೇ ಇದ್ದಲ್ಲಿ ಅವಧಿಯು ಸ್ವಯಂಚಾಲಿತವಾಗಿ 3 ದಿನ ವಿಸ್ತರಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ರಜೆ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಕೊಠಡಿ ಸಂಖ್ಯೆ: **220**, ಜಿಲ್ಲಾಡಳಿತ ಭವನ, ನವನಗರ, ಬಾಗಲಕೋಟೆ.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ, ಬಾಗಲಕೋಟೆ ವಿಭಾಗ, ಬಾಗಲಕೋಟೆ.

ವಾ.ಸಾ.ಇ/ಬಾಗಲಕೋಟ/460/2022-23/ದೇಶಪಾಂಡೆಪಬ್ಲಿಸಿಟಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ

ನಂ.ಗ್ರಾಕುನೀ&ನೈವಿ/ಹಾವೇರಿ/ಪಿಬಿ-1/ಟೆಂಡರ್:27/2022-23/1506 ದಿನಾಂಕ:22.09.2022

ಅಲ್ಪಾವಧಿ ಟೆಂಡರ ಪ್ರಕಟಣೆ (1ನೇ & 2ನೇ ಕರೆ)
(E-GOK ಇ-ಪ್ರಕ್ಯೂರಮೆಂಟ್ ಮುಖಾಂತರ ಮಾತ್ರ)

NRDWP JJM ಯೋಜನೆಯಡಿ ಹಿರೇಕೆರೂರ, ಬ್ಯಾಡಗಿ, ಸವಣೂರ ಮತ್ತು ರಾಣೇಬೆನ್ನೂರ ತಾಲೂಕುಗಳಲ್ಲಿ ಈ ಕೆಳಕಂಡ ಗ್ರಾಮಗಳಲ್ಲಿ ಟೆಂಡರ್ ಕರೆಯಲಾಗಿದೆ.

1. E-Procurement ನಲ್ಲಿ ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನ ಮತ್ತು ಸಮಯ : ದಿನಾಂಕ: **06.10.2022 ರ 17:30 ಗಂಟೆವರೆಗೆ, 2.** ಇ-ಪ್ರೊಕ್ಯೂರ್‌ಮೆಂಟ್ ತಾಂತ್ರಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) ದಿನಾಂಕ: **07.10.2022 ರ 17:31 ಗಂಟೆ ನಂತರ, 3.** ಇ-ಪ್ರೊಕ್ಯೂರ್ ಮೆಂಟ್ ಆರ್ಥಿಕ ಬಿಡ್ ತೆರೆಯುವ (ಸಾಧ್ಯವಾದಲ್ಲಿ) ದಿನಾಂಕ: **10.10.2022 ರ 10:00 ಗಂಟೆ ನಂತರ, 4.** ಪ್ರೀ ಬಿಡ್ ಮೀಟಿಂಗ್ ಸ್ಥಳ : Office of the Executive Engineer, Rural Drinking Water & Sanitation Division, Vidyanagar, Old ZP Compound, Haveri-581110. : ದಿನಾಂಕ: **29.09.2022** ರಂದು **ಬೆಳಗ್ಗೆ 11:00 ಗಂಟೆಗೆ**

ಇಂಡೆಂಟ್ ನಂ: 1) 46427, 2) 46496, 3) 46393, 4) 46397, 5) 38905/ CALL-2, 6)46569, 7) 39511/CALL-2, 8)46570, 9) 46571, 10) 46573, 11) 38916/CALL-2, 12) 45367.

ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E GOK ಇ-ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ www.eproc.karnataka.gov.in ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ಸಹಿ/- ಕಾರ್ಯನಿರ್ವಾಹಕ ಇಂಜನೀಯರ್ (ಪ್ರಭಾರ)
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಹಾವೇರಿ

ವಾ.ಸಾ.ಇ/ಹಾವೇರಿ/274/2022-23/ದೇಶಪಾಂಡೆಪಬ್ಲಿಸಿಟಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಗೋವಿಂದರಾಜನಗರ ವಿಭಾಗ, 2ನೇ ಮಹಡಿ, ಶಕ್ತಿ ಸೌಧ, 13ನೇ ಅಡ್ಡರಸ್ತೆ, 4ನೇ ಬಿ ಮುಖ್ಯರಸ್ತೆ, ಎಂ.ಸಿ. ಬಡಾವಣೆ, ವಿಜಯನಗರ, ಬೆಂಗಳೂರು-40.

ಸಂಖ್ಯೆ: ಕಾಪಾಅ(ಗೋರಾನ)/ಟೆಂಡರ್/ಜಿಎಲ್-14/2022-23 ದಿನಾಂಕ: 21.09.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಬಿ) (ದ್ವಿಲಕೋಟೆ ಪದ್ಧತಿ)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
(ಕನಿಷ್ಠ ವೆಚ್ಚ ಆಧಾರಿತ ಆಯ್ಕೆ)

ಕಾರ್ಯಪಾಲಕ ಅಭಿಯಂತರರು, (ಗೋವಿಂದರಾಜನಗರ ವಿಭಾಗ) ಪಶ್ಚಿಮ ವಲಯ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರು ಈ ಕೆಳಕಂಡ ಸೇವೆಗಳಿಗಾಗಿ ಹೆಸರಾಂತ ಸಲಹೆಗಾರರಿಂದ ಬಿಡ್‌ಗಳನ್ನು ಆಹ್ವಾನಿಸಿದೆ. ಈ ಕೆಳಕಂಡ ಕಾಮಗಾರಿಗಳ ಯೋಜನಾ ನಿರ್ವಹಣೆ ಸಲಹಾಸೇವೆಗಳನ್ನು ಒದಗಿಸುವುದು.

ಕಾಮಗಾರಿಗಳ ಹೆಸರು	ಅಂದಾಜು ಮೊತ್ತ (₹.ಕೋಟಿ ಗಳಲ್ಲಿ)	ಟೆಂಡರಿಗಿಟ್ಟ ಮೊತ್ತ (₹.ಗಳಲ್ಲಿ) 1% ಪಿಎಂಸಿಗಾಗಿ	ಇಎಂಡಿ (₹.ಗಳಲ್ಲಿ)
ಗೋವಿಂದರಾಜನಗರ ಕ್ಷೇತ್ರದಲ್ಲಿ ಸಿಸಿಎಂಎಸ್ ವ್ಯವಸ್ಥೆಯೊಂದಿಗಿನ ಎಲ್‌ಇಡಿ ದೀಪಗಳನ್ನು ಒದಗಿಸುವುದು. (ಪ್ಯಾಕೇಜ್-ಗೋರಾನ-11)	18.00	18.00	45000.00
ವಾರ್ಡ್ ಸಂಖ್ಯೆ-105 ಎಂಸಿ ಬಡಾವಣೆ ಅಗ್ರಹಾರದಾಸರಹಳ್ಳಿಯ ವಿವಿಧ ಸೌಲಭ್ಯ ಆಸ್ಪತ್ರೆಯಲ್ಲಿ ಮಾಡ್ಯುಲರ್ ಶಸ್ತ್ರ ಚಿಕಿತ್ಸಾ ಕೊಠಡಿ, ಲಿಕ್ವಿಡ್ ಮೆಡಿಕಲ್ ಆಕ್ಸಿಜನ್ ಸ್ಟೋರೇಜ್ ಟ್ಯಾಂಕ್, ಮೆಡಿಕಲ್ ಗ್ಯಾಸ್ ಪೈಪ್‌ಲೈನ್, 30 ಹಾಸಿಗೆಯುಳ್ಳ ತೀವ್ರ ನಿಗಾ ಘಟಕ ಸ್ಥಾಪಿಸುವುದು ಮತ್ತು ಅಗ್ನಿ ನಿರೋಧಕ ಕಾಮಗಾರಿಗಳು, ಒಳಾಂಗಣ ವಿನ್ಯಾಸ ಕಾಮಗಾರಿಗಳು ಹಾಗೂ ಸಿಸಿಟಿವಿ ವ್ಯವಸ್ಥೆಯೊಂದಿಗೆ ನೆಟ್‌ವರ್ಕಿಂಗ್ ಒದಗಿಸುವುದು. (ಪ್ಯಾಕೇಜ್-ಗೋರಾನ-16)	25.00	25.00	62500.00

ಟೆಂಡರ್ ವೇಳಾಪಟ್ಟಿ: (1) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **27.09.2022**ರ ಮಧ್ಯಾಹ್ನ **3:30** ಗಂಟೆಗೆ ನಡೆಸಲಾಗುವುದು. (2) ಟೆಂಡರ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **30.09.2022**ರ ಸಂಜೆ **4:00** ಗಂಟೆಯವರೆಗೆ. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **01.10.2022**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ವಿಭಾಗ

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಚಿಕ್ಕೋಡಿ.

ನಂ.ಲೋ.ಇ./ಚಿ.ವಿ./ಸ.ಇಂ.-3/ಟೆಂಡರ/2022-23/3750 ದಿನಾಂಕ:21/09/2022

ಅಲ್ಪಾವಧಿ ಇ-ಟೆಂಡರ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2021-22 ನೇ ಸಾಲಿನ ಲೆಕ್ಕ ಶೀರ್ಷಿಕೆ 8443-ಠೇವಣಿ ವಂತಿಕೆ ಅಡಿ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ಶಾಲೆಗಳಿಗೆ ಅಮೃತ ಶಾಲಾ ಸೌಲಭ್ಯ ಯೋಜನೆಯಡಿ 24 ಶಾಲೆಗಳಿಗೆ ಪ್ರಯೋಗಾಲಯ, ಗ್ರಂಥಾಲಯ, ಸ್ಮಾರ್ಟ ತರಗತಿ, ಪಿಠೋಪಕರಣಗಳು ಹಾಗೂ ಸಮಗ್ರಿಗಳನ್ನು ಒದಗಿಸುವುದು (KPWD/2022-23/OW/WORK_INDENT155436) ಕಾಮಗಾರಿಯ ಗುತ್ತಿಗೆ ಇಟ್ಟ ಮೊತ್ತ ರೂ. 145.35 ಲಕ್ಷ ಇರುವ ಕಾಮಗಾರಿಗೆ ಗುತ್ತಿಗೆ ಆಹ್ವಾನಿಸಲಾಗಿದೆ.

ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:ದಿನಾಂಕ:26-09-2022 (11.00 ಗಂಟೆಗೆ), 2)ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:28-09-2022 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:30-09-2022 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):03-10-2022 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"

ಕಾಮಗಾರಿಯ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-895/MCA/2022-23

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಡೆತನದ್ದು)
ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ,
ಕೃಭಾಜನಿನಿ.ಮುಏನೀ ವಿಭಾಗ ನಂ-3 ಬಸವನ ಬಾಗೇವಾಡಿ.
ಜಿಲ್ಲೆ: ವಿಜಯಪುರ. ಇ-ಮೇಲ್: eemli3bb@gmail.com

ಸಂ:ಕೃಭಾಜನಿನಿ/ಮುಏನೀ/ವಿ-3/ಟೆಂಡರ್/2022-23/560 ದಿನಾಂಕ: 21.09.2022

ಶಾರ್ಟ ಟರ್ಮ ಕೋಟೆಶನ್

"Horti-Revanasiddeshwar Lift Irrigation Scheme" ಕಾಮಗಾರಿಗೆ "Supply, Installation, Testing, Commissioning of following components.

ಅ) ಮೆಟಾಲಿಕ ವಾಲ್ಯೂಟ್ ಪಂಪ್ (ಸ್ಟಾಟಿಕ ಹೆಡ್= 152 ಮೀ, ಮೊಟರ ರೇಟಿಂಗ್-9925 ಎಚ್.ಪಿ)-4 ಸಂ
ಆ) ಕಾಸ್ಟ್ ಸ್ಟೀಲ್ ಡಬಲ್ ಫ್ಲ್ಯಾಂಜ್ (ಹೈಡ್ರಾಲಿಕ/ ಇಲೇಕ್ಟ್ರಿಕ್) (1300 ಮೀ.ಮಿ ವ್ಯಾಸ)-4 ಸಂ
ಇ) ಎಮ್ ಎಸ್ ಫ್ಯಾಬ್ರಿಕೆಟೆಡ್ ಫ್ಲ್ಯಾಂಜ್ (1300 ಮೀ.ಮಿ ವ್ಯಾಸ)-4 ಸಂ
ಈ) ಸಿ.ಆಯ್ ಟ್ಯಾಂಪರ ಪ್ರೂಫ್ ಏರ್ ವಾಲ್ವ್ (500 ಮೀ.ಮೀ & 200 ಮೀ.ಮಿ)- 2 ಸಂ
ಉ)ಎಲ್.ಸಿ.ಆಯ್ ಡ್ರೈವ್ ಸೊಫ್ಟ್ ಸ್ಟಾಟಿಂಗ್-11ಕೆವಿ, 7.5 ಎಮ್.ಡ್ಬ್ಲೂ- 2 ಸಂ
ಊ) ವೆಂಟಿಲೆಷನ್ ಸಿಸ್ಟೆಮ್
ಋ) ಡಿವಾಟರಿಂಗ್ ಪಂಪ್ಸ್- 50 ಎಚ್.ಪಿ- 2 ಸಂ
ಎ) ಪಾವರ್ ಟ್ರಾನ್ಸಫಾರ್ಮರ- - 25 ಎಮ್.ವಿ.ಎ , 220/11 ಕೆ.ವಿ ಸ್ಟಾರ್/ಡೆಲ್ಟಾ, 3ಪಿ ಎಚ್, 50 ಹರ್ಡ್ಜ- 2 ಸಂ
ಏ) ನಾನ್ ರಿಟರ್ನಿಂಗ್ ವಾಲ್ವ್-(600 ಮೀ.ಮೀ ವ್ಯಾಸ)- 2 ಸಂ
ಐ) ಫ್ಲೋಟ್ ವಾಲ್ವ್ (300 ಮೀ.ಮೀ ವ್ಯಾಸ)- 2 ಸಂ
ಒ) ಟ್ವಿನ್ ಎರ್ ಕುಷನ ವಾಲ್ವ್- (150 ಮೀ.ಮಿ ವ್ಯಾಸ)- 2 ಸಂ
ಓ) ವಿಎಫ್‌ಡಿ ಡ್ರೈವ್ 11 ಕೆವಿ ಆಲ್ ಎಕ್ಸಸರೀಜ್- 4 ಸಂ
ಅಂ) 11 ಕೆವಿ ಕ್ಯಾಪ್ಯಾಸಿಟಿ ವಾಲ್ ಎಂಟ್ರಿ ಬಸ್ ಡಕ್ಟ್ 9 100 ಎಎಮ್‌ಪಿ/ 500ಎಎಮ್‌ಪಿ)- (400 ಮೀ/ 500 ಮೀ)

ಮೇಲೆ ನಮೂದಿಸಿದ ಕಾಂಪೊನೆಂಟ್‌ಗಳ ಅಧಿಕೃತ ಡಿಸ್ಟ್ರಿಬ್ಯುಟರ್ (ವಿತರಕರು)/ ಮಾರಾಟಗಾರರು/ ಕಂಪನಿಗಳಿಂದ ಕೋಟೆಷನ್ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗೆ ಕೋಟೆಷನ್ ಈ ಕಛೇರಿಗೆ ದಿನಾಂಕ **27-09-2022ರ ಸಾಯಂಕಾಲ 17.30 ಗಂಟೆಯೊಳಗೆ** ಸಲ್ಲಿಸಲು ಸೂಚಿಸಲಾಗಿದೆ. ದರಪಟ್ಟಿ ಕವರಗಳ ಮೇಲೆ ಸ್ಪಷ್ಟವಾಗಿ ದರಪಟ್ಟಿ ಎಂದು ಮೊಹರಬಂದ ಹಾಕಿರಬೇಕು. ಯಾವುದೇ ದರಪಟ್ಟಿ ಸ್ವೀಕರಿಸುವ ಮತ್ತು ರದ್ದುಪಡಿಸುವ ಹಕ್ಕು ಈ ಕಛೇರಿಗೆ ಇರುತ್ತದೆ. ಸಂಪರ್ಕಿಸುವ Email id ವಿಳಾಸ:- **eemli3bb@gmail.com**, ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿದ ಕಛೇರಿಯಲ್ಲಿ ಕೆಲಸದ ಅವಧಿಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,ಕೃಭಾಜನಿನಿ,ಮುಏನೀ ವಿಭಾಗ-03, ಬ.ಬಾಗೇವಾಡಿ

ವಾಸಾಸಂಇ/ವಿಜಯಪುರ/436/ಎಂಸಿಎ/2022-23

NATIONAL INSTITUTE OF MENTAL HEALTH AND NEURO SCIENCES
INSTITUTE OF NATIONAL IMPORTANCE
Hosur Road, Bengaluru, India-560 029. Website: http://www.nimhans.ac.in

Ref. No.: NIMH:A&E-EA:ADMSN:2022-23:Session-2 Date: 23.09.2022

ADMISSION NOTICE

Applications are invited for admission to the following courses under Session 2 of the Academic Year 2022-23:

Ph.D. Programs

Sl. No.	Name of the Course	Availability of guideship slots under External Funding Category *
1	Ph.D. Degree in Biophysics	5
2	Ph.D. Degree in Biostatistics	4
3	Ph.D. Degree in Child & Adolescent Psychiatry	1
4	Ph.D. Degree in Clinical Psychology	20
5	Ph.D. Degree in Clinical Psychopharmacology and Toxicology	3
6	Ph.D. Degree in Human Genetics	3
7	Ph.D. Degree in Mental Health Education	2
8	Ph.D. Degree in Neurochemistry	3
9	Ph.D. Degree in Neuroimaging and Interventional Radiology	9
10	Ph.D. Degree in Neurology	16
11	Ph.D. Degree in Neurological Rehabilitation	2
12	Ph.D. Degree in Neuromicrobiology	3
13	Ph.D. Degree in Neuropathology	2
14	Ph.D. Degree in Neurophysiology	6
15	Ph.D. Degree in Neurovirology	3
16	Ph.D. Degree in Nursing	3
17	Ph.D. Degree in Psychiatric Social Work	18
18	Ph.D. Degree in Psychiatry Ph.D. Degree in History of Psychiatry Ph.D. Degree in Mental Health Rehabilitation	27
19	Ph.D. Degree in Speech Pathology & Audiology	5
20	Ph.D. Degree in Integrative Medicine	3
21	Ph.D. Degree in Psychosocial Support in Disaster Management	2

Post Doctoral Fellowship Programs

Sl. No.	Name of the Course	Total Seats	Seats under Institute Stipendiary Category
1	Postdoctoral Fellowship in Epilepsy	1	1
2	Postdoctoral Fellowship in Movement Disorder	1	1
3	Postdoctoral Fellowship in Neuromuscular Disorder	1	1

* External Funding Category includes applicants applying with Fellowship from External Funding Agencies, Foreign Nationals and permanent / tenured employees Sponsored/ Deputed from various Government Institutions/Universities including candidates working under various projects at NIMHANS. For complete details regarding the same please refer to Session – 2 Prospectus 2022-23. The no. of seats under External Fellowship may vary depending on the availability of laboratory research & other facilities and the faculty- scholar ratio of the respective department.

The Entrance test for Session - 2 will be conducted @ NIMHANS Campus, Bengaluru city only.

Please refer NIMHANS website http://www.nimhans.ac.in for more details.

Sd/-, DIRECTOR, NIMHANS

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಇರ್ವಿನ್ ರಸ್ತೆ, ಮೈಸೂರು-570 001
Ph: +91-0821-2520512 (Off.), 2520803 (Fax)
Website: www.mmcri/karnataka.gov.in
E-mail: mmcrimysore@yahoo.com

ಸಂ.ಸರಬ/ವಿವ/ಕೃರಾಆ/79/2022-23 ಸೆಪ್ಟೆಂಬರ್ 19.09.2022

ಟೆಂಡರ್ ಅಧಿಸೂಚನೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 – ನಿಯಮ 2000 ರಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ಇಲ್ಲಿನ ಆಡಳಿತ ವ್ಯಾಪ್ತಿಯಲ್ಲಿರುವ ಕೆ.ಆರ್. ಆಸ್ಪತ್ರೆಗೆ ಅವಶ್ಯಕತೆಯಿರುವ ಗ್ರೂಪ್ 'ಡಿ' ವೃಂದದ ಹುದ್ದೆಗಳಿಗೆ 01 ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ (ಯಾವುದು ಮೊದಲೊ ಅಲ್ಲಿಯವರೆಗೆ) ಮಾನವ ಸಂಪನ್ಮೂಲ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು ನೋಂದಾಯಿತ ಅಥವಾ ಮಾನ್ಯತೆ ಪಡೆದ ಸಂಸ್ಥೆಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಯನ್ನು ಇ-ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್ http://eproc.karnataka.gov.in ಮೂಲಕ ದಿನಾಂಕ 26.09.2022 ರಿಂದ ಪಡೆಯಬಹುದಾಗಿದ್ದು, ದಿನಾಂಕ 27.10.2022 ರಂದು ಅಪರಾಹ್ನ 5.00 ರೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಇ.ಎಂ.ಡಿ. ಸಲ್ಲಿಸದ ಟೆಂಡರ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಒಂದು ವೇಳೆ ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ, ಮುಂದಿನ ಕೆಲಸದ ದಿನಾಂಕವನ್ನು ಕೊನೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಯಾವುದೇ ಅಧಿಸೂಚನೆ ಹೊರಡಿಸಲಾಗುವುದಿಲ್ಲ.

ಸಹಿ/- ನಿರ್ದೇಶಕರು ಮತ್ತು ಡೀನ್

DIPR/DDMYS/MCA/511/2022-23

ಬೆಂಗಳೂರು ವಿಶ್ವವಿದ್ಯಾಲಯ
NAAC Accredited with 'A' GRADE
ಜ್ಞಾನಭಾರತಿ, ಬೆಂಗಳೂರು-560 056.

ಸಂಖ್ಯೆ: ಸಿಬ್ಬಂದಿ-2/ಇ3/ಅ.ಉ/ಎಪಿಟಿಪಿ/ಆನರ್ಸ್ ಕೋರ್ಸ್/2022 ದಿನಾಂಕ: 22.09.2022

ಪ್ರಕಟಣೆ

2022-23ನೇ ಶೈಕ್ಷಣಿಕ ವರ್ಷಕ್ಕೆ ಬೆಂಗಳೂರು ವಿಶ್ವವಿದ್ಯಾಲಯವು 4 ವರ್ಷದ 1) ಬಿ.ಎ. ಆನರ್ಸ್‌ನಲ್ಲಿ (ಕನ್ನಡ, ಇಂಗ್ಲೀಷ್, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ ಮತ್ತು ಇತಿಹಾಸ) 2. ಬಿ.ಎಸ್ಸಿ, ಅನರ್ಸ್‌ನಲ್ಲಿ (ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಶಾಸ್ತ್ರ ಇಂಗ್ಲೀಷ್ ಮತ್ತು ಕನ್ನಡ) 3) ಬಿ.ಕಾಂ/ಬಿಬಿಎ 4) ಭೂಗೋಳಶಾಸ್ತ್ರ ಮತ್ತು ಜೈವಿಕ ವಿಜ್ಞಾನದಲ್ಲಿ ಬಿ.ಎಸ್ಸಿ/ಎಂ.ಎಸ್ಸಿ ಕೋರ್ಸನ್ನು (Integrated course) ಬೋಧಿಸಲು ಪೂರ್ಣ ಕಾಲಿಕ/ಅರೆಕಾಲಿಕ ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ರಾಷ್ಟ್ರೀಯ ಶಿಕ್ಷಣ ನೀತಿ (NEP) ಅಡಿಯಲ್ಲಿ ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿದೆ. ಯುಜಿಸಿ ನಿಯಮಗಳ ಪ್ರಕಾರ ಆಯಾ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ನಿಗಧಿತ ನಮೂನೆಯಲ್ಲಿ ವಿಶ್ವವಿದ್ಯಾಲಯದ ವೆಬ್‌ಸೈಟ್ **www.bangaloreuniversity.ac.in** ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ಮೂಲಕ ಸಂಬಂಧಿತ ದಾಖಲೆಗಳ ಪ್ರತಿಯೊಂದಿಗೆ ಸಂಬಂಧಿತ ವಿಭಾಗದ ಮುಖ್ಯಸ್ಥರು/ಸಂಯೋಜಕರುಗಳಿಗೆ ದಿನಾಂಕಃ 30-09-2022 ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸುವುದು.

ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನದ ದಿನಾಂಕವನ್ನು ತಿಳಿಸಲಾಗುವುದು, ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಆಯಾಯ ಸಂಬಂಧಿತ ಮಾಖ್ಯಸ್ಥರು / ಸಂಯೋಜಕರನ್ನು ಸಂಪರ್ಕಿಸಬಹುದು.

ಸಹಿ/-,
ಕುಲಸಚಿವರು

ಕರ್ನಾಟಕ ಗೃಹ ಮಂಡಳಿ
ಗೃಹ ಆಯುಕ್ತರವರ ಕಛೇರಿ, 3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009 ದೂರವಾಣಿ: 080-22273511-16

ಸಂಖ್ಯೆ: ಕಗೃಮಂ/ಕಾ.ಪಾ.ಅ/ಹಂಚಿಕೆ/ಪ.ಪ್ರ/2022-23 ದಿನಾಂಕ: 22-09-2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಈ ಕೆಳಕಂಡ ಕ್ರಮ ಸಂಖ್ಯೆ: 1 ರಿಂದ 5 ರವರೆಗಿನ ಬಡಾವಣೆಗಳಲ್ಲಿ ಅಭಿವೃದ್ಧಿಪಡಿಸಿರುವ ಮನೆ/ನಿವೇಶನಗಳಿಗೆ ಅರ್ಜಿಗಳನ್ನು ಆಹ್ವಾನಿಸಿ ಈಗಾಗಲೇ ಹಂಚಿಕೆ ಮಾಡಲಾಗಿದೆ. ನಂತರ ಉಳಿದಿರುವ ಮನೆ/ನಿವೇಶನಗಳನ್ನು ವಿಲೇವಾರಿ ಮಾಡಲು ಆನ್‌ಲೈನ್ ಮುಖಾಂತರ ಸಾರ್ವಜನಿಕರಿಂದ ಆರಂಭಿಕ ಠೇವಣಿಯೊಂದಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಸಾರ್ವಜನಿಕರು e-payment ಮೂಲಕ ಆರಂಭಿಕ ಠೇವಣಿ ಹಣವನ್ನು ಪಾವತಿ ಮಾಡಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 22-10-2022 ಆಗಿರುತ್ತದೆ. ಕ್ರಮಸಂಖ್ಯೆ: 6ರ ಬಡಾವಣೆಯಲ್ಲಿ ಅರ್ಜಿ ಸಲ್ಲಿಸಿ ಹಂಚಿಕೆಯಾಗದ ಅರ್ಜಿದಾರರು ಮಾತ್ರ ಆಯಾ ವರ್ಗಗಳ ನಿವೇಶನ ಕೋರಿ ಯಾವುದೇ ಹೆಚ್ಚುವರಿಯಾಗಿ ಆರಂಭಿಕ ಠೇವಣಿ ಪಾವತಿಸದೇ ಒಪ್ಪಿಗೆ ಪತ್ರ ನೀಡಲು ಕೋರಿದೆ.

ಮನೆ /ನಿವೇಶನಗಳಿಗೆ ಪಾವತಿಸಬೇಕಾಗಿರುವ ನೋಂದಣಿ ಶುಲ್ಕದೊಂದಿಗೆ ಆರಂಭಿಕ ಠೇವಣಿ ಮೊತ್ತ
ರೂ. EWS-25,300/-, LIG-50,500/-, MIG-76,000/-, HIG-I & II- 1,01,500/-

ಕ್ರ. ಸಂ	ಬಡಾವಣೆ	ಲಭ್ಯವಿರುವ ವರ್ಗವಾರು ಒಟ್ಟು ಸ್ವತ್ತುಗಳು	ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆ ದಿನಾಂಕ	ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸ್ಥಳ	ಅರ್ಹ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ	ಷರಾ
1.	ವಿಜಯಪುರ ಜಿಲ್ಲೆ, ಇಟ್ಟಂಗಿಹಾಳ 2ನೇ ಹಂತ	ಮನೆಗಳು LIG- 03 MIG- 10	30-10-2022	02-11-2022	14-11-2022	ಲಾಟರಿ ದಿನಾಂಕವನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು
2.	ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಪಂಜನಹಳ್ಳಿ 3ನೇ ಹಂತ	ನಿವೇಶನ MIG-45 HIG-19	30-10-2022	02-11-2022	14-11-2022	
3.	ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲ್ಲೂಕು ಚಿಕ್ಕಬಾದವಾಡಗಿ	ನಿವೇಶನ LIG-88 MIG-135 HIG-I-44 HIG-II-17	30-10-2022	02-11-2022	14-11-2022	
4.	ದಾವಣಗೆರೆ ಜಿಲ್ಲೆ, ಹರಪನಹಳ್ಳಿ ತಾಲ್ಲೂಕು, ಅನಂತನಹಳ್ಳಿ, ಮೆಳ್ಳೆಕಟ್ಟೆ	ನಿವೇಶನ EWS-43 LIG-24 MIG-09 HIG-I-09 HIG-II-14	30-10-2022	02-11-2022	14-11-2022	
5.	ಗದಗ ಜಿಲ್ಲೆ ಮುಂಡರಗಿ	ನಿವೇಶನ LIG-54 MIG-56 HIG-I- 12 HIG-II-13	30-10-2022	02-11-2022	14-11-2022	
6.	ಬಳ್ಳಾರಿ ಜಿಲ್ಲೆ, ಎನ್.ಜಿ.ಓ. (ಮುಂಡ್ರಿಗಿ) & ಹಲಕುಂದಿ	ನಿವೇಶನ LIG-07 MIG-314 HIG-I- 02 HIG-II-03	30-10-2022	02-11-2022	14-11-2022	ಕೋಳಗಲ್ 1ನೇ ಹಂತದ ಬಡಾವಣೆಯಲ್ಲಿ ಅರ್ಜಿ ಸಲ್ಲಿಸಿ ಹಂಚಿಕೆಯಾಗದ ಅರ್ಜಿದಾರರು ಮಾತ್ರ ಆಯಾ ವರ್ಗಗಳ ನಿವೇಶನ ಕೋರಿ ಒಪ್ಪಿಗೆ ಪತ್ರ ನೀಡಲು ಕೋರಿದೆ.

ಅರ್ಜಿ ನೋಂದಣಿ ಮತ್ತು ಆರಂಭಿಕ ಠೇವಣಿ ಹಣವನ್ನು e-payment ಮೂಲಕ ಪಾವತಿಸಲು ಹಾಗೂ ನಿಯಮ ಮತ್ತು ಷರತ್ತುಗಳ ಪೂರ್ಣ ವಿವರಗಳಿಗಾಗಿ ಮಂಡಳಿಯ ವೆಬ್‌ಸೈಟ್ https://www.khb.karnataka.gov.in ಸಂಪರ್ಕಿಸುವುದು.

ಸಹಿ/-
ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

DIPR/CP/2333/Zenkar/2022-23

ಸಿನಿಮಾ ಪುರವಣಿ



‘ಹಳ್ಳಿಮೇಷ್ಟ್ರ’ ಹುಡ್ಗಿ

ಪಕ್ಕಾ ಪೇಟೆ ಹುಡ್ಗಿ ನಿಶ್ವಿಕಾ ನಾಯ್ಡು ಇದೀಗ ಹಳ್ಳಿ ಹುಡ್ಗಿಯಾಗಿ ಪಿಇಟಿ ಮೇಷ್ಟ್ರ ಹಿಂದೆ ಬಿದ್ದಿದ್ದಾರೆ. ರವಿಚಂದ್ರನ್ ಅಭಿಮಾನಿಯಾಗಿರೋ ಈ ‘ಸೂಜಿ’ ಆಣೆ ಮಾಡಿ ಹೇಳಿದ್ದೇನು...? ಇಲ್ಲಿದೆ ಓದಿ...

ಅಭಿಲಾಷ್ ಪಿ.ಎಸ್.

● **‘ಗುರು ಶಿಷ್ಯರು’ ಪ್ರೊಜೆಕ್ಟ್ ತೆಕ್ಕೆಗೆ ಬಿದ್ದಿದ್ದು ಹೇಗೆ?**

‘ಗುರು ಶಿಷ್ಯರು’ ಸಿನಿಮಾದಲ್ಲಿ ಪಾತ್ರ ದೊರಕಿರುವುದೇ ನನ್ನ ಪುಣ್ಯ. ‘ಜಂಟಲ್‌ಮನ್’ ಸಿನಿಮಾದಲ್ಲಿ ನಾನು ನಿರ್ದೇಶಕ ಜಡೇಶ್ ಅವರ ಜೊತೆ ಕಾರ್ಯನಿರ್ವಹಿಸಿದ್ದೆ. ಅಲ್ಲಿನ ನನ್ನ ಕೆಲಸವನ್ನು ಗುರುತಿಸಿ ಇಲ್ಲಿ ಅವಕಾಶ ನೀಡಿದ್ದಾರೆ. ಒಂದೊಳ್ಳೆಯ ತಂಡವಿದು. ಸಿನಿಮಾದಲ್ಲಿ ಸಾಕಷ್ಟು ವಿಶೇಷವಿದೆ. ನಾನು ಇಲ್ಲಿಯವರೆಗಿನ ಸಿನಿಮಾಗಳಲ್ಲಿ ಮಾಡಿದ್ದ ಪಾತ್ರಕ್ಕಿಂತ ಬಹಳ ಭಿನ್ನವಾದ ಪಾತ್ರ ಈ ಸಿನಿಮಾದಲ್ಲಿದೆ. ಪಕ್ಕಾ ಹಳ್ಳಿ ಹುಡುಗಿಯ ಈ ಪಾತ್ರ ಮಾಡಲು ಸಾಕಷ್ಟು ತಯಾರಿ ಮಾಡಬೇಕು. ಇದಕ್ಕೆ ಒಪ್ಪಿಗೆ ಇದ್ದರಷ್ಟೇ ಸಿನಿಮಾ ಕಥೆ ಹೇಳುತ್ತೇನೆ ಎಂದು ಜಡೇಶ್ ಅವರು ಮೊದಲೇ ತಿಳಿಸಿದ್ದರು. ದೈಹಿಕ ಬದಲಾವಣೆಯಿಂದ ಹಿಡಿದು, ಹಳ್ಳಿ ಹುಡುಗಿಯಾಗಿ ಕಾಣಿಸಿಕೊಳ್ಳಲು ಧರಿಸುವ ಧಿರಿಸು, ಸೈಕಲ್ ಸವಾರಿ ಹೀಗೆ ಆಮೂಲಾಗ್ರ ಬದಲಾವಣೆ, ಹೋಂವರ್ಕ್ ಅಗತ್ಯವಿತ್ತು. ಈ ತಯಾರಿಯ ಫಲಿತಾಂಶವನ್ನು ಪ್ರೇಕ್ಷಕರು ತೆರೆಯ ಮೇಲೆ ನೋಡಬಹುದು.

● **ನೀವೆಸೆದ ಸವಾಲು ಭಾರಿ ಸದ್ದು ಮಾಡಿತು...**

‘ಆಣೆ ಮಾಡಿ ಹೇಳುತೀನಿ’ ಹಾಡಿನ ರೀಲ್ಸ್ ಚಾಲೆಂಜ್ ಸಿನಿಮಾ ಪ್ರಚಾರದ ಭಾಗವಾಗಿತ್ತು. ಹಾಡಿನಲ್ಲಿ ನನ್ನ ಲಂಗದಾವಣಿ ಲುಕ್ ಮೆಚ್ಚುಗೆ ಪಡೆಯಿತು. ಹೀಗಾಗಿ ರೀಲ್ಸ್ ಮಾಡಿ ಹಾಕಿದೆ. ಇದಕ್ಕೆ ದೊರಕಿದ ಪ್ರತಿಕ್ರಿಯೆಯನ್ನು ನಾವು ಕೂಡಾ ಊಹಿಸಿರಲಿಲ್ಲ. ಈ ಚಾಲೆಂಜ್ ಹಾಕಿ ತಿಂಗಳುಗಳೇ ಉರುಳಿದ್ದರೂ, ಇಂದಿಗೂ ಹಲವರು ನನ್ನನ್ನು ಇನ್‌ಸ್ಟಾದಲ್ಲಿ ಟ್ಯಾಗ್ ಮಾಡಿ ರೀಲ್ಸ್ ಮಾಡುತ್ತಿದ್ದಾರೆ. ಹಾಡಿನಲ್ಲಿನ ಹುಕ್‌ಸ್ಟೆಪ್ ಎಲ್ಲರನ್ನೂ ಸೆಳೆದಿದೆ.

● **ಸಿನಿಮಾದಲ್ಲಿ ನೀವು ಎದುರಿಸಿದ ಸವಾಲೇನು?**

ನಾನು ಕರುನಾಡಿನಲ್ಲೇ ಹುಟ್ಟಿಬೆಳೆದವಳು. ಕನ್ನಡವನ್ನು ಚೆನ್ನಾಗಿಯೇ ಮಾತನಾಡುತ್ತೇನೆ. ಆದರೆ ನಗರದಲ್ಲಿ ಬೆಳೆದ ನನಗೆ ಕಷ್ಟವಾಗಿದ್ದು, ಹಳ್ಳಿ ಕಡೆಯ ಸ್ಲ್ಯಾಂಗ್. ಈ ಸ್ಲ್ಯಾಂಗ್ ನನಗೆ ಸ್ವಾಭಾವಿಕವಾಗಿ ಬರಬೇಕಿತ್ತು. ಡಬ್ಬಿಂಗ್ ಮಾಡುವ ಮುಂಚೆ ಹಳ್ಳಿಯ ಕಡೆಯಿಂದ ಒಬ್ಬರು ಬಂದು ನನಗೆ ಈ ಸ್ಲ್ಯಾಂಗ್ ಕಲಿಸಿದ್ದರು. ಹೀಗಾಗಿ ಯಾವುದೇ ನ್ಯೂನತೆ ಇರಬಾರದು ಎಂದು ಚಿತ್ರಕ್ಕೆ ಮೂರು ಬಾರಿ ಡಬ್ಬಿಂಗ್ ಮಾಡಿದ್ದೆ. ನಟನೆ ಮಾಡುವುದು ಕೆಲವೊಮ್ಮೆ ಸುಲಭ, ಆದರೆ ಮುಖ ಭಾವನೆಗೆ ತಕ್ಕಂತೆ ಹಳ್ಳಿ ಭಾಷೆಯಲ್ಲಿ ಡಬ್ಬಿಂಗ್ ಮಾಡುವುದು ಕಷ್ಟ. ಇದಕ್ಕೂ ಸಮಯ ಹಿಡಿಯಿತು. ಜೊತೆಗೆ ಪಾತ್ರಕ್ಕಾಗಿ ನಾನು ಸೈಕಲ್ ಸವಾರಿ ಅಭ್ಯಾಸ ಮಾಡಿದ್ದೆ. ಗಂಡು ಮಕ್ಕಳು ಸವಾರಿ ಮಾಡುವ ಸೈಕಲ್ ಅದು. ಸಿಟಿಯಲ್ಲಿ ಹುಟ್ಟಿಬೆಳೆದ ನನಗೆ ಲಂಗದಾವಣಿ ಉಟ್ಟುಕೊಂಡು ಸೈಕಲ್ ಸವಾರಿ ಮಾಡುವುದು ಸವಾಲಾಗಿತ್ತು. ಇದಕ್ಕಾಗಿ ಇಲ್ಲಿಗೆ ಸೈಕಲ್ ತರಿಸಿಕೊಂಡು ಮನೆ ಮುಂದೆಯೇ ಅಭ್ಯಾಸ ಮಾಡಿದ್ದೆ.

● **ಚಿತ್ರದಲ್ಲಿನ ಪಾತ್ರದ ಕುರಿತು...**

‘ಗುರು ಶಿಷ್ಯರು’ ಚಿತ್ರದಲ್ಲಿ ಹಾಲು ಮಾರುವ ಹಳ್ಳಿ ಹುಡುಗಿ ‘ಸೂಜಿ’ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಸೂಜಿ ರವಿಚಂದ್ರನ್ ಅಭಿಮಾನಿ. ಖಂಡಿತವಾಗಿಯೂ ರವಿಚಂದ್ರನ್ ಅವರ ‘ಹಳ್ಳಿಮೇಷ್ಟ್ರು’ ಸಿನಿಮಾದ ಪ್ರಭಾವ ನನ್ನ ಮೇಲೆ ಬಹಳಷ್ಟಿದೆ. ನಾನು ನಿಜಜೀವನದಲ್ಲೂ ಅವರ ಅಭಿಮಾನಿ. ಸೂಜಿಯದ್ದು ಒಂದು ರೀತಿ ಫಿಲ್ಮಿ ಕ್ಯಾರೆಕ್ಟರ್. ಹಳ್ಳಿಮೇಷ್ಟ್ರಾಗಿ ‘ಮನೋಹರ್’ ಎಂಬ ಪಾತ್ರದಲ್ಲಿ ಶರಣ್ ಇಲ್ಲಿದ್ದಾರೆ. ಅವರನ್ನು ನೋಡಿದ ತಕ್ಷಣ ಸೂಜಿಗೆ ‘ಹಳ್ಳಿಮೇಷ್ಟ್ರು’ ಸಿನಿಮಾದ ರವಿಚಂದ್ರನ್ ನೆನಪಾಗುತ್ತಾರೆ. ಈ ಎರಡು ಪಾತ್ರಗಳ ನಡುವಿನ ಪ್ರೇಮಕಥೆ ಈ ಸಿನಿಮಾ.

● **ಸಿನಿಮಾ ಶೂಟಿಂಗ್ ಅನುಭವ ಹಂಚಿಕೊಳ್ಳಬಹುದೇ...**

ಕೋಕೊ ಕ್ರೀಡೆಯನ್ನು ನಾವು ಗಂಭೀರ ಕ್ರೀಡೆಯಾಗಿ ಯಾವತ್ತೂ ಆಡಿರಲಿಲ್ಲ. ಹಾಗಾಗಿ ಈ ಕ್ರೀಡೆಯ ವಿಷಯಾಧಾರಿತ ಸಿನಿಮಾ ಮಾಡುತ್ತಿದ್ದಾರೆ ಎಂದರೆ ಈ ಕ್ರೀಡೆ ಎಷ್ಟು ಮುಖ್ಯವಾದುದು ಎಂದು ಕಥೆ ಕೇಳಿದ ಮೇಲೆ ತಿಳಿಯಿತು. ಒಬ್ಬ ನಟನನ್ನು ಆಟಗಾರನನ್ನಾಗಿ ಬದಲಾಯಿಸುವುದು ಬಹಳ ಕಷ್ಟ. ಆದರೆ ಸಿನಿಮಾದಲ್ಲಿ ನಟಿಸಿರುವ ಮಕ್ಕಳೆಲ್ಲರೂ ಇದೊಂದು ಸಿನಿಮಾ ಎನ್ನುವುದನ್ನೇ ಮರೆತಿದ್ದರು. ಸಂಜೆ ಚಿತ್ರೀಕರಣ ಇದೆ ಎಂದರೆ ಬೆಳಗ್ಗಿನಿಂದಲೇ ಅಭ್ಯಾಸ ಮಾಡುತ್ತಿದ್ದರು. ‘ನಾಳೆ ಶೂಟಿಂಗ್ ಇದೆ’ ಎನ್ನುವ ಬದಲು ‘ನಾಳೆ ಮ್ಯಾಚ್ ಇದೆ’ ಎನ್ನುವಷ್ಟರ ಮಟ್ಟಿಗೆ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಇದು ನಮಗೂ ಸ್ಫೂರ್ತಿಯಾಗಿತ್ತು. ಕ್ಲೈಮ್ಯಾಕ್ಸ್‌ನಲ್ಲಿ ಶೂಟಿಂಗ್ ಬದಲಾಗಿ ನಿಜವಾಗಿ ನಡೆಯುತ್ತಿರೋ ಪಂದ್ಯಾವಳಿ ನೋಡುತ್ತಿದ್ದೇವೆಯೋ ಎನ್ನುವಂತೆ ಭಾಸವಾಗಿತ್ತು.

● **ನಿಶ್ವಿಕಾ ಮುಂದಿನ ಸಿನಿಪಯಣದ ಹೈಲೈಟ್ಸ್..**

‘ದಿಲ್‌ಪಸಂದ್’ ಒಂದು ರೊಮ್ಯಾಂಟಿಕ್ ಕಾಮಿಡಿ ಸಿನಿಮಾ. ನ.11ಕ್ಕೆ ಇದು ಬಿಡುಗಡೆಯಾಗಲಿದೆ. ‘ಸೂಜಿ’ಗೆ ಪೂರ್ಣ ತದ್ವಿರುದ್ಧವಾದ ಪಾತ್ರ ಇಲ್ಲಿದೆ. ತುಂಬಾ ಬೋಲ್ಡ್ ಆಗಿ ನಾನಿಲ್ಲಿ ಕಾಣಿಸಿಕೊಂಡಿದ್ದೇನೆ. ಈ ರೀತಿ ವಿಭಿನ್ನ ಪಾತ್ರಗಳನ್ನು ಮಾಡುವುದೇ ನನ್ನ ಸಿನಿಪಯಣದ ಗುರಿ. ಯೋಗರಾಜ್ ಭಟ್ ಅವರು ನಿರ್ದೇಶಿಸುತ್ತಿರುವ ‘ಕರಟಕ ದಮನಕ’ ಸಿನಿಮಾದಲ್ಲಿ ಬಹುಭಾಷಾ ನಟ ಪ್ರಭುದೇವ ಅವರ ಜೋಡಿಯಾಗಿ ನಾನು ನಟಿಸುತ್ತಿದ್ದೇನೆ. ಈ ವರ್ಷದ ಸಿನಿಜರ್ನಿ ಅದ್ಭುತವಾಗಿದೆ. ಉಳಿದಂತೆ ಯಾವುದೇ ಸಿನಿಮಾಗಳನ್ನು ಸದ್ಯಕ್ಕೆ ಒಪ್ಪಿಕೊಂಡಿಲ್ಲ.

ಗುರು ಶಿಷ್ಯರು
ನಿಶ್ವಿಕಾ ನಾಯ್ಡು, ಶರಣ್

‘ಮಕ್ಕಳು ಇಲ್ಲಿನ ನಿಜವಾದ ಹೀರೊಗಳು’

‘ಗುರುಶಿಷ್ಯರು ಎನ್ನುವ ಶೀರ್ಷಿಕೆಯಲ್ಲೇ ಅಗಾಧ ಶಕ್ತಿಯಿದೆ. 1981ರಲ್ಲಿ ದ್ವಾರಕೀಶ್ ಅವರ ನಿರ್ಮಾಣದಡಿ ದೊಡ್ಡ ಮೈಲಿಗಲ್ಲು ಸೃಷ್ಟಿಸಿದ ಸಿನಿಮಾ ಅದು. ಇಂಡಸ್ಟ್ರಿಯ ಎಲ್ಲ ಹಾಸ್ಯ ನಟರೂ ಅದರಲ್ಲಿ ನಟಿಸಿದ್ದರು. ಆದರೆ ಆ ಸಿನಿಮಾ ಬೇರೆ, ನಮ್ಮ ಸಿನಿಮಾ ಕಥೆಯೇ ಬೇರೆ. ಅಲ್ಲೂ ಗುರು ಶಿಷ್ಯರ ಸಂಬಂಧ ಇದೆ. ಇಲ್ಲೂ ಇದೇ ಸಂಬಂಧದ ಮೇಲೆ ಕಥೆ ಹೆಣೆಯಲಾಗಿದೆ. ಈ ಕಥಾಹಂದರಕ್ಕೆ ಬೇರೆ ಶೀರ್ಷಿಕೆ ಹೊಳೆಯಲೂ ಇಲ್ಲ. ಇದೊಂದು ಸ್ಪೋರ್ಟ್ಸ್ ಸಿನಿಮಾ. ಕೋಕೊ ಕ್ರೀಡೆಯ ಮೇಲೆ ಚಿತ್ರಕಥೆ ಸಾಗುತ್ತದೆ. ಈ ಕ್ರೀಡೆಯ ಬಗ್ಗೆ ಬಂದ ಮೊದಲ ಕನ್ನಡ ಸಿನಿಮಾ ಇದು’ ಎನ್ನುವುದು ನಟ ಶರಣ್ ಮಾತು.

‘ಬಹಳ ಭಿನ್ನವಾಗಿ ನಾನು ಇಲ್ಲಿ ಕಾಣಿಸಿಕೊಂಡಿದ್ದೇನೆ. ಶರಣ್ ಬೇರೆ ಏನನ್ನೋ ಇಲ್ಲಿ ಪ್ರಯತ್ನಿಸಿದ್ದಾರೆ ಎಂದು ಸಿನಿಮಾ ನೋಡಿದ ವೀಕ್ಷಕರೇ ಹೇಳುತ್ತಾರೆ. ನನ್ನ ಸಿನಿಮಾಗಳ ಬಗ್ಗೆ ಜನರಿಗೆ ನಿರೀಕ್ಷೆ ಇರುತ್ತದೆ. ಅದುವೇ ಕಂಪ್ಲೀಟ್ ಎಂಟರ್‌ಟೈನ್‌ಮೆಂಟ್. ಇದಕ್ಕೆ ಈ ಚಿತ್ರದಲ್ಲಿ ಕೊರತೆ ಇಲ್ಲ. ಆದರೆ ಧಾಟಿ ಬೇರೆಯಿದೆ. ಇದುವರೆಗಿನ ನನ್ನ ನೂರಕ್ಕೂ ಅಧಿಕ ಸಿನಿಮಾಗಳಲ್ಲಿ ಕಾಣದ ಶರಣ್‌ನನ್ನು ನೀವಿಲ್ಲಿ ನೋಡಬಹುದು. 20 ವರ್ಷಗಳ ಸುದೀರ್ಘ ಸಿನಿಪಯಣದಲ್ಲಿ ಮೊದಲ ಬಾರಿಗೆ ಮೀಸೆ ಇಟ್ಟುಕೊಂಡೇ ನಟಿಸಿದ್ದೇನೆ. ಪಿಟಿ ಮಾಸ್ಟರ್ ಆಗಿ ನಾನಿಲ್ಲಿ ಕಾಣಿಸಿಕೊಂಡಿದ್ದು, ಇಲ್ಲಿ ನಟಿಸಿರುವ 13 ಜನ ಮಕ್ಕಳು ಈ ಸಿನಿಮಾದ ನಿಜವಾದ ಹೀರೊ’ ಎನ್ನುತ್ತಾರೆ ಶರಣ್.

ಹಿಟ್ ಆಯಿತು ‘ಕಬ್ಜ’ ಟೀಸರ್

ಸದ್ಯ ಸ್ಯಾಂಡಲ್‌ವುಡ್‌ನಲ್ಲಿ, ಸಾಮಾಜಿಕ ಮಾಧ್ಯಮಗಳಲ್ಲಿ ಎಲ್ಲೆಲ್ಲೂ ರಿಯಲ್ ಸ್ಟಾರ್ ಉಪೇಂದ್ರ ನಟನೆಯ ‘ಕಬ್ಜ’ ಸಿನಿಮಾದ್ದೇ ಚರ್ಚೆ. ಸೆ.17ರಂದು ಬಿಡುಗಡೆಯಾದ ಸಿನಿಮಾದ ಟೀಸರ್ ಇಲ್ಲಿಯವರೆಗೂ 2.6 ಕೋಟಿಗೂ ಅಧಿಕ ವ್ಯೂವ್ಸ್ ಪಡೆದಿದೆ.

ಟೀಸರ್ ಅನ್ನು ಟಾಲಿವುಡ್, ಬಾಲಿವುಡ್ ಮಂದಿಯೂ ಮೆಚ್ಚಿಕೊಂಡಿದ್ದು, ನಿರ್ದೇಶಕ ಆರ್.ಚಂದ್ರು ಅವರ ಕೈಚಳಕಕ್ಕೆ ಭೇಷ್ ಎಂದಿದ್ದಾರೆ. ಮೇಕಿಂಗ್‌ನಿಂದಲೇ ಸಿನಿಮಾದ ಮೇಲೂ ನಿರೀಕ್ಷೆ ಹೆಚ್ಚಾಗಿದೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿರುವ ಸಿನಿಮಾ ಇದೇ ಡಿಸೆಂಬರ್‌ನಲ್ಲಿ ತೆರೆಕಾಣುವ ಸಾಧ್ಯತೆ ಇದೆ.

ಪ್ರಜಾವಾಣಿ ನೋಡಿಯೊ
ಸಿನಿಮಾತು
ನೋಡಲು ಕೋಡ್ ಸ್ಕ್ಯಾನ್ ಮಾಡಿ

ಕೆ.ಜಿ.ಎಫ್‌ಗೆ ಹೋಲಿಕೆ; ಉಪ್ಪಿ ಮಾತು: ಟೀಸರ್ ಬಿಡುಗಡೆಯಾದ ಕೂಡಲೇ ಇದನ್ನು ಕೆ.ಜಿ.ಎಫ್ ಸಿನಿಮಾ ಹಾಗೂ ತೆಲುಗಿನ ಆರ್.ಆರ್.ಆರ್ ಸಿನಿಮಾಗಳಿಗೆ ಹೋಲಿಕೆ ಮಾಡಿ ಹಲವರು ಸಾಮಾಜಿಕ ಮಾಧ್ಯಮಗಳಲ್ಲಿ ಅಭಿಪ್ರಾಯ ಹಂಚಿಕೊಂಡಿದ್ದರು. ಈ ಕುರಿತು ಪ್ರತಿಕ್ರಿಯೆ ನೀಡುತ್ತಾ ‘ಡಿಸೆಂಬರ್ ವೇಳೆಗೆ ಕಬ್ಜ ಸಿನಿಮಾ ಬಿಡುಗಡೆಯಾಗುವ ಸಾಧ್ಯತೆ ಇದೆ. ಮೇಕಿಂಗ್ ಅದ್ಭುತವಾಗಿ ಮೂಡಿಬಂದಿದೆ. ‘ಕಬ್ಜ’ ಟೀಸರ್ ಅನ್ನು ತುಂಬಾ ಜನರು ಕೆ.ಜಿ.ಎಫ್‌ಗೆ ಹೋಲಿಸುತ್ತಿದ್ದಾರೆ. ಇದು ಸಂತೋಷವೇ. ಕೆಜಿಎಫ್ ರೀತಿ ಮತ್ತೊಂದು ಕನ್ನಡ ಸಿನಿಮಾ ಮಾಡುತ್ತಿದ್ದೇವೆ ಎನ್ನುವುದು ಹೆಮ್ಮೆ ಪಡುವ ವಿಚಾರ. ಕೆಲವೊಮ್ಮೆ ಜನರು, ‘ಕೆ.ಜಿ.ಎಫ್ ರೀತಿ ಸಿನಿಮಾ ಮಾಡಿ’ ಎನ್ನುತ್ತಾರೆ. ಅದೇ ರೀತಿ ಮಾಡಿದರೆ, ‘ಕೆ.ಜಿ.ಎಫ್ ರೀತಿ ಮಾಡಿದ್ದಾರೆ’ ಎನ್ನುತ್ತಾರೆ’ ಎಂದು ತಮ್ಮದೇ ಶೈಲಿಯಲ್ಲಿ ನೆಟ್ಟಿಗರ ಕಾಲೆಳೆದರು ಉಪೇಂದ್ರ.

‘ಹೋಲಿಕೆ ಸಹಜ. ಸಿನಿಮಾ ಬಂದ ಮೇಲೆಯೇ ಕೆ.ಜಿ.ಎಫ್ ಕಥೆ, ಸಬ್ಜೆಕ್ಟ್ ಬೇರೆ, ಕಬ್ಜ ಸಬ್ಜೆಕ್ಟ್ ಬೇರೆಯೇ ಎಂದು ಜನರೇ ಅರ್ಥ ಮಾಡಿಕೊಳ್ಳುತ್ತಾರೆ. ಮೇಕಿಂಗ್ ವಿಚಾರದಲ್ಲಿ ಆ ಸೆಟ್‌ಗಳು, ಅದ್ದೂರಿತನದಿಂದ ಕೆ.ಜಿ.ಎಫ್ ರೀತಿ ಕಾಣುವುದು ಸಹಜ’ ಎನ್ನುತ್ತಾರೆ ಉಪೇಂದ್ರ.

‘ಮಾದೇವ’ನ ಖಳ ಕಿಟ್ಟಿ

ನವೀನ್ ರೆಡ್ಡಿ ಬಿ. ಸಾರಥ್ಯದಲ್ಲಿ ಮೂಡಿ ಬರುತ್ತಿರುವ ‘ಮಾದೇವ’ ಸಿನಿಮಾ ಅಖಾಡಕ್ಕೆ ಇದೀಗ ಶ್ರೀನಗರ ಕಿಟ್ಟಿ ಪ್ರವೇಶಿಸಿದ್ದಾರೆ. 80ರ ದಶಕದ ಕಥೆಯನ್ನು ಒಳಗೊಂಡಿರುವ ಈ ಚಿತ್ರದಲ್ಲಿ ವಿನೋದ್ ಪ್ರಭಾಕರ್ ನಾಯಕ. ಶ್ರೀನಗರ ಕಿಟ್ಟಿ ಖಳನಾಯಕ. ‘ಸಮುದ್ರ’ ಎಂಬ ಪಾತ್ರದ ಮೂಲಕ ಶ್ರೀನಗರ ಕಿಟ್ಟಿ ಗ್ಯಾಂಗ್‌ಸ್ಟರ್ ಆಗಿ ಅಬ್ಬರಿಸಲಿದ್ದಾರೆ. ಹಾಗಾಗಿ ಅವರ ಲುಕ್ ಬೇರೆಯೇ ರೀತಿಯಾಗಿದೆ.



ಮಾದೇವ
ಶ್ರೀನಗರ ಕಿಟ್ಟಿ

ಆರ್. ಕೇಶವ್ ದೇವಸಂದ್ರ ‘ಮಾದೇವ’ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ‘ಲವ್ ಗುರು’ ಸಮಂತ್ ಸಹ ನಿರ್ಮಾಪಕರು. ಶ್ರುತಿ, ಅಚ್ಯುತ್ ಕುಮಾರ್, ಕಾಕ್ರೋಚ್ ಸುಧಿ ನಟಿಸುತ್ತಿರುವ ಈ ಚಿತ್ರದಲ್ಲಿ ವಿನೋದ್ ಪ್ರಭಾಕರ್‌ಗೆ ಸೋನಲ್ ಮೊಂತೆರೋ ನಾಯಕಿಯಾಗಿದ್ದಾರೆ. ಬಾಲಕೃಷ್ಣ ಛಾಯಾಗ್ರಹಣ, ಪ್ರದ್ಯೋತ್ತನ್ ಸಂಗೀತ ಸಿನಿಮಾಕ್ಕಿದೆ.

ಹೈದರಾಬಾದ್‌ನ ರಾಮೋಜಿ ಫಿಲ್ಮ್ ಸಿಟಿ, ಮದ್ದೂರು, ಕನಕಪುರ, ಚನ್ನಪಟ್ಟಣ ಭಾಗದಲ್ಲಿ ಶೇಕಡ ಐವತ್ತರಷ್ಟು ಶೂಟಿಂಗ್ ಮುಗಿಸಿರುವ ಚಿತ್ರತಂಡ ಉಳಿದ ಭಾಗದ ಚಿತ್ರೀಕರಣವನ್ನು ಮಲೆನಾಡು ಸೇರಿದಂತೆ ಇತರ ಭಾಗಗಳಲ್ಲಿ ನಡೆಸಲು ಯೋಜನೆ ಹಾಕಿಕೊಂಡಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಸಕಲ ಜೀವಿಗಳ ಬಗ್ಗೆಯೂ ದಯಾಪರರಾಗಿ ಇರಿ. ಇದು, ಅರವತ್ತೆಂಟು ಪುಣ್ಯಕ್ಷೇತ್ರಗಳಲ್ಲಿ ಸ್ನಾನ ಮಾಡುವುದು ಮತ್ತು ಧನದಾನ ಮಾಡುವುದಕ್ಕಿಂತಲೂ ಸಾರ್ಥಕವಾದ ಕೆಲಸ.

–ಗುರು ನಾನಕ್

ಇದು ಯುದ್ಧದ ಯುಗವಲ್ಲ: ಮೋದಿ ಮಾತನ್ನು ಪುಟಿನ್ ಅರ್ಥ ಮಾಡಿಕೊಳ್ಳಬೇಕು

‘ಇದು ಯುದ್ಧದ ಯುಗವಲ್ಲ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರಿಗೆ ಕಳೆದ ವಾರ ನಡೆದ ಶಾಂಘೈ ಸಹಕಾರ ಸಂಘಟನೆಯ ಸಭೆಯಲ್ಲಿ ಹೇಳಿರುವುದು ಭಾರತದ ಅತ್ಯಂತ ದಿಟ್ಟವಾದ ಮತ್ತು ಅರ್ಥಗರ್ಭಿತವಾದ ಸಂದೇಶವಾಗಿದೆ. ಯುದ್ಧನಿರತವಾಗಿರುವ ಎರಡೂ ಕಡೆಗಳಿಗೂ– ರಷ್ಯಾ ಮತ್ತು ಉಕ್ರೇನ್ ಹಾಗೂ ಪಾಶ್ಚಿಮಾತ್ಯ ದೇಶಗಳು– ಭಾರತದ ಧ್ವನಿ ಬಹಳ ಮಹತ್ವದ್ದಾಗಿದೆ. ಏಕೆಂದರೆ, ಬಹುಕಾಲದಿಂದ ಭಾರತವು ಪಾಲಿಸಿಕೊಂಡು ಬಂದಿರುವ ಅಲಿಪ್ತ ವಿದೇಶಾಂಗ ನೀತಿಗೆ ಅನುಗುಣವಾಗಿ ಭಾರತವು ಈ ಯುದ್ಧದ ವಿಚಾರದಲ್ಲಿ ರಾಜಕೀಯವಾಗಿ ತಟಸ್ಥವಾಗಿದೆ; ಎರಡೂ ಕಡೆಯ ದೇಶಗಳ ಜತೆಗೆ ಸ್ನೇಹ ಸಂಬಂಧವನ್ನೇ ಅನುಸರಿಸಿದೆ. ರಷ್ಯಾವನ್ನು ಬಹಿರಂಗವಾಗಿ ಖಂಡಿಸಲು ನಿರಾಕರಿಸಿದರೂ ಯುದ್ಧಕ್ಕೆ ತನ್ನ ಸಮ್ಮತಿ ಇಲ್ಲ ಎಂದು ಪುಟಿನ್ ಅವರಿಗೆ ನೇರವಾಗಿಯೇ ಹೇಳುವ ಮೂಲಕ ಚತುರವಾಗಿ ನಡೆದುಕೊಂಡಿದೆ. ವಿಶ್ವಸಂಸ್ಥೆಯಲ್ಲಿ ರಷ್ಯಾ ವಿರುದ್ಧದ ನಿರ್ಣಯಗಳನ್ನು ಮತಕ್ಕೆ ಹಾಕಿದಾಗ ಭಾರತವು ಮತದಾನದಿಂದ ದೂರ ಉಳಿದಿದೆ. ಆದರೆ, ಮಾನವ ಹಕ್ಕುಗಳ ಉಲ್ಲಂಘನೆಯ ವಿಚಾರದ ನಿರ್ಣಯಗಳ ಪರವಾಗಿ ಮತ ಹಾಕಿದೆ. ಇದು ಯುದ್ಧದ ಯುಗವಲ್ಲ ಎಂಬ ಭಾರತದ ನಿಲುವನ್ನು ನೇರವಾಗಿ ಪುಟಿನ್ ಅವರಿಗೆ ಹೇಳುವುದಕ್ಕೆ ಭಾರತದ ಸೂಕ್ಷ್ಮ, ತತ್ವಬದ್ಧ ಮತ್ತು ವಾಸ್ತವಿಕವಾದ ಧೋರಣೆಯಿಂದಾಗಿಯೇ ಮೋದಿ ಅವರಿಗೆ ಸಾಧ್ಯವಾಗಿದೆ. ಚೀನಾ ಕೂಡ ಸಂದೇಶವನ್ನು ಗಮನದಲ್ಲಿ ಇರಿಸಿಕೊಳ್ಳಬಹುದು. ಪ್ರಾಚೀನ ನಾಗರಿಕತೆ, ವಸಾಹತೋತ್ತರ ದೇಶವಾಗಿ, ಜಗತ್ತಿನ ಅತ್ಯಂತ ದೊಡ್ಡ ಪ್ರಜಾಸತ್ತೆಯಾಗಿ ಮತ್ತು ಅಲಿಪ್ತ ನೀತಿಯ ದೇಶವಾಗಿ ಜಾಗತಿಕ ವೇದಿಕೆಗಳಲ್ಲಿ ಭಾರತದ ಧ್ವನಿಗೆ ಸದಾ ಮನ್ನಣೆ ಇದೆ. ಈಗ, ಪ್ರವರ್ಧಮಾನಕ್ಕೆ ಬರುತ್ತಿರುವ ಶಕ್ತಿ ಎಂಬ ಹೆಸರಿನಲ್ಲಿಯೂ ಭಾರತದ ಧ್ವನಿ ಮಹತ್ವದ್ದೇ ಆಗಿದೆ.

ಮೋದಿ ಅವರ ಸಲಹೆಯು ಯುದ್ಧವನ್ನು ಕೊನೆಗೊಳಿಸಿ ನಷ್ಟವನ್ನು ಕಡಿಮೆ ಮಾಡಿಕೊಳ್ಳುವ ಅವಕಾಶವನ್ನು ಪುಟಿನ್ ಅವರ ಮುಂದೆ ತೆರೆದಿಟ್ಟಿದೆ

ರಷ್ಯಾಕ್ಕೆ ಯುದ್ಧದಲ್ಲಿ ತೀವ್ರ ಹಿನ್ನಡೆ ಆಗಿದೆ. ಉಕ್ರೇನ್‌ನ ಈಶಾನ್ಯ ಭಾಗದಲ್ಲಿ ರಷ್ಯಾ ವಶಪಡಿಸಿಕೊಂಡಿದ್ದ ಕೆಲವು ಪ್ರದೇಶಗಳನ್ನು ಉಕ್ರೇನ್ ಮರಳಿ ಪಡೆದುಕೊಂಡಿದೆ. ಇಂತಹ ಸಂದರ್ಭದಲ್ಲಿ ಮೋದಿ ಅವರು ಯುದ್ಧ ಬೇಡ ಎಂಬ ಹೇಳಿಕೆ ನೀಡಿದ್ದಾರೆ. ರಷ್ಯಾದ ಸೇನೆಯು ಬಹಳ ಬಲಯುತವಾಗಿದೆ ಎಂದು ಜಗತ್ತು ನಂಬುವಂತೆ ಪುಟಿನ್ ಅವರ ದೀರ್ಘ ಆಳ್ವಿಕೆಯು ಮಾಡಿತ್ತು. ಆದರೆ, ಅದು ವಾಸ್ತವವಲ್ಲ ಎಂಬುದನ್ನು ಏಳು ತಿಂಗಳ ಯುದ್ಧವು ತೋರಿಸಿಕೊಟ್ಟಿದೆ. ರಷ್ಯಾ ಸೇನೆಯ ದೌರ್ಬಲ್ಯ ಈಗ ಬಯಲಾಗಿದೆ. ಅತ್ಯುತ್ತಮ ತರಬೇತಿ ಮತ್ತು ಬದ್ಧತೆಯನ್ನಾಗಲೀ ಅತ್ಯಾಧುನಿಕ ಸಲಕರಣೆಗಳನ್ನಾಗಲೀ ಹೊಂದಿಲ್ಲ ಎಂಬುದು ಸಾಬೀತಾಗಿದೆ. ರಷ್ಯಾದ ಅರ್ಥ ವ್ಯವಸ್ಥೆಯನ್ನು ಗಟ್ಟಿಮುಟ್ಟಾಗಿ ಕಟ್ಟುವಲ್ಲಿಯೂ ಪುಟಿನ್ ಅವರು ವಿಫಲರಾಗಿದ್ದಾರೆ ಎಂಬುದು ರಷ್ಯಾದ ಮಟ್ಟಿಗೆ ಇನ್ನಷ್ಟು ಕೆಟ್ಟ ಸುದ್ದಿಯಾಗಿದೆ. ಇಂಧನ ಮತ್ತು ಸೇನಾ ಸಲಕರಣೆ ಉದ್ಯಮವನ್ನು ಬಿಟ್ಟರೆ ಉಳಿದಂತೆ ರಷ್ಯಾದ ಉದ್ಯಮ ವಲಯವು ಬಲಯುತವಾಗಿ ಇಲ್ಲ. ಹಾಗಾಗಿ, ಪಶ್ಚಿಮದ ದೇಶಗಳ ನಿರ್ಬಂಧಗಳನ್ನು ಬಹಳ ಕಾಲ ತಾಳಿಕೊಳ್ಳುವುದು ಸಾಧ್ಯವಿಲ್ಲ.

ಪುಟಿನ್ ಅವರ ವೈಫಲ್ಯವನ್ನು ಇಡೀ ಜಗತ್ತು ನೋಡುತ್ತಿರುವ ಈ ಹೊತ್ತಿನಲ್ಲಿ ಮೋದಿ ಅವರ ಬುದ್ಧಿವಾದ ಎಂದೂ ಹೇಳಬಹುದಾದ ಸಲಹೆಯು ಬಂದಿದೆ. ಈ ಸಲಹೆಯು ಯುದ್ಧವನ್ನು ಕೊನೆಗೊಳಿಸಿ ನಷ್ಟವನ್ನು ಕಡಿಮೆ ಮಾಡಿಕೊಳ್ಳುವ ಅವಕಾಶವನ್ನು ಪುಟಿನ್ ಅವರ ಮುಂದೆ ತೆರೆದಿಟ್ಟಿದೆ. ದುರದೃಷ್ಟವೆಂದರೆ, ಈ ಅವಕಾಶವನ್ನು ಬಳಸಿಕೊಳ್ಳುವಲ್ಲಿಯೂ ಪುಟಿನ್ ವಿಫಲರಾಗಿದ್ದಾರೆ. ಇನ್ನಷ್ಟು ಸೈನಿಕರನ್ನು ನಿಯೋಜಿಸುವುದಾಗಿ ಬುಧವಾರ ಹೇಳಿದ್ದಾರೆ. ಪಶ್ಚಿಮದ ದೇಶಗಳಿಗೆ ಬೆದರಿಕೆ ಒಡ್ಡುವ ಮೂಲಕ ತಮ್ಮ ನಿಲುವನ್ನು ಇನ್ನಷ್ಟು ಕಠಿಣಗೊಳಿಸಿದ್ದಾರೆ. ರಷ್ಯಾದ ಸಾರ್ವಭೌಮತ್ವಕ್ಕೆ ಅಡ್ಡಿ ಎದುರಾದರೆ ಅಣ್ವಸ್ತ್ರದ ಬಳಕೆಯೂ ಆಗಬಹುದು ಎಂದು ನೀಡಿದ್ದ ಹೇಳಿಕೆಯು ಬರಿಮಾತಲ್ಲ ಎಂದೂ ಪುಟಿನ್ ಹೇಳಿದ್ದಾರೆ. ಇದು ತಮ್ಮ ಮುಖ ಉಳಿಸಿಕೊಳ್ಳುವುದಕ್ಕಾಗಿ ಪುಟಿನ್ ಅವರು ಆಡಿದ ಮಾತು ಆಗಿರಬಹುದು. ಆದರೆ ಯುದ್ಧವನ್ನು ಇನ್ನಷ್ಟು ತೀವ್ರಗೊಳಿಸುವ ಪ್ರಯತ್ನ ಮೂರ್ಖತನ. ಉಕ್ರೇನ್‌ಗೆ ಇನ್ನೂ ಹೆಚ್ಚು ಸೈನಿಕರನ್ನು ಕಳುಹಿಸುವ ನಿರ್ಧಾರದ ವಿರುದ್ಧ ರಷ್ಯಾದಲ್ಲಿ ಪ್ರತಿಭಟನೆ ಆರಂಭವಾಗಿದೆ. ದೇಶದ ಒಳಗೆ ಮತ್ತು ಹೊರಗೆ ಯುದ್ಧಕ್ಕೆ ಇಷ್ಟೊಂದು ಪ್ರತಿರೋಧ ವ್ಯಕ್ತವಾಗುತ್ತಿದ್ದರೂ ಪುಟಿನ್ ಅವರು ಮೂಢನಂತೆ ವರ್ತಿಸುತ್ತಿದ್ದಾರೆ. ಪ್ರತಿಭಟನೆ ನಡೆಸಿದ 1300ಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿದೆ. ಯುದ್ಧ ಬೇಡ ಎಂದು ಬುದ್ಧಿಮಾತು ಹೇಳಿದವರನ್ನೇ ದಮನ ಮಾಡಲು ಹೊರಟಿದ್ದಾರೆ. ಯುದ್ಧ ಬೇಡ ಎಂದು ಎಲ್ಲೆಡೆ ವ್ಯಕ್ತವಾಗುತ್ತಿರುವ ಅಭಿಪ್ರಾಯವನ್ನು ಒಂದು ಅವಕಾಶವಾಗಿ ಬಳಸಿಕೊಂಡು ಪುಟಿನ್ ಅವರು ಯುದ್ಧವನ್ನು ಕೊನೆಗಾಣಿಸಬೇಕಿದೆ. ಜಗತ್ತಿನ ಆಹಾರ, ಇಂಧನ, ರಸಗೊಬ್ಬರ ಬಿಕ್ಕಟ್ಟಿಗೆ ಪುಟಿನ್ ಅವರ ಯುದ್ಧವೇ ಕಾರಣ ಎಂಬುದರತ್ತ ಬೊಟ್ಟು ಮಾಡಿದ ಮೋದಿ ಅವರು ಪುಟಿನ್‌ಗೆ ದಿಟ್ಟವಾದ ಸಲಹೆಯನ್ನೇ ಕೊಟ್ಟಿದ್ದಾರೆ. ಈ ಮೂಲಕ ಮುತ್ಸದ್ದಿತನ ಮೆರೆದಿದ್ದಾರೆ. ಜೊತೆಗೆ, ಜಾಗತಿಕ ಮಟ್ಟದಲ್ಲಿ ದೊಡ್ಡ ಪಾತ್ರ ವಹಿಸಲು ಸಿದ್ಧ ಎಂಬ ಸಂದೇಶವನ್ನೂ ಸಾರಿದ್ದಾರೆ. ಭಾರತವು ಸಂಧಾನಕಾರನ ಪಾತ್ರವನ್ನು ವಹಿಸಬಹುದು, ರಷ್ಯಾ ಮತ್ತು ಉಕ್ರೇನ್ ಮಾತುಕತೆಗೆ ವೇದಿಕೆ ಸಿದ್ಧಪಡಿಸಿ, ಯುದ್ಧ ಕೊನೆಯಾಗಲು ನೆರವಾಗಬಹುದು.

ದಿನದ ಟ್ವೀಟ್

ಸ್ಥಳೀಯರಿಗೆ ಆದ್ಯತೆ ಇರಲಿ

ಐಬಿಪಿಎಸ್ (ಬ್ಯಾಂಕಿಂಗ್ ಸಿಬ್ಬಂದಿ ಆಯ್ಕೆ ಸಂಸ್ಥೆ) ನಡೆಸುವ ನೇಮಕಾತಿಯಲ್ಲಿ 2014ಕ್ಕೂ ಮೊದಲಿದ್ದ, ಸ್ಥಳೀಯರಿಗೆ ಮಣೆ ಹಾಕುವ ಕಟ್ಟಲೆಯೊಂದಿಗೆ ಎಲ್ಲಾ ಹಂತದಲ್ಲೂ ಪರೀಕ್ಷೆಗಳನ್ನು ಕನ್ನಡದಲ್ಲಿ ಬರೆಯುವಂತಾದರೆ, ಕನ್ನಡ ಮಾಧ್ಯಮದಲ್ಲಿ ಓದಿದ ಎಷ್ಟೋ ಗ್ರಾಮೀಣ ಕನ್ನಡಿಗರಿಗೆ ಬ್ಯಾಂಕಿಂಗ್ ಕೆಲಸಗಳು ಸಿಗಲಿವೆ. ಉದ್ಯೋಗಕ್ಕಾಗಿ ಕೆಪಿಎಸ್‌ಸಿ ಒಂದನ್ನೇ ನೆಚ್ಚಿಕೊಂಡು ಕೂರುವ ಪ್ರಮೇಯ ಎದುರಾಗುವುದಿಲ್ಲ.

ರಾಮಚಂದ್ರ ಎಮ್., ನಾಗರಿಕ

ಕಿಡಿನುಡಿ

ಉಳ್ಳೇರಹಳ್ಳಿಯ ದಲಿತ ಕುಟುಂಬಕ್ಕೆ ಬಹಿಷ್ಕಾರ ಬೆದರಿಕೆ ಕೇಳಿ ರಕ್ತ ಕುದಿಯುತ್ತಿದೆ. ನಾನೂ ಒಬ್ಬ ದಲಿತ, ನನಗೆ ರಾಷ್ಟ್ರಕವಿ ಕುವೆಂಪು ಆದರ್ಶ. ಆದರೆ ಅವರ ಹೆಸರು ಹೇಳಿ ರಾಜಕೀಯ ಮಾಡುವ ಕೆಲವು ಅವಿವೇಕಿಗಳು ತಾವೂ ಶೂದ್ರರೇ ಅನ್ನೋದು ಮರೆತು ದಲಿತ ಕುಟುಂಬಗಳಿಗೆ ನೀಡುವ ಹಿಂಸೆ, ಬಹಿಷ್ಕಾರವು ಅಮಾನವೀಯ ನಡವಳಿಕೆ. ಇದನ್ನು ಪ್ರಜ್ಞಾವಂತರು ಖಂಡಿಸಬೇಕು.

ರಾಜಶೇಖರ ತಳವಾರ, ಉಪಾಧ್ಯಕ್ಷ, ಕರ್ನಾಟಕ ಪ್ರದೇಶ ವಾಲ್ಮೀಕಿ ಮಹಾಸಭಾ

25 ವರ್ಷಗಳ ಹಿಂದೆ

ಮಂಗಳವಾರ, 23-9-1997

• ಪ್ರಾದೇಶಿಕ ಅಸಮಾನತೆ ಅಧ್ಯಯನಕ್ಕೆ ಸಮಿತಿ

ಹುಬ್ಬಳ್ಳಿ, ಸೆ. 22– ಪ್ರಾದೇಶಿಕ ಅಸಮಾನತೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಸಂಚರಿಸಿ ಅಧ್ಯಯನ ಮಾಡಲು ಮತ್ತು ಅಭಿವೃದ್ಧಿ ಕಾರ್ಯಗಳ ಅನುಷ್ಠಾನ ಮತ್ತು ನ್ಯೂನತೆಗಳ ಕುರಿತು ನಿರಂತರ ನಿಗಾ ವಹಿಸಲು ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಕಾಯಂ ಸಮಿತಿಯೊಂದನ್ನು ರಚಿಸಲು ಇಂದು ಇಲ್ಲಿ ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

‘ಎಲ್ಲ ಜಿಲ್ಲೆಗಳಿಗೆ ಭೇಟಿ ನೀಡಿ ಅಭಿವೃದ್ಧಿ ಕಾರ್ಯಗಳ ಕುರಿತು ಅಧ್ಯಯನ ಮಾಡುವಂತೆ ಈ ಸಮಿತಿಗೆ ಸೂಚಿಸಲಾಗಿದ್ದು, ಸಮಿತಿಯು 3 ತಿಂಗಳ ಒಳಗೆ ವರದಿ ಸಲ್ಲಿಸಬೇಕು ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಹೇಳಿದರು.

• ನ್ಯೂಯಾರ್ಕ್: ಪಂಜಾಬ್ ಪ್ರತ್ಯೇಕತೆ ಅಪಪ್ರಚಾರ– ಗುಜ್ರಾಲ್ ಖಂಡನೆ

ನ್ಯೂಯಾರ್ಕ್, ಸೆ. 22 (ಪಿಟಿಐ)– ಪಂಜಾಬ್ ಅನ್ನು ಭಾರತದಿಂದ ಬೇರ್ಪಡಿಸಬೇಕೆಂದು ಪ್ರತ್ಯೇಕತಾವಾದಿಗಳು ಅಪಪ್ರಚಾರ ಮಾಡುತ್ತಿರುವ ಬಗ್ಗೆ ಪ್ರಧಾನಿ ಐ.ಕೆ. ಗುಜ್ರಾಲ್ ಉಗ್ರವಾಗಿ ಖಂಡಿಸಿದ್ದಾರೆ.

ಅಂತರರಾಷ್ಟ್ರೀಯ ಪಂಜಾಬಿ ಸಂಸ್ಥೆ ಆಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

50 ವರ್ಷಗಳ ಹಿಂದೆ

ಶನಿವಾರ, 23-9-1972

• ಗಡಿ ಸಮಸ್ಯೆ ಉಲ್ಬಣಕ್ಕೆ ರಾಜಕಾರಣಿಗಳೇ ಕಾರಣ: ಅರಸು

ಮುಂಬಯಿ, ಸೆ. 22– ಮೈಸೂರು– ಮಹಾರಾಷ್ಟ್ರ ರಾಜ್ಯಗಳ ಗಡಿವಿವಾದದಿಂದ ಮತ್ತಷ್ಟು ಸಮಸ್ಯೆಗಳನ್ನು ಹುಟ್ಟಿಸುವುದಕ್ಕೆ ರಾಜಕಾರಣಿಗಳೇ ಕಾರಣ ಎಂದು ಮೈಸೂರು ರಾಜ್ಯದ ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ಇಂದು ಆರೋಪಿಸಿದರು.

ಮುಂಬಯಿ ಕರ್ನಾಟಕ ಸಂಘ ಇಲ್ಲಿ ಏರ್ಪಡಿಸಿದ್ದ ಸತ್ಕಾರಕೂಟದಲ್ಲಿ ಮಾತನಾಡುತ್ತಿದ್ದ ಶ್ರೀ ಅರಸು ಅವರು, ‘ವಸತಿ, ಕುಡಿಯುವ ನೀರು ಹಾಗೂ ಅಭಾವದಿಂದ ಉಂಟಾಗಿರುವ ಪರಿಸ್ಥಿತಿ ಇಂದು ಜನತೆಯನ್ನು ಹೆಚ್ಚು ಕಾಡುತ್ತಿರುವ ಪ್ರಶ್ನೆ’ ಎಂದರು.

ಮೈಸೂರು– ಮಹಾರಾಷ್ಟ್ರ ಗಡಿ ವಿವಾದವನ್ನು ಪ್ರಸ್ತಾಪಿಸಿದ ಅವರು, ‘ಮಹಾರಾಷ್ಟ್ರದಲ್ಲಿರುವ ಕನ್ನಡ ಮಾತನಾಡುವ ಜನರಾಗಲಿ ಅಥವಾ ಮೈಸೂರು ರಾಜ್ಯದ ಗಡಿ ಪ್ರದೇಶದಲ್ಲಿರುವ ಮರಾಠಿ ಮಾತನಾಡುವ ಜನರಾಗಲಿ ಈ ಗಡಿವಿವಾದಕ್ಕೆ ಹೆಚ್ಚಿನ ಮಹತ್ವ ಕೊಟ್ಟಿಲ್ಲ. ಆದರೆ, ರಾಜಕಾರಣಿಗಳ ಕಾರಣ ಈ ವಿವಾದಗಳು ಭಾವೋದ್ವೇಗ ಪಡೆದಿವೆ’ ಎಂದರು.

• ಖ್ಯಾತ ಗಣಿತಶಾಸ್ತ್ರಜ್ಞ ಸಿ.ಎನ್. ಶ್ರೀನಿವಾಸ ಅಯ್ಯಂಗಾರ್ ನಿಧನ

ಬೆಂಗಳೂರು, ಸೆ. 22– ಖ್ಯಾತ ಗಣಿತಶಾಸ್ತ್ರಜ್ಞ ಡಾ.ಸಿ.ಎನ್. ಶ್ರೀನಿವಾಸ ಅಯ್ಯಂಗಾರ್ (72) ಅವರು ನಿನ್ನೆ ಇಲ್ಲಿ ನಿಧನರಾದರು.

ಸೆಂಟ್ರಲ್ ಕಾಲೇಜಿನಲ್ಲಿ ಗಣಿತಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಅವರು ಕೆಲ ಕಾಲ ಅದೇ ಕಾಲೇಜಿನ ಪ್ರಿನ್ಸಿಪಾಲ್ ಆಗಿದ್ದರು. ಅವರು ವಾಲ್ಮೀಕಿ ರಾಮಾಯಣವನ್ನು ಕನ್ನಡಕ್ಕೆ ಭಾಷಾಂತರಿಸಿದ್ದರು.

ಪ್ರಭುತ್ವ ಹಾಗೂ ಧರ್ಮವು ಪರಸ್ಪರ ಪ್ರತ್ಯೇಕ ಎಂಬುದು ಮಹತ್ವದ ವಿಚಾರ

ಬ್ರಿಟನ್ನಿನ ರಾಜಪ್ರಭುತ್ವ, ಭಾರತದ ಪ್ರಜಾಪ್ರಭುತ್ವ

ಸೂರ್ಯ-ನಮಸ್ಕಾರ

ಎ. ಸೂರ್ಯಪ್ರಕಾಶ್

ಪಾಶ್ಚಿಮಾತ್ಯ ಮಾಧ್ಯಮಗಳಾದ ಬಿಬಿಸಿ, ಸಿಎನ್‌ಎನ್ ವಾಹಿನಿ ನಿರೂಪಕರು ಹಲವು ಕಾರಣಗಳನ್ನು ಮುಂದಿಟ್ಟುಕೊಂಡು ಭಾರತದ ಬಗ್ಗೆ ಹಗುರವಾಗಿ, ನಕಾರಾತ್ಮಕವಾಗಿ ಮಾತನಾಡುವುದು ಭಾರತೀಯರಿಗೆ ಸಹಜವಾಗಿಬಿಟ್ಟಿದೆ. ಅವರು ಇಂತಹ ಮಾತುಗಳನ್ನು ಸಾಮಾನ್ಯವಾಗಿ ಹಿಂದೂ ಧಾರ್ಮಿಕ ಮತ್ತು ಸಾಮಾಜಿಕ ಆಚರಣೆಗಳ ಬಗ್ಗೆ ಆಡುತ್ತಾರೆ. ಆದರೆ ಈ ವಾಹಿನಿಗಳು ತಮ್ಮ ಸಮಾಜದ ಬಗ್ಗೆ ಗಮನಹರಿಸುವುದು, ಆಧುನಿಕ ಜಗತ್ತಿಗೆ ಸರಿಹೊಂದದ ಅಲ್ಲಿನ ಆಚರಣೆಗಳ ಬಗ್ಗೆ ಅವಲೋಕನ ನಡೆಸುವುದು ಅಪರೂಪ.

ಬ್ರಿಟನ್ನಿನ ರಾಣಿ ಎಲಿಜಬೆತ್ ಸಾವಿನ ಕುರಿತು ಈ ಮಾಧ್ಯಮಗಳಲ್ಲಿ ಹತ್ತು ದಿನಗಳವರೆಗೆ, ಹಗಲು–ರಾತ್ರಿ ಪ್ರಸಾರವಾದ ವರದಿಗಳು, ಅಲ್ಲಿನ ರಾಜಪ್ರಭುತ್ವದ ಕುರಿತ ಪ್ರಶಂಸೆಯ ಅಭಿಪ್ರಾಯಗಳು, ರಾಜಕುಮಾರ ಚಾರ್ಲ್ಸ್ ಅವರನ್ನು ರಾಜನಾಗಿ ಆಡಂಬರದಿಂದ ನೇಮಕ ಮಾಡಿದ ವಿದ್ಯಮಾನ ಇಲ್ಲಿ ಗಮನಿಸಬೇಕಾದ ವಿಷಯ.

ಮೂರನೆಯ ಚಾರ್ಲ್ಸ್ ಅವರನ್ನು ರಾಜ ಎಂದು ಘೋಷಿಸುವ ಸಮಾರಂಭದಲ್ಲಿ ಅವರು ಧರಿಸಿದ್ದ ಉಡುಗೆ, ಅಲ್ಲಿನ ರಾಜಪ್ರಭುತ್ವದ ಚಿಹ್ನೆಗಳನ್ನು ಕಂಡ ಭಾರತೀಯರಿಗೆ ಇವೆಲ್ಲಾ ಯಾವುದೋ ಕಾಲದ್ದು ಎಂದು ಅನ್ನಿಸಿರಬಹುದು. ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ಪರಿಶ್ರಮದ ಕಾರಣದಿಂದಾಗಿ ಭಾರತೀಯರು ತಮ್ಮ ರಾಜರು ಮತ್ತು ರಾಣಿಯರಿಗೆ 75 ವರ್ಷಗಳ ಹಿಂದೆಯೇ ಶುಭವಿದಾಯ ಹೇಳಿಯಾಗಿದೆ. ಸಾಮಾಜಿಕ ಜಾಲತಾಣಗಳು ಹಾಗೂ ಇಂಟರ್ನೆಟ್‌ನ ಈ ಯುಗದಲ್ಲಿ, ರಾಜನಾಗಿ ಅಧಿಕಾರ ಸ್ವೀಕರಿಸಿದ ಘೋಷಣೆಯನ್ನು ಬೇರೆ ಬೇರೆ ಕಡೆಗಳಲ್ಲಿ ಹೊರಡಿಸಿದ್ದು ಅಸಹಜವಾಗಿತ್ತು. ಅದೇನೇ ಇರಲಿ, ಕಳೆದುಹೋದ ಕಾಲದಲ್ಲಿಯೇ ಇರಲು ಬ್ರಿಟಿಷರು ಬಯಸಿದ್ದರೆ ಅದನ್ನು ದೂಷಿಸಲು ನಾವು ಯಾರು?!

ಬದಲಾವಣೆಗೆ ಸಂಬಂಧಿಸಿದ ಪ್ರಕ್ರಿಯೆಗಳು ಹಾಗೂ ಆಚರಣೆಗಳು ಹಲವು ಸಂಗತಿಗಳಲ್ಲಿ ವಿಸ್ತರಿಸಿಕೊಂಡಿವೆ. ಬ್ರಿಟಿಷ್ ಕರೆನ್ಸಿ ಹಾಗೂ ಅಂಚೆ ಚೀಟಿಗಳ ಮೇಲೆ ರಾಣಿಯ ಬದಲು ರಾಜನ ಚಿತ್ರ ಛಾಪಿಸುವುದು, ರಾಷ್ಟ್ರಗೀತೆಯಲ್ಲಿ ಹೆಸರು ಬದಲಾಯಿಸುವುದು ಕೂಡ ಇದರಲ್ಲಿ ಸೇರಿವೆ. ಆದರೆ ಭಾರತದಲ್ಲಿನ ಸಂಪ್ರದಾಯ ಮಾತ್ರ ಇದಕ್ಕೆ ವಿರುದ್ಧ. ನಾವು ನಾಯಕರೊಬ್ಬರು ಮೃತಪಟ್ಟ ನಂತರದಲ್ಲಿ ಅವರ ಕೆಲಸಗಳನ್ನು ನೆನಪಿಸಿಕೊಳ್ಳಲು ಅಂಚೆ ಚೀಟಿ ಹೊರತರುತ್ತೇವೆ. ಬ್ರಿಟನ್ನಿನಲ್ಲಿ ರಾಷ್ಟ್ರಗೀತೆ ‘ಗಾಡ್ ಸೇವ್ ದಿ ಕ್ವೀನ್’ ಎಂದು ಇದ್ದಿದ್ದು, ‘ಗಾಡ್ ಸೇವ್ ದಿ ಕಿಂಗ್’ ಎಂದು ಬದಲಾಗಿದೆ. ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ, ತಾರತಮ್ಯದಿಂದ ರಕ್ಷಣೆಯಂತಹ ಪ್ರಜಾತಂತ್ರದ ಅತ್ಯುತ್ತಮ ಸಂಪ್ರದಾಯದಲ್ಲಿ ಬೆಳೆದುಬಂದ ಭಾರತೀಯರಿಗೆ, ಬ್ರಿಟನ್ನಿನ ಪ್ರಧಾನಿ, ಮಾಜಿ ಪ್ರಧಾನಿಗಳು ಸೇರಿದಂತೆ ಅಲ್ಲಿನ ಪ್ರಮುಖ ರಾಜಕೀಯ ನಾಯಕರು ಮುಂದಿನ ಸಾಲಿನಲ್ಲಿ ನಿಂತುಕೊಂಡು, ಮೂರನೆಯ ಚಾರ್ಲ್ಸ್ ಅವರನ್ನು ಉತ್ತರಾಧಿಕಾರಿ ಎಂದು ಘೋಷಿಸಿದ ಹೊತ್ತಿನಲ್ಲಿ ‘ಗಾಡ್ ಸೇವ್ ದಿ ಕಿಂಗ್’ ಎಂದು ಹಾಡುವುದನ್ನು ಕಂಡು ಅದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಭಾರತದಲ್ಲಿನ ಘೋಷವಾಕ್ಯ ‘ಭಾರತ್ ಮಾತಾ ಕಿ ಜೈ’ ಎಂಬುದಾಗಿರುತ್ತದೆ. ಅಮೆರಿಕನ್ನರು ಇಂತಹ ಸಂದರ್ಭಗಳಲ್ಲಿ ‘ಗಾಡ್ ಸೇವ್ ಅಮೆರಿಕ’ ಎಂದು ಹೇಳುತ್ತಾರೆ.

ಜಗತ್ತಿನ ಅತ್ಯಂತ ದೊಡ್ಡ ಹಾಗೂ ಅತ್ಯಂತ ಚೈತನ್ಯಶಾಲಿಯಾದ ಪ್ರಜಾತಂತ್ರ ವ್ಯವಸ್ಥೆಯಾಗಿರುವ ಭಾರತವನ್ನು ಪಾಶ್ಚಿಮಾತ್ಯ ಮಾಧ್ಯಮಗಳಲ್ಲಿನ ನಿರೂಪಕರು ‘ತಾವೇ ಶ್ರೇಷ್ಠರು’ ಎಂಬ ಭಾವನೆಯಿಂದಲೇ ಕಾಣುವುದಿದೆ. ಈಗಿನ ರಾಜಕೀಯ ಹಾಗೂ ಸಾಮಾಜಿಕ ಬಿಕ್ಕಟ್ಟುಗಳನ್ನು ಉಲ್ಲೇಖಿಸಿ ಅವರು ಭಾರತೀಯರು ಉದಾರವಾದ, ಧರ್ಮನಿರಪೇಕ್ಷ ತತ್ವ ಮತ್ತು ಪ್ರಜಾತಂತ್ರದ ಬಗ್ಗೆ ಹೊಂದಿರುವ ಬದ್ಧತೆಯನ್ನು ಪ್ರಶ್ನಿಸುತ್ತಾರೆ. ಆದರೆ, ಭಾರತವು ಪರಿಪೂರ್ಣ ಪ್ರಜಾತಂತ್ರ ವ್ಯವಸ್ಥೆಯನ್ನು ಹೊಂದಿದೆ, ಇದು ಗಣರಾಜ್ಯವೂ ಹೌದು, ಕಾನೂನಿನ ಎದುರು ಎಲ್ಲರೂ ಸಮಾನರು ಎಂಬ ತತ್ವ ಇಲ್ಲಿದೆ ಮತ್ತು ಧರ್ಮ ಹಾಗೂ ಪ್ರಭುತ್ವ ಇಲ್ಲಿ ಪರಸ್ಪರ ಬೇರೆಬೇರೆ ಇರುತ್ತವೆ ಎಂಬುದನ್ನು ಅವರು ಗ್ರಹಿಸುವುದಿಲ್ಲ. ಬ್ರಿಟನ್ ಅಥವಾ ಯುರೋಪಿನ ಹಲವು ದೇಶಗಳಲ್ಲಿನ ವ್ಯವಸ್ಥೆ ಈ ರೀತಿ ಇಲ್ಲ. ಭಾರತದಲ್ಲಿನ ಈ ಮೌಲ್ಯಗಳು ಸಂವಿಧಾನದಲ್ಲಿ ಗಟ್ಟಿಯಾಗಿ ಅಡಕವಾಗಿವೆ. ಇವು ಭಾರತದ ಅಡಿಪಾಯಗಳಿದ್ದಂತೆ. ಆದರೆ, ಪ್ರಜಾತಂತ್ರದ ಮೂಲ ಅಗತ್ಯಗಳಾಗಿರುವ ಈ ಮೌಲ್ಯಗಳು ಬ್ರಿಟನ್ನಿನಲ್ಲಿ ಇಲ್ಲ.

ಈ ವಿಚಾರವಾಗಿ ಒಂದಿಷ್ಟು ವಿವರ ನೀಡಬೇಕು. ಗಣರಾಜ್ಯವು (ಇಲ್ಲಿ ಪ್ರಭುತ್ವದ ಮುಖ್ಯಸ್ಥರು ಚುನಾಯಿತರಾಗಿರುತ್ತಾರೆ) ಪ್ರಜಾತಾಂತ್ರಿಕ ಪರಂಪರೆಗಳಿಗೆ ರಾಜಪ್ರಭುತ್ವಕ್ಕಿಂತಲೂ ಹೆಚ್ಚು ಹತ್ತಿರವಾಗಿರುತ್ತದೆ. ರಾಜಪ್ರಭುತ್ವದಲ್ಲಿ ರಾಜ ಅಥವಾ ರಾಣಿ ಇತರರಿಗಿಂತ ದೊಡ್ಡದಾದ ಸ್ಥಾನಮಾನ ಹೊಂದಿರುತ್ತಾರೆ. ಆದರೆ ನಮ್ಮ ದೇಶದ ಮುಖ್ಯಸ್ಥರು– ಅಂದರೆ ರಾಷ್ಟ್ರಪತಿ– ಎಲ್ಲ ರಾಜ್ಯಗಳ ಶಾಸಕರು ಮತ್ತು ಸಂಸದರ ಮೂಲಕ ಚುನಾಯಿತ ಆಗುತ್ತಾರೆ. ರಾಷ್ಟ್ರಪತಿ ಹುದ್ದೆ ವಂಶಪಾರಂಪರ್ಯವಾಗಿ ಬರುವುದಲ್ಲ; ಈ ಸ್ಥಾನಕ್ಕೆ ಏರುವ ಬಯಕೆಯನ್ನು ಭಾರತೀಯರೆಲ್ಲರೂ ಇರಿಸಿಕೊಳ್ಳಬಹುದು. ಭಾರತವು ಬೇರೆ ಬೇರೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ ಹಿನ್ನೆಲೆಗಳ ರಾಷ್ಟ್ರಪತಿಗಳನ್ನು ಈವರೆಗೆ ಕಂಡಿದೆ. ಬೇರೆ ಬೇರೆ ಪ್ರದೇಶಗಳು ಹಾಗೂ ಧರ್ಮಗಳಿಗೆ ಸೇರಿದವರು ನಮ್ಮ ರಾಷ್ಟ್ರಪತಿ ಆಗಿದ್ದಾರೆ– ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ಹಿಂದೂ, ಮುಸ್ಲಿಂ, ಸಿಖ್... ಹೀಗೆ ಹಲವು ಹಿನ್ನೆಲೆಗಳಿಗೆ ಸೇರಿದವರು ಈ ಹುದ್ದೆಗೆ ಏರಿದ್ದಾರೆ. ವೈವಿಧ್ಯಮಯವಾಗಿರುವ ಹಿಂದೂ ಸಮಾಜದ ಬೇರೆ ಬೇರೆ ಜಾತಿಗಳಿಗೆ, ಸಮುದಾಯಗಳಿಗೆ ಸೇರಿದವರು ರಾಷ್ಟ್ರಪತಿ ಆಗಿದ್ದಾರೆ. ಕಾಯಸ್ಥ, ರೆಡ್ಡಿ, ದಲಿತ, ಬ್ರಾಹ್ಮಣ ಸಮುದಾಯಗಳಿಗೆ ಸೇರಿದವರು ಈ ಹುದ್ದೆಗೆ ಏರಿದ್ದಾರೆ. ಈಗ ನಮ್ಮ ರಾಷ್ಟ್ರಪತಿ ಆಗಿರುವ ದ್ರೌಪದಿ ಮುರ್ಮು ಅವರು ಆದಿವಾಸಿ ಸಮುದಾಯಕ್ಕೆ ಸೇರಿದವರು. ಹೀಗಾಗಿ, ಈ ಸ್ಥಾನವು ಎಲ್ಲರಿಗೂ ಮುಕ್ತವಾಗಿದೆ. ಇದು ಒಂದು ಧರ್ಮ ಅಥವಾ ಒಂದು ವಂಶಕ್ಕೆ ಮೀಸಲಾಗಿರುವುದಲ್ಲ.

ಆದರೆ, ಬ್ರಿಟಿಷ್ ರಾಜನು ಚರ್ಚ್ ಆಫ್ ಇಂಗ್ಲೆಂಡ್‌ಗೆ ನಿಷ್ಠೆ ತೋರಬೇಕಾಗುತ್ತದೆ. ‘ನಾನು ಧರ್ಮವನ್ನು ರಕ್ಷಿಸುತ್ತೇನೆ’ ಎಂಬ ಪ್ರಮಾಣ ಸ್ವೀಕರಿಸಬೇಕಾಗುತ್ತದೆ. ರೋಮನ್ ಕ್ಯಾಥೊಲಿಕ್ ಸಂಪ್ರದಾಯಕ್ಕೆ ಸೇರಿದವರು ಬ್ರಿಟನ್ನಿನ ಸಿಂಹಾಸನ ಏರುವಂತಿಲ್ಲ ಎಂಬುದು ಭಾರತದಲ್ಲಿ ಹಲವರಿಗೆ ಗೊತ್ತಿರಲಿಕ್ಕಿಲ್ಲ. ಅಲ್ಲಿನ ರಾಜನು ತಾನು ಪ್ರೊಟೆಸ್ಟೆಂಟ್ ಪಂಥಕ್ಕೆ ಸೇರಿದವನು, ಚರ್ಚ್ ಆಫ್ ಇಂಗ್ಲೆಂಡ್‌ಗೆ ನಿಷ್ಠೆ ಹೊಂದಿರುವವನು ಎಂದು ಘೋಷಿಸಬೇಕಾಗುತ್ತದೆ. ಬ್ರಿಟನ್ನಿನ ರಾಜ ಆಗಿರುವವರು 16ನೆಯ ಶತಮಾನದಿಂದಲೇ ಚರ್ಚ್ ಆಫ್ ಇಂಗ್ಲೆಂಡ್‌ನ ಅತ್ಯುನ್ನತ ನಾಯಕ ಆಗಿಯೂ ಕೆಲಸ ಮಾಡುತ್ತ ಬಂದಿದ್ದಾರೆ. ಭಾರತದಲ್ಲಿ ವಿವಾಹದ ವಿಚಾರದಲ್ಲಿ ಸಂವಿಧಾನ ಯಾವುದೇ ನಿರ್ಬಂಧ ಹೇರುವುದಿಲ್ಲ. ಆದರೆ, ಬ್ರಿಟನ್ನಿನ ಸಿಂಹಾಸನ ಏರಲಿರುವ ವ್ಯಕ್ತಿಯು ರಾಜನ ಅನುಮತಿ ಇಲ್ಲದೆ ಮದುವೆ ಆಗುವಂತಿಲ್ಲ. ಇದನ್ನು ಉಲ್ಲಂಘಿಸಿದರೆ ಸಿಂಹಾಸನ ಏರುವ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಇವೆಲ್ಲ ಅದೆಷ್ಟರಮಟ್ಟಿಗೆ ಉದಾರವಾದಿ, ಧರ್ಮನಿರಪೇಕ್ಷ ಹಾಗೂ ಪ್ರಜಾತಾಂತ್ರಿಕ?

ಪ್ರಭುತ್ವ ಹಾಗೂ ಧರ್ಮವು ಪರಸ್ಪರ ಪ್ರತ್ಯೇಕ ಎಂಬುದು ಮಹತ್ವದ ವಿಚಾರ. ಭಾರತದ ಸಂವಿಧಾನವು, ಸರ್ಕಾರದ ಅನುದಾನದಲ್ಲಿ ನಡೆಯುವ ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ನಿರ್ದೇಶನಗಳು ಇರುವಂತಿಲ್ಲ ಎಂದು ಗಟ್ಟಿಯಾಗಿ ಹೇಳುತ್ತದೆ (ಸಂವಿಧಾನದ 28ನೇ ವಿಧಿ). ಭಾರತದ ರಾಷ್ಟ್ರಪತಿಯು ‘ಸಂವಿಧಾನವನ್ನು ರಕ್ಷಿಸುವ’ ಪ್ರಮಾಣ ಮಾಡುತ್ತಾರೆ. ಬ್ರಿಟಿಷ್ ರಾಜ ‘ಧರ್ಮವನ್ನು ರಕ್ಷಿಸುವ’ ಪ್ರಮಾಣ ಸ್ವೀಕರಿಸುತ್ತಾರೆ. ಚರ್ಚ್ ಆಫ್ ಸ್ಕಾಟ್ಲೆಂಡ್ ಅನ್ನು ರಕ್ಷಿಸುವ ಪ್ರಮಾಣವನ್ನು ಕೂಡ ಅವರು ಮಾಡುತ್ತಾರೆ.

ಭಾರತವು ಗಣರಾಜ್ಯವಾದ ನಂತರ ಜನಿಸಿದ ಮೂರು ತಲೆಮಾರುಗಳ ಜನ, ಇಷ್ಟೆಲ್ಲ ಸಂಭ್ರಮ ಏಕೆ ಎಂದು ಪ್ರಶ್ನಿಸಬಹುದು. ಸೆಪ್ಟೆಂಬರ್‌ನಲ್ಲಿ ಬ್ರಿಟನ್ನಿನಿಂದ ಬಂದ ವರ್ತಮಾನವು ನಮಗೆ ನಮ್ಮ ಪ್ರಜಾತಂತ್ರವು ಅದೆಷ್ಟು ಪ್ರಗತಿಪರವಾಗಿದೆ ಎಂಬ ಬಗ್ಗೆ ಅವಲೋಕನ ನಡೆಸಲು ಪ್ರೇರಣೆ ನೀಡಬೇಕು. ಭಾರತವು ವಿಶ್ವದ ಅತಿದೊಡ್ಡ ಪ್ರಜಾತಂತ್ರ ಮಾತ್ರವೇ ಅಲ್ಲ, ಇದು ವಿಶ್ವದ ಅತ್ಯಂತ ಹೆಚ್ಚು ವಿಕಾಸ ಹೊಂದಿದ ಪ್ರಜಾತಂತ್ರವೂ ಹೌದು ಎಂಬುದರಲ್ಲಿ ಅನುಮಾನ ಇಲ್ಲ.

ಚುರುಮುರಿ

ಹಳೆ ಕೇಸು, ಹೊಸ ತನಿಖೆ!

• ಬಿ.ಎನ್.ಮಲ್ಲೇಶ್

‘ಪಪ್ಪಾ ಎಲ್ಲಿದೀರಿ? ಒಂದು ಪ್ರಾಬ್ಲಂ ಆಗಿಬಿಟ್ಟಿದೆ...’

‘ಯಾಕಮ್ಮ ಏನಾಯ್ತು? ಅಳಿಯಂದ್ರು, ಮಕ್ಕಳು ಎಲ್ಲ ಆರಾಮಿದಾರೆ ತಾನೆ?’

‘ಎಲ್ಲ ಆರಾಮಿದಾರೆ ಪಪ್ಪ, ಆದ್ರೆ...’

‘ಆದ್ರೆ ಏನು? ಅಳಿಯಂದ್ರು ಮೊನ್ನೆ ತಾನೇ ಪ್ರಮೋಶನ್ ಮೇಲೆ ಇನ್‌ಸ್ಪೆಕ್ಟರು ಆಗಿದಾರೆ, ಟ್ರಾನ್ಸ್‌ಫರ್ ಏನಾದ್ರೂ?’

‘ಅಯ್ಯೋ ಅದೆಲ್ಲ ಏನಿಲ್ಲಪ್ಪ, ಅವರ ಪೊಲೀಸ್ ಕೆಲ್ಸದ್ದೇ ಸಮಸ್ಯೆ...’

‘ಯಾಕಮ್ಮ, ಲೋಕಾಯುಕ್ತ, ಇನ್‌ಕಂ ಟ್ಯಾಕ್ಸ್ ರೇಡೇನಾದ್ರೂ...’

‘ಅಂಥದಕ್ಕೆಲ್ಲ ಸಿಕ್ಕಾಕೋತಾರಾ ಇವ್ರು? ಅದೆಲ್ಲ ಸೇಫಾಗಿ ಎಲ್ಲೆಲ್ಲಿರಬೇಕೋ ಅಲ್ಲಲ್ಲಿದೆ’.

‘ಮತ್ತೇನು? ಮೇಲಧಿಕಾರಿಗಳ ಕಿರುಕುಳನಾ? ಹಂಗೇನಾದ್ರೂ ಇದ್ರೆ ಹೇಳು, ಸರ್ಕಾರದಲ್ಲಿ ನಂಗೂ ಇನ್‌ಫ್ಲುಯೆನ್ಸ್ ಇದೆ, ಸರಿ ಮಾಡೋಣ’.

‘ಅದೇ... ಸರ್ಕಾರದ್ದೇ ಸಮಸ್ಯೆ. ನೀವು ಇವ್ರಿಗೆ ಸಬ್‌ಇನ್‌ಸ್ಪೆಕ್ಟರ್ ಕೆಲ್ಸ ಕೊಡ್ಸಿ ಹದಿನೈದು ವರ್ಷ ಆತು. ಈಗ ಸರ್ಕಾರದೋರು ಆವತ್ತಿನ ನೇಮಕಾತಿ ಬಗ್ಗೆ ತನಿಖೆ ಮಾಡಿಸ್ತಾರೆ ಅಂತ ಪೇಪರ್‌ನಲ್ಲಿ ಬಂದಿತ್ತು. ಅದ್ಕೆ ಇವರು ಟೆನ್ಷನ್ ಆಗಿಬಿಟ್ಟಿದಾರೆ’.

‘ಅಷ್ಟೇನಾ? ನನ್ನ ನಿವೃತ್ತಿಗೆ ಇನ್ನು ಎರಡು ವರ್ಷ ಐತೆ, ಈಗ ನಾನು ನೇಮಕ ಆದ ಕಾಲದಿಂದ್ಲೂ ತನಿಖೆ ಮಾಡಿಸ್ತೀನಿ ಅಂದ್ರೆ? ಅದಕ್ಕೆಲ್ಲ ಹೆದರ್ಕಂತಾರಾ? ನೀನೊಳ್ಳೆ’.

‘ಅಲ್ಲಪ್ಪಾ... ಇವ್ರು ಫಿಜಿಕಲ್ ಟೆಸ್ಟು, ರಿಟನ್ ಟೆಸ್ಟು ಯಾವುದೂ ಪಾಸಾಗಿರ್ಲಿಲ್ಲ. ನೀವು ಅದೆಲ್ಲ ಸರಿ ಮಾಡ್ಸಿ ಯಾರ್‍ಯಾರಿಗೆ ಏನೇನ್ ಕೊಡ್ಬೇಕೋ ಕೊಟ್ಟು ಸಬ್‌ಇನ್‌ಸ್ಪೆಕ್ಟರ್ ಕೆಲ್ಸ ಕೊಡ್ಸಿದ್ರಿ. ಈಗ ಅದೆಲ್ಲ ಬಯಲಿಗೆ ಬಂದ್ರೆ?’

‘ಅಲ್ಲಮ್ಮ, ಕೊಟ್ಟೋರು ನಾವಾದ್ರೂ ಇಸ್ಕಂಡೋರು ಸಿಗಬೇಕಲ್ಲ’.

‘ಯಾಕೆ? ಸಿಗಲ್ಲಾಂತೀರ?’

‘ಸಿಗಬಹುದು, ಅವರನ್ನ ಹಿಡೀಬೇಕಂದ್ರೆ ಸಿಐಡಿಯೋರು ಯಮಲೋಕಕ್ಕೆ ಹೋಗಬೇಕಾಗುತ್ತೆ’.

‘ಯಾಕೆ?’

‘ಯಾಕಂದ್ರೆ ನಮ್ಮತ್ರ ದುಡ್ಡಿಸ್ಕಂಡೋರು ಈಗ ಅಲ್ಲೇ ಇರೋದು!’

ಸಂಗತ

ವೇದಗಣಿತ: ವೇದದಲ್ಲುಂಟೇ? ಅದು ಗಣಿತವೇ?

ತ್ವರಿತ ಗಣಿತವು ಅಧಿಕ ಅಂಕ ತಂದುಕೊಡಬಹುದು, ಆದರೆ...

• ಬಿ.ಎಸ್.ಭಗವಾನ್

ವೇದ ಎಂದರೆ ಪೂರ್ಣ ಜ್ಞಾನ ಅಥವಾ ಅರಿವು. ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ- ಹೀಗೆ ನಾಲ್ಕು ವೇದಗಳು. ಪ್ರಕೃತಿ, ಪರಿಸರ, ಲೋಕ ವ್ಯವಹಾರ, ಬದುಕಿನ ರೀತಿ ನೀತಿಗಳೊಂದಿಗೆ ಅನುಸಂಧಾನಿಸುವ ವೇದ ಆ ಕಾಲದಲ್ಲಿನ ಮನುಷ್ಯನ ಮಿದುಳಿನಲ್ಲಿ ಬಂದ, ಸಂದ ಅಮೋಘ ಹೊಳಹುಗಳ ಬುತ್ತಿ.

19- 20ನೇ ಶತಮಾನದ ಪ್ರಸಿದ್ಧ ಗಣಿತಜ್ಞ, ಜರ್ಮನಿಯ ಡೇವಿಡ್ ಹಿಲ್ಬರ್ಟ್ ‘ಗಣಿತಕ್ಕೆ ಪಂಥ, ಪಂಗಡ, ಪ್ರಾಂತ್ಯ, ಭಾಷೆಯ ಹಂಗಿಲ್ಲ’ ಎಂದಿರುವುದು ಎಲ್ಲ ಜ್ಞಾನ, ವಿಜ್ಞಾನಕ್ಕೂ ಅನ್ವಯಿಸುತ್ತದೆ. ವೇದಗಳ ಯಾವ ಭಾಗದಲ್ಲೂ ಗಣಿತದ ಉಲ್ಲೇಖಗಳಿಲ್ಲ. ಅಥರ್ವವೇದದಲ್ಲಿ ‘ಶುಲ್ಬ ಸೂತ್ರಗಳು’ ಎಂಬ ಭಾಗ ಗಮನಾರ್ಹ. ಇಲ್ಲಿ ಜ್ಯಾಮಿತಿಯ ರಚನೆಗಳ ವಿವರಗಳಿವೆ. ನಕ್ಷೆ, ಚಿತ್ರ, ಆಕೃತಿಗಳ ಪ್ರಸ್ತಾಪವಿದೆ. ಯಜ್ಞ, ಯಾಗಗಳಲ್ಲಿ ಹೋಮಕುಂಡಗಳ ಅಳತೆ ಎಷ್ಟಿರಬೇಕು, ಯಾವ ಆಕಾರದಲ್ಲಿ, ಯಾವ ಅನುಪಾತದಲ್ಲಿ ಇರಬೇಕೆಂಬ ನಿರ್ದೇಶನವಿದೆ. ‘ಶುಲ್ಬ ಸೂತ್ರಗಳು’ ವೇದ ಕಾಲದ ಗಣಿತ ಜ್ಞಾನಮೂಲ, ಭಾರತದ ಹೆಗ್ಗಳಿಕೆ.

ಪುರಿಯ ಗೋವರ್ಧನ ಮಠದ ಯತಿಗಳಾಗಿದ್ದ ಭಾರತೀಕೃಷ್ಣ ತೀರ್ಥಜೀ (1884- 1960) ರೂಢಿಸಿಕೊಂಡಿದ್ದ ಗಣಿತಾಸಕ್ತಿ, ಅಧ್ಯಯನ ಮತ್ತು ಸಂಶೋಧನಾ ಪ್ರವೃತ್ತಿ ಬಗ್ಗೆ ಎರಡು ಮಾತಿಲ್ಲ. ತಾವು ಅಥರ್ವವೇದವನ್ನು ಆಮೂಲಾಗ್ರವಾಗಿ ಅಧ್ಯಯನ ನಡೆಸಿದ್ದರ ತಾತ್ಪರ್ಯವೇ ‘ವೇದಗಣಿತ’ ಎಂದವರು ಸಾರಿದರು. ಭಾರತೀಕೃಷ್ಣರ ನಿಧನದ ನಂತರ ಅವರ ಶಿಷ್ಯಂದಿರು 1965ರಲ್ಲಿ ಇಂಗ್ಲಿಷಿನಲ್ಲಿ ‘ವೇದಿಕ್ ಮ್ಯಾಥಮ್ಯಾಟಿಕ್ಸ್’ ಎಂಬ ಗ್ರಂಥ ಹೊರತಂದರು. ಈ ಕೃತಿ ಗಣಿತಪ್ರೇಮಿಗಳಲ್ಲಿ ಕುತೂಹಲಕ್ಕಿಂತ ಹೆಚ್ಚಾಗಿ ರೋಚಕತೆಯನ್ನೇ ಸೃಷ್ಟಿಸಿತು. ಅರೆ! ಇನ್ನು ಮುಂದೆ ಗಣಿತ ತಮ್ಮ ಬುಟ್ಟಿಯಲ್ಲೇ ಎನ್ನುವಂತೆ ಅವರು ಪುಳಕಗೊಂಡರು. ವೇದಗಣಿತ ಬೋಧಿಸುವುದೇ ಒಂದು ಘನತೆಯೆನ್ನಿಸಿತು. ಆದರೆ ವೇದಗಣಿತ ಸಮಗ್ರತೆ, ಸಾರ್ವತ್ರಿಕತೆಗೆ ಬದ್ಧವೇ ಎನ್ನುವುದು ಪ್ರಶ್ನೆ.

ವೇದಗಣಿತದಲ್ಲಿ ಒಟ್ಟು 29 ಸೂತ್ರಗಳಿವೆ. ಅವು ಸಂಕ್ಷಿಪ್ತವೇ ಹೌದು, ಆದರೆ ಕಗ್ಗಂಟಾದ ಒಗಟುಗಳು! ‘ಏಕಾಧಿಕೇನ ಪೂರ್ವೇಣ’ (ಹಿಂದಿನದಕ್ಕಿಂತ ಒಂದು ಅಧಿಕ), ‘ಪೂರ್ಣಾಪೂರ್ಣಾಭ್ಯಾಮ್’ (ಅಪೂರ್ಣವನ್ನು ಪೂರ್ಣವಾಗಿಸುವುದು)... ಹೀಗೆ ಅವು ಒಂದೊಂದೂ ಉತ್ತರಕ್ಕೆ ಹಪಹಪಿಸುವ ‘ಶಾರ್ಟ್ ಕಟ್’! ಸಂಸ್ಕೃತ ಅಲ್ಪ ಸ್ವಲ್ಪವಾದರೂ ಗೊತ್ತಿದ್ದರೇನೆ ಅವನ್ನು ಅರ್ಥೈಸಿಕೊಳ್ಳಲು ಸಾಧ್ಯ.

ಹೇಗೂ ಗಣಿತವು ವಿಜ್ಞಾನದ ರಾಣಿ. ವೇದಗಣಿತ ಹೆಚ್ಚೆಂದರೆ ತುಸು ತ್ವರಿತವಾಗಿ ಅದೂ ಕೆಲ ನಿರ್ದಿಷ್ಟ ಗಣಿತ ಪರಿಕರ್ಮಗಳನ್ನು ನಿರ್ವಹಿಸಲಷ್ಟೆ ಉಪಯುಕ್ತ. ಬಂದ ಉತ್ತರಗಳು ಸರಿಯೋ ತಪ್ಪೋ ತಿಳಿಯಲು, ತಾಳೆ ನೋಡಲು ವೇದಗಣಿತದಲ್ಲಿ ಆಸ್ಪದವೇ ಇಲ್ಲ. ಸಮಸ್ಯೆಗಳಿಗೆ ಹತ್ತಿರದ ದಾರಿಯ ಹುಡುಕಾಟವೇ ಒಂದು ವ್ಯಸನ.

ವೇದಗಣಿತ ಕಲಿತರೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನಿಖರವಾಗಿ ಉತ್ತರಿಸಬಹುದು ಎಂಬಂಥ ಮಾತು ಉತ್ಪ್ರೇಕ್ಷಿತ. ವೇದಗಣಿತದ ಅಭ್ಯಾಸದಿಂದ ಮಕ್ಕಳು ತೀಕ್ಷ್ಣಮತಿಗಳಾಗುವುದು, ಬುದ್ಧಿವಂತರಾಗುವುದು ಅಸಂಭವ. ‘ಕಬ್ಬಿಣದ ಕಡಲೆ’, ‘ತಲೆಬೇನೆ’ ಮುಂತಾದ ಗೊಣಗು, ಪ್ರಲಾಪಗಳಿಗೆ ಗಣಿತ ಅನಗತ್ಯವಾಗಿ ಪಾತ್ರವಾಗಿದೆ. ಗಣಿತವನ್ನು ರಂಜನೆಯಾಗಿಸಲು ವೇದಗಣಿತ ಸೂತ್ರಗಳು ಸ್ವಲ್ಪಮಟ್ಟಿಗೆ ಪೂರಕವಾಗಬಲ್ಲವು. ಅಂಕಿಸಂಖ್ಯೆಗಳೊಂದಿಗೆ ಸರಸವಾಡಲು ಮಕ್ಕಳಿಗೆ ಆ ಸೂತ್ರಗಳನ್ನು ಪರಿಚಯಿಸಲಡ್ಡಿಯಿಲ್ಲ. ಒಂದೊಂದು ಸಂಖ್ಯೆಯೂ ಅನನ್ಯ. ಶೂನ್ಯದಿಂದಲೇ ಮಕ್ಕಳು ಸಂಖ್ಯೆಗಳ ಗೆಳೆತನ ಆರಂಭಿಸಬಹುದು. ವೇದಗಣಿತ ಕಲಿಕೆ ಮಕ್ಕಳ ಮಾನಸಿಕ ಕೌಶಲವೃದ್ಧಿಗೆ ಸಹಕಾರಿ ಎನ್ನುವುದೂ ಸರಿ.

ಈ ಅಂಶಗಳ ಹೊರತಾಗಿ ವೇದಗಣಿತ ಒಂದು ಮರೀಚಿಕೆ. ಗಣಿತೀಯ ತರ್ಕವಿಲ್ಲದ, ಸಾರ್ವತ್ರಿಕ ನಿಯಮಗಳಿಲ್ಲದ ವೇದಗಣಿತ ವೇಗದ ಲೆಕ್ಕಾಚಾರಗಳಿಗೆ ಅದೂ ಕೆಲವೇ ಸಂದರ್ಭಗಳಿಗೆ ಸೀಮಿತಗೊಂಡಿದೆ. ನಮ್ಮ ಮಕ್ಕಳಿಗೆ ವರಾಹಮಿಹಿರ, ಭಾಸ್ಕರಾಚಾರ್ಯ, ಆರ್ಯಭಟ, ಮಹಾವೀರಾಚಾರ್ಯ, ಮಾಧವರಂಥ ವರ ಮೌಲಿಕ ಗಣಿತಕೃಷಿ ತಿಳಿಸಬೇಕು. ಮಗ್ಗಿ ಬಾಯಿಪಾಠವಾಗಲಿ, ಆದರೆ ಗುಣಲಬ್ಧ ಬಂದಿದ್ದು ಹೇಗೆನ್ನುವುದು ಮನದಟ್ಟಾಗಬೇಕು. ಅವಸರದ ಲೆಕ್ಕಾಚಾರದಲ್ಲಿ ಗಣಿತದ ಮೂಲ ಪರಿಕಲ್ಪನೆಗಳನ್ನೇ ನಾವು ಮರೆತಿರುತ್ತೇವೆ. ಉತ್ತರಗಳ ಬಗ್ಗೆಯೇ ನಮ್ಮ ನೆಟ್ಟನೋಟ! ಇನ್ನೆಲ್ಲಿಯ ಕಲಿಕೆಯ ಆನಂದ?

ತ್ವರಿತ ಗಣಿತ ಸುಲಭವಾಗಿ ಅಧಿಕ ಅಂಕ, ಉತ್ತಮ ಗ್ರೇಡ್ ತಂದುಕೊಡಬಹುದು, ಆದರೆ ತಿಳಿವಳಿಕೆ, ವಿಚಾರಶಕ್ತಿಯ ಪಾಡೇನು? ಒಂದು ಸಾಧಾರಣ ಕ್ಯಾಲ್ಕ್ಯುಲೇಟರ್ ಅಥವಾ ಕಂಪ್ಯೂಟರ್ ಮಟ್ಟಕ್ಕೆ ನಾವಿಳಿಯಬೇಕೇ? ವೇದಗಣಿತದ ಭ್ರಮೆಗೊಳಗಾದರೆ ಸಾಂಪ್ರದಾಯಿಕ ಎಣಿಕೆ ಮತ್ತು ಲೆಕ್ಕಾಚಾರಗಳೂ ಕೈತಪ್ಪುತ್ತವೆ. ಗಣಿತ ಕಷ್ಟ, ಆದ್ದರಿಂದ ವೇದಗಣಿತ ಅನುಸರಿಸಿ ಎನ್ನುವ ನಿಲುವೇ ಬಾಲಿಶ.

1960ರ ದಶಕದಲ್ಲಿ ಶಾಲೆ, ಕಾಲೇಜಿಗಿದ್ದ ಗಣಿತ, ವಿಜ್ಞಾನ, ಅರ್ಥಶಾಸ್ತ್ರ ಮುಂತಾದ ಪಠ್ಯಗಳು ಇಂದಿಗೂ ಹಿರಿಯ ಜೀವಗಳ ಮನಸ್ಸಿನಲ್ಲಿ ಅನುರಣಿಸುತ್ತವೆ. ಸುಬ್ಬಣ್ಣಾಚಾರ್ ಅವರ ಅಂಕಗಣಿತ (ನಾವು ಹುಡುಗರು ಅಂಕಣ್ಣಾಚಾರ್ ಅವರ ಸುಬ್ಬಗಣಿತ ಎನ್ನುತ್ತಿದ್ದೆವು!), ಪ್ರೊ. ಎಲ್.ಎನ್.ಚಕ್ರವರ್ತಿ ಅವರ ಅಂಕಗಳ ಇತಿಹಾಸ, ಡಾ. ಎಲ್.ಸೀಬಯ್ಯ ಅವರ ಭೌತಶಾಸ್ತ್ರ, ಪ್ರೊ. ಕೆ.ಸುಬ್ಬಾಭಟ್ಟರ ರಸಾಯನ ಶಾಸ್ತ್ರ ಒಂದೇ? ಎರಡೇ?

ಶಾಲೆಗಳಲ್ಲಿ ಇತರ ಮಕ್ಕಳಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮಕ್ಕಳಿಗೂ ವೇದಗಣಿತ ಕಲಿಸಲು ಶಿಕ್ಷಣ ಇಲಾಖೆ ಮುಂದಾಗಿದೆ. ಹೀಗೆ ಮಕ್ಕಳಿಗೆ ವೇದಗಣಿತ ಕಲಿಕೆಯ ಬದಲಿಗೆ, ಹಳೆಯದು ಹೊಸದೆನ್ನದೆ ಉತ್ತಮ ಪಠ್ಯಗಳನ್ನು ಮರುಮುದ್ರಿಸಿ, ಅವುಗಳ ಪರಾಮರ್ಶನಕ್ಕೆ ಉತ್ತೇಜಿಸಲಿ.

ವಾಚಕರ ವಾಣಿ

ಕೌನ್ಸೆಲಿಂಗ್ ವ್ಯವಸ್ಥೆ ಪುನಃ ಜಾರಿಯಾಗಲಿ

ಈ ಹಿಂದೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸಿಬ್ಬಂದಿಯ ವರ್ಗಾವಣೆಯನ್ನು ಕೌನ್ಸೆಲಿಂಗ್ ಮೂಲಕವೇ ಮಾಡಲಾಗುತ್ತಿತ್ತು. ಅದು, ಹಿರಿಯ ಅಧಿಕಾರಿಯೊಬ್ಬರ ಪ್ರಾಮಾಣಿಕ ಪ್ರಯತ್ನದ ಫಲ. ಕೆಲವೊಂದು ನಿರ್ದಿಷ್ಟ ಮಾರ್ಗಸೂಚಿಗಳನ್ನು ಮೊದಲೇ ಪ್ರಚುರಪಡಿಸಿ, ಖಾಲಿ ಇರುವ ಸ್ಥಳಗಳನ್ನು ಇಲಾಖೆಯ ವೆಬ್‌ಸೈಟಿನಲ್ಲಿ ಮೊದಲೇ ಪ್ರಕಟಿಸಿ, ಯಾವುದೇ ಅನುಮಾನಕ್ಕೆ ಆಸ್ಪದ ಇಲ್ಲದಂತೆ ನೋಡಿಕೊಳ್ಳಲಾಗುತ್ತಿತ್ತು. ಎಲ್ಲಾ ಹಂತದ ಸಿಬ್ಬಂದಿಗೆ ಇದೇ ವ್ಯವಸ್ಥೆಯನ್ನು ಅನುಸರಿಸಲಾಗುತ್ತಿತ್ತು. ಸಿಬ್ಬಂದಿಯ ಬಡ್ತಿಗೂ ಪಾರದರ್ಶಕ ವ್ಯವಸ್ಥೆ ಇತ್ತು. ಇದರಿಂದಾಗಿ ಭ್ರಷ್ಟಾಚಾರ, ವಶೀಲಿ ಮತ್ತು ಅವ್ಯವಹಾರಕ್ಕೆ ಅವಕಾಶ ಇರಲಿಲ್ಲ. ಎಲ್ಲರೂ ಇದಕ್ಕೆ ಹೊಂದಿಕೊಂಡು ನಿರಾಳವಾಗಿದ್ದರು.

ಆದರೆ ಎರಡು– ಮೂರು ವರ್ಷಗಳಿಂದ ಇಲಾಖೆಯಲ್ಲಿ ವರ್ಗಾವಣೆ ಮತ್ತು ಬಡ್ತಿಯ ಚಿತ್ರಣ ಸಂಪೂರ್ಣ ಬದಲಾಗಿದೆ. ಕೌನ್ಸೆಲಿಂಗ್ ವ್ಯವಸ್ಥೆಗೆ ಎಳ್ಳುನೀರು ಬಿಡಲಾಗಿದೆ. ವರ್ಗಾವಣೆಯ ನಿರೀಕ್ಷೆಯಲ್ಲಿರುವ ಸಿಬ್ಬಂದಿಯ ತಳಮಳ ಹೇಳತೀರದು. ಪಾರದರ್ಶಕವಾಗಿದ್ದ ಕೌನ್ಸೆಲಿಂಗ್ ವ್ಯವಸ್ಥೆಯನ್ನು ಪುನಃ ಜಾರಿಗೆ ತರುವುದರಿಂದ ಈ ಬಗೆಯ ಅನಗತ್ಯ ತಳಮಳಗಳನ್ನು ನಿವಾರಿಸಬಹುದು.

ನಿರ್ಮಲಕುಮಾರ, ಶಿವಮೊಗ್ಗ

ಪ್ರಬಲ ಸಮುದಾಯಗಳೇ ಪರಿಹಾರ ಹುಡುಕಬೇಕು

ಮಾಲೂರು ತಾಲ್ಲೂಕಿನ ಉಳ್ಳೇರಹಳ್ಳಿಯಲ್ಲಿ ಗ್ರಾಮ ದೇವತೆಯ ಗುಜ್ಜುಕೋಲು ಮುಟ್ಟಿದ ಪರಿಶಿಷ್ಟ ಸಮುದಾಯದ ಬಾಲಕನನ್ನು ಥಳಿಸಿ, ದಂಡ ವಿಧಿಸಲು ಮುಂದಾಗಿದ್ದು ಅಕ್ಷಮ್ಯ. ದಲಿತರ ರಕ್ಷಣೆಗೆ ಕಾನೂನು ಬಲ ಇದ್ದರೂ ಅದನ್ನು ಎಲ್ಲೆಡೆ ನಿರ್ಲಕ್ಷಿಸಲಾಗುತ್ತಿದೆ. ಬಂಜಾರರು, ಕೊರಮ, ಕೊರಚ, ಅಲೆಮಾರಿಗಳ ವಿಚಾರದಲ್ಲಿಯೂ ಇಂಥ ನಿರ್ಲಕ್ಷ್ಯ ಕಾಣುತ್ತದೆ.

ಇಂತಹ ಕೃತ್ಯಗಳನ್ನು ವಿರೋಧಿಸಲು ಹಳ್ಳಿಗಳಲ್ಲಿ ದಲಿತರು ಹೆದರುತ್ತಾರೆ. ಬಲಿಷ್ಠರು ಹಲ್ಲೆ ನಡೆಸುತ್ತಾರೆ ಎಂಬ ಭೀತಿ ಇದರ ಹಿಂದೆ ಇರುತ್ತದೆ. ಬಲಿಷ್ಠ ಸಮುದಾಯಗಳೇ ಇದಕ್ಕೆ ಪರಿಹಾರ ಹುಡುಕಬೇಕು. ಜೊತೆಗೆ ತಪ್ಪಿತಸ್ಥರಿಗೆ ಕಾನೂನು ರೀತ್ಯಾ ಕಠಿಣ ಶಿಕ್ಷೆಯಾದರೆ ಇತರರಿಗೂ ಭಯ ಹುಟ್ಟಲು ಸಾಧ್ಯ.

ಡಾ. ಗೋವಿಂದಸ್ವಾಮಿ, ಬೆಂಗಳೂರು

ಇರುವ ಗ್ರಂಥಾಲಯಕ್ಕೇ ಮೂಲಸೌಕರ್ಯವಿಲ್ಲ...

ರಾಜ್ಯದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಅಂಬೇಡ್ಕರ್ ಭವನಗಳು ಯಾವುದಕ್ಕೂ ಬಳಕೆ ಆಗುತ್ತಿಲ್ಲ. ಅವುಗಳನ್ನು ಗ್ರಂಥಾಲಯಗಳನ್ನಾಗಿ ಪರಿವರ್ತಿಸಲಾಗುವುದು ಎಂದು ಸಮಾಜ ಕಲ್ಯಾಣ ಸಚಿವರು ಹೇಳಿದ್ದಾರೆ (ಪ್ರ.ವಾ., ಸೆ. 22). ಅವರ ಉದ್ದೇಶ ಒಳ್ಳೆಯದೇ. ಆದರೆ ನಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಗ್ರಂಥಾಲಯಗಳು ಬಹುತೇಕ ಮುಚ್ಚುವ ಹಂತ ತಲುಪಿವೆ. ಅಲ್ಲಿ ಸ್ವಚ್ಛತೆಯ ಕೊರತೆ ಇದೆ. ಒಳ್ಳೆಯ ಪುಸ್ತಕಗಳು ಇಲ್ಲ. ಸಿಬ್ಬಂದಿಯ ಕೊರತೆಯನ್ನೂ ಎದುರಿಸುತ್ತಿವೆ. ಮೊದಲು ಅವುಗಳ ಕಡೆ ಗಮನಹರಿಸುವುದು ಅಗತ್ಯ.

ಶಿವಕುಮಾರ್ ಯರಗಟ್ಟಿಹಳ್ಳಿ, ಚನ್ನಗಿರಿ

ಮೊಟಕುಗೊಳ್ಳಲಿ ವಿವೇಚನಾ ಅಧಿಕಾರ

ದ್ವೇಷ ಭಾಷಣ ಕುರಿತ ಮೊಕದ್ದಮೆಗಳನ್ನು ಹಿಂಪಡೆಯುವುದು ಸೂಕ್ತವಲ್ಲ ಎಂದು ಪೊಲೀಸ್ ಇಲಾಖೆ, ಅಭಿಯೋಗ ಹಾಗೂ ಸರ್ಕಾರಿ ವ್ಯಾಜ್ಯಗಳ ಇಲಾಖೆ ಮತ್ತು ಕಾನೂನು ಇಲಾಖೆ ಅಭಿಪ್ರಾಯ ವ್ಯಕ್ತಪಡಿಸಿದ್ದರ ಹೊರತಾಗಿಯೂ, 34 ಮೊಕದ್ದಮೆಗಳನ್ನು ಹಿಂಪಡೆಯಲು ಸಚಿವ ಸಂಪುಟ ಸಭೆ ತೀರ್ಮಾನಿಸಿರುವುದು (ಪ್ರ.ವಾ., ಸೆ. 21) ದುರದೃಷ್ಟಕರ. ಚುನಾವಣೆಯ ಸಂದರ್ಭದಲ್ಲಿ ನಡೆಯುವ ಘರ್ಷಣೆಗಳ ಕುರಿತು ಪಕ್ಷದ ಕಾರ್ಯಕರ್ತರು ಮತ್ತಿತರರ ಮೇಲೆ ದಾಖಲಾಗುವ ಮೊಕದ್ದಮೆಗಳನ್ನೂ ಹೀಗೆಯೇ ವಾಪಸ್ ಪಡೆದ ಅನೇಕ ನಿದರ್ಶನಗಳಿವೆ. ಆಡಳಿತ ನಡೆಸುವ ಪಕ್ಷದ ಸರ್ಕಾರವು ರಾಜಕೀಯ ಕಾರಣಗಳಿಗಾಗಿ ಇಂತಹ ಮೊಕದ್ದಮೆಗಳನ್ನು ಹಿಂಪಡೆಯುವುದು ಹೊಸದೇನಲ್ಲ, ಇದು ಮುಂದುವರಿಯುವುದರಲ್ಲಿಯೂ ಸಂಶಯವಿಲ್ಲ.

ಹೀಗಾದರೆ, ಕಾನೂನು ರೀತ್ಯಾ ಮೊಕದ್ದಮೆ ದಾಖಲಿಸಿ, ನ್ಯಾಯಾಲಯಗಳಲ್ಲಿ ಅವನ್ನು ಮುಂದುವರಿಸುತ್ತಿರುವ ಪೊಲೀಸರು ಮತ್ತು ಸಾರ್ವಜನಿಕ ಅಭಿಯೋಜಕರ ನೈತಿಕ ಸ್ಥೈರ್ಯಕ್ಕೆ ಕುಂದುಂಟಾಗುವುದಿಲ್ಲವೇ? ಒಂದೊಮ್ಮೆ, ಸಂದರ್ಭಾನುಸಾರ ಪ್ರಕರಣಗಳನ್ನು ದಾಖಲಿಸಿಲ್ಲದಿದ್ದರೆ, ತಮ್ಮ ಕರ್ತವ್ಯಚ್ಯುತಿ ಮತ್ತು ನಿಷ್ಕ್ರಿಯತೆಗೆ ಪೊಲೀಸರು ಸಾರ್ವಜನಿಕ ಟೀಕೆಗೆ ಒಳಗಾಗುತ್ತಿರಲಿಲ್ಲವೇ? ಇಂತಹ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವುದರಿಂದ ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಸ್ವಾರ್ಥಕ್ಕಾಗಿ ಸಮುದಾಯಗಳ ನಡುವೆ ದ್ವೇಷಾಸೂಯೆ ಮೂಡಿಸಿ, ಶಾಂತಿ ಸಾಮರಸ್ಯಕ್ಕೆ ಭಂಗ ತರುವವರಿಗೆ ಪರೋಕ್ಷವಾಗಿ ನೆರವಾದಂತೆ ಆಗುತ್ತದೆ. ಅವರಿಗೆ, ಅಪರಾಧವೆಸಗಿ ಅರಗಿಸಿಕೊಳ್ಳಬಹುದೆಂಬ ಧೈರ್ಯ ಮೂಡುತ್ತದೆ. ಒಮ್ಮೆ ಕ್ರಿಮಿನಲ್ ಮೊಕದ್ದಮೆ ದಾಖಲಾದರೆ, ಅದನ್ನು ಹಿಂಪಡೆಯಲು ಸರ್ಕಾರಗಳಿಗೆ ‘ವಿವೇಚನಾ ಅಧಿಕಾರ’ ಇರಬಾರದು, ನ್ಯಾಯಾಲಯದಲ್ಲಿಯೇ ಅದು ಅಂತಿಮವಾಗಿ ತೀರ್ಮಾನವಾಗಬೇಕು. ಅವಶ್ಯವೆನಿಸಿದರೆ, ಸಂಬಂಧಿಸಿದ ನಿಯಮಗಳಿಗೆ ತಿದ್ದುಪಡಿಯಾಗಬೇಕು.

ತನ್ನ ಮುಂದಿರುವ ಪಿಐಎಲ್ ಒಂದರ ವಿಚಾರಣೆಯ ವೇಳೆ, ದ್ವೇಷ ಭಾಷಣದ ವಿಚಾರದಲ್ಲಿ ಮೂಕಪ್ರೇಕ್ಷಕನಂತೆ ಏಕೆ ವರ್ತಿಸುತ್ತಿದ್ದೀರಿ ಎಂದು ಕೇಂದ್ರ ಸರ್ಕಾರವನ್ನು ಪ್ರಶ್ನಿಸಿರುವ ಸುಪ್ರೀಂ ಕೋರ್ಟ್ ನಿಲುವು ಸಮಯೋಚಿತ. ಕೋರ್ಟ್‌ನ ಆತಂಕ ಮತ್ತು ಆಶಯವನ್ನು ಅರಿತು ನಡೆಯುವ ವಿವೇಕ ಸರ್ಕಾರಗಳಿಗೆ ಇರಬೇಕಾದುದು ಅವಶ್ಯ.

ಪಿ.ಸ್ವಾತಿ, ಬೆಂಗಳೂರು

ಅತಂತ್ರದ ಜಪ?

ಎಲ್ಲ ಪಕ್ಷಗಳಲ್ಲೂ
ಗೌಡರ ಆರೋಗ್ಯ
ವಿಚಾರಿಸುವ ನೆಪ,
ಮಾಡುತ್ತಿರಬಹುದೆ ಎಲ್ಲರೂ
ಮತ್ತೊಮ್ಮೆ ಅತಂತ್ರ
ವಿಧಾನಸಭೆಯ ಜಪ?

ಮಹಾಂತೇಶ ಮಾಗನೂರ
ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತಕ್ಕೆ ಮರಳಿ ಸಿಕ್ಕೀತೇ ಕೊಹಿನೂರ್ ವಜ್ರ?

ಪ್ರಜಾವಾಣಿ ವಾರ್ತೆ

ಬ್ರಿಟನ್ ರಾಣಿಯ ಕಿರೀಟದಲ್ಲಿರುವ ಕೊಹಿನೂರ್ ವಜ್ರವು ಈವರೆಗೆ ಹತ್ತಾರು ಕೈಬದಲಾಗಿದ್ದು ಇತಿಹಾಸದಲ್ಲಿ ದಾಖಲಾಗಿದೆ. ಭಾರತದ್ದೇ ಆಗಿದ್ದ ಈ ವಜ್ರವನ್ನು ಮರಳಿ ಭಾರತಕ್ಕೆ ತರಬೇಕು ಎಂಬ ಕೂಗು ಈಗ ಬಲವಾಗಿದೆ. ಜಗತ್ತಿನ ಅತ್ಯಮೂಲ್ಯ ವಜ್ರಗಳಲ್ಲಿ ಒಂದಾದ ಕೊಹಿನೂರ್‌ನ ಹಿಂದೆ ಹತ್ತಾರು ಕರಾಳ ಕಥೆಗಳಿವೆ. ಈ ವಜ್ರಕ್ಕೆ 'ಕತ್ತಲೆಯ ಪರ್ವತ' ಎಂಬ ಅಡ್ಡ ಹೆಸರೂ ಇದೆ. ಈ ವಜ್ರವನ್ನು ಧರಿಸಿದ ಪುರುಷರಿಗೆ ಇದು ದುರದೃಷ್ಟವನ್ನು ತರುತ್ತದೆ ಮತ್ತು ಮಹಿಳೆಯರು ಧರಿಸಿದರಷ್ಟೇ ಏಳಿಗೆ ಸಾಧ್ಯ ಎಂಬ ಪ್ರತೀತಿಯೂ ಇದೆ.

ಈ ವಜ್ರವು ಕ್ರಿಸ್ತ ಶಕ 1100ರಿಂದ ಐತಿಹಾಸಿಕ ಉಲ್ಲೇಖವನ್ನು ಹೊಂದಿದೆ. ಕೊಹಿನೂರ್‌ಗೆ ಸಂಬಂಧಿಸಿದ ಇತಿಹಾಸವನ್ನು ಗಮನಿಸಿದರೆ, ಅದನ್ನು ಹೊಂದಿದ್ದ ಪ್ರತಿಯೊಬ್ಬ ರಾಜನೂ ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿ ವಜ್ರವನ್ನು ಕಳೆದುಕೊಂಡಿರುವುದು ತಿಳಿಯುತ್ತದೆ. ಇದನ್ನು ಹೊಂದಿದ್ದ ರಾಜಮನೆತನಗಳೆಲ್ಲವೂ ಪತನವಾಗಿದ್ದು ಗೊತ್ತಾಗುತ್ತದೆ. ಬ್ರಿಟನ್ ರಾಜಮನೆತನ ಮಾತ್ರ ಇದಕ್ಕೆ ಅಪವಾದ. ಯುದ್ಧದಲ್ಲಿನ ಸೋಲಿನ ಕಾರಣಕ್ಕೆ ಈ ವಜ್ರ ಕೈಬದಲಾಗಿದ್ದೇ, ಇದಕ್ಕೆ ದುರದೃಷ್ಟದ ವಜ್ರ ಎಂಬ ಕುಖ್ಯಾತಿ ಅದಕ್ಕೆ ಬರಲು ಕಾರಣ ಎಂದು ವಿಶ್ಲೇಷಿಸಲಾಗಿದೆ.

ಕ್ರಿ.ಶ.1100–1300ರ ಮಧ್ಯೆ ದಕ್ಷಿಣ ಭಾರತದ ಗೋಲ್ಕೊಂಡ ಪ್ರದೇಶದ ಗಣಿಯಲ್ಲಿ ಈ ವಜ್ರ ದೊರೆಯಿತು ಎಂದು ಹಲವು ಐತಿಹಾಸಿಕ ದಾಖಲೆಗಳು ಮತ್ತು ಪ್ರವಾಸ ಕಥನಗಳಲ್ಲಿ ಉಲ್ಲೇಖಿಸಲಾಗಿದೆ. ಈ ವಜ್ರಕ್ಕೆ ಆಗ ಯಾವುದೇ ಹೆಸರಿರಲಿಲ್ಲವಾದ್ದರಿಂದ, ಗೋಲ್ಕೊಂಡ ಗಣಿಯಲ್ಲಿ ದೊರೆತ ವಜ್ರ ಎಂದೇ ಅದನ್ನು ಉಲ್ಲೇಖಿಸಲಾಗಿದೆ ಎಂದು ಇತಿಹಾಸ ತಜ್ಞರು ವಿಶ್ಲೇಷಿಸಿದ್ದಾರೆ. ಮೊಘಲ್ ಸಾಮ್ರಾಜ್ಯದ ಸ್ಥಾಪಕ ಬಾಬರ್‌ನ ಬಳಿ ಈ ವಜ್ರ ಇತ್ತು ಎಂದು ಆತನಿಗೆ ಸಂಬಂಧಿಸಿದ 'ಎಂಪರರ್ಸ್ ಮೆಮರಿ' ಎಂಬ ಇಂಗ್ಲಿಷ್ ಭಾಷೆಯ ಕಥನದಲ್ಲಿ ಉಲ್ಲೇಖಿಸಲಾಗಿದೆ. ಯುದ್ಧವೊಂದರಲ್ಲಿ ಗೆಲುವು ಸಾಧಿಸಿದ ನಂತರ ಅದನ್ನು ಬಾಬರ್ ವಶಕ್ಕೆ ಪಡೆದಿದ್ದ ಎಂದು ಅದರಲ್ಲಿ ಉಲ್ಲೇಖಿಸಲಾಗಿದೆ.

ಕೊಹಿನೂರ್ ವಜ್ರ: 1911ರಲ್ಲಿ ಈ ಕಿರೀಟದಲ್ಲಿ ಕೊಹಿನೂರ್ ವಜ್ರವನ್ನು ಇರಿಸಲಾಗಿತ್ತು. ಕ್ವೀನ್ ಎಲಿಜಬೆತ್ ದಿ ಮದರ್ಸ್ ಕ್ರೌನ್ ಸಿದ್ಧಪಡಿಸಿದ ನಂತರ, ಕೊಹಿನೂರ್ ವಜ್ರವನ್ನು ಈ ಕಿರೀಟದಿಂದ ತೆಗೆಯಲಾಯಿತು ಮತ್ತು ಆ ಜಾಗದಲ್ಲಿ ಕೊಹಿನೂರ್ ವಜ್ರದ ಪ್ರತಿಕೃತಿಯನ್ನು ಇರಿಸಲಾಯಿತು

ಈ ಉಲ್ಲೇಖಕ್ಕೆ ವ್ಯತಿರಿಕ್ತವಾದ ವಾದವೂ ಇದೆ. ಬಾಬರ್‌ನ ಕಥನದಲ್ಲಿ ವಿವರಿಸಿರುವುದು ಬೇರೊಂದು ವಜ್ರದ ಬಗ್ಗೆ, ಅದು ಕೊಹಿನೂರ್ ಅಲ್ಲ ಎಂದು ಒಂದು ಗುಂಪಿನ ಇತಿಹಾಸ ತಜ್ಞರು ವಾದಿಸುತ್ತಾರೆ. ಮೊಘಲರು ಮತ್ತು ಗ್ವಾಲಿಯರ್ ಸಾಮ್ರಾಟರ ಮಧ್ಯೆ ನಡೆದ ಪಾಣಿಪತ್ ಕದನದಲ್ಲಿ ಗ್ವಾಲಿಯರ್ ದೊರೆ 1526ರಲ್ಲಿ ಕೊಹಿನೂರ್ ವಜ್ರವನ್ನು ಬಾಬರನ ಮಗನಿಗೆ ನೀಡಿದ ಎಂದು ಈ ಗುಂಪು ವಾದಿಸುತ್ತದೆ. ಮೊಘಲರ ಬಳಿಯಲ್ಲಿಯೂ ಕೊಹಿನೂರ್ ಹೆಚ್ಚು ಕಾಲ ಉಳಿಯಲಿಲ್ಲ.

17ನೇ ಶತಮಾನದ ಆರಂಭದಲ್ಲಿ ಪರ್ಷಿಯನ್ ದೊರೆ ನಾದಿರ್ ಶಾ ದೆಹಲಿ ಮೇಲೆ ದಂಡೆತ್ತಿ ಬಂದ. ದೆಹಲಿಯ ಸುಲ್ತಾನರನ್ನು ಕೊಳ್ಳೆ ಹೊಡೆದಾಗ ಈ ವಜ್ರ ಅವನ ವಶಕ್ಕೆ ಬಂದಿತು ಎಂಬುದು ಇತಿಹಾಸದಲ್ಲಿ ದಾಖಲಾಗಿದೆ. 1747ರಲ್ಲಿ ನಾದಿರ್ ಶಾ ಮೃತಪಟ್ಟಾಗ ಅವನ ಸಾಮ್ರಾಜ್ಯವನ್ನು, ಆತನ ಸೇನಾಧಿಪತಿಯಾಗಿದ್ದ ಅಹಮದ್ ಶಾ ವಶಕ್ಕೆ ಪಡೆದುಕೊಂಡ. ಆಗ ಕೊಹಿನೂರ್ ಸಹ ಅಹಮದ್ ಶಾನ ತೆಕ್ಕೆಗೆ ಬಂದಿತು.

ನಂತರದ ದಿನಗಳಲ್ಲಿ ಅಹಮದ್ ಶಾ ಅಫ್ಘಾನಿಸ್ತಾನದಲ್ಲಿ ದುರಾನಿ ಸಾಮ್ರಾಜ್ಯವನ್ನು ಕಟ್ಟಿದ. ಅದೂ ಹೆಚ್ಚು ಕಾಲ ಉಳಿಯಲಿಲ್ಲ. 19ನೇ ಶತಮಾನದ ಆರಂಭದ ವೇಳೆಗೆ ಈ ಸಾಮ್ರಾಜ್ಯ ಪತನವಾಯಿತು. ಅಹಮದ್ ಶಾನ ವಾರಸುದಾರನಾಗಿದ್ದ ಶಾ ಶುಜಾನ್ ಎದುರಾಳಿಗಳಿಂದ ತಪ್ಪಿಸಿಕೊಳ್ಳಲು ಪಂಜಾಬ್‌ನ ದೊರೆ ಮಹಾರಾಜ ರಂಜಿತ್ ಸಿಂಗ್‌ನ ರಕ್ಷಣೆ ಬಯಸಿದ. ರಕ್ಷಣೆಗೆ ಬದಲಾಗಿ ಕೊಹಿನೂರ್ ಅನ್ನು ರಂಜಿತ್ ಸಿಂಗ್‌ನಿಗೆ ಉಡುಗೊರೆಯಾಗಿ ನೀಡಿದ. 1839ರಲ್ಲಿ ರಂಜಿತ್ ಸಿಂಗ್‌ನ ಐದು ವರ್ಷದ ಮಗ ದುಲೀಪ್ ಸಿಂಗ್ ಕೊಹಿನೂರ್ ಅನ್ನು ಧರಿಸಿದ.

1849ರಲ್ಲಿ ಪಂಜಾಬ್ ಸಾಮ್ರಾಜ್ಯ ಮತ್ತು ಈಸ್ಟ್ ಇಂಡಿಯಾ ಕಂಪನಿಯ ಮಧ್ಯೆ ನಡೆದ ಒಪ್ಪಂದದಲ್ಲಿ ಕೊಹಿನೂರ್ ವಜ್ರವನ್ನು ಈಸ್ಟ್ ಇಂಡಿಯಾ ಕಂಪನಿಗೆ ನೀಡಲಾಯಿತು. ಕಂಪನಿಯು ಅದನ್ನು ಬ್ರಿಟನ್ ರಾಣಿ ವಿಕ್ಟೋರಿಯಾಗೆ ಉಡುಗೊರೆಯಾಗಿ ನೀಡಿತು. ಅಂದಿನಿಂದ, ಬ್ರಿಟನ್ ರಾಣಿಯರಾದ ವಿಕ್ಟೋರಿಯಾ, ಅಲೆಕ್ಸಾಂಡ್ರಾ, ಮೇರಿ, ಎಲಿಜಬೆತ್ ಮತ್ತು ಎರಡನೇ ಎಲಿಜಬೆತ್ ಅವರು ಈ ವಜ್ರವನ್ನು ಬಳಸಿದ್ದಾರೆ.

ಕರ್ನಾಟಕದಲ್ಲಿ ಸಿಕ್ಕಿತ್ತಾ ವಜ್ರ?

12ರಿಂದ 14ನೇ ಶತಮಾನದಲ್ಲಿ ಆಳ್ವಿಕೆ ನಡೆಸಿದ್ದ ಕಾಕತೀಯ ವಂಶದ ಅರಸರ ಕಾಲದಲ್ಲಿ ಕೊಹಿನೂರ್ ವಜ್ರವನ್ನು ಗಣಿಯಿಂದ ತೆಗೆಯಲಾಯಿತು ಎನ್ನಲಾಗುತ್ತದೆ. ಆದರೆ ಇದು ದೊರೆತ ಖಚಿತ ಜಾಗ ಎಲ್ಲಿ ಎಂಬ ಗೊಂದಲ ಹಾಗೆಯೇ ಇದೆ. ಅವಿಭಜಿತ ಆಂಧ್ರಪ್ರದೇಶ ಹಾಗೂ ಕರ್ನಾಟಕದಲ್ಲಿ ಹರಿಯುವ ಕೃಷ್ಣಾ ನದಿ ವ್ಯಾಪ್ತಿಯ ಗೋಲ್ಕೊಂಡ ಪ್ರದೇಶದ ಗಣಿಯಲ್ಲಿ ಸಿಕ್ಕಿತ್ತು ಎನ್ನಲಾಗುತ್ತದೆ. ಕೊಳ್ಳುರು ಎಂಬುದು ವಜ್ರ ಸಿಕ್ಕ ಜಾಗ. ಈ ಕೊಳ್ಳುರು ಎಂಬ ಜಾಗವು ಈಗಿನ ಯಾದಗಿರಿ ಜಿಲ್ಲೆಯಲ್ಲಿದ್ದು, ವಜ್ರ ಸಿಕ್ಕಿದ ಜಾಗ ಎಂಬುದಾಗಿ ಅಲ್ಲಿ ಫಲಕವನ್ನೂ ಹಾಕಲಾಗಿದೆ. ಆದರೆ, ಆಂಧ್ರದಲ್ಲಿರುವ ಕೊಳ್ಳುರು ಎಂಬ ಜಾಗವೇ ವಜ್ರ ಸಿಕ್ಕಿದ್ದ ಸ್ಥಳ ಎಂಬ ವಾದವಿವೆ. ಯಾವ ಕೊಳ್ಳುರಿನಲ್ಲಿ ವಜ್ರ ಸಿಕ್ಕಿದೆ ಎಂಬುದಕ್ಕೆ ಸ್ಪಷ್ಟ ಪುರಾವೆಗಳಿಲ್ಲ.

ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಭೀಮರಾಯನಗುಡಿ ಬಳಿಯಿರುವ ಕೊಳ್ಳೂರಿನಲ್ಲಿ ಹಾಕಲಾಗಿರುವ ಫಲಕ

ಕೊಹಿನೂರ್ ಎಂದರೇನು...

1739ರವರೆಗೂ ಈ ವಜ್ರಕ್ಕೆ ಹೆಸರು ಇರಲಿಲ್ಲ. ದೆಹಲಿ ಸಾಮ್ರಾಜ್ಯವನ್ನು ಪರ್ಷಿಯನ್ ರಾಜ ನಾದಿರ್ ಶಾ ವಶಕ್ಕೆ ಪಡೆದಾಗ ಆತ ಈ ವಜ್ರವನ್ನು ಮೊದಲ ಬಾರಿಗೆ ನೋಡಿದ. ಅದರ ಪ್ರಖರತೆಗೆ ಮೆಚ್ಚಿ, 'ಕೊಹ್ ಇ ನೂರ್' ಎಂದು ಉಲ್ಲೇಖಿಸಿದ ಎಂದು ಇತಿಹಾಸದಲ್ಲಿ ದಾಖಲಾಗಿದೆ. ಕೊಹ್ ಇ ನೂರ್ ಎಂದರೆ 'ಬೆಳಕಿನ ಪರ್ವತ' ಎಂದು ಅರ್ಥ. ಅಂದಿನಿಂದ ಈ ವಜ್ರಕ್ಕೆ ಕೊಹ್ ಇ ನೂರ್ ಎಂಬ ಹೆಸರೇ ಉಳಿಯಿತು. ಕಾಲಾಂತರದಲ್ಲಿ ಅದು ಕೊಹಿನೂರ್ ಆಗಿ ಬದಲಾಯಿತು ಎಂದು ಇತಿಹಾಸ ತಜ್ಞರು ವಿವರಿಸಿದ್ದಾರೆ.

ಈ ವಜ್ರವು ಬ್ರಿಟನ್ ರಾಜಮನೆತನ ಕೈಸೇರಿದ ನಂತರ 1950ರಲ್ಲಿ ಅದನ್ನು ಮೊದಲು ಸಾರ್ವಜನಿಕ ಪ್ರದರ್ಶನಕ್ಕೆ ಇಡಲಾಗಿತ್ತು. ಅತ್ಯಂತ ದೊಡ್ಡ ಗಾತ್ರದ ಈ ವಜ್ರವು ಸಾರ್ವಜನಿಕರ ಗಮನ ಸೆಳೆದಿತ್ತು. ಆದರೆ ಅದು ಈಗ ಇರುವ ಸ್ಥಿತಿಯಲ್ಲಿ ಇರಲಿಲ್ಲ, ಈಗಿನಷ್ಟು ಹೊಳಪೂ ಅದಕ್ಕೆ ಇರಲಿಲ್ಲ. ಈ ಬಗ್ಗೆ ರಾಣಿ ವಿಕ್ಟೋರಿಯಾ ಅಸಮಾಧಾನ ವ್ಯಕ್ತಪಡಿಸಿದ್ದರಂತೆ. ಆಗ ರಾಜಮನೆತನದ ಅಕ್ಕಸಾಲಿಗನ ಮಾರ್ಗದರ್ಶನದಲ್ಲಿ ಕೊಹಿನೂರ್ ವಜ್ರವನ್ನು ಕತ್ತರಿಸಿ, ಅದಕ್ಕೆ ಈಗಿನ ಆಕಾರ ಮತ್ತು ಹೊಳಪು ನೀಡಲಾಯಿತು. ತೆಗೆದು ಇರಿಸಬಹುದಾದ ಸ್ವರೂಪದಲ್ಲಿ ಈ ವಜ್ರವನ್ನು ಕಿರೀಟದಲ್ಲಿ ಕೂರಿಸಲಾಗಿದೆ. ರಾಣಿ ಮೇರಿಯ ಕಿರೀಟದಲ್ಲಿ ಮೊದಲು ಇದನ್ನು ಕೂರಿಸಲಾಗಿತ್ತು. ನಂತರ ರಾಣಿ ಮೊದಲನೇ ಎಲಿಜಬೆತ್ ಅವರ ಕಿರೀಟದಲ್ಲಿ ಈ ವಜ್ರವನ್ನು ಕೂರಿಸಲಾಯಿತು. ಈ ಕಿರೀಟವನ್ನು 'ಕ್ವೀನ್ ಎಲಿಜಬೆತ್ ದಿ ಕ್ವೀನ್ ಮದರ್ಸ್ ಕ್ರೌನ್' ಎಂದು ಕರೆಯಲಾಗುತ್ತದೆ.



ಕ್ವೀನ್ ಎಲಿಜಬೆತ್ ದಿ ಕ್ವೀನ್ ಮದರ್ಸ್ ಕ್ರೌನ್

ಬಲಗೊಂಡ ಕೂಗು

ಕೊಹಿನೂರ್ ವಜ್ರವನ್ನು ಭಾರತಕ್ಕೆ ಮರಳಿ ತರಬೇಕು ಎಂಬ ಅಭಿಯಾನವನ್ನು ವೆಂಕಟೇಶ್ ಶುಕ್ಲಾ ಎಂಬುವರು ಲಿಂಕ್ಡ್‌ಇನ್ ಸಾಮಾಜಿಕ ಜಾಲತಾಣದಲ್ಲಿ ಶುರು ಮಾಡಿದ್ದಾರೆ. ಲಕ್ಷಾಂತರ ಜನರ ಸಹಿಯೊಂದಿಗೆ ಬ್ರಿಟನ್ ಮೇಲೆ ಒತ್ತಡ ಹಾಕುವುದು ಈ ಅಭಿಯಾನದ ಉದ್ದೇಶ. 'ಲೂಟಿ' ಮಾಡಿರುವ ವಜ್ರವನ್ನು ಗೌರವಪೂರ್ವಕವಾಗಿ ಹಿಂದಿರುಗಿಸಬೇಕು ಎಂಬುದು ಶುಕ್ಲಾ ಅವರ ಒತ್ತಾಯ. ಹಲವು ಸಾಮಾಜಿಕ ಜಾಲತಾಣಗಳಲ್ಲೂ ಈ ಬಗ್ಗೆ ಚರ್ಚೆಯಾಗುತ್ತಿದೆ. ವಜ್ರವನ್ನು ಇಂಗ್ಲೆಂಡ್‌ನಿಂದ ವಾಪಸ್ ತರಬೇಕು ಎಂದು ಸರ್ಕಾರದ ಮೇಲೆ ಒತ್ತಡ ಹಾಕಲಾಗುತ್ತಿದೆ.

ಕೊಹಿನೂರ್ ವಜ್ರವನ್ನು ಭಾರತಕ್ಕೆ ಮರಳಿ ತರಬೇಕು ಎಂಬ ಕೂಗು ಹೊಸದೇನಲ್ಲ. 1947ರಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಭಾರತ ಮನವಿ ಮಾಡಿತ್ತು. ನಂತರ 1953ರಲ್ಲಿ ಮತ್ತೊಮ್ಮೆ ಮನವಿ ಸಲ್ಲಿಕೆಯಾಯಿತು. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ 50ನೇ ವರ್ಷಾಚರಣೆಗಾಗಿ 1997ರಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ಬ್ರಿಟನ್ ರಾಣಿಗೆ ಮನವಿ ಸಲ್ಲಿಸಲಾಗಿತ್ತು. 2000ನೇ ಇಸವಿಯಲ್ಲಿ ಇದೇ ಆಗ್ರಹದೊಂದಿಗೆ ಹಲವು ಸಂಸತ್ ಸದಸ್ಯರು ಒತ್ತಡ ಹೇರಿದ್ದರು. 2010ರಲ್ಲಿ ಭಾರತೀಯ ಪುರಾತತ್ವ ಇಲಾಖೆಯು ಯತ್ನ ಮುಂದುವರಿಸಿತ್ತು. ಆದರೆ, ಎಲ್ಲ ಬಾರಿಯೂ ಬ್ರಿಟನ್ ಸರ್ಕಾರವು ಭಾರತದ ಮನವಿಯನ್ನು ತಿರಸ್ಕರಿಸುತ್ತಲೇ ಬಂದಿದೆ. ಕಳೆದ 150 ವರ್ಷಗಳಿಂದ ಕೊಹಿನೂರ್ ವಜ್ರವು ಬ್ರಿಟನ್ ಪರಂಪರೆಯ ಭಾಗವಾಗಿದೆ ಎಂದು ಅದು ಹೇಳುತ್ತಾ ಬಂದಿದೆ. ಹೀಗಾಗಿ ವಜ್ರವನ್ನು ದೇಶಕ್ಕೆ ಮರಳಿ ತರಲು ಇರುವ ಅವಕಾಶಗಳು ಕ್ಷೀಣ ಎನ್ನುತ್ತಾರೆ ತಜ್ಞರು.

- ಪಾಕಿಸ್ತಾನವು ಸಹ ಕೊಹಿನೂರ್ ವಜ್ರ ತನಗೆ ಸೇರಿದ್ದು ಎಂದು ದಶಕಗಳಿಂದ ವಾದ ಮಂಡಿಸುತ್ತಿದೆ. ಇತ್ತೀಚೆಗೆ 2019ರಲ್ಲಿ, ವಸಾಹತುಶಾಹಿಗಳು ಪಾಕಿಸ್ತಾನದಿಂದ ವಜ್ರವನ್ನು ಕೊಳ್ಳೆ ಹೊಡೆದಿದ್ದು, ತಾನು ಅದರ ನಿಜವಾದ ವಾರಸುದಾರ ಎಂದು ಪ್ರತಿಪಾದಿಸಿತ್ತು
- ಕೊಹಿನೂರ್ ವಜ್ರವು ಒರಿಸ್ಸಾದ ಪುರಿಯಲ್ಲಿರುವ ಜಗನ್ನಾಥ ದೇವರಿಗೆ ಸೇರಿದ್ದು ಎಂಬುದಾಗಿ ಶ್ರೀ ಜಗನ್ನಾಥ ಸೇನಾ ಎಂಬ ಸಂಘಟನೆ ಪ್ರತಿಪಾದಿಸಿದೆ. ವಜ್ರ ಮರಳಿಸುವ ವಿಚಾರದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಧ್ಯಪ್ರವೇಶಿಸಬೇಕು ಎಂದು ಕೋರಿದೆ
- 'ಕಲಿನನ್ 1' ಎಂಬ ಹೆಸರಿನ ಗ್ರೇಟ್ ಸ್ಟಾರ್ ಆಫ್ ಆಫ್ರಿಕಾ ವಜ್ರವನ್ನು ಮರಳಿಸುವಂತೆ ಬ್ರಿಟನ್‌ಗೆ ದಕ್ಷಿಣ ಆಫ್ರಿಕಾ ಮನವಿ ಮಾಡಿದೆ

ಕೇಂದ್ರದ ನಿಲುವು

1849ರಲ್ಲಿ ಪಂಜಾಬ್ ಆಡಳಿತಗಾರರು ಈಸ್ಟ್ ಇಂಡಿಯಾ ಕಂಪನಿಗೆ ಕೊಹಿನೂರ್ ವಜ್ರವನ್ನು 'ಉಡುಗೊರೆ'ಯಾಗಿ ನೀಡಿದ್ದರು ಎಂದು 2016ರಲ್ಲಿ ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರ ತಿಳಿಸಿತ್ತು. ಅದನ್ನು ಲೂಟಿ ಮಾಡಿಲ್ಲ, ಬದಲಾಗಿ ಒಪ್ಪಂದದ ಬಳಿಕ ಹಸ್ತಾಂತರಿಸಲಾಗಿದೆ ಎಂದು ಅಂದಿನ ಸಾಲಿಸಿಟರ್ ಜನರಲ್ ರಂಜಿತ್ ಸಿನ್ಹಾ ಅವರು ತಿಳಿಸಿದ್ದರು. ಕೋರ್ಟ್‌ಗೆ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಅವರು ಕೇಂದ್ರದ ಪರವಾಗಿ ಉತ್ತರಿಸಿದ್ದರು. ಆದಾಗ್ಯೂ, ವಜ್ರವನ್ನು ಮರಳಿ ತರುವ ಬಗ್ಗೆ ಸೌಹಾರ್ದಯುತ ಮಾರ್ಗದಲ್ಲಿ ಯತ್ನಿಸಲಾಗುವುದು ಎಂದು ಸರ್ಕಾರ ಭರವಸೆ ನೀಡಿತ್ತು.

ಇಂಗ್ಲೆಂಡ್ ನಿಲುವು ಅಚಲ

ಬ್ರಿಟನ್ ಪ್ರಧಾನಿಯಾಗಿದ್ದ ಡೇವಿಡ್ ಕ್ಯಾಮರೂನ್ ಅವರು 2013ರಲ್ಲಿ ಭಾರತಕ್ಕೆ ಬಂದಿದ್ದಾಗ, ಕೊಹಿನೂರ್ ವಜ್ರವನ್ನು ಮರಳಿಸುವಂತೆ ಅವರಿಗೆ ಮನವಿ ಮಾಡಲಾಗಿತ್ತು. ಆದರೆ, ಈ ಬೇಡಿಕೆ ಅರ್ಥಪೂರ್ಣವಲ್ಲ ಎಂದು ಅವರು ಹೇಳಿದ್ದರು. 2016ರಲ್ಲಿ ಬ್ರಿಟನ್‌ನ ಏಷ್ಯಾ ವಿಭಾಗದ ಸಚಿವರಾಗಿದ್ದ ಅಲೋಕ್ ಶರ್ಮಾ ಅವರು ವಜ್ರವನ್ನು ಮರಳಿಸುವ ಯಾವುದೇ ಸಾಧ್ಯತೆಯಿಲ್ಲ ಎಂದು ಸ್ಪಷ್ಟಪಡಿಸಿದ್ದರು.

ಆಧಾರ: ಬ್ರಿಟನ್ ರಾಜಮನೆತನದ ರಾಯಲ್ ಕಲೆಕ್ಷನ್ಸ್ ಟ್ರಸ್ಟ್, ಬ್ರಿಟಾನಿಕಾ, ವರ್ಲ್ಡ್‌ಹಿಸ್ಟರಿ.ಒಆರ್‌ಜಿ, ಪಿಟಿಐ

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಪಿಎಫ್‌ಐ ನಾಯಕರ ವಿರುದ್ಧ ದೇಶದಾದ್ಯಂತ ನಡೆದಿರುವ ಕಾರ್ಯಾಚರಣೆಯು ಭಯೋತ್ಪಾದಕ ಚಟುವಟಿಕೆಗಳನ್ನು ತಡೆಯಲು ನೆರವಾಗಲಿದೆ ಎಂದು ಭಾವಿಸುವಿರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 232

ಪಾರ್ವತಿಯನು ಪರೀಕ್ಷಿಸಿದ ಸಪ್ತರ್ಷಿಗಳು

ಆಗ ಬ್ರಹ್ಮ 'ಎಲೈ ನಾರದ, ಗಿರಿಜೆಯ ತಪಸ್ಸನ್ನು ಪರೀಕ್ಷೆ ಮಾಡಲು ಶಂಕರ ಧ್ಯಾನಸಮಾಧಿಯಲ್ಲಿ ಕುಳಿತ. ತನ್ನ ಆತ್ಮನಲ್ಲಿ ಸರ್ವೋತ್ಕೃಷ್ಟವೂ, ಶಾಂತವೂ, ಮಾಯೆಯ ಸಂಬಂಧವಿಲ್ಲದ, ಪ್ರಕಾಶರೂಪವಾದ ಪರಮಾತ್ಮ ವಸ್ತುವನ್ನು ಅಭೇದಭಾವದಿಂದ ಚಿಂತಿಸಿದ. ಇಂದ್ರಿಯಗಳಿಗೆ ಅಗೋಚರನಾದ ಮತ್ತು ಜಗತ್ಕರ್ತನಾದ ಪರಮೇಶ್ವರನು ಹಾಗೆ ಅಭೇದಭಾವದಿಂದ ಧ್ಯಾನಿಸುತ್ತಾ ಪರಮಾತ್ಮವಸ್ತುವಿನಲ್ಲಿ ಲೀನನಾಗಿ ಆ ಪರಮಾತ್ಮವಸ್ತುವೇ ಆಗಿಹೋದ. ಅತ್ತ ಗಿರಿಜೆಯೂ ಘೋರ ತಪಸ್ಸನ್ನ ಆಚರಿಸಿದಳು. ಅವಳ ಉಗ್ರತಪಸ್ಸನ್ನು ಕಂಡು ರುದ್ರನಿಗೆ ಆಶ್ಚರ್ಯವಾಯಿತು. ಕೆಲವು ಕಾಲಾನಂತರ ಭಕ್ತವತ್ಸಲನಾದ ರುದ್ರ ಸಮಾಧಿಯಿಂದ ಬಹಿರ್ಮುಖನಾಗಿ, ವಸಿಷ್ಠಮುನಿ ಮೊದಲಾದ ಸಪ್ತರ್ಷಿಗಳನ್ನು ಸ್ಮರಿಸಿದ. ಆ ಕ್ಷಣವೇ ಸಪ್ತರ್ಷಿಗಳು ಶಿವನ ಬಳಿಗೆ ಬಂದು, 'ಓ ಮಹಾದೇವನೆ, ನೀನು ಸ್ಮರಿಸಿದುದರಿಂದ ನಾವು ಧನ್ಯರಾದೆವು. ನಮ್ಮನ್ನು ಯಾವ ಕಾರ್ಯಕ್ಕಾಗಿ ಸ್ಮರಿಸಿದೆಯೋ, ಆ ಕಾರ್ಯಕ್ಕೆ ನಮ್ಮನ್ನು ನಿಯಮಿಸು. ನಾವು ನಿನ್ನ ಸೇವಕರು. ಅದನ್ನು ಶಿರಸಾ ವಹಿಸಿ ಮಾಡುವೆವು' ಎಂದರು.

'ಪಾರ್ವತಿಯು ನನ್ನನ್ನೇ ಪತಿಯನ್ನಾಗಿ ಪಡೆಯಬೇಕೆಂದು ತಪಸ್ಸನ್ನ ಆಚರಿಸುತ್ತಿದ್ದಾಳೆ. ಅವಳಿಗೆ ನನ್ನಲ್ಲಿ ಅನುರಾಗವು ಎಷ್ಟು ದೃಢವಾಗಿರುವುದು ಎಂಬುದನ್ನು ಪರೀಕ್ಷೆ ಮಾಡಿರಿ' ಎಂದು ಸಪ್ತರ್ಷಿಗಳಿಗೆ ಅಪ್ಪಣೆ ಮಾಡಿದ ಶಿವ.

ಶಿವನ ಆಜ್ಞೆಯಂತೆ ಗೌರೀಶಂಕರಶಿಖರಕ್ಕೆ ಬಂದರು. ಗಿರಿಜೆಯು ಮುನಿಗಳಿಗೆ ನಮಿಸಿ ಸತ್ಕಾರ ಮಾಡಿದಳು. ಆಗ ಮುನಿಗಳು 'ಎಲೈ, ಪಾರ್ವತೀದೇವಿ, ಈಗ ನೀನು ತಪಸ್ಸನ್ನು ಮಾಡುತ್ತಿರುವುದೇಕೆ? ಈ ತಪಸ್ಸಿನಿಂದ ಏನು ಫಲವನ್ನು ಪಡೆಯಬೇಕೆಂದಿರುವೆ?' ಎಂದು ಕೇಳಿದರು.

'ಓ ಮುನಿಶ್ರೇಷ್ಠರೇ, ಶಿವನನ್ನು ಮದುವೆಯಾಗ ಬಯಸಿ, ನನ್ನ ಮನಸ್ಸು ರೆಕ್ಕೆಯಿಲ್ಲದ ಹಕ್ಕಿಯಂತೆ ಆಶಾಗಗನದಲ್ಲಿ ಹಠದಿಂದ ಹಾರುತ್ತಿತ್ತು. ಆಗ ನಾರದಮುನಿ ತಪಸ್ಸಿನ ಮೂಲಕ ರುದ್ರನ ಪಡೆಯುವ ಮಾರ್ಗದರ್ಶನ ನೀಡಿದರು. ಅದರಂತೆ ತಪಸ್ಸು ಮಾಡುತ್ತಿದ್ದೇನೆ' ಎಂದಳು.

ಸಪ್ತರ್ಷಿಗಳು ಅವಳನ್ನು ಪರೀಕ್ಷಿಸಲು, 'ಗಿರಿಜೆ, ನೀನು ತಿಳಿವಳಿಕೆಯುಳ್ಳವಳು. ಹೀಗಿದ್ದೂ ನೀನು ಮೋಸಗಾರನಾದ ನಾರದನ ಮಾತನ್ನು ನಂಬಿದ್ದು ಸರಿಯಲ್ಲ. ನಾರದ ಒಬ್ಬ ಕಪಟಿ ಎಂಬುದಕ್ಕೆ ಹಲವು ದೃಷ್ಟಾಂತಗಳಿವೆ.

ಬ್ರಹ್ಮಪುತ್ರನಾದ ದಕ್ಷಬ್ರಹ್ಮನು ತಂದೆಯ ಆಜ್ಞೆಯಂತೆ ತನ್ನ ಹೆಂಡತಿಯಲ್ಲಿ ಹತ್ತು ಸಾವಿರ ಮಕ್ಕಳನ್ನು ಪಡೆದ. ಅವರೆಲ್ಲರನ್ನೂ ಪ್ರಜೋತ್ಪಾದನೆಗಾಗಿ ತಪಸ್ಸು ಮಾಡಿರೆಂದು ನಿಯಮಿಸಿದರೆ, ಅಲ್ಲಿಗೆ ಬಂದ ನಾರದ ಅವರ ಮನಸ್ಸು ಕೆಡಿಸಿ ಸನ್ಯಾಸಿಗಳಾಗುವಂತೆ ಮಾಡಿದ. ಮತ್ತೆ ದಕ್ಷಬ್ರಹ್ಮ ಸಾವಿರ ಮಕ್ಕಳ ಉತ್ಪಾದನೆ ಮಾಡಿ, ಆ ಮಕ್ಕಳನ್ನು ತಪಸ್ಸಿಗೆ ಕಳುಹಿಸಿದ. ನಾರಾಯಣ ಸರೋವರದ ಹತ್ತಿರ ತಪಸ್ಸಿಗೆ ಕುಳಿತ ಅವರನ್ನೂ ನಾರದ ಭಿಕ್ಷುಗಳಾಗಿ ಮಾಡಿದ. ಇಂಥ ಕಪಟಿಯನ್ನು ನಂಬಿ ಹೇಗೆ ರುದ್ರನ ಬಯಸಿ ಉಗ್ರ ತಪಸ್ಸು ಮಾಡುತ್ತಿರುವೆ?

ಚಿತ್ರಕೇತುವೆಂಬ ವಿದ್ಯಾಧರನಿದ್ದ. ಅವನಿಗೂ ಈ ನಾರದ ಉಪದೇಶ ಮಾಡಿ, ಆ ಗಂಧರ್ವನಿಗೆ ಮನೆಯೇ ಬೇಡವಾದಂತಾಯಿತು. ಪ್ರಹ್ಲಾದನಿಗೆ ಹರಿನಾಮದ ಉಪದೇಶಮಾಡಿ ತಂದೆ ಹಿರಣ್ಯಕಶಿಪುವಿನಿಂದಲೇ ತುಂಬಾ ದುಃಖಪಡುವಂತೆ ಮಾಡಿದ. ಹೀಗೆ ನಾರದನಿಂದ ಮೋಸಹೋದವರು ಬಹಳಷ್ಟಿದ್ದಾರೆ. ನೀನು ಸಹ ಅವನ ಉಪದೇಶ ನಂಬಿ ಮೋಸ ಹೋಗಿರುವೆ' ಎಂದರು ಸಪ್ತರ್ಷಿಗಳು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಸೆ. 17ರಂದು ನಮೀಬಿಯಾದಿಂದ ಭಾರತಕ್ಕೆ ಎಂಟು ಚೀತಾಗಳನ್ನು ವಿಶೇಷ ವಿಮಾನದ ಮೂಲಕ ತರಲಾಯಿತು. 'ಚೀತಾಗಳನ್ನು ತರಲು ಸರ್ಕಾರದ ಒಡೆತನದ ವಿಶೇಷ ವಿಮಾನವನ್ನು ನಮೀಬಿಯಾಕ್ಕೆ ಕಳುಹಿಸಲಾಗಿದೆ' ಎಂದು ಅಲ್ಲಿನ ಹೈಕಮಿಷನ್ ಟ್ವೀಟ್ ಮಾಡಿತ್ತು. ಮುಂಭಾಗದಲ್ಲಿ ಚೀತಾ ಚಿತ್ರವನ್ನು ಬಿಡಿಸಲಾಗಿದ್ದ ವಿಮಾನವನ್ನು ಇದಕ್ಕಾಗಿಯೇ ಸಿದ್ಧಪಡಿಸಲಾಗಿದೆ ಎಂಬ ವಿಚಾರ ಭಾರಿ ಚರ್ಚೆಯಾಗಿತ್ತು. ಆಲ್ ಇಂಡಿಯಾ ರೇಡಿಯೊ, ಎಎನ್‌ಐ ಸೇರಿದಂತೆ ಹಲವು ವೆಬ್‌ಸೈಟ್‌ಗಳು ವಿಮಾನದ ಚಿತ್ರವನ್ನು ಟ್ವೀಟ್ ಮಾಡಿದ್ದವು.

ಭಾರತಕ್ಕೆ ಕರೆತಂದ ಚೀತಾಗಳಿಗೂ, ವಿಮಾನದ ಮೇಲಿನ ಹುಲಿ ಚಿತ್ರಕ್ಕೂ ಏನಿದೆ ನಂಟು?

ವಿಮಾನದ ಮುಂಭಾಗದಲ್ಲಿ ಬಿಡಿಸಲಾಗಿರುವ ಚಿತ್ರ ಚೀತಾದ್ದಲ್ಲ, ಅದು ಹುಲಿಯ ಚಿತ್ರ ಎಂದು ಲಾಜಿಕಲ್ ಇಂಡಿಯನ್ ವೆಬ್‌ಸೈಟ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ. ಸರ್ಕಾರಿ ಒಡೆತನದ ವಿಮಾನವನ್ನು ಚೀತಾ ಕರೆತರಲೆಂದೇ ಮಾರ್ಪಡಿಸಿ, ಅದರ ಮೇಲೆ ಚೀತಾ ಚಿತ್ರ ಬಿಡಿಸಲಾಗಿದೆ ಎಂಬುದು ತಪ್ಪು ಮಾಹಿತಿ. ಮಾಲ್ಡೋವಿಯಾದ ಟೆರ್ರಾ ಏವಿಯಾ ಕಂಪನಿಯ ವಿಮಾನದ ಮೂಲಕ ಚೀತಾಗಳನ್ನು ಕರೆತರಲಾಗಿದೆ. ಆ ವಿಮಾನದ ಮೇಲೆ ಅಮೂರ್ ಹುಲಿ ಅಥವಾ ಸೈಬೀರಿಯನ್ ಹುಲಿಗಳ ಸಂರಕ್ಷಣೆ ಅಭಿಯಾನದಡಿ ಜಾಗೃತಿ ಮೂಡಿಸಲು ಹುಲಿಯ ಚಿತ್ರವನ್ನು ಬಿಡಿಸಲಾಗಿದೆ. ಭಾರತದ ಚೀತಾ ಯೋಜನೆಗೂ ವಿಮಾನದ ಮೇಲಿನ ಹುಲಿ ಚಿತ್ರಕ್ಕೂ ಸಂಬಂಧವಿಲ್ಲ ಎಂದು ವೆಬ್‌ಸೈಟ್ ತಿಳಿಸಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಹಿರಿದಾದ ಮಹಿಮೆಗಳು

ಮೆರೆಯುವವು ನೂರಾರು ಮೈಮೆಗಳು ಸೃಷ್ಟಿಯಲಿ |
ಧರಣಿಯವು, ಗಗನದವು, ಮನುಜಯತ್ನದವು ||
ಪಿರಿದೆಂಬೆನವುಗಳೊಳು ಧರುಮವರಿತವನೊಲುಮೆ
ಅರಿವುಳ್ಳೊಲುಮೆ ಪಿರಿದು – ಮಂಕುತಿಮ್ಮ ||721||

ಪದ-ಅರ್ಥ: ಮೈಮೆಗಳು = ಮಹಿಮೆಗಳು, ಪಿರ-ದೆಂಬೆನವುಗಳೊಳು = ಪಿರಿದು(ಹಿರಿದಾದದ್ದು) + ಎಂಬೆನು + ಅವುಗಳೊಳು(ಅವುಗಳಲ್ಲಿ), ಧರುಮ-ವರಿತವನೊಲುವೆ = ಧರುಮದ(ಧರ್ಮವ) + ಅ-ರಿತವನ + ಒಲುಮೆ, ಅರಿವುಳ್ಳೊಲುಮೆ = ಅರಿವು-ಳ್ಳ + ಒಲುಮೆ, ಪಿರಿದು = ಹಿರಿದು.

ವಾಚ್ಯಾರ್ಥ: ಜಗತ್ತಿನಲ್ಲಿ ನೂರಾರು ಮಹಿಮೆಗಳು ಮೆರೆಯುವುದು ಕಾಣುತ್ತದೆ. ಅವುಗಳಲ್ಲಿ ಕೆಲವು ಭೂಮಿಯವು, ಆಕಾಶದವು, ಮನುಷ್ಯ ಪ್ರಯತ್ನದವು. ಆ ಮಹಿಮೆಗಳಲ್ಲಿ ಹಿರಿದಾದವುಗಳು ಧರ್ಮವನ್ನು ತಿಳಿದವನ ಮತ್ತು ಅರಿವನ್ನು ಹೊಂದಿದ ಒಲುಮೆಗಳು.

ವಿವರಣೆ: ಜಗತ್ತಿನಲ್ಲಿ ಅನೇಕ ಮಹಿಮೆಗಳು ಕಾಣುತ್ತ ಅದನ್ನು ಅತ್ಯಂತ ಆಕರ್ಷಕವಾಗಿ, ಮೈಮರೆಯುವಂತೆ ಮಾಡಿವೆ. ಅವುಗಳಲ್ಲಿ ಕೆಲವು ಭೂಮಿಗೆ ಸಂಬಂಧಿಸಿದವು. ಭೂಮಿಯ ಪ್ರಾಕೃತಿಕ ಸಂಗತಿಗಳು ಅದ್ಭುತವಾಗಿವೆ.

ತುರ್ಕಾನಾದ ಸರೋವರದ ಅತ್ಯಂತ ಕ್ಷಾರೀಯಗುಣ, ನಿತ್ಯವೂ ಮಳೆಯಾಗುವ ದಕ್ಷಿಣ ಅಮೇರಿಕೆಯ ಮೌಂಟ್ ರೋರೈಮಾದ ಅತ್ಯಂತ ಎತ್ತರದ ಪರ್ವತ, ಕೆನಡಾದ ಕ್ವಿಬೆ-ಕ್‌ನಲ್ಲಿರುವ ಕಲ್ಪನಾತೀತವಾದ ಬೃಹತ್ ಕುಳಿ, ವೆನೆಜುವೆಲಾದ ಅತ್ಯದ್ಭುತವಾದ ಏಂಜೆಲ್ಸ ಜಲಪಾತ ಇವುಗಳೊಂದಿಗೆ ನಮ್ಮವೆ ಆದ ಹಿಮವತ್ ಪರ್ವತಗಳು, ವಿಶಾಲ ಮರುಭೂಮಿಗಳು, ಬೆರಗು ಹುಟ್ಟಿಸುವ ಅಮೆಜಾನ್ ಕಾಡುಗಳು, ಈ ಭೂಮಿಯ ನಿಸರ್ಗ ಶ್ರೀಮಂತಿಕೆಯನ್ನು ಹೆಚ್ಚಿಸಿವೆ. ಇದಲ್ಲದೆ ಆಕಾಶದ ವೈಭವವೇನು ಕಡಿಮೆಯದೆ? ಅಲ್ಲಿ ಏನೂ ಇಲ್ಲ ಎನ್ನುವ ವಿಸ್ತಾರದಲ್ಲಿ ಏನಿಲ್ಲ? ತಾರೆಗಳು, ಗ್ರಹಗಳು, ಸೂರ್ಯ, ಚಂದ್ರ, ನಿಹಾರಿಕೆಗಳು, ಧೂಮಕೇತುಗಳು, ಕಪ್ಪು ರಂಧ್ರಗಳು, ಸತತ ಸುತ್ತುವ ಆಕಾಶಕಾಯಗಳು. ಇವೆಲ್ಲ ಕಿಕ್ಕಿರಿದು ನೆರೆದು ಬೆರಗು ಹುಟ್ಟಿಸಿವೆ. ಈ ನೈಸರ್ಗಿಕ ಅದ್ಭುತಗಳೊಂದಿಗೆ ಮನುಷ್ಯನ ಬುದ್ಧಿವಂತಿಕೆ, ಪರಿಶ್ರಮಗಳು ಬೆರೆತು ಮತ್ತಷ್ಟು ಮಹಿಮೆಗಳನ್ನು ಸೃಷ್ಟಿಸಿವೆ. ಪ್ರಪಂಚದ ಅದ್ಭುತಗಳಾದ ಚೀನಾದ ಗೋಡೆ, ತಾಜಮಹಲ, ಪೀಸಾದ ವಾಲಿದ ಗೋಪುರ ಇಂಥವೆಲ್ಲ ಈ ಜಗತ್ತಿನ ಸಿರಿಯನ್ನು ಹಿರಿದಾಗಿಸಿವೆ. ಇವೆಲ್ಲ ಮಹಿಮೆಗಳೇ ಸರಿ. ಆದರೆ ಇವೆಲ್ಲವುಗಳಿಗಿಂತ ಹಿರಿದಾದವು ಎರಡು ವಿಶೇಷ ಮಹಿಮೆಗಳು. ಮೊದಲನೆಯದು ಧರ್ಮವನ್ನು ಚೆನ್ನಾಗಿ ತಿಳಿದ ಒಲುಮೆ.

ಬದುಕಿನಲ್ಲಿ ಒಲುಮೆ ಒಂದು ಬಹುದೊಡ್ಡ ಭಾವ. ವ್ಯಕ್ತಿಗಳನ್ನು, ಸಂಸ್ಥೆಗಳನ್ನು, ದೇಶಗಳನ್ನು ಒಂದುಗೂಡಿಸುವುದು ಒಲುಮೆ. ಆದರೆ ಅದು ಧರ್ಮದ ನೆಲೆಯ ಮೇಲೆ ನಿಂತಿರಬೇಕು. ಅದು ಸ್ತ್ರೀ- ಪುರುಷರ ನಡುವಿನ ಒಲುಮೆಯಾಗಬಹುದು, ಎರಡು ಜನರ ಮಧ್ಯದ ಸ್ನೇಹವಾಗಬಹುದು, ಕೆಲವು ದೇಶಗಳ ನಡುವಿನ ಬಾಂಧವ್ಯವಾಗಬಹುದು, ಇವೆಲ್ಲ ಪ್ರಪಂಚಕ್ಕೆ ಒಳಿತೇ. ಆದರೆ ಅವು ಧರ್ಮದ ಆಧಾರದಲ್ಲಿ ಇದ್ದಾಗ ಪ್ರಪಂಚವನ್ನು ಕಟ್ಟುತ್ತವೆ. ಅಧರ್ಮದ ಒಲವಾದರೆ ಅದು ಜಗತ್ತನ್ನು ಒಡೆದು-ಹಾಕುತ್ತದೆ. ಇದೆಲ್ಲಕ್ಕೂ ಸರಿಯಾದ ತಿಳಿವು ಬೇಕು. ಅದೇ ಅರಿವಿನ ಒಲುಮೆ. ಹೀಗೆ ಧರ್ಮದ ಹಾಗೂ ತಿಳಿವಿನ ನೆಲೆಯಲ್ಲಿ ಹೊಳೆದ ಒಲವು ಸೃಷ್ಟಿಯ ಅನೇಕ ಮಹಿಮೆಗಳಲ್ಲಿ ಪ್ರಮುಖವಾದವು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ ಶುಕ್ರವಾರ ಸೆಪ್ಟೆಂಬರ್ 23, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ತ್ರಯೋದಶಿ ಗಂ.26-31
ನಕ್ಷತ್ರ: ಮಘಾ ಗಂ.27-51 ಯೋಗ: ಸಿದ್ಧ ಗಂ.09-55,
ಕರಣ: ಗರಜೆ ಗಂ.13-59, ಕನ್ಯಾ ಮಾಸದ 06 ನೇ ದಿನ.
ರಾಹುಕಾಲ: ಬೆಳಿಗ್ಗೆ 10:30–12:00 ಸೂರ್ಯೋದಯ : 06-23 ಸೂರ್ಯಾಸ್ತ : 06-23
ಮುಸ್ಲಿಂ ದಿನಾಂಕ: 26 ಸಫರ್ ದಿನ ವಿಶೇಷ : ಮಾಘ-ತ್ರಯೋದಶಿ, ಪಕ್ಷ ಪ್ರದೋಷ
ಅದೃಷ್ಟ ಸಂಖ್ಯೆ: 1, 7

ಮೇಷ: ಮಕ್ಕಳಲ್ಲಿ ಹೊಂದಾಣಿಕೆ ತೋರಿ ಬಂದು, ಮನೆಯಲ್ಲಿ ನೆಮ್ಮದಿಯ ವಾತಾವರಣ ಕಂಡುಬರುವುದು. ಕ್ರೀಡಾಪಟುಗಳಿಗೆ ನಿಮ್ಮ ಸಾಮರ್ಥ್ಯ ಪ್ರದರ್ಶನಕ್ಕೆ ಇಂದು ಸೂಕ್ತ ದಿನವಾಗಿದೆ. ಅಭಿಪ್ರಾಯಗಳಿಗೆ ಮನ್ನಣೆಯಿರಲಿ.

ವೃಷಭ: ವ್ಯಾಪಾರ ಕ್ಷೇತ್ರದಲ್ಲಿರುವವರಿಗೆ ಹೊಸ ಯೋಜನೆಯತ್ತ ಮುನ್ನುಗ್ಗುವ ಆಲೋಚನೆ ಬರಲಿದೆ. ನ್ಯಾಯಾಂಗ ಇಲಾಖೆಯವರಿಗೆ ಸ್ವಲ್ಪ ಆರಾಮವೆನಿಸುವುದು. ಔಷಧಿಗಳ ಬಳಕೆಯಲ್ಲಿ ಜ್ಞಾನವಿರಲಿ.

ಮಿಥುನ: ವೃತ್ತಿ ಬದುಕಿನಲ್ಲಿ ನಿಮ್ಮ ಜವಾಬ್ದಾರಿತನ ಕಡಿಮೆಯಾದ ಕಾರಣ ನಿಂದನೆಗೆ ಒಳಗಾಗುವ ಸನ್ನಿವೇಶ ಎದುರಾಗಬಹುದು. ಕೌಟುಂಬಿಕ ವಿಚಾರ ವಿನಿಮಯದ ಸಂದರ್ಭಗಳಲ್ಲಿ ಅನ್ಯ ವ್ಯಕ್ತಿಯ ಪ್ರವೇಶವಾಗದಂತೆ ಜಾಗ್ರತೆವಹಿಸಿ.

ಕರ್ಕಾಟಕ: ನೀರಿನ ಬದಲಾವಣೆಯು ಆರೋಗ್ಯದ ಏರು-ಪೇರಿಗೆ ಕಾರಣವಾಗುವುದು. ಈ ದಿನ ಮನಸ್ಸಿನ ಮಾತನ್ನು ಬಿಟ್ಟು ಇನ್ನೊಬ್ಬರಲ್ಲಿ ಸಲಹೆಯನ್ನು ಕೇಳುವುದು ಅಗತ್ಯವಿರುವುದಿಲ್ಲ.

ಸಿಂಹ: ನಿಮ್ಮ ಯಶಸ್ಸಿನ ಮೆಟ್ಟಿಲಿಗೆ ಶತ್ರು ಬಾಧೆ ಉಂಟಾಗಲಿದೆ. ಪರರಿಗೆ ಉಪಕಾರ ಮಾಡುವುದು ಕಷ್ಟವೆನಿಸಿದರೆ ಸುಮ್ಮನಿರಿ, ಉಪದ್ರವ ಮಾಡಬೇಡಿ. ಅನಿವಾರ್ಯ ಕಾರಣದಿಂದ ಭೋಜನದ ಸಮಯ ವ್ಯತ್ಯಾಸವಾಗುವುದು.

ಕನ್ಯಾ: ಕೆಲಸಗಾರರಲ್ಲಿ ಸಮಾಧಾನ ಚಿತ್ತದಿಂದಿರಿ, ಇಲ್ಲವಾದರೆ ಮಾನ ಹಾನಿಯಾಗಬಹುದು. ಸ್ವಪ್ರೇರಣೆ, ಸ್ವಪ್ರಯತ್ನದಿಂದ ಕೈಗೊಂಡ ನಿಮ್ಮ ಕೆಲಸ ಕಾರ್ಯಗಳು ಈ ದಿನ ಫಲ ನೀಡಲಿದೆ. ಆದಾಯದಲ್ಲಿ ಕೊರತೆ ಇರದು.

ತುಲಾ: ಷೇರು ಪೇಟೆ ವ್ಯವಹಾರದಲ್ಲಿರುವವರು ಹೆಚ್ಚಿನ ಹೂಡಿಕೆಯನ್ನು ಇಂದು ಮಾಡದಿರಿ. ತಾಂತ್ರಿಕ ವೃತ್ತಿಯವರಿಗೆ ನಿಮ್ಮ ಕಾರ್ಯರಂಗದಲ್ಲಿ ಮತ್ತು ಕಾರ್ಯ ಸ್ಥಳದಲ್ಲಿ ನಿಮಗೆ ಅನುಕೂಲಕರವಾಗುವ ಘಟನೆ ನಡೆಯಲಿದೆ.

ವೃಶ್ಚಿಕ: ದುರ್ಘಟನೆಯ ನೋವುಗಳು ಪುನಃ ಕಾಡುವುದು. ಉದ್ಯೋಗದಲ್ಲಾಗುವ ಕಿರಿಕಿರಿಗೆ ಮಾನಸಿಕ ಸ್ಥಿತಿಯೇ ಕಾರಣವಾಗಿರುತ್ತದೆ. ಮನಸ್ಸಿನ ಸ್ಥಿತಿ ಬದಲಾಗಲು ವಾಸಸ್ಥಳ ಬದಲಾವಣೆ ಮಾಡಬೇಕಾಗಬಹುದು.

ಧನು: ದಾಯಾದಿಗಳ ಉಪಟಳದಿಂದಾಗಿ ವೈರತ್ವ ಹೆಚ್ಚಾಗುವ ಸಾಧ್ಯತೆಗಳಿದೆ. ಪಿತ್ರಾರ್ಜಿತ ಆಸ್ತಿಯಿಂದಾಗಿ ನಿಮ್ಮ ಆರ್ಥಿಕತೆ ಅಭಿವೃದ್ಧಿಯಾಗುವುದು. ಪಾಲುದಾರಿಕೆ ವ್ಯವಹಾರದವರಿಗೆ ಬಂಡವಾಳದ ಅವಶ್ಯಕತೆ ಬರುವುದು.

ಮಕರ: ಸವಾಲಿನ ದಿನವಾಗಿದೆ. ತೆಗೆದುಕೊಳ್ಳುವ ನಿರ್ಧಾರ ನಿಮ್ಮ ಕುಟುಂಬಕ್ಕೆ ಮಾತ್ರವಲ್ಲದೆ, ನಿಮ್ಮ ಸುತ್ತಲಿನ ಬೇರೆ ಜನರ ಜೀವನಕ್ಕೆ ಕೂಡ ಮಾರ್ಗದರ್ಶಿಯಾಗಲಿದೆ. ಕೆಲವರಿಗೆ ಶಸ್ತ್ರ ಚಿಕಿತ್ಸೆ ಅನಿವಾರ್ಯವಾಗಬಹುದು.

ಕುಂಭ: ಯತ್ನ ಕಾರ್ಯಗಳು ವಿಳಂಬವಾಗುವ ಸಂಭವವಿದೆ. ಸಂಬಂಧವಿರದ ಕೆಲಸಕ್ಕಾಗಿ ತಿರುಗಾಟ ಆದರೂ ಹೊಸ ಜನರ ಪರಿಚಯ ಹಾಗೂ ಹೊಸ ಅನುಭವ ನೆಮ್ಮದಿಯನ್ನು ತರುತ್ತದೆ. ಕೆಲಸದ ಬಗ್ಗೆ ಮೆಚ್ಚುಗೆ ವ್ಯಕ್ತವಾಗುತ್ತದೆ.

ಮೀನ: ಮೇಲಧಿಕಾರಿಗಳೊಂದಿಗೆ ವ್ಯವಹರಿಸುವಾಗ ನಿರ್ಧಾರಗಳನ್ನು ಅವರಿಗೆ ಅರ್ಥವಾಗುವ ರೀತಿಯಲ್ಲಿ ಸರಿಯಾಗಿ ಸ್ಪಷ್ಟ ಪಡಿಸುವುದು ಒಳ್ಳೆಯದು. ತಪ್ಪಿದ ಪ್ರಯಾಣದಿಂದ ವಿರಾಮಕ್ಕೆ ಅವಕಾಶವಿರುವುದು

ಪದಬಂಧ 5088

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಯಾರ ಸಹಾಯವೂ ಇಲ್ಲದಿರುವಿಕೆ (6)
4.ಎಲ್ಲಾ ಕಡೆಯಿಂದ ಉಂಟಾದ ನಿರ್ಬಂಧ (4)
5.ಎದುರು ಬಂದಾಗ ಹೀಗೆ ಜೋರು ಮಾಡು! (3)
7.ಸಾವಕಾಶವಾಗಿ ಹೆಚ್ಚಾಗಿರುವ ತೇಜಸ್ಸು (3)
10.ಆತುರದಿಂದ ಓಡುತ್ತಿರುವ ಕುದುರೆ (3)
12. ಬರವಿದ್ದಾಗ ಕಾಣಿಸಿದ ಬೇಡ (3)
13.ಮಧುರವಾದ ಧ್ವನಿಯಿದು (4)
15.ವ್ರತೋಪವಾಸಗಳಿಂದ ದೇಹವನ್ನು ನಿಗ್ರಹಿಸುವುದು (6)

ಮೇಲಿಂದ ಕೆಳಕ್ಕೆ

1.ಜಗಲಿಯ ಹತ್ತಿರ ಕಾಣಿಸಿದ ಹೆಬ್ಬಾವು (4)
2.ಬೆಂಕಿಗೆ ಗಾಳಿಯೂದುವ ಸಲಕರಣೆ (2)
3.ನಾಲ್ಕು ಆಶ್ರಮಗಳಲ್ಲಿ ಮೂರನೆಯದು (4)
6.ದೃಢಪಡಿಸುವ ಸಾಧನ (4)
7.ಇದು ಕನ್ನಡಿಗನ ಎಕ್ಸ್‌ಪರಿಮೆಂಟ್ (3)
8. ಪದಗಳ ಅರ್ಥವನ್ನು ಹೇಳುವ ಗ್ರಂಥ (4)
9.ಕರದಲ್ಲಿ ಹಿಡಿದುಕೊಂಡಿರುವ ಪಚ್ಚೆ (4)
11.ರಾಜನ ಗೃಹವಿದು (4)
14.ಅಧೀನತೆಗೊಳಪಟ್ಟದ್ದು (2)

1					2	■	■	3
	■	■	■	■	4			
5		6	■	■	■	■	■	
	■		■	7		8	■	
■	■		■		■		■	■
9	■	10			■		■	11
	■	■	■	■	■	12		
13			14	■	■	■	■	
	■	■	15					

5087ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸುಲಭೋಪಾಯ
4.ವಿಪ್ಲವ 5.ಮತ್ಸರ
6.ಹತಾಶೆ 8.ಮಯ
9.ಬಾಕು 11.ಮಂದಿರ
14.ಜವಾನ 15.ಅವನಿ
16.ನವೀಕರಣ

ಮೇಲಿಂದ ಕೆಳಕ್ಕೆ:
1.ಸುಸಜ್ಜಿತ 2.ಭೋಜನಾಲಯ
3.ಯಮಳ 4.ವಿರಹ
7.ತಾರೀಕು 8.ಮಡದಿ
9.ಬಾಲಬಡಿಕ 10.ಕದುಜಾಣ
12.ರಜನಿ 13.ಆನನ

ಸುಡೊಕು 5474

1		3	5		6		4	
				4			8	
7		4	9			5		3
9	1							8
		7		9			1	
	2							4
8		1		5			6	
	5		1		4	8		9
4		9		6			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5473ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಹಣ ಅಕ್ರಮ ವರ್ಗಾವಣೆ ಸೇರಿ ವಿವಿಧ ರಾಜ್ಯಗಳಲ್ಲಿ ಹಲವು ಪ್ರಕರಣಗಳು: ಎನ್‌ಐಎ

ಪಿಎಫ್‌ಐ ನಿಷೇಧಿಸಲು ಕೇಂದ್ರ ಸರ್ಕಾರ ಸಜ್ಜು?

ನವದೆಹಲಿ (ಪಿಟಿಐ): ಮುಸ್ಲಿಂ ಸಂಘಟನೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಮೇಲೆ ನಿಷೇಧ ಹೇರುವ ಸಾಧ್ಯತೆ ದಟ್ಟವಾಗಿದೆ.

ಪಿಎಫ್‌ಐಯನ್ನು ನಿಷೇಧಿಸುವ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರ ಆರಂಭಿಸಿದೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಸುಪ್ರೀಂ ಕೋರ್ಟ್‌ಗೆ ಕಳೆದ ವರ್ಷ ಹೇಳಿದ್ದರು. ಪಿಎಫ್‌ಐನ ಹಲವು ಕಾರ್ಯಕರ್ತರು ನಿಷೇಧಿತ ಸಂಘಟನೆ ಸಿಮಿಯ ಜತೆ ನಂಟು ಹೊಂದಿದ್ದವರು ಎಂದೂ ಅವರು ಹೇಳಿದ್ದರು.

ಕಾನೂನುಬಾಹಿರ ಚಟುವಟಿಕೆ (ತಡೆ) ಕಾಯ್ದೆ ಅಡಿಯಲ್ಲಿ ಪಿಎಫ್‌ಐ ಅನ್ನು ನಿಷೇಧಿಸುವ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ ಎಂದು 2018ರಲ್ಲಿ ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವರಾಗಿದ್ದ ಕಿರಣ್ ರಿಜಿಜು ಹೇಳಿದ್ದರು.

ಪೌರತ್ವ (ತಿದ್ದುಪಡಿ) ಕಾಯ್ದೆ ವಿರುದ್ಧದ ಪ್ರತಿಭಟನೆಗಳ ಬಳಿಕ, ಪಿಎಫ್‌ಐ ಸಂಘಟನೆಯನ್ನು ನಿಷೇಧಿಸಬೇಕು ಎಂದು ಉತ್ತರ ಪ್ರದೇಶ ಸರ್ಕಾರವು 2019ರ ಡಿಸೆಂಬರ್‌ನಲ್ಲಿ ಕೇಂದ್ರಕ್ಕೆ ಶಿಫಾರಸು ಮಾಡಿತ್ತು.

ದೇಶದ ವಿವಿಧ ಭಾಗಗಳಲ್ಲಿ ನಡೆದ ಹಿಂಸಾಕೃತ್ಯಗಳು, ಪ್ರತಿಭಟನೆಗಳು, ಹಣ ಅಕ್ರಮ ವರ್ಗಾವಣೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಂಘಟನೆಯ ಮೇಲೆ ನಿಗಾ ಇರಿಸಲಾಗಿತ್ತು. ಕಳೆದ ಕೆಲವು ವರ್ಷಗಳಲ್ಲಿ ಪಿಎಫ್‌ಐ, ಅದರ ಕಾರ್ಯಕರ್ತರು ಮತ್ತು ಪದಾಧಿಕಾರಿಗಳ ಮೇಲೆ ವಿವಿಧ ರಾಜ್ಯಗಳಲ್ಲಿ ಹಲವು ಅಪರಾಧ ಪ್ರಕರಣಗಳು ದಾಖಲಾಗಿವೆ ಎಂದು ಅಧಿಕಾರಿಗಳು ಗುರುವಾರ ಹೇಳಿದ್ದಾರೆ.

2006ರಲ್ಲಿ ಪಿಎಫ್‌ಐ ಆರಂಭವಾಯಿತು. 1993ರಲ್ಲಿ ಬಾಬರಿ ಮಸೀದಿ ಧ್ವಂಸದ ಬಳಿಕ ನ್ಯಾಷನಲ್ ಡೆವಲಪ್‌ಮೆಂಟ್ ಫ್ರಂಟ್ ಎಂಬ ಸಂಘಟನೆ ರಚಿಸಲಾಗಿತ್ತು. ಅದರ ಭಾಗವಾಗಿ ಪಿಎಫ್‌ಐ ಸ್ಥಾಪನೆಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಗುರುವಾರ ನಡೆಸಿದ ಕಾರ್ಯಾಚರಣೆಯಲ್ಲಿ ಮಹಾರಾಷ್ಟ್ರದಲ್ಲಿ 20, ತಮಿಳುನಾಡಿನಲ್ಲಿ 10, ಅಸ್ಸಾಂನಲ್ಲಿ 9, ಉತ್ತರ ಪ್ರದೇಶದಲ್ಲಿ 8, ಆಂಧ್ರ ಪ್ರದೇಶದಲ್ಲಿ 5, ಮಧ್ಯ ಪ್ರದೇಶದಲ್ಲಿ 4, ಪುದುಚೇರಿ ಮತ್ತು ದೆಹಲಿಯಲ್ಲಿ ತಲಾ 3 ಮತ್ತು ರಾಜಸ್ಥಾನದಲ್ಲಿ ಇಬ್ಬರನ್ನು ಬಂಧಿಸಲಾಗಿದೆ.

ಇ.ಡಿ. ತನಿಖೆ: ಪೌರತ್ವ (ತಿದ್ದುಪಡಿ) ಕಾಯ್ದೆಯ ವಿರುದ್ಧದ ಪ್ರತಿಭಟನೆ, 2020ರ ದೆಹಲಿ ಗಲಭೆ, ಉತ್ತರ ಪ್ರದೇಶದ ಹಾಥರಸ್‌ನಲ್ಲಿ ದಲಿತ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರಕ್ಕೆ ಸಂಬಂಧಿಸಿ ಗಲಭೆ ಸೃಷ್ಟಿಸುವುದಕ್ಕಾಗಿ ಹಣಕಾಸು ನೆರವು ನೀಡಿದ ಆರೋಪದ ಪ್ರಕರಣವನ್ನು ಇ.ಡಿ. ತನಿಖೆ ನಡೆಸುತ್ತಿದೆ. ಲಖನೌದ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ನ್ಯಾಯಾಲಯದಲ್ಲಿ ಪಿಎಫ್‌ಐ ಮತ್ತು ಅದರ ಪದಾಧಿಕಾರಿಗಳ ಮೇಲೆ ಎರಡು ಆರೋಪಪಟ್ಟಿ ದಾಖಲಿಸಲಾಗಿದೆ.

ಜಾರಿ ನಿರ್ದೇಶನಾಲಯವು ಪಿಎಫ್‌ಐ ವಿರುದ್ಧ ಕಳೆದ ಫೆಬ್ರುವರಿಯಲ್ಲಿ ಮೊದಲ ಆರೋಪಪಟ್ಟಿ ಸಲ್ಲಿಸಿತ್ತು. ಎರಡನೇ ಆರೋಪಪಟ್ಟಿ ಈ ವರ್ಷ ಸಲ್ಲಿಕೆಯಾಗಿದೆ. ಅರಬ್ ಸಂಯುಕ್ತ ಸಂಸ್ಥಾನದಲ್ಲಿರುವ ಹೋಟೆಲ್ ಒಂದು ಪಿಎಫ್‌ನ ಹಣ ಅಕ್ರಮ ವರ್ಗಾವಣೆಯ ನೆಲೆಯಾಗಿ ಕೆಲಸ ಮಾಡುತ್ತಿದೆ ಎಂದು ಈ ಆರೋಪಪಟ್ಟಿಯಲ್ಲಿ ಹೇಳಲಾಗಿದೆ.

ಪಿಎಫ್‌ಐ ಆಕ್ರೋಶ

ಎನ್‌ಐಎ ಕಾರ್ಯಾಚರಣೆಯ ವಿರುದ್ಧ ಪಿಎಫ್‌ಐ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೇರಳದಲ್ಲಿ ಶುಕ್ರವಾರ ಮುಂಜಾನೆಯಿಂದ ಮುಸ್ಸಂಜೆವರೆಗೆ ಬಂದ್‌ಗೆ ಕರೆ ಕೊಡಲಾಗಿದೆ. 'ಆರ್‌ಎಸ್‌ಎಸ್ ನಿಯಂತ್ರಣದಲ್ಲಿರುವ ಮತಾಂಧ ಕೇಂದ್ರ ಸರ್ಕಾರವು ಭಿನ್ನಮತವನ್ನು ದಮನಿಸಲು ಯತ್ನಿಸುತ್ತಿದೆ' ಎಂದು ಪಿಎಫ್‌ಐ ಕೇರಳ ಘಟಕದ ಪ್ರಧಾನ ಕಾರ್ಯದರ್ಶಿ ಎ. ಅಬ್ದುಲ್ ಸತ್ತಾರ್ ಹೇಳಿದ್ದಾರೆ.

ಬಂದ್ ಕರೆಯು ಅನಗತ್ಯವಾಗಿತ್ತು. ಬಂದ್‌ಗೆ ಕರೆ ಕೊಟ್ಟವರ ಮೇಲೆ ರಾಜ್ಯ ಸರ್ಕಾರವು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು. ಈ ಹಿಂದೆ, ಪಿಎಫ್‌ಐ ಬಂದ್‌ಗೆ ಕರೆ ಕೊಟ್ಟಾಗಲೆಲ್ಲ ಗಲಭೆ ನಡೆದಿದೆ ಎಂದು ಕೇರಳ ಬಿಜೆಪಿ ಘಟಕದ ಅಧ್ಯಕ್ಷ ಕೆ.ಸುರೇಂದ್ರನ್ ಹೇಳಿದ್ದಾರೆ.

ಕಾನೂನು ಜಾರಿ ಸಂಸ್ಥೆಗಳು ಪಿಎಫ್‌ಐ ಮೇಲೆ ಕೈಗೊಂಡ ಕ್ರಮಗಳ ಕುರಿತಂತೆ ಯುವ ಜನರು ಶಾಂತಿಯಿಂದ ಇರಬೇಕು ಎಂದು ಮುಸ್ಲಿಮರಿಗೆ ಸಂಬಂಧಿಸಿದ ಹಲವು ಸಂಸ್ಥೆಗಳು ಮನವಿ ಮಾಡಿಕೊಂಡಿವೆ.

'ಹಿಂಸೆಯಿಂದ ಜನರಲ್ಲಿ ಭಯ ಬಿತ್ತಿದ ಪಿಎಫ್‌ಐ'

ವಿವಿಧ ಸ್ವರೂಪದ ಹಿಂಸಾತ್ಮಕ ಚಟುವಟಿಕೆಗಳಲ್ಲಿ ಪಿಎಫ್‌ಐ ತೊಡಗಿಸಿಕೊಂಡಿದೆ ಎಂದು ಎನ್‌ಐಎ ಗುರುವಾರ ಆರೋಪಿಸಿದೆ. 'ಇತರ ಧಾರ್ಮಿಕ ನಂಬಿಕೆಯ ಜನರನ್ನು ಅತ್ಯಂತ ನಿರ್ದಯವಾಗಿ ಹತ್ಯೆ ಮಾಡುವುದು, ಗಣ್ಯರನ್ನು ಗುರಿಯಾಗಿಸಿ ದಾಳಿ ಎಸಗಲು ಸ್ಫೋಟಕಗಳನ್ನು ಸಂಗ್ರಹಿಸುವುದು, ಸಾರ್ವಜನಿಕರ ಆಸ್ತಿಯನ್ನು ನಾಶ ಮಾಡುವ ಮೂಲಕ ಜನರ ಮನಸ್ಸಿನಲ್ಲಿ ಭಯದ ಭಾವನೆ ಹುಟ್ಟುಹಾಕುವ ಕೆಲಸವನ್ನು ಪಿಎಫ್‌ಐ ಮಾಡಿದೆ' ಎಂದು ಎನ್‌ಐಎ ಆರೋಪಿಸಿದೆ.

'ಪಿಎಫ್‌ಐ ಮೇಲೆ ಐದು ಪ್ರಕರಣಗಳನ್ನು ದಾಖಲಿಸಲಾಗಿತ್ತು. ಇದರ ಭಾಗವಾಗಿ ಪಿಎಫ್‌ಐನ ಪ್ರಮುಖ ಸದಸ್ಯರನ್ನು ಬಂಧಿಸಲಾಗಿದೆ' ಎಂದು ಎನ್‌ಐಎ ತಿಳಿಸಿದೆ.

ಭಿನ್ನ ದನಿಗಳನ್ನು ಹತ್ತಿಕ್ಕಲು ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿರುವ ಮತಾಂಧ ಆಡಳಿತದ ನಡೆಯನ್ನು ನಾವು ಬಲವಾಗಿ ವಿರೋಧಿಸುತ್ತೇವೆ

ಪಿಎಫ್‌ಐ ಪ್ರಕಟಣೆ

ಕೋಮುವಾದ ಮತ್ತು ಹಿಂಸಾಚಾರದ ಮೂಲ ಯಾವುದೇ ಆಗಿದ್ದರೂ ಅವೆಲ್ಲವೂ ಒಂದೇ. ಅವುಗಳ ಕುರಿತು ಸ್ವಲ್ಪವೂ ಸಹಿಷ್ಣುತೆ ಇರಬಾರದು

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಕೇಂದ್ರ ಗೃಹ ಸಚಿವ ಶಾ ಸಭೆ

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಗೆ ಸೇರಿದ 93 ಸ್ಥಳಗಳಲ್ಲಿ ಶೋಧ ನಡೆಸಿದ ಬೆನ್ನಿಗೇ ಹಿರಿಯ ಅಧಿಕಾರಿಗಳ ಜತೆಗೆ ಗುರುವಾರ ಸಭೆ ನಡೆಸಿದ್ದಾರೆ. ರಾಷ್ಟ್ರೀಯ ಭದ್ರತಾ ಸಲಹೆಗಾಗ ಅಜಿತ್ ಡೊಭಾಲ್, ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಭಲ್ಲಾ, ಎನ್‌ಐಎ ಮಹಾನಿರ್ದೇಶಕ ದಿನಕರ್ ಗುಪ್ತಾ ಮತ್ತು ಇತರ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ಬಂಧಿತರಾದ ಪ್ರಮುಖರು

1. ರಾಷ್ಟ್ರೀಯ ಅಧ್ಯಕ್ಷ ಒ.ಎಂ.ಎ ಸಲಾಂ
2. ಉಪಾಧ್ಯಕ್ಷ ಪಿ.ಕೋಯಾ
3. ಪ್ರಧಾನ ಕಾರ್ಯದರ್ಶಿ ಅಬೂಬಕರ್
4. ದೆಹಲಿ–ಹರಿಯಾಣ ಉಸ್ತುವಾರಿ ಮೌಲಾನಾ ವಾರಿಸ್
5. ದೆಹಲಿ ಘಟಕದ ಅಧ್ಯಕ್ಷ ಪರ್ವೇಜ್ ಅಹ್ಮದ್
6. ಪದಾಧಿಕಾರಿಗಳಾದ ಮೊಹಮ್ಮದ್ ಬಶೀರ್ ಮತ್ತು ನಾಸಿರುದ್ದೀನ್ ಎಳಮಾರನ್

ಪಿಎಫ್‌ಐ ಮೇಲೆ ದಾಳಿ

ಒಂದನೇ ಪುಟದಿಂದ...

'ದೇಶದೊಳಗೆ ಭಯೋತ್ಪಾದನಾ ಚಟುವಟಿಕೆ ನಡೆಸಲು ಪಿಎಫ್‌ಐ ಸಂಘಟನೆ ಮುಖಂಡರು ಹಾಗೂ ಇತರರು, ಹಣ ನೀಡುತ್ತಿದ್ದರು. ಮುಸ್ಲಿಂ ಯುವಕರಿಗೆ ನಾನಾ ಆಮಿಷವೊಡ್ಡಿ ತಮ್ಮತ್ತ ಸೆಳೆದು, ಭಯೋತ್ಪಾದನಾ ಕೃತ್ಯ ಎಸಗಲು ಶಸ್ತ್ರಾಸ್ತ್ರ ತರಬೇತಿ ಕೊಡಿಸುತ್ತಿದ್ದರು ಅಂಥ ಯುವಕರನ್ನು ಐಎಸ್ ಸೇರಿದಂತೆ ವಿವಿಧ ನಿಷೇಧಿತ ಉಗ್ರ ಸಂಘಟನೆ ಸೇರಿಸಲು ವ್ಯವಸ್ಥೆ ಮಾಡುತ್ತಿದ್ದ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ಇದಕ್ಕೆ ಸಂಬಂಧಪಟ್ಟಂತೆ ಪುರಾವೆಗಳನ್ನು ಸಂಗ್ರಹಿಸಿ ದಾಳಿ ಮಾಡಲಾಯಿತು' ಎಂದು ಎನ್‌ಐಎ ಮೂಲಗಳು ಹೇಳಿವೆ.

ಬೆಂಗಳೂರು ಪೊಲೀಸರ ಕಾರ್ಯಾಚರಣೆ: ಕೋಮುಗಳ ಮಧ್ಯೆ ದ್ವೇಷ ಬೆಳೆಸಲು ಸಂಚು ರೂಪಿಸುತ್ತಿದ್ದ ಬಗ್ಗೆ ಕೇಂದ್ರ ತನಿಖಾ ಸಂಸ್ಥೆಗಳಿಂದ ಬಂದ ಮಾಹಿತಿಯಂತೆ ಕೆ.ಜಿ.ಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿಕೊಂಡಿರುವ ಬೆಂಗಳೂರು ಪೊಲೀಸರು, ರಾಜ್ಯದ ಹಲವೆಡೆ ಗುರುವಾರ ಪ್ರತ್ಯೇಕ ಕಾರ್ಯಾಚರಣೆ ನಡೆಸಿದರು.

'ಕ್ರಿಮಿನಲ್ ಸಂಚು (ಐಪಿಸಿ 120–ಬಿ), ರಾಷ್ಟ್ರದ ವಿರುದ್ಧ ಯುದ್ಧ (ಐಪಿಸಿ 121) ಹಾಗೂ ಎರಡು ಕೋಮುಗಳ ಮಧ್ಯೆ ದ್ವೇಷ ಭಾವನೆ ಹೆಚ್ಚಿಸುವ (ಐಪಿಸಿ 153–ಎ) ಆರೋಪದಡಿ 19 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಬೆಂಗಳೂರು, ಶಿವಮೊಗ್ಗ, ಕಲಬುರಗಿ, ಮೈಸೂರು, ದಕ್ಷಿಣ ಕನ್ನಡ, ದಾವಣಗೆರೆ, ಕೊಪ್ಪಳ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಾರ್ಯಾಚರಣೆ ನಡೆಸಿ 15 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ' ಎಂದು ಬೆಂಗಳೂರು ಕಮಿಷನರ್ ಪ್ರತಾಪ್ ರೆಡ್ಡಿ 'ಪತ್ರಿಕಾಗೋಷ್ಠಿ'ಯಲ್ಲಿ ಹೇಳಿದರು.

'ಪಿಎಫ್‌ಐ ಸಂಘಟನೆ ಮುಖಂಡರು ಹಾಗೂ ಕಾರ್ಯಕರ್ತರ ಮನೆಗಳಲ್ಲಿ ಶೋಧ ನಡೆಸಲಾಯಿತು. ದಾಳಿ ವೇಳೆ ನಗದು ಹಾಗೂ ಇತರೆ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದರು.

ಏನೆಲ್ಲ ಜಪ್ತಿ

ನಗದು, ಹರಿತ ಆಯುಧಗಳು, ಡಿಜಿಟಲ್ ಉಪಕರಣಗಳು

'ಅನ್ಯಾಯದ ಬಂಧನ: ಮುಖಂಡರಿಗೆ ಕಿರುಕುಳ'

'ಸಂಘಟನೆಯ ರಾಷ್ಟ್ರೀಯ ಹಾಗೂ ರಾಜ್ಯ ಮುಖಂಡರದ್ದು ಅನ್ಯಾಯದ ಬಂಧನ. ಎನ್‌ಐಎ, ಇ.ಡಿ ಹಾಗೂ ಇತರೆ ತನಿಖಾ ತಂಡಗಳು, ಮುಖಂಡರು ಹಾಗೂ ಕಾರ್ಯಕರ್ತರಿಗೆ ಕಿರುಕುಳ ನೀಡುತ್ತಿವೆ' ಎಂದು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಆರೋಪಿಸಿದೆ.

'ಎನ್‌ಐಎ ವಾದಗಳು ನಿರಾಧಾರವಾಗಿದೆ. ಈ ದಾಳಿಯು, ದೇಶದಲ್ಲಿ ಭೀತಿಯ ವಾತಾವರಣ ಸೃಷ್ಟಿಸುವ ಉದ್ದೇಶದಿಂದ ಕೂಡಿದೆ' ಎಂದೂ ಹೇಳಿದೆ.

'ಕೇಂದ್ರ ಸರ್ಕಾರವು ಸರ್ವಾಧಿಕಾರಿ ಆಡಳಿತ ನಡೆಸುತ್ತಿದ್ದು, ರಾಷ್ಟ್ರೀಯ ತನಿಖಾ ಸಂಸ್ಥೆಗಳನ್ನು ಕೈಗೊಂಬೆಯಾಗಿ ಬಳಸಿಕೊಳ್ಳುತ್ತಿವೆ. ಇದಕ್ಕೆಲ್ಲ ಪಿಎಫ್‌ಐ ಹೆದರುವುದಿಲ್ಲ. ಸಂಘಟನೆಯು ತನ್ನ ನಿಲುವಿಗೆ ಬದ್ಧವಾಗಿದೆ. ನಮ್ಮ ಪ್ರೀತಿಯ ದೇಶದ ಸಾಂವಿಧಾನಿಕ ಸ್ಫೂರ್ತಿ ಹಾಗೂ ಮೌಲ್ಯಗಳನ್ನು ಪುನರ್ ಸ್ಥಾಪಿಸುವ ಹೋರಾಟದಲ್ಲಿ ಸಂಘಟನೆಯು ದೃಢವಾಗಿ ನಿಲ್ಲಲಿದೆ' ಎಂದೂ ಹೇಳಿದೆ.

'ಇಸ್ಲಾಮಿಕ್ ದೇಶ ನಿರ್ಮಿಸಲು ಸಂಚು'

'ಇತ್ತೀಚಿನ ದಿನಗಳಲ್ಲಿ ಪಿಎಫ್‌ಐ ಸಂಘಟನೆ ಮುಖಂಡರು ಹಾಗೂ ಕಾರ್ಯಕರ್ತರು, ಕಾನೂನುಬಾಹಿರ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿದ್ದರು. ಸಂಘಟನೆ ಕೆಲಸಗಳ ಮೇಲೆ ಕಣ್ಣಿಡಲಾಗಿತ್ತು. ದೇಶದಲ್ಲಿ ಭಯೋತ್ಪಾದನಾ ಕೃತ್ಯ ಎಸಗಿ, ಇಸ್ಲಾಮಿಕ್ ದೇಶ ನಿರ್ಮಿಸಲು ಪಿಎಫ್‌ಐ ಸಂಘಟನೆ ಮುಖಂಡರು ಹಾಗೂ ಕಾರ್ಯಕರ್ತರು ಸಂಚು ರೂಪಿಸುತ್ತಿದ್ದ ಬಗ್ಗೆ ಖಚಿತ ಮಾಹಿತಿ ಲಭ್ಯವಾಗಿತ್ತು' ಎಂದು ಎನ್‌ಐಎ ಮೂಲಗಳು ಹೇಳಿವೆ.

'ಕಾಲೇಜು ಪ್ರಾಧ್ಯಾಪಕರ ಕೈ ಕತ್ತರಿಸಿ ಹಿಂಸಾಚಾರಕ್ಕೂ ಪಿಎಫ್‌ಐ ಸಂಘಟನೆಯವರು ಪ್ರಚೋದಿಸಿದ್ದರು. ಇದೇ ರೀತಿಯಲ್ಲೇ ಹಲವು ಪ್ರಕರಣಗಳಲ್ಲಿ ಪಿಎಫ್‌ಐ ಕಾರ್ಯಕರ್ತರು ಭಾಗಿಯಾಗಿದ್ದರು' ಎಂದೂ ತಿಳಿಸಿವೆ.

ಬೆಂಗಳೂರಿನಲ್ಲಿ ಎಲ್ಲೆಲ್ಲಿ ದಾಳಿ

- ಬೆನ್ಸನ್‌ಟೌನ್ ಹಾಗೂ ಪುಲಿಕೇಶಿನಗರದಲ್ಲಿರುವ ಪಿಎಫ್‌ಐ ಕಚೇರಿ
- ಅನಿಸ್ ಅಹ್ಮದ್ ಅವರ ಬಾಗಲೂರು ಮನೆ
- ಅಪ್ಸರ್ ಪಾಷಾ ಅವರ ಟೆಲಿಕಾಂ ಲೇಔಟ್ ಮನೆ
- ಅಬ್ದುಲ್ ವಾಹೀದ್ ಸೇಠ್ ಅವರ ಜಯಮಹಲ್ ಮನೆ
- ಮೊಹಮ್ಮದ್ ಸಾಕೀಬ್ ಅವರ ರಿಚ್ಮಂಡ್ ಟೌನ್ ಫ್ಲ್ಯಾಟ್
- ಯಾಸೀರ್ ಹಸನ್ ಅವರ ಆರ್.ಟಿ.ನಗರ ಭೀಮಣ್ಣ ಲೇಔಟ್ ಮನೆ

ಲಘು ಲಾಠಿ ಪ್ರಹಾರ 48 ಮಂದಿ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ/ಬೆಂಗಳೂರು: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಮುಖಂಡರ ಮನೆಗಳ ಮೇಲೆ ಎನ್‌ಐಎ ನಡೆಸಿದ ದಾಳಿ ಖಂಡಿಸಿ ಬೆಂಗಳೂರು, ಹುಬ್ಬಳ್ಳಿ, ಕಲಬುರಗಿ, ಮೈಸೂರು, ಮಂಗಳೂರು ಸೇರಿದಂತೆ ರಾಜ್ಯದ ಹಲವೆಡೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಹುಬ್ಬಳ್ಳಿಯ ಕೌಲ್‌ಪೇಟೆ ಬಳಿ ಬೆಂಗಳೂರು ರಸ್ತೆ ಬಂದ್ ಮಾಡಿ ಪ್ರತಿಭಟನೆ ನಡೆಸಿದ ಪಿಎಫ್‌ಐ ಕಾರ್ಯಕರ್ತರ ಮೇಲೆ ಪೊಲೀಸರು ಗುರುವಾರ ಲಘು ಲಾಠಿ ಪ್ರಹಾರ ನಡೆಸಿದರು.

ಘಟನೆಗೆ ಸಂಬಂಧಿಸಿದಂತೆ ಸ್ಥಳೀಯ ಮುಖಂಡ ರಿಯಾಜ ಬೆಟಗೇರಿ ಸೇರಿದಂತೆ 48 ಮಂದಿ ವಿರುದ್ಧ ಇಲ್ಲಿನ ಕಮರಿಪೇಟೆ ಪೊಲೀಸ್ ಠಾಣೆಯಲ್ಲಿ ರಾತ್ರಿ ಪ್ರಕರಣ ದಾಖಲಾಗಿದೆ. ಪ್ರತಿಭಟನಾ ನಿರತ 50ಕ್ಕೂ ಹೆಚ್ಚು ಮಂದಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದರು.

ಸುದ್ದಿ 2 ನಿಮಿಷ

ಪಂಚರಾಜ್ಯ ಚುನಾವಣೆ: ಬಿಜೆಪಿ ವ್ಯಯಿಸಿದ್ದು ₹ 340 ಕೋಟಿ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಆರಂಭದಲ್ಲಿ ನಡೆದ ಪಂಚ ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ₹ 340 ಕೋಟಿ ಖರ್ಚು ಮಾಡಿದ್ದರೆ, ಕಾಂಗ್ರೆಸ್ ₹ 194 ಕೋಟಿ ವ್ಯಯಿಸಿದೆ.

ಎರಡೂ ರಾಷ್ಟ್ರೀಯ ಪಕ್ಷಗಳು ಚುನಾವಣಾ ಪ್ರಚಾರ, ಅಭಿಯಾನಗಳಲ್ಲಿ ಮಾಡಿದ ಖರ್ಚು ವೆಚ್ಚಗಳ ಕುರಿತು ಸಲ್ಲಿಸಿರುವ ವರದಿಯನ್ನು ಚುನಾವಣಾ ಆಯೋಗ ಪ್ರಕಟಿಸಿದೆ.

ಈ ವರ್ಷ ಆರಂಭದಲ್ಲಿ ನಡೆದ ಉತ್ತರ ಪ್ರದೇಶ, ಉತ್ತರಾಖಂಡ, ಮಣಿಪುರ, ಗೋವಾ ಮತ್ತು ಪಂಜಾಬ್ ಚುನಾವಣೆಯಲ್ಲಿ ಬಿಜೆಪಿ ಒಟ್ಟು ₹ 340 ಕೋಟಿ ವೆಚ್ಚ ಮಾಡಿದೆ. ಈ ಪೈಕಿ ಉತ್ತರ ಪ್ರದೇಶದಲ್ಲಿ ಅತ್ಯಧಿಕ ಅಂದರೆ ₹ 221 ಕೋಟಿ ಖರ್ಚು ಮಾಡಿದೆ. ಉತ್ತರಾಖಂಡದಲ್ಲಿ ₹ 43.67 ಕೋಟಿ, ಪಂಜಾಬ್‌ನಲ್ಲಿ ₹ 36 ಕೋಟಿ, ಮಣಿಪುರದಲ್ಲಿ ₹ 23 ಕೋಟಿ ಹಾಗೂ ಗೋವಾ ಚುನಾವಣೆಯಲ್ಲಿ ₹ 19 ಕೋಟಿಯನ್ನು ಬಿಜೆಪಿ ವ್ಯಯಿಸಿದೆ.

403 ವಿಧಾನಸಭೆಯಲ್ಲಿರುವ ಒಟ್ಟು ಸದಸ್ಯರ ಸಂಖ್ಯೆ

47 ಮಹಿಳಾ ಸದಸ್ಯರ ಸಂಖ್ಯೆ

ಲಖನೌ: ಮಹಿಳಾ ಸದಸ್ಯರಿಗಾಗಿಯೇ ಒಂದು ದಿನದ ಅಧಿವೇಶನ ಮೀಸಲು

ಲಖನೌ: ಗುರುವಾರ ನಡೆದ ವಿಧಾನಸಭೆಯ ಮುಂಗಾರು ಅಧಿವೇಶನವನ್ನು ಸಂಪೂರ್ಣ ಮಹಿಳಾ ಸದಸ್ಯರಿಗಾಗಿಯೇ ಮೀಸಲಿಡುವುದರ ಮೂಲಕ ಉತ್ತರ ಪ್ರದೇಶದಲ್ಲಿ ಇತಿಹಾಸ ನಿರ್ಮಿಸಲಾಗಿದೆ.

ಅಧಿವೇಶನದಲ್ಲಿ ಕೇವಲ ಮಹಿಳಾ ಸದಸ್ಯರು ಮಾತ್ರವೇ ಮಾತನಾಡಿದರು. ಇವರೊಂದಿಗೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮತ್ತು ವಿರೋಧ ಪಕ್ಷದ ನಾಯಕ ಅಖಿಲೇಶ್ ಯಾದವ್ ಅವರ ಮಾತುಗಳಿಗೆ ಮಾತ್ರವೇ ಅವಕಾಶ ಕಲ್ಪಿಸಲಾಗಿತ್ತು.

ಒಟ್ಟಾರೆಯಾಗಿ ಮಹಿಳಾ ವಿಷಯದ ಕುರಿತು ಅಥವಾ ತಮ್ಮ ತಮ್ಮ ಕ್ಷೇತ್ರಗಳಲ್ಲಿನ ಸಮಸ್ಯೆಗಳ ಕುರಿತು ಮಹಿಳಾ ಸದಸ್ಯರು ಮಾತನಾಡಿದರು. ಕೆಲವರು ಕವಿತೆಗಳನ್ನೂ ವಾಚನ ಮಾಡಿದರು.

'ಈ ಕೆಲಸವನ್ನು ಬಹಳ ಹಿಂದೆಯೇ ಮಾಡಬೇಕಾಗಿತ್ತು. ಉತ್ತರ ಪ್ರದೇಶ ವಿಧಾನಸಭೆಯು ಇಂದು ಇತಿಹಾಸ ನಿರ್ಮಿಸಿದೆ. ವಿಧಾನಸಭೆಗಳಲ್ಲಿ ಮಹಿಳಾ ಸದಸ್ಯರಿಗೆ ಮಾತನಾಡಲೂ ಅವಕಾಶವನ್ನೇ ನೀಡಲಾಗುವುದಿಲ್ಲ. ಯಾವಾಗಲೂ ಪುರುಷ ಸದಸ್ಯರೇ ಅಧಿಪತ್ಯ ಸಾಧಿಸುತ್ತಾರೆ' ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಹೇಳಿದರು.

ವಿರೋಧ ಪಕ್ಷದ ನಾಯಕ ಅಖಿಲೇಶ್ ಯಾದವ್ ಅವರು ಮಾತನಾಡಿ, 'ಮಹಿಳೆಯ ಮೇಲಿನ ಅಪರಾಧ ಪ್ರಕರಣಗಳು ಏರಿಕೆ ಆಗುತ್ತಿವೆ. ಇದನ್ನು ನಿಯಂತ್ರಿಸಲು ಕಠಿಣ ಕಾನೂನು ತನ್ನಿ' ಎಂದು ಅವರು ಹೇಳಿದರು.

ದಾಳಿಗೆ ಎಸ್‌ಡಿಪಿಐ ಖಂಡನೆ

ಮೈಸೂರು: 'ಕೇಂದ್ರ ಸರ್ಕಾರವು ತನಿಖಾ ಸಂಸ್ಥೆಗಳಾದ ಎನ್‌ಐಎ, ಜಾರಿ ನಿರ್ದೇಶನಾಲಯ, ಸಿಬಿಐ ಸಂಸ್ಥೆಗಳನ್ನು ಬಳಸಿಕೊಂಡು ದೇಶದಲ್ಲಿ ಭಯದ ವಾತಾವರಣ ಸೃಷ್ಟಿಸುತ್ತಿದೆ' ಎಂದು ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ರಾಜ್ಯ ಘಟಕದ ಅಧ್ಯಕ್ಷ ಅಬ್ದುಲ್ ಮಜೀದ್ ಹೇಳಿದರು.

ಗುರುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಮಂಗಳೂರು, ಮೈಸೂರು ಸೇರಿದಂತೆ ದೇಶದಾದ್ಯಂತ ಪಿಎಫ್‌ಐ, ಎಸ್‌ಡಿಪಿಐ ಕಚೇರಿಗಳು ಹಾಗೂ ಸಂಘಟನೆಯ ಮುಖಂಡರ ನಿವಾಸಗಳ ಮೇಲೆ ದಾಳಿ ನಡೆಸಿರುವುದು ಅಕ್ಷಮ್ಯ. ಇಲ್ಲದ ಶತ್ರುವನ್ನು ಸೃಷ್ಟಿಸಿಕೊಂಡು ಸರ್ಕಾರ ದ್ವೇಷ ಸಾಧನೆಯಲ್ಲಿ ಮುಳುಗಿದೆ' ಎಂದು ಕಿಡಿಕಾರಿದರು.

ಮಂಗಳೂರಿನಲ್ಲಿ ಐವರು ವಶಕ್ಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ವಿವಿಧೆಡೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಕಚೇರಿ ಹಾಗೂ ಈ ಸಂಘಟನೆಯ ಮುಖಂಡರ ಮನೆಗಳ ಮೇಲೆ ದಾಳಿ ನಡೆಸಿದ ಬೆಂಗಳೂರಿನ ಪೊಲೀಸರು ಐವರನ್ನು ವಶಕ್ಕೆ ಪಡೆದಿದ್ದಾರೆ.

ಜಿಲ್ಲೆಯ 11 ಕಡೆಗಳಲ್ಲಿ ಪೊಲೀಸರು ದಾಳಿ ನಡೆಸಿದರು. ಪಿಎಫ್‌ಐ ಕಚೇರಿಯಲ್ಲಿ ದಾಖಲೆಗಳ ಶೋಧ ನಡೆಸಿದ ತಂಡವು, ಪಿಎಫ್‌ಐ ರಾಜ್ಯ ಘಟಕದ ಕಾರ್ಯದರ್ಶಿ ಜೋಕಟ್ಟೆಯ ಎ.ಕೆ. ಅಶ್ರಫ್, ಗ್ರಾಮಾಂತರ ಘಟಕದ ಅಧ್ಯಕ್ಷ ನವಾಝ್ ಕಾವೂರು, ರಾಜ್ಯ ಸಮಿತಿ ಸದಸ್ಯ ಮೊಯಿದ್ದೀನ್ ಹಳೆಯಂಗಡಿ, ಪುತ್ತೂರಿನ ಅಬ್ದುಲ್ ಖಾದರ್, ವಿಟ್ಲದ ಮಹಮ್ಮದ್ ತಪ್ಸೀರ್ ಎಂಬುವವರನ್ನು ವಶಕ್ಕೆ ಪಡೆದಿದೆ ಎಂದು ಮೂಲಗಳು ತಿಳಿಸಿವೆ.

ಮಂಗಳೂರಿನಲ್ಲಿ ಪಿಎಫ್‌ಐ ಮತ್ತು ಎಸ್‌ಡಿಪಿಐ ಕಚೇರಿ ಒಂದೇ ಕಟ್ಟಡದಲ್ಲಿದ್ದು, ನೆಲ್ಲಿಕಾಯಿ ರಸ್ತೆಯಲ್ಲಿರುವ ಇವೆರಡೂ ಕಚೇರಿಗಳ ಮೇಲೆ ದಾಳಿ ನಡೆಸಿದ ಎನ್‌ಐಎ ಅಧಿಕಾರಿಗಳು ಕಾಗದಪತ್ರಗಳನ್ನು ಪರಿಶೀಲಿಸಿದರು. ಅಧಿಕಾರಿಗಳು ಅಲ್ಲಿಂದ ತೆರಳುವವರೆಗೂ ಈ ರಸ್ತೆಯಲ್ಲಿ ಸಂಚಾರ ನಿಷೇಧಿಸಲಾಗಿತ್ತು. ಬಂದೋಬಸ್ತ್‌ಗೆ ಸಿಆರ್‌ಪಿಎಫ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಯಾವ ನಿರ್ದಿಷ್ಟ ಪ್ರಕರಣಕ್ಕೆ ಸಂಬಂಧಿಸಿ ಈ ದಾಳಿ ನಡೆದಿದೆ ಎಂಬುದು ತಿಳಿದುಬಂದಿಲ್ಲ.

ವಲಯ ಅಧ್ಯಕ್ಷ ಶಾಹಿದ್ ವಶಕ್ಕೆ (ಶಿವಮೊಗ್ಗ ವರದಿ): ಪಿಎಫ್‌ಐ ಸಂಘಟನೆಯ ವಲಯ ಘಟಕದ ಅಧ್ಯಕ್ಷ ಶಾಹಿದ್ ಖಾನ್ ಅವರನ್ನು ಬೆಂಗಳೂರಿನ ಪೊಲೀಸರು ಗುರುವಾರ ವಶಕ್ಕೆ ಪಡೆದು ಕರೆದೊಯ್ದರು.

ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ, ಚಿಕ್ಕಮಗಳೂರು ಹಾಗೂ ಹಾವೇರಿ ಜಿಲ್ಲೆಗಳನ್ನೊಳಗೊಂಡ ವಲಯದ ಅಧ್ಯಕ್ಷರಾಗಿ ಶಾಹಿದ್ ಖಾನ್ ಕೆಲಸ ಮಾಡುತ್ತಿದ್ದರು. ಕೆ.ಜಿ.ಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ ಸಂಬಂಧ ಶಾಹಿದ್ ಖಾನ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಇಮಾದುದ್ದೀನ್ ವಶಕ್ಕೆ (ದಾವಣಗೆರೆ ವರದಿ): ಪಿಎಫ್‌ಐ ಸಂಘಟನೆಯ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಇಮಾದುದ್ದೀನ್ ಮನೆ ಮೇಲೆ ಗುರುವಾರ ಬೆಳಗಿನ ಜಾವ ದಾಳಿ ನಡೆಸಿದ ಬೆಂಗಳೂರು ಪೊಲೀಸರು, ಅವರನ್ನು ವಶಕ್ಕೆ ಪಡೆದರು. ಇಮಾದುದ್ದೀನ್ ಪಿಎಫ್‌ಐ ಸಂಘಟನೆಯ ಸಕ್ರಿಯ ಕಾರ್ಯಕರ್ತ.

'ನಮ್ಮ ಪೂರ್ವಜರು ಸ್ವಾತಂತ್ರ್ಯ ಹೋರಾಟಗಾರರು. ನಾವು ಯಾವುದೇ ತಪ್ಪು ಮಾಡಿಲ್ಲ. ಅಧಿಕಾರಿಗಳು ಯಾವ ಕಾರಣಕ್ಕೆ ಈ ರೀತಿ ಕರೆದೊಯ್ದಿದ್ದಾರೆ ಗೊತ್ತಿಲ್ಲ' ಎಂದು ಇಮಾದುದ್ದೀನ್ ತಮ್ಮ ಮಹಮ್ಮದ್ ಸಾದ್ ತಿಳಿಸಿದರು.

ಎಸ್‌ಡಿಪಿಐ ಕಾರ್ಯಕರ್ತ ಅಬ್ದುಲ್ ಬಂಧನ (ಶಿರಸಿ ವರದಿ): ಎಸ್‌ಡಿಪಿಐ ಹಾಗೂ ಪಿಎಫ್‌ಐ ಸಂಘಟನೆಯಲ್ಲಿ ಸಕ್ರಿಯನಾಗಿದ್ದ ಇಲ್ಲಿನ ಟಿಪ್ಪು ನಗರದ ಅಬ್ದುಲ್ ಅಜೀಜ್ ಶುಕೂರ್ ಹೊನ್ನಾವರ (34) ಎಂಬುವರನ್ನು ಬೆಂಗಳೂರು ಪೊಲೀಸರು ಗುರುವಾರ ನಸುಕಿನ ಜಾವ ವಶಕ್ಕೆ ಪಡೆದಿದೆ.

ಖಲೀಮುಲ್ಲಾ ಖಾನ್ ವಶಕ್ಕೆ (ಮೈಸೂರು ವರದಿ) : ಇಲ್ಲಿನ ಶಾಂತಿನಗರದ ಪಿಎಫ್‌ಐ ಮುಖಂಡ ಮೊಹಮ್ಮದ್ ಖಲೀಮುಲ್ಲಾ ಖಾನ್ ಮನೆ ಮೇಲೆ ದಾಳಿ ನಡೆಸಿದ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಅಧಿಕಾರಿಗಳು ಶೋಧ ನಡೆಸಿ, ಅವರನ್ನು ವಶಕ್ಕೆ ಪಡೆದರು. ಖಲೀಮುಲ್ಲಾ ಅವರು ಪಿಎಫ್‌ಐ ಸಂಘಟನೆಯ ಸಕ್ರಿಯ ಕಾರ್ಯಕರ್ತ ಆಗಿದ್ದರು.

ಪಿಎಫ್‌ಐ ಅಧ್ಯಕ್ಷ ವಶಕ್ಕೆ

ಕಲಬುರಗಿ: ಇಲ್ಲಿನ ಮೆಹಬೂಬ್ ನಗರದ ನಿವಾಸಿ, ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯ ಜಿಲ್ಲಾ ಘಟಕದ ಅಧ್ಯಕ್ಷ ಏಜಾಜ್ ಅಲಿ ಅವರನ್ನು ಎನ್‌ಐಎ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

'ದಾಳಿ ವೇಳೆ ಮನೆಯಲ್ಲಿದ್ದ ಏಜಾಜ್ ಅನ್ನು ವಶಕ್ಕೆ ತೆಗೆದುಕೊಳ್ಳಲಾಯಿತು. ಕೇರಳಕ್ಕೆ ತೆರಳಿ, ಅಲ್ಲಿಂದ ಮರಳುತ್ತಿದ್ದ ವೇಳೆ ಕರ್ನಾಟಕದ ಗಡಿ ಭಾಗದಲ್ಲಿ ಪಿಎಫ್‌ಐ ಖಜಾಂಚಿ ಶಾಹಿದ್ ನಾಸೀರ್ ಅನ್ನು ಬಂಧಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಫಯಾಜ್ ವಶಕ್ಕೆ (ಕೊಪ್ಪಳ ವರದಿ): ಪಿಎಫ್‌ಐ ಕೊಪ್ಪಳ ಜಿಲ್ಲಾ ಘಟಕದ ಅಧ್ಯಕ್ಷ ಅಬ್ದುಲ್ ಫಯಾಜ್ ಅವರನ್ನು ಬೆಂಗಳೂರು ಪೊಲೀಸರು ಬಂಧಿಸಿದರು.

- ಕಲಬುರಗಿಯ ಏಜಾಜ್ ಅಲಿ ಮನೆಯಲ್ಲಿದ್ದ ₹14 ಲಕ್ಷ ನಗದು, 17 ಮೊಬೈಲ್, ಒಂದು ಲ್ಯಾಪ್‌ಟಾಪ್ ಮತ್ತು ಸಂಘಟನೆಗೆ ಸಂಬಂಧಿಸಿದ ಹಲವು ದಾಖಲೆಗಳನ್ನು ಎನ್‌ಐಎ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.
- ಶಿವಮೊಗ್ಗದ ಶಾಹಿದ್ ಖಾನ್ ಮನೆಯಲ್ಲಿ ತಪಾಸಣೆ ವೇಳೆ ₹20 ಲಕ್ಷ ನಗದು ಸಿಕ್ಕಿದೆ ಎಂದು ಹೇಳಲಾಗಿತ್ತು. ಆದರೆ ಅದನ್ನು ಪೊಲೀಸರು ಖಚಿತಪಡಿಸಿಲ್ಲ.

ಸಿಇಟಿ: ಪರಿಹಾರ ಸೂತ್ರ ಹೈಕೋರ್ಟ್‌ಗೆ ಸಲ್ಲಿಕೆ

ಒಂದನೇ ಪುಟದಿಂದ...

ವಿಚಾರಣೆ ವೇಳೆ ಹೆಚ್ಚುವರಿ ಅಡ್ವೊಕೇಟ್ ಜನರಲ್ ಧ್ಯಾನ್ ಚಿನ್ನಪ್ಪ, 'ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಬಿ. ತಿಮ್ಮೇಗೌಡರ ಅಧ್ಯಕ್ಷತೆಯ ಐವರ ಸಮಿತಿಯು ವಿದ್ಯಾರ್ಥಿಗಳ ಹಿತಾಸಕ್ತಿಗೆ ಅನುಗುಣವಾಗಿ ಸೂತ್ರವೊಂದನ್ನು ಸಿದ್ಧಪಡಿಸಿದೆ. ಸಿಇಟಿ ರ‍್ಯಾಂಕಿಂಗ್ ಸಮಸ್ಯೆ ಪರಿಹರಿಸಲು ಅಗತ್ಯವಾದ ಸಮನ್ವಯ ಸೂತ್ರವೊಂದನ್ನು ರೂಪಿಸಲಾಗಿದೆ' ಎಂದು ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಪೀಠಕ್ಕೆ ಸಲ್ಲಿಸಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆಯನ್ನು ಇದೇ 23ಕ್ಕೆ (ಶುಕ್ರವಾರ) ಮುಂದೂಡಿದೆ. ಕಳೆದ ವಿಚಾರಣೆ ವೇಳೆ ನ್ಯಾಯಪೀಠವು, 'ವಿದ್ಯಾರ್ಥಿಗಳಿಗೆ ತೊಂದರೆಯಾಗದಂತಹ ಮತ್ತು ಎಲ್ಲರಿಗೂ ನೆರವಾಗುವಂತಹ ಪರಿಹಾರ ಕ್ರಮಗಳನ್ನು ರೂಪಿಸಿಕೊಂಡು ಬನ್ನಿ' ಎಂದು ಸರ್ಕಾರಕ್ಕೆ ಸೂಚನೆ ನೀಡಿತ್ತು.

ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ, 2020-21ನೇ ಸಾಲಿನಲ್ಲಿ ದ್ವಿತೀಯ ಪಿಯು ತೇರ್ಗಡೆಯಾದ ವಿದ್ಯಾರ್ಥಿಗಳು ಗಳಿಸಿದ ಶೇ 50 ಹಾಗೂ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ (ಸಿಇಟಿ) ಪಡೆದ ಶೇ 50ರಷ್ಟು ಅಂಕಗಳನ್ನು ಪರಿಗಣಿಸಿ ರೀ–ಡೂ ಮಾಡಿ ಹೊಸ ರ‍್ಯಾಂಕ್ ಪಟ್ಟಿ ಪ್ರಕಟಿಸಬೇಕು' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ನಿರ್ದೇಶಿಸಿದ್ದ ಹೈಕೋರ್ಟ್ ಏಕಸದಸ್ಯ ಪೀಠದ ತೀರ್ಪನ್ನು ಪ್ರಶ್ನಿಸಿ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕರು ಮೇಲ್ಮನವಿ ಸಲ್ಲಿಸಿದ್ದಾರೆ.

ಅಶ್ವತ್ಥನಾರಾಯಣ ರಾಜೀನಾಮೆಗೆ ಎಚ್‌.ಡಿ.ಕೆ ಆಗ್ರಹ

ಒಂದನೇ ಪುಟದಿಂದ...

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಜೆಡಿಎಸ್ ನಾಯಕರ ಜತೆ ಮಾತುಕತೆ ನಡೆಸಿದ ಬಳಿಕ ಧರಣಿಯನ್ನು ಹಿಂಪಡೆದರು.

'ಉದ್ಯಮಿ ದಯಾನಂದ ಪೈ ಅವರನ್ನು ಆಜೀವ ಟ್ರಸ್ಟಿಯನ್ನಾಗಿ ಮಾಡಿರುವುದು ಮತ್ತು ದಾನಿ ಟ್ರಸ್ಟಿಯಾದ ರಾಗಿಣಿ ನಾರಾಯಣ ಅವರ ಸೋದರಳಿಯನನ್ನು ಟ್ರಸ್ಟಿಯನ್ನಾಗಿ ಮಾಡಿರುವುದು ಬೈಲಾಗೆ ವಿರುದ್ಧ. ಇದರಲ್ಲಿ ಅಶ್ವತ್ಥನಾರಾಯಣ ಅವರ ಪಾತ್ರ ಇದೆ. ಸುಮಾರು ₹10 ಸಾವಿರ ಕೋಟಿ ಮೌಲ್ಯ ಆಸ್ತಿ ಹೊಂದಿರುವ ಈ ಶಿಕ್ಷಣ ಸಂಸ್ಥೆಯ ಮೇಲೆ ರಿಯಲ್ ಎಸ್ಟೇಟ್ ಉದ್ಯಮಿಗಳ ಕಣ್ಣು ಬಿದ್ದಿದೆ' ಎಂದೂ ಕುಮಾರಸ್ವಾಮಿ ದೂರಿದರು.

'ಬಿಎಂಎಸ್ ಶಿಕ್ಷಣ ಸಂಸ್ಥೆಯ ಸ್ಥಾಪಕ ವಿಶ್ವಸ್ಥ ಬಿ.ಎಸ್.ನಾರಾಯಣ ಅವರ ಪತ್ನಿ ರಾಗಿಣಿ ನಾರಾಯಣ ಅವರು ಉದ್ಯಮಿ ದಯಾನಂದ ಪೈ, ಹಿರಿಯ ವಕೀಲ ಬಿ.ವಿ.ಆಚಾರ್ಯ, ನಿವೃತ್ತ ಐಎಎಸ್ ಅಧಿಕಾರಿ ವಿ.ಕೆ.ಗೋರೆ ಅವರನ್ನು ಟ್ರಸ್ಟಿಯನ್ನಾಗಿ ನೇಮಿಸಿಕೊಳ್ಳುತ್ತಾರೆ. ಒಬ್ಬ ಟ್ರಸ್ಟಿ ಮೂರು ವರ್ಷದ ಅವಧಿಗೆ ಇರಬೇಕು. ಆದರೆ, ದಯಾನಂದ ಪೈ 10 ವರ್ಷಗಳಿಂದ ಟ್ರಸ್ಟಿಯಾಗಿಯೇ ಮುಂದುವರೆದಿದ್ದಾರೆ. ರಾಗಿಣಿ ಮತ್ತು ಪೈ ಸೇರಿ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು ಮತ್ತು ಇತರ ಕಾಲೇಜುಗಳಲ್ಲಿ ತಲಾ ಶೇ 50 ರಷ್ಟು ಮ್ಯಾನೇಜ್‌ಮೆಂಟ್ ಕೋಟಾದ ಸಿಟುಗಳನ್ನು ಹಂಚಿಕೊಳ್ಳಲು ಲಿಖಿತ ಒಪ್ಪಂದ ಮಾಡಿಕೊಂಡಿದ್ದಾರೆ' ಎಂದೂ ದೂರಿದರು.

ಸರ್ಕಾರದ ನಾಮನಿರ್ದೇಶಿತ ಟ್ರಸ್ಟಿ ಹಾಗೂ ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರಾಗಿದ್ದ ಐಎಎಸ್ ಅಧಿಕಾರಿ ಡಾ.ಎನ್.ಮಂಜುಳಾ ಅವರು 2019ರ ಜುಲೈನಲ್ಲಿ ಸರ್ಕಾರಕ್ಕೆ ಬರೆದ ಪತ್ರದಲ್ಲಿ ಬಿಎಂಎಸ್ ಬೈ–ಲಾ ತಿದ್ದುಪಡಿ ನಿರ್ಣಯವು ಟ್ರಸ್ಟ್‌ನ ಸಾರ್ವಜನಿಕ ಹಿತಾಸಕ್ತಿಯನ್ನು ರಕ್ಷಿಸಲು ಸರ್ಕಾರ ತೆಗೆದುಕೊಂಡ ಕ್ರಮಕ್ಕೆ ವಿರುದ್ಧವಾಗಿದೆ ಎಂದು ದೂರಿದ್ದರು. ಹಾಗಿದ್ದರೂ ಈವರೆಗೂ ಕ್ರಮ ಕೈಗೊಂಡಿಲ್ಲ. ಇದಕ್ಕೆ ಸಚಿವರೇ ಕಾರಣ ಎಂದೂ ಹೇಳಿದರು.

'ಬೈ–ಲಾ ತಿದ್ದುಪಡಿಗಾಗಿ ನಾನು ಸಿ.ಎಂ ಆಗಿದ್ದ ಸಂದರ್ಭದಲ್ಲಿ ಆಮಿಷ ಒಡ್ಡಿದ್ದರು. ಆದರೆ, ನಾನು ಅದಕ್ಕೆ ಮಣಿಯಲಿಲ್ಲ. ಈ ಸರ್ಕಾರ ತಮಗೆ ಬೇಕಾಗಿದ್ದನ್ನು ಮಾಡಿಕೊಂಡಿದ್ದಾರೆ' ಎಂದರು.

ಗಾಳಿಯಲ್ಲಿ ಗುಂಡು: ಸಚಿವರ ವ್ಯಂಗ್ಯ

ಒಂದನೇ ಪುಟದಿಂದ...

'ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು ಅನುದಾನಿತವಾಗಿದ್ದು ಇಲ್ಲಿ ಶೇ 95ರಷ್ಟು ಸೀಟುಗಳು ಸಿಇಟಿ ಮೂಲಕ ಭರ್ತಿಯಾಗುತ್ತವೆ. ಶೇ 5 ರಷ್ಟು ಮಾತ್ರ ಮ್ಯಾನೇಜ್‌ಮೆಂಟ್ ಕೋಟಾ, ಅವರೇ ನಡೆಸುವ ಅನುದಾನಿತವಲ್ಲದ ಕಾಲೇಜುಗಳಲ್ಲಿ ಶೇ 45 ಸರ್ಕಾರದ ಸೀಟುಗಳು, ಶೇ 30 ಕಾಮೆಡ್ ಕೆ ಮೂಲಕ ಮತ್ತು ಶೇ 25 ಮ್ಯಾನೇಜ್‌ಮೆಂಟ್ ಕೋಟಾ ಸೀಟುಗಳಿವೆ' ಎಂದರು.

ಸಂಸ್ಥೆಯ ಬಗ್ಗೆ ಯಾವುದೇ ದೂರುಗಳಿದ್ದರೆ ನಿವೃತ್ತ ನ್ಯಾಯಾಧೀಶರೇ ಅಧ್ಯಕ್ಷರಾಗಿರುವ ಸಕ್ಷಮ ಪ್ರಾಧಿಕಾರಕ್ಕೆ ಈವರೆಗೂ ಒಂದೇ ಒಂದು ದೂರು ಏಕೆ ಕೊಟ್ಟಿಲ್ಲ ಎಂದೂ ಅಶ್ವತ್ಥನಾರಾಯಣ ಪ್ರಶ್ನಿಸಿದರು.

'ವಿದ್ಯುತ್ ಪರಿವರ್ತಕ: 7 ಲಕ್ಷ ಅರ್ಜಿ'

ಬೆಂಗಳೂರು: ಕೃಷಿ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಪಡೆದಿರುವವರಿಗೆ ಅಕ್ರಮ– ಸಕ್ರಮ ಯೋಜನೆಯಡಿ ಪ್ರತ್ಯೇಕ ವಿದ್ಯುತ್ ಪರಿವರ್ತಕ ಅಳವಡಿಸುವಂತೆ ಕೋರಿ ಏಳು ಲಕ್ಷ ಅರ್ಜಿಗಳು ಸಲ್ಲಿಕೆಯಾಗಿವೆ. ಅವುಗಳನ್ನು ಹಂತ ಹಂತವಾಗಿ ವಿಲೇವಾರಿ ಮಾಡಲಾಗುವುದು ಎಂದು ಇಂಧನ ಸಚಿವ ವಿ. ಸುನಿಲ್ ಕುಮಾರ್ ತಿಳಿಸಿದರು.

ಅಕ್ರಮ–ಸಕ್ರಮ ಯೋಜನೆಯಡಿ ವಿದ್ಯುತ್ ಪರಿವರ್ತಕಗಳ ಅಳವಡಿಕೆ ವಿಳಂಬವಾಗುತ್ತಿರುವ ಕುರಿತು ಜೆಡಿಎಸ್‌ನ ಕೆ.ಎಂ. ಶಿವಲಿಂಗೇಗೌಡ ಶೂನ್ಯ ವೇಳೆಯಲ್ಲಿ ಮಾಡಿದ ಪ್ರಸ್ತಾಪಕ್ಕೆ ಉತ್ತರಿಸಿದ ಅವರು, 'ರಾಜ್ಯದ ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ಏಳು ಲಕ್ಷ ಅರ್ಜಿಗಳು ಸಲ್ಲಿಕೆಯಾಗಿವೆ ಎಂದರು.

ಚುನಾವಣಾ ಆಧಿಸೂಚನೆ ಪ್ರಕಟ: ಅವಿರೋಧ ಆಯ್ಕೆ ಆಗದಿದ್ದರೆ ಅ.19ರಂದು ಫಲಿತಾಂಶ

ಕಾಂಗ್ರೆಸ್ ಅಧ್ಯಕ್ಷತೆ: ಅ. 17ರಂದು ಮತದಾನ

ನವದೆಹಲಿ (ಪಿಟಿಐ): ಕಾಂಗ್ರೆಸ್ ಅಧ್ಯಕ್ಷ ಹುದ್ದೆಯ ಚುನಾವಣಾ ಅಧಿಸೂಚನೆಯನ್ನು ಕಾಂಗ್ರೆಸ್ ಪಕ್ಷವು ಗುರುವಾರ ಹೊರಡಿಸಿದೆ. ಕಾಂಗ್ರೆಸ್ ಪಕ್ಷದ ಅತ್ಯಂತ ದೀರ್ಘ ಕಾಲದ ಅಧ್ಯಕ್ಷೆಯಾಗಿರುವ ಸೋನಿಯಾ ಗಾಂಧಿ ಅವರ ಉತ್ತರಾಧಿಕಾರಿಗಾಗಿ ಈ ಚುನಾವಣೆ ನಡೆಯಲಿದೆ. ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಮತ್ತು ಸಂಸದ ಶಶಿ ತರೂರ್ ಅವರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವ ಸಾಧ್ಯತೆ ಇದೆ.

ನಾಮಪತ್ರ ಸಲ್ಲಿಸಲು ಇದೇ 24ರಿಂದ 30ರವರೆಗೆ ಅವಕಾಶ ಇದೆ. ನಾಮಪತ್ರ ಪರಿಶೀಲನೆಯು ಅಕ್ಟೋಬರ್ 1ರಂದು ನಡೆಯಲಿದೆ. ನಾಮಪತ್ರ ಹಿಂದಕ್ಕೆ ಪಡೆಯಲು ಅಕ್ಟೋಬರ್ 8 ಕೊನೆಯ ದಿನ. ಕಣದಲ್ಲಿರುವ ಅಭ್ಯರ್ಥಿಗಳ ಪಟ್ಟಿಯನ್ನು ಅಕ್ಟೋಬರ್ 8ರಂದು ಸಂಜೆ 5 ಗಂಟೆಗೆ ಪ್ರಕಟಿಸಲಾಗುವುದು. ಮತದಾನದ ಅಗತ್ಯ ಬಿದ್ದರೆ ಅಕ್ಟೋಬರ್ 17ರಂದು ಮತದಾನ ನಡೆಯಲಿದೆ. ಅಕ್ಟೋಬರ್ 19ರಂದು ಮತ ಎಣಿಕೆ ನಡೆದು ಫಲಿತಾಂಶ ಪ್ರಕಟವಾಗಲಿದೆ.

ಪ್ರದೇಶ ಕಾಂಗ್ರೆಸ್ ಸಮಿತಿಯ 9,000ಕ್ಕೂ ಹೆಚ್ಚು ಪ್ರತಿನಿಧಿಗಳಿಗೆ ಮತದಾನದ ಹಕ್ಕು ಇದೆ. ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳು ಈ ಪ್ರತಿನಿಧಿಗಳ ಪಟ್ಟಿಯನ್ನು ಪರಿಶೀಲಿಸಬಹುದಾಗಿದೆ. ಇದೇ 20ರಂದು ಪರಿಶೀಲನೆಗೆ ಅವಕಾಶ ಕೊಡಲಾಗುವುದು. ದೆಹಲಿಯ 24, ಅಕ್ಬರ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ನಾಮಪತ್ರ ಲಭ್ಯವಿದೆ ಎಂದು ಕಾಂಗ್ರೆಸ್ ಚುನಾವಣಾ ಸಮಿತಿ ಅಧ್ಯಕ್ಷ ಮಧುಸೂದನ ಮಿಸ್ತ್ರಿ ಹೇಳಿದ್ದಾರೆ.

ಅಶೋಕ್ ಗೆಹಲೋತ್ ಅವರು ಚುನಾವಣೆಯಲ್ಲಿ ಸ್ಪರ್ಧಿಸುವ ಇಂಗಿತವನ್ನು ಬುಧವಾರ ವ್ಯಕ್ತಪಡಿಸಿದ್ದಾರೆ. ನಾಮಪತ್ರ ಸಲ್ಲಿಕೆಯ ಪ್ರಕ್ರಿಯೆ ಹೇಗೆ ಎಂಬುದನ್ನು ತಿಳಿಯುವುದಕ್ಕಾಗಿ ಶಶಿ ತರೂರ್ ಅವರು ಸೋನಿಯಾ ಗಾಂಧಿಯನ್ನು ಭೇಟಿಯಾಗಿದ್ದಾರೆ. ಹೀಗಾಗಿ ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ಚುನಾವಣೆಯು ಗಮನ ಸೆಳೆದಿದೆ. ಎರಡು ದಶಕಗಳ ಬಳಿಕ ಈ ಹುದ್ದೆಗೆ ಚುನಾವಣೆ ನಡೆಯಲಿದೆ. 1998ರಲ್ಲಿ ಸೋನಿಯಾ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷತೆ ವಹಿಸಿಕೊಂಡಿದ್ದರು. 2017–2019ರ ಅವಧಿಯಲ್ಲಿ ರಾಹುಲ್ ಪಕ್ಷದ ಅಧ್ಯಕ್ಷರಾಗಿದ್ದರು.

2000ನೇ ಇಸವಿಯಲ್ಲಿ ನಡೆದ ಚುನಾವಣೆಯಲ್ಲಿ ಜಿತೇಂದ್ರ ಪ್ರಸಾದ ಅವರನ್ನು ಸೋಲಿಸಿ ಸೋನಿಯಾ ಅವರು ಅಧ್ಯಕ್ಷರಾಗಿದ್ದರು. ಅದಕ್ಕೂ ಹಿಂದೆ 1997ರಲ್ಲಿ ನಡೆದ ಚುನಾವಣೆಯಲ್ಲಿ ಸೀತಾರಾಂ ಕೇಸರಿ ಗೆದ್ದಿದ್ದರು. ಶರದ್ ಪವಾರ್ ಮತ್ತು ರಾಜೇಶ್ ಪೈಲಟ್ ಸೋತಿದ್ದರು.

ಈ ಚುನಾವಣೆಯಲ್ಲಿ ಅಧಿಕೃತ ಅಭ್ಯರ್ಥಿ ಎಂದು ಯಾರೂ ಇರುವುದಿಲ್ಲ. ತಾವು ತಟಸ್ಥವಾಗಿಯೇ ಇರುವುದಾಗಿ ಸೋನಿಯಾ ಗಾಂಧಿ ಹೇಳಿದ್ದಾರೆ.



ಮಹಾತ್ಮ ಗಾಂಧಿಯವರು 1925ರ ಮಾರ್ಚ್ 18ರಂದು ಯು.ಸಿ. ಕಾಲೇಜಿಗೆ ಭೇಟಿ ನೀಡಿದ್ದರು. ಆ ನೆನಪಿಗಾಗಿ ಕಾಲೇಜು ಆವರಣದಲ್ಲಿ ಮಾವಿನ ಸಸಿಯೊಂದನ್ನು ನೆಟ್ಟಿದ್ದರು. ಈ ಮರಕ್ಕೆ ಇಡಲಾಗಿದ್ದ ಮಹಾತ್ಮ ಗಾಂಧಿ ಅವರ ಭಾವಚಿತ್ರಕ್ಕೆ ರಾಹುಲ್ ಗಾಂಧಿ ನಮನ ಸಲ್ಲಿಸಿದರು–ಪಿಟಿಐ ಚಿತ್ರ

ಒಬ್ಬರಿಗೆ ಒಂದೇ ಹುದ್ದೆ: ರಾಹುಲ್

ಕೊಚ್ಚಿ (ಪಿಟಿಐ): 'ಪಕ್ಷದಲ್ಲಿ ಒಬ್ಬರಿಗೆ ಒಂದೇ ಹುದ್ದೆ' ನೀತಿಯ ಪರವಾಗಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಮಾತನಾಡಿದ್ದಾರೆ. ಪಕ್ಷದ ಅಧ್ಯಕ್ಷ ಹುದ್ದೆಗೆ ಚುನಾವಣೆ ದಿನಾಂಕ ಪ್ರಕಟವಾಗಿದ್ದು, ಅದರಲ್ಲಿ ತಾವು ಸ್ಪರ್ಧಿಸುವುದಿಲ್ಲ ಎಂದು ಅವರು ಪುನರುಚ್ಚರಿಸಿದ್ದಾರೆ. ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಹಾಗೂ ಸಂಸದ ಶಶಿ ತರೂರ್ ಅವರು ಸ್ಪರ್ಧೆಯ ಮುಂಚೂಣಿಯಲ್ಲಿ ಗುರುತಿಸಿಕೊಂಡಿರುವ ಸಮಯದಲ್ಲಿ ರಾಹುಲ್ ಈ ಹೇಳಿಕೆ ನೀಡಿದ್ದಾರೆ.

'ಉದಯಪುರದಲ್ಲಿ ನಡೆದಿದ್ದ ಕಾಂಗ್ರೆಸ್ ಚಿಂತನ ಶಿಬಿರದಲ್ಲಿ ತೆಗೆದುಕೊಳ್ಳಲಾಗಿದ್ದ ಒಬ್ಬರಿಗೆ ಒಂದು ಹುದ್ದೆ ಎಂಬ ನಿಲುವಿಗೆ ಪಕ್ಷ ಬದ್ಧವಾಗಿದೆ. ಈ ಬಗ್ಗೆ ಬದ್ಧತೆಯನ್ನು ಉಳಿಸಿಕೊಳ್ಳುವ ಅಗತ್ಯವಿದೆ' ಎಂದು ರಾಹುಲ್ ಹೇಳಿದ್ದಾರೆ. ಗೆಹಲೋತ್ ಅವರು ಪಕ್ಷದ ಅಧ್ಯಕ್ಷ ಹುದ್ದೆಗೆ ಆಯ್ಕೆಯಾದರೆ, ಅದರ ಜೊತೆಗೆ ರಾಜಸ್ಥಾನ ಮುಖ್ಯಮಂತ್ರಿ ಹುದ್ದೆಯನ್ನೂ ಉಳಿಸಿಕೊಳ್ಳುವ ಇರಾದೆಯಲ್ಲಿದ್ದಾರೆ ಎಂಬ ವರದಿಗಳ ಹಿನ್ನೆಲೆಯಲ್ಲಿ ರಾಹುಲ್ ಅವರ ಈ ಮಾತು ಮಹತ್ವ ಪಡೆದಿದೆ.

'ಪಕ್ಷದ ಅಧ್ಯಕ್ಷ ಹುದ್ದೆ ಕೇವಲ ಸಂಘಟನಾತ್ಮಕ ಹುದ್ದೆಯಲ್ಲ, ಅದು ಸೈದ್ಧಾಂತಿಕ ಸ್ಥಾನವೂ ಆಗಿರುತ್ತದೆ. ಯಾರೇ ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾಗಲಿ, ಒಂದಷ್ಟು ಚಿಂತನೆಗಳು, ನಂಬಿಕೆ ಹಾಗೂ ಭಾರತದ ಬಗೆಗಿನ ದೃಷ್ಟಿಕೋನವನ್ನು ತಾವು ಪ್ರತಿನಿಧಿಸುತ್ತಿದ್ದೇವೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು' ಎಂದು ಅವರು ಹೇಳಿದ್ದಾರೆ.

ಹಿಜಾಬ್: 10 ದಿನಗಳ ಕಾಲ ಪರ–ವಿರೋಧ ವಾದ • ತೀರ್ಪು ಕಾಯ್ದಿರಿಸಿದ ಸುಪ್ರೀಂ ಕೋರ್ಟ್

‘ಪಿಎಫ್‌ಐ ವಿರುದ್ಧ ಅಪ್ರಸ್ತುತ ಆರೋಪ’

ಪ್ರಜಾವಾಣಿ ವಾರ್ತೆ

ನವದೆಹಲಿ: ಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ಹಿಜಾಬ್ ಧರಿಸುವ ವಿಷಯದಲ್ಲಿ ಅನಗತ್ಯವಾಗಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ (ಪಿಎಫ್‌ಐ) ವಿರುದ್ಧ ಕರ್ನಾಟಕ ಸರ್ಕಾರವು ಅಪ್ರಸ್ತುತ ಆರೋಪ ಮಾಡುತ್ತಿದೆ. ಈ ಮೂಲಕ ಜನರಲ್ಲಿ ಪೂರ್ವಗ್ರಹದ ಭಾವನೆ ಮೂಡಿಸಲು ಮುಂದಾಗಿದೆ ಎಂದು ಅರ್ಜಿದಾರರ ಪರ ವಕೀಲರು ಸುಪ್ರೀಂ ಕೋರ್ಟ್‌ಗೆ ತಿಳಿಸಿದರು.

ಹಿರಿಯ ವಕೀಲರಾದ ದುಷ್ಯಂತ್ ದವೆ, ದೇವದತ್ ಕಾಮತ್, ಸಲ್ಮಾನ್ ಖುರ್ಷಿದ್, ಹುಜೇಫಾ ಅಹ್ಮದಿ, ಸಂಜಯ್ ಹೆಗ್ಡೆ ಸೇರಿದಂತೆ ಹಲವು ವಕೀಲರು ಅರ್ಜಿದಾರರ ಪರವಾಗಿ ಗುರುವಾರ ವಾದ ಮಂಡಿಸಿದರು.

10 ದಿನಗಳ ಕಾಲ ಹಿಜಾಬ್ ಪರ–ವಿರೋಧ ವಾದವನ್ನು ಆಲಿಸಿರುವ ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತ ಹಾಗೂ ಸುಧಾಂಶು ಧುಲಿಯಾ ಅವರನ್ನು ಒಳಗೊಂಡ ನ್ಯಾಯಪೀಠವು ವಿಚಾರಣೆಯನ್ನು ಪೂರ್ಣಗೊಳಿಸಿದ್ದು, ತೀರ್ಪನ್ನು ಕಾಯ್ದಿರಿಸಿದೆ.

ವಿಚಾರಣೆಯ ವೇಳೆ ದುಷ್ಯಂತ್ ದವೆ ವಾದ ಮಂಡಿಸಿ, ‘ಕರ್ನಾಟಕ ಸರ್ಕಾರ ಫೆಬ್ರುವರಿ 5ರಂದು ಹೊರಡಿಸಿರುವ ಸುತ್ತೋಲೆಯಲ್ಲಿ ಪಿಎಫ್‌ಐ ಚಟುವಟಿಕೆಗಳ ಕುರಿತು ಯಾವುದೇ ಉಲ್ಲೇಖ ಇಲ್ಲ. ಬದಲಿಗೆ, ಧಾರ್ಮಿಕ ಹಕ್ಕುಗಳ ಏಕತೆ ಮತ್ತು ಸಮಾನತೆಯ ಸಿದ್ಧಾಂತಗಳಿಗೆ ಅಡ್ಡಿಯಾಗುತ್ತಿದೆ ಎಂದಷ್ಟೇ ಹೇಳಲಾಗಿದೆ. ಆದರೆ, ರಾಜ್ಯ ಸರ್ಕಾರ ಇದೀಗ ಲಿಖಿತ ದಾಖಲೆಗಳು ಇಲ್ಲದೆ ಪಿಎಫ್‌ಐ ವಿರುದ್ಧ ಆರೋಪ ಮಾಡುತ್ತಿದೆ’ ಎಂದರು.

ಕರ್ನಾಟಕ ಸರ್ಕಾರದ ಪರವಾಗಿ ಮಂಗಳವಾರ ವಾದ ಮಂಡಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ‘ಕರ್ನಾಟಕದ ಪದವಿಪೂರ್ವ ಕಾಲೇಜುಗಳಲ್ಲಿ 2021ರ ವರೆಗೆ ಯಾವುದೇ ವಿದ್ಯಾರ್ಥಿನಿ ಹಿಜಾಬ್ ಧರಿಸುತ್ತಿರಲಿಲ್ಲ. ಆದರೆ, ಪಿಎಫ್‌ಐ ಸಾಮಾಜಿಕ ಜಾಲತಾಣದ ಮೂಲಕ ಸಮಾಜದಲ್ಲಿ ಅಶಾಂತಿ ಉಂಟುಮಾಡಲು ಹಾಗೂ ಕರ್ನಾಟಕ ಸರ್ಕಾರ ಸಾಂವಿಧಾನಿಕ ಹಕ್ಕುಗಳ ರಕ್ಷಣೆ ಹೆಸರಿನಲ್ಲಿ ಮಧ್ಯಪ್ರವೇಶಿಸುವಂತೆ ಮಾಡಲು ಚಳವಳಿ ಆರಂಭಿಸಿತು. ಇದು ಸಮಾಜದ ಶಾಂತಿ ಕದಡುವ ಉದ್ದೇಶ ಹೊಂದಿತ್ತು’ ಎಂದು ಹೇಳಿದ್ದರು.

ಹಿರಿಯ ವಕೀಲ ಹುಜೇಫಾ ಅಹ್ಮದಿ, ‘ಹೈಕೋರ್ಟ್ ಮುಂದೆ ಇಂತಹ ಯಾವುದೇ ವಾದ ಮಂಡನೆ ಆಗಿರಲಿಲ್ಲ’ ಎಂದರು.

ಆಗ ಮಧ್ಯಪ್ರವೇಶಿಸಿದ ನ್ಯಾಯಪೀಠ, ‘ಹೈಕೋರ್ಟ್ ತೀರ್ಪಿನಲ್ಲಿ ಈ ಕುರಿತು ಉಲ್ಲೇಖ ಇದೆ’ ಎಂದಿತು. ಆಗ ಅಹ್ಮದಿ, ‘ಹೌದು. ಅದು ಒಂದು ಸಾಲು’ ಎಂದರು.

ಹಿಜಾಬ್ ಅತ್ಯಗತ್ಯ ಧಾರ್ಮಿಕ ಪದ್ಧತಿ ಅಲ್ಲ ಎಂಬ ಸರ್ಕಾರದ ವಾದಕ್ಕೆ ಪ್ರತಿಕ್ರಿಯಿಸಿದ ದವೆ, ‘ಸಂಬಂಧಪಟ್ಟವರಿಗೆ ಹಿಜಾಬ್ ಒಂದು ಅತ್ಯಗತ್ಯ ಪದ್ಧತಿ. ನಂಬದವರಿಗೆ ಅಲ್ಲ. ಕೆಲವು ಜನರು ಹೆಚ್ಚು ಧಾರ್ಮಿಕವಾಗಿ ಇರುತ್ತಾರೆ. ಕೆಲವರು ಹೆಚ್ಚು ಸಹಿಷ್ಣು ಆಗಿರುತ್ತಾರೆ. ಇದು ಅವರ ವೈಯಕ್ತಿಕ ಆಯ್ಕೆ. ಹಾಗಾಗಿ, ಬಹಳ ಹಿಂದೆಯೇ ಅತ್ಯಗತ್ಯ ಧಾರ್ಮಿಕ ಪದ್ಧತಿಯ ಪರೀಕ್ಷೆಯನ್ನು ತಿರಸ್ಕರಿಸಲಾಗಿದೆ’ ಎಂದರು.

ನಂತರ ಅಹ್ಮದಿ, ‘ಎಲ್ಲ ವಿದ್ಯಾರ್ಥಿಗಳಿಗೆ ಶಿಕ್ಷಣ ಒದಗಿಸುವುದು ಸರ್ಕಾರದ ಆದ್ಯತೆ ಆಗಬೇಕು. ಹಿಜಾಬ್ ನಿರ್ಬಂಧದಿಂದ ಅನೇಕ ಮುಸ್ಲಿಂ ವಿದ್ಯಾರ್ಥಿನಿಯರು ಶಿಕ್ಷಣದ ಹಕ್ಕಿನ ವಂಚನೆ ಆಗಿದೆ. ನಾವು ಬೇಟಿ ಬಚಾವೋ, ಬೇಟಿ ಪಡಾವೋ ಎಂಬ ಘೋಷಣೆ ಕೂಗುತ್ತೇವೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ಹಕ್ಕು ಖಾತರಿಪಡಿಸುವುದು ಸರ್ಕಾರದ ಕರ್ತವ್ಯವಲ್ಲವೇ. ಆದರೆ, ಸರ್ಕಾರವು ಶಿಸ್ತಿನ ಮೇಲೆ ಅನಗತ್ಯ ಆದ್ಯತೆ ನೀಡಿ ಸ್ವಾಯತ್ತತೆಯನ್ನು ಕಡೆಗಣಿಸಿ ಅಂತಿಮವಾಗಿ ಶಿಕ್ಷಣದ ಹಕ್ಕಿನ ವಂಚನೆಗೆ ಕಾರಣವಾಗುತ್ತಿದೆ’ ಎಂದು ವಾದಿಸಿದರು.

ಹಿಜಾಬ್ ನಿಷೇಧದಿಂದ ಶಾಲೆಯಿಂದ ಹೊರಗೆ ಉಳಿಯುವ ಮಕ್ಕಳ ಸಂಖ್ಯೆ ಹೆಚ್ಚಲಿದೆ ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಕಳೆದ ಮಾರ್ಚ್‌ನಲ್ಲಿ ನೀಡಿರುವ ವರದಿಯನ್ನು ವಕೀಲರು ಉಲ್ಲೇಖಿಸಿದರು.

‘ಸರ್ಕಾರಿ ಕಾಲೇಜುಗಳ ತರಗತಿಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡುವಂತೆ ನಿರ್ದೇಶಿಸಬೇಕು’ ಎಂದು ಕೋರಲಾಗಿದ್ದ ಎಲ್ಲ ವೈಯಕ್ತಿಕ ಹಾಗೂ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮಾರ್ಚ್ 15ರಂದು ಸಾರಾಸಗಟಾಗಿ ತಿರಸ್ಕರಿಸಿದ್ದ ಹೈಕೋರ್ಟ್‌ನ ತ್ರಿಸದಸ್ಯ ಪೀಠ, ‘ಈ ವಿಷಯವನ್ನು ದೇಶದಾದ್ಯಂತ ವಿವಾದದ ವಿಷಯವನ್ನಾಗಿ ಮಾಡಿರುವ ಹಿಂದೆ ಕಾಣದ ಕೈಗಳು ಅಡಗಿವೆ’ ಎಂಬ ಸಂಶಯ ವ್ಯಕ್ತಪಡಿಸಿತ್ತು.

ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದ 22 ಅರ್ಜಿದಾರರು, ‘ವಿದ್ಯಾರ್ಥಿನಿಯರ ಗೌಪ್ಯತೆ, ಘನತೆ ಮತ್ತು ಆತ್ಮಸ್ವಾತಂತ್ರ್ಯದ ಹಕ್ಕಿನ ರೂಪವಾದ ಹಿಜಾಬ್ ಧರಿಸುವುದನ್ನು ಕರ್ನಾಟಕ ಸರ್ಕಾರ ಕಾಯ್ದೆ ಅಥವಾ ನಿಯಮ ಜಾರಿಗೊಳಿಸಿಲ್ಲ. ಹಾಗಾಗಿ, ಹಿಜಾಬ್ ಧರಿಸುವುದನ್ನು ನಿಷೇಧಿಸಿ ಆದೇಶಿಸಿರುವುದು ಸರಿಯಲ್ಲ. ಹಿಜಾಬ್ ಧರಿಸುವುದನ್ನು ಸಂವಿಧಾನದ ಅಡಿ ಖಾತರಿಪಡಿಸಲಾದ ಗೋಪ್ಯತೆ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಆತ್ಮಸಾಕ್ಷಿಯ ಮೂಲಭೂತ ಹಕ್ಕುಗಳ ಅಡಿಯಲ್ಲಿ ರಕ್ಷಿಸಬೇಕಿದೆ. ಆದರೆ, ಈ ಅಂಶವನ್ನು ಅರಿಯದೇ ಹೈಕೋರ್ಟ್ ಪ್ರಮಾದವೆಸಗಿದೆ’ ಎಂದು ಅರ್ಜಿಯಲ್ಲಿ ತಿಳಿಸಿದ್ದರು.

ಇಮಾಮ್ ಸಂಘಟನೆ ಮುಖ್ಯಸ್ಥರ ಜೊತೆ ಭಾಗವತ್ ಮಾತುಕತೆ

ಹಿಂದೂಗಳಿಗೆ ‘ಕಾಫಿರ್’, ಮುಸ್ಲಿಮರಿಗೆ ‘ಜಿಹಾದಿ’ ಅನ್ನಬೇಡಿ

ನವದೆಹಲಿ (ಪಿಟಿಐ): ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಮೋಹನ್ ಭಾಗವತ್ ಅವರು ಸಂಘದ ಹಿರಿಯ ಕಾರ್ಯ ನಿರ್ವಾಹಕರೊಂದಿಗೆ ಗುರುವಾರ ಇಲ್ಲಿನ ಮಸೀದಿಯಲ್ಲಿ ಅಖಿಲ ಭಾರತ ಇಮಾಮ್ ಸಂಘಟನೆಯ ಮುಖ್ಯಸ್ಥ ಉಮರ್ ಅಹ್ಮದ್ ಇಲ್ಯಾಸಿ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ಕಸ್ತೂರಬಾ ಗಾಂಧಿ ಮಾರ್ಗದಲ್ಲಿರುವ ಮಸೀದಿಯಲ್ಲಿ ಅಖಿಲ ಭಾರತ ಇಮಾಮ್ ಸಂಘಟನೆ ಕಚೇರಿ ನಿರ್ವಹಿಸುತ್ತಿದೆ. ಇಲ್ಲಿ ಸುಮಾರು ಒಂದು ಗಂಟೆ ಕಾಲ ಗೋಪ್ಯ ಸಭೆ ನಡೆಯಿತು.

ಭಾಗವತ್ ಅವರ ಜತೆಗೆ ಸಂಘದ ಹಿರಿಯ ಕಾರ್ಯ ನಿರ್ವಾಹಕರಾದ ಜಂಟಿ ಪ್ರಧಾನ ಕಾರ್ಯದರ್ಶಿ ಕೃಷ್ಣ ಗೋಪಾಲ್, ಬಿಜೆಪಿ ಮಾಜಿ ಸಂಘಟನಾ ಕಾರ್ಯದರ್ಶಿ ರಾಮಲಾಲ್ ಮತ್ತು ಮುಸ್ಲಿಂ ರಾಷ್ಟ್ರೀಯ ಮಂಚ್‌ನ ಪೋಷಕ ಇಂದ್ರೇಶ್ ಕುಮಾರ್ ಇದ್ದರು.

ಸಭೆಯಲ್ಲಿ ನಡೆದ ಚರ್ಚೆ ಕುರಿತು ಮಾಹಿತಿ ನೀಡಿದ ಅಹ್ಮದ್ ಇಲ್ಯಾಸಿ ಅವರ ಸಹೋದರ ಸುಹೈಬ್ ಇಲ್ಯಾಸಿ, ‘ನಮ್ಮ ತಂದೆಯವರ ಪುಣ್ಯತಿಥಿಯ ದಿನದಂದು ಆಹ್ವಾನದ ಮೇರೆಗೆ ಭಾಗ ವತ್ ಬಂದಿದ್ದರು. ಇದು ಸಂತಸದ ವಿಷಯವಾಗಿದ್ದು, ದೇಶಕ್ಕೆ ಉತ್ತಮ ಸಂದೇಶವೂ ರವಾನೆಯಾಗಿದೆ’ ಎಂದರು.

ಕೋಮು ಸೌಹಾರ್ದವನ್ನು ಬಲಪಡಿಸುವ ಉದ್ದೇಶದಿಂದ ಆರ್‌ಎಸ್‌ಎಸ್ ಮುಖ್ಯಸ್ಥರು ಮುಸ್ಲಿಂ ಬುದ್ಧಿಜೀವಿಗಳೊಂದಿಗೆ ಸಭೆ ನಡೆಸಿ ಚರ್ಚಿಸಿದರು. ‘ಹಿಂದೂಗಳಿಗೆ ‘ಕಾಫಿರ್’ ಪದವನ್ನು ಬಳಸುವುದು ಸರಿಯಲ್ಲ. ಇದು ಉತ್ತಮ ಸಂದೇಶ ರವಾನಿಸುವುದಿಲ್ಲ’ ಎಂದು ಸಭೆಯಲ್ಲಿ ಭಾಗವತ್ ಅವರು ಹೇಳಿದರು. ‘ಕೆಲ ಬಲಪಂಥೀಯ ಕಾರ್ಯಕರ್ತರು ಮುಸ್ಲಿಮರನ್ನು ‘ಜಿಹಾದಿ’ ಮತ್ತು ‘ಪಾಕಿಸ್ತಾನಿ’ ಎಂದೂ ಕರೆಯುವುದು ಸರಿಯಲ್ಲ’ ಎಂದು ಸಭೆಯಲ್ಲಿದ್ದ ಮುಸ್ಲಿಂ ಬುದ್ಧಿಜೀವಿಗಳು ಆಕ್ಷೇಪಿಸಿದರು.

‘ಕಾಫಿರ್ ಪದ ಬಳಕೆಯ ನಿಜವಾದ ಉದ್ದೇಶವೇ ಬೇರೆಯಿದೆ. ಆದರೆ ಅದೀಗ ದುರ್ಬಳಕೆ ಆಗುತ್ತಿದೆ’ ಎಂದು ಮುಸ್ಲಿಂ ಬುದ್ಧಿಜೀವಿಗಳು ಭಾಗವತ್ ಅವರಿಗೆ ತಿಳಿಸಿದರು. ಮುಸ್ಲಿಂ ಬುದ್ಧಿಜೀವಿಗಳ ಆತಂಕಕ್ಕೆ ಸಮ್ಮತಿ ಸೂಚಿಸಿದ ಭಾಗವತ್, ‘ಹಿಂದೂ ಮತ್ತು ಮುಸ್ಲಿಮರ ಡಿಎನ್‌ಎ ಒಂದೇ’ ಎಂದು ಪುನರುಚ್ಚರಿಸಿದರು.

‘ಸರಸಂಘಚಾಲಕರು ಎಲ್ಲ ವರ್ಗದ ಜನರನ್ನು ಭೇಟಿಯಾಗಿ ಮಾತುಕತೆ ನಡೆಸುತ್ತಾರೆ. ಇದು ನಿರಂತರ ಸಂವಾದ ಪ್ರಕ್ರಿಯೆಯ ಭಾಗ’ ಎಂದು ಸಭೆ ಕುರಿತು ಆರ್‌ಎಸ್‌ಎಸ್ ಪ್ರಚಾರ ಪ್ರಮುಖ ಸುನಿಲ್ ಅಂಬೇಕರ್ ಪ್ರತಿಕ್ರಿಯಿಸಿದರು.

ಭಾಗವತ್ ಅವರು ಇತ್ತೀಚೆಗೆ ದೆಹಲಿಯ ಮಾಜಿ ಲೆಫ್ಟಿನೆಂಟ್ ಗವರ್ನರ್ ನಜೀಬ್ ಜಂಗ್, ಚುನಾವಣಾ ಆಯೋಗದ ಮಾಜಿ ಆಯುಕ್ತ ಎಸ್.ವೈ. ಖುರೇಶಿ, ಅಲಿಗಡ ಮುಸ್ಲಿಂ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಲೆಫ್ಟಿನೆಂಟ್ ಜನರಲ್ ಜಮೀರ್ ಉದ್ದೀನ್ ಶಾ, ಮಾಜಿ ಸಂಸದ ಶಾಹಿದ್ ಸಿದ್ದಿಕಿ ಮತ್ತು ವ್ಯಾಪಾರಿ ಸಯೀದ್ ಶೇರ್ವಾನಿ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದರು.

ಮೋಹನ್ ಭಾಗವತ್ ಅವರು ನವದೆಹಲಿಯಲ್ಲಿರುವ ಮಸೀದಿಗೆ ಗುರುವಾರ ಭೇಟಿ ನೀಡಿದರು –ಪಿಟಿಐ ಚಿತ್ರ

ಭಾಗವತ್‌ರನ್ನು ‘ರಾಷ್ಟ್ರಪಿತ’ ಎಂದ ಇಲ್ಯಾಸಿ

ನವದೆಹಲಿ (ಪಿಟಿಐ): ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅವರನ್ನು ‘ರಾಷ್ಟ್ರಪಿತ’ ಎಂದು ಅಖಿಲ ಭಾರತ ಇಮಾಮ್ ಸಂಘಟನೆಯ ಮುಖ್ಯಸ್ಥ ಉಮರ್ ಅಹ್ಮದ್ ಇಲ್ಯಾಸಿ ಬಣ್ಣಿಸಿದರು.

ಉತ್ತರ ದೆಹಲಿಯ ಮದರಸಾ ತಜ್ವೀದುಲ್ ಕುರಾನ್‌ಗೆ ಭೇಟಿ ನೀಡಿದ್ದ ಭಾಗವತ್ ಅವರು, ಇಲ್ಲಿನ ಮಕ್ಕಳ ಜತೆಗೆ ಮಾತುಕತೆ ನಡೆಸಿದರು ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

‘ನಮ್ಮ ಡಿಎನ್‌ಎ ಒಂದೇ. ಆದರೆ ನಾವು ದೇವರನ್ನು ಆರಾಧಿಸುವ ವಿಧಾನಗಳಷ್ಟೇ ಬೇರೆ ಬೇರೆ. ನಾವೆಲ್ಲ ದೇಶವೇ ಮೊದಲು ಎಂದು ನಂಬಿದವರು’ ಎಂದು ಅವರು ಪ್ರತಿಕ್ರಿಯಿಸಿದರು.

ಲಿಸೆಸ್ಟರ್ ಹಿಂಸಾಚಾರ ತಡೆಗೆ ಬ್ರಿಟನ್ ಸಂಪರ್ಕದಲ್ಲಿ ಭಾರತ

ನವದೆಹಲಿ (ಪಿಟಿಐ): ಲಿಸೆಸ್ಟರ್ ಮತ್ತು ಬರ್ಮಿಂಗ್‌ಹ್ಯಾಮ್‌ನಲ್ಲಿನ ಕೋಮು ಘರ್ಷಣೆ ಘಟನೆಗಳ ಹಿನ್ನೆಲೆಯಲ್ಲಿ ಭಾರತೀಯ ಸಮುದಾಯ ಗುರಿಯಾಗಿಸಿ ನಡೆಯುತ್ತಿರುವ ಹಿಂಸಾಚಾರದ ದಾಳಿ ತಡೆಗಟ್ಟಲು ಮತ್ತು ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಲು ಭಾರತೀಯ ಹೈಕಮಿಷನ್, ಬ್ರಿಟನ್ ಹೈಕಮಿಷನ್‌ನೊಂದಿಗೆ ಸಂಪರ್ಕದಲ್ಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಗುರುವಾರ ತಿಳಿಸಿದೆ.

‘ಹಿಂಸಾಚಾರ ಖಂಡಿಸಿ ಭಾರತೀಯ ಹೈಕಮಿಷನ್ ಹೇಳಿಕೆ ನೀಡಿದೆ. ಮತ್ತಷ್ಟು ದಾಳಿಗಳು ನಡೆಯದಂತೆ ತಡೆಯಲು ಮತ್ತು ತಪ್ಪಿತಸ್ಥರ ವಿರುದ್ಧ ಕ್ರಮಕ್ಕಾಗಿ ನಾವು ರಾಜತಾಂತ್ರಿಕ ಹಾಗೂ ಭದ್ರತಾ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದ್ದೇವೆ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ನ್ಯೂಯಾರ್ಕ್‌ನಲ್ಲಿ ಬ್ರಿಟನ್ ವಿದೇಶಾಂಗ ಸಚಿವ ಜೇಮ್ಸ್ ಕ್ಲೆವರ್ಲಿ ಅವರ ಜತೆಗಿನ ಸಭೆಯಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಈ ವಿಷಯದ ಬಗ್ಗೆ ದನಿಎತ್ತಿದ್ದಾರೆ ಎಂದು ಅವರು ಹೇಳಿದರು.

ಭಾರತೀಯ ಸಮುದಾಯದವರ ಮೇಲಿನ ದೌರ್ಜನ್ಯ ಮತ್ತು ಲಿಸೆಸ್ಟರ್ ನಗರದಲ್ಲಿ ಹಿಂದೂ ದೇಗುಲಗಳು ಹಾಗೂ ಆಸ್ತಿ ಧ್ವಂಸ ಘಟನೆಗಳನ್ನು ಭಾರತೀಯ ಹೈಕಮಿಷನ್ ತೀವ್ರವಾಗಿ ಖಂಡಿಸಿತ್ತು. ಹಿಂಸಾಚಾರದಲ್ಲಿ ಭಾಗಿಯಾದವರ ವಿರುದ್ಧ ತಕ್ಷಣದ ಕ್ರಮಕ್ಕೂ ಒತ್ತಾಯಿಸಿತ್ತು.

ಬರ್ಮಿಂಗ್‌ಹ್ಯಾಮ್ ನಗರದಲ್ಲಿ ಹಿಂದೂ ದೇವಾಲಯದ ಹೊರಗೆ ನಡೆಯುತ್ತಿದ್ದ ಪ್ರತಿಭಟನೆ ವೇಳೆ ಪೊಲೀಸ್ ಅಧಿಕಾರಿಗಳನ್ನು ಗುರಿಯಾಗಿಸಿಕೊಂಡು ಪಟಾಕಿ ಹಚ್ಚಿದ ಯುವಕನನ್ನು ಬುಧವಾರ ಪೊಲೀಸರು ಬಂಧಿಸಿದರು. ನಗರದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಮತ್ತಷ್ಟು ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ.

‘ಇರಾನ್ ಹ್ಯೂಮನ್ ರೈಟ್ಸ್’ ಸಂಸ್ಥೆ ಹೇಳಿಕೆ: 50ಕ್ಕೂ ಹೆಚ್ಚು ನಗರಗಳಲ್ಲಿ ಪ್ರತಿಭಟನೆ

ಹಿಜಾಬ್: ಇರಾನ್‌ನಲ್ಲಿ 31 ನಾಗರಿಕರ ಹತ್ಯೆ

ಟೆಹರಾನ್/ದುಬೈ/ಓಸ್ಲೊ (ಎಪಿ, ಎಎಫ್‌ಪಿ, ರಾಯಿಟರ್ಸ್): ‘ಹಿಜಾಬ್ ಕುರಿತು ಭುಗಿಲೆದ್ದಿರುವ ಪ್ರತಿಭಟನೆ ತೀವ್ರವಾಗಿದೆ. ಇರಾನ್‌ನ ಭದ್ರತಾ ಸಿಬ್ಬಂದಿ ಪ್ರತಿಭಟನಕಾರರ ಮೇಲೆ ಬಲಪ್ರಯೋಗ ಹೆಚ್ಚಿಸಿದ್ದಾರೆ. ಇದರಿಂದಾಗಿ ಇಲ್ಲಿಯವರೆಗೆ 31 ನಾಗರಿಕರು ಮೃತಪಟ್ಟಿದ್ದಾರೆ’ ಎಂದು ಓಸ್ಲೊದ ಸರ್ಕಾರೇತರ ಸಂಸ್ಥೆ ‘ಇರಾನ್ ಹ್ಯೂಮನ್ ರೈಟ್ಸ್’ ಗುರುವಾರ ಹೇಳಿದೆ.

‘ಇರಾನ್‌ನ ಜನರು ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಬೀದಿಗಿಳಿದಿದ್ದು ಘನತೆಗಾಗಿ ಹೋರಾಟ ನಡೆಸುತ್ತಿದ್ದಾರೆ. ಆದರೆ, ಇಂಥ ಶಾಂತಿಯುತ ಪ್ರತಿಭಟನೆಗೆ ಇರಾನ್ ಸರ್ಕಾರವು ಗುಂಡಿನ ಮೂಲಕ ಉತ್ತರಿಸುತ್ತಿದೆ’ ಎಂದು ‘ಇರಾನ್ ಹ್ಯೂಮನ್ ರೈಟ್ಸ್’ ನಿರ್ದೇಶಕ ಮೊಹಮದ್ ಅಮ್ರಿ ಮೊಗದ್ದಂ ಹೇಳಿಕೆ ನೀಡಿದ್ದಾರೆ.

‘ಇರಾನ್‌ನ ಸಾಮಾಜಿಕ ಕಾರ್ಯಕರ್ತರನ್ನು ಮತ್ತು ಪ್ರತಿಭನಕಾರರನ್ನು ದೊಡ್ಡ ಸಂಖ್ಯೆಯಲ್ಲಿ ಬಂಧಿಸಲಾಗುತ್ತಿದೆ. ದೇಶದಲ್ಲಿ ನಡೆಯುತ್ತಿರುವ ಈ ಬೆಳವಣಿಗೆಗಳ ಕುರಿತು ಅಂತರರಾಷ್ಟ್ರೀಯ ಸಮುದಾಯ ಖಂಡನೆ ದಾಖಲಿಸುವುದನ್ನು ಮಾಡಿದರಷ್ಟೇ ಸಾಲದು’ ಎಂದು ಅವರು ಹೇಳಿದ್ದಾರೆ.

ನಾಲ್ವರು ಭದ್ರತಾ ಸಿಬ್ಬಂದಿ ಹತ್ಯೆ: ಮೃತ 31 ನಾಗರಿಕರಲ್ಲಿ ನಾಲ್ಕು ಮಂದಿ ಭದ್ರತಾ ಸಿಬ್ಬಂದಿಯೂ ಸೇರಿದ್ದಾರೆ. ಭದ್ರತಾ ಪಡೆಗಳ ಬಲಪ್ರಯೋಗದಿಂದ ಆಕ್ರೋಶಗೊಂಡಿರುವ ಪ್ರತಿಭಟನಕಾರರು ಬಸೀಜಿ (ಇರಾನ್‌ನ ಅರೆಸೇನಾ ಪಡೆ) ಯೋಧರೊಬ್ಬರನ್ನು ಬುಧವಾರ ಹತ್ಯೆ ಮಾಡಿದ್ದಾರೆ ಎಂದು ಗುರುವಾರ ಇಲ್ಲಿನ ಮಾಧ್ಯಮವೊಂದು ವರದಿ ಮಾಡಿದೆ.

ಇರಾನ್‌ನ ಈಶಾನ್ಯ ಭಾಗದಲ್ಲಿ ‘ನಾವು ಸಾಯುತ್ತೇವೆ, ನಾವು ಸಾಯುತ್ತೇವೆ. ಆದರೆ ನಾವು ಇರಾನ್ ಅನ್ನು ವಾಪಸ್ ಪಡೆಯುತ್ತೇವೆ’ ಎಂದು ಘೋಷಣೆ ಕೂಗಿದ ಪ್ರತಿಭಟನಕಾರರು ಪೊಲೀಸ್ ಠಾಣೆಯೊಂದಕ್ಕೆ ಬೆಂಕಿ ಹಚ್ಚಿದ್ದಾರೆ. ಈ ವಿಡಿಯೊವನ್ನು @1500tasvir ಟ್ವಿಟರ್ ಖಾತೆಯಲ್ಲಿ ಪೋಸ್ಟ್ ಮಾಡಲಾಗಿದೆ.

ಟೆಹರಾನ್‌ನಲ್ಲೂ ಒಂದು ಪೊಲೀಸ್ ಠಾಣೆಗೆ ಬೆಂಕಿ ಹಚ್ಚಲಾಗಿದೆ.

ಭದ್ರತಾ ಸಿಬ್ಬಂದಿಯ ಸಾವಿನ ಸಂಖ್ಯೆಯೂ ಏರಿಕೆ ಆಗುವ ಸಂಭವವಿದೆ ಎನ್ನಲಾಗಿದೆ. ಪ್ರತಿಭಟನೆಯು ಇರಾನ್‌ನ 50 ನಗರಗಳಿಗೆ ವ್ಯಾಪಿಸಿದೆ. ಪಶ್ಚಿಮ ಅಜರ್‌ಬೈಜಾನ್ ಪ್ರದೇಶದಲ್ಲಿ 16 ವರ್ಷದ ಬಾಲಕ ಮತ್ತು 23 ವರ್ಷದ ಯುವಕನನ್ನು ಬುಧವಾರ ಹತ್ಯೆ ಮಾಡಲಾಗಿದೆ ಎಂದು ಮಾನವ ಹಕ್ಕುಗಳ ಹೋರಾಟ ಸಂಸ್ಥೆ ‘ಹೆಂಗಾವ್’ ಹೇಳಿದೆ. ಈ ಮಧ್ಯೆ, ಪ್ರತಿಭಟನಕಾರರ ಸಾವಿನಲ್ಲಿ ಭದ್ರತಾ ಪಡೆಗಳ ಯಾವುದೇ ಕೈವಾಡವಿಲ್ಲ ಎಂದು ಇರಾನ್ ಸರ್ಕಾರ ಹೇಳಿದೆ.

ಆ್ಯಪ್‌ಗಳಿಗೆ ನಿರ್ಬಂಧ: ಇರಾನ್ ಸರ್ಕಾರವು ಸಾಮಾಜಿಕ ಮಾಧ್ಯಮಗಳಾದ ಇನ್‌ಸ್ಟಾಗ್ರಾಂ ಮತ್ತು ವಾಟ್ಸ್ ಆ್ಯಪ್ ಸೇವೆಗಳನ್ನೂ ಗುರುವಾರ ಸ್ಥಗಿತಗೊಳಿಸಿದೆ. ಸರ್ಕಾರದ ವಿರುದ್ಧ ಜನಾಭಿಪ್ರಾಯ ಮೂಡಿಸಲು ಪ್ರತಿಭಟನಕಾರರು ಈ ಆ್ಯಪ್‌ಗಳನ್ನು ಬಳಸುತ್ತಿದ್ದರು.

ಫೇಸ್‌ಬುಕ್, ಟ್ವಿಟರ್, ಟೆಲಿಗ್ರಾಂ, ಯೂಟ್ಯೂಬ್ ಮತ್ತು ಇತರ ಸಾಮಾಜಿಕ ಮಾಧ್ಯಮಗಳಿಗೆ ಇರಾನ್‌ನಲ್ಲಿ ಈಗಾಗಲೇ ನಿರ್ಬಂಧ ಇದೆ. ಆದ್ದರಿಂದ ಇರಾನ್ ಜನರು ಇನ್‌ಸ್ಟಾಗ್ರಾಂ ಹಾಗೂ ವಾಟ್ಸ್‌ಆ್ಯಪ್ ಅನ್ನು ಬಳಸುತ್ತಿದ್ದರು.

ಮಹಸಾ ಅಮೀನಿ ಅವರ ಸಾವಿನ ನಂತರ ಪ್ರತಿಭಟನೆ ತೀವ್ರಗೊಳ್ಳುತ್ತಿದ್ದಂತೆಯೇ ಸರ್ಕಾರವು ಇಂಟರ್‌ನೆಟ್ ಸಂಪರ್ಕದ ಮೇಲೆ ನಿರ್ಬಂಧ ಹೇರಿತ್ತು. ಆದರೆ, ವಿಪಿಎನ್ ಸಂಪರ್ಕ ಇರುವವರು ಈ ಎಲ್ಲಾ ಸಾಮಾಜಿಕ ಮಾಧ್ಯಮಗಳನ್ನು ಬಳಸಬಹುದಾಗಿದೆ.

ಹತ್ಯೆ ಖಂಡಿಸಿ ಟೆಹರಾನ್‌ನ ಬೀದಿಗಳಲ್ಲಿ ಪ್ರತಿಭಟನೆಗಳು ನಡೆದವು –ಎಎಫ್‌ಪಿ ಚಿತ್ರ

> **ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಿರುವ ಇರಾನ್‌ನ ಸಾಹಸಿ ನಾಗರಿಕರು ಹಾಗೂ ಮಹಿಳೆಯರ ಪರ ನಿಲ್ಲುತ್ತೇವೆ**
> **ಜೋ ಬೈಡನ್,** ಅಮೆರಿಕ ಅಧ್ಯಕ್ಷ

‘ದೊಡ್ಡ ಬದಲಾವಣೆಯ ಸೂಚನೆ’

ಅಮೀನಿ ಅವರ ಹತ್ಯೆಯು ‘ಒಂದು ದೊಡ್ಡ ಬದಲಾವಣೆಯ’ ಸೂಚನೆಯಾಗಿದೆ ಎಂದು ಮೊಹಮದ್ ಅಮ್ರಿ ಮೊಗದ್ದಂ ಅಭಿಪ್ರಾಯಪಟ್ಟಿದ್ದಾರೆ.

‘15 ವರ್ಷಗಳಿಂದ ಮಾನವ ಹಕ್ಕುಗಳ ಹೋರಾಟವನ್ನು ಗಮನಿಸುತ್ತಾ ಬಂದಿದ್ದೇನೆ. ಆದರೆ, ಇಂಥ ಆಕ್ರೋಶವನ್ನು ನಾನು ಕಂಡಿಲ್ಲ. ಅವರು ಇನ್ನಾವುದಕ್ಕೂ ಭಯಪಡುವುದಿಲ್ಲ. ಅಮೀನಿ ಅವರ ಹತ್ಯೆಯು ಅವರ ತಾಳ್ಮೆಯ ಕಟ್ಟೆ ಒಡೆಯುವ ಕೊನೆಯ ಹನಿಯಾಗಿತ್ತು. ಆದ್ದರಿಂದ ಇದೊಂದು ದೊಡ್ಡ ಬದಲಾವಣೆಯ ಸೂಚನೆ’ ಎಂದರು. ಇಂಧನ ಬೆಲೆ ಹೆಚ್ಚಳವನ್ನು ವಿರೋಧಿಸಿ 2019ರ ನವೆಂಬರ್‌ನಲ್ಲಿ ದೊಡ್ಡ ಮಟ್ಟದ ಪ್ರತಿಭಟನೆ ನಡೆದಿತ್ತು. ಈ ವೇಳೆ 1,500ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದರು. ಅಮೀನಿ ಹತ್ಯೆಯನ್ನು ಖಂಡಿಸಿ ನಡೆಯುತ್ತಿರುವ ಹೋರಾಟವು ಇಂಧನ ಬೆಲೆ ಏರಿಕೆ ವಿರೋಧಿ ಹೋರಾಟಕ್ಕಿಂತ ತೀವ್ರವಾಗಿದೆ ಎಂದು ಮಾಧ್ಯಮಗಳು ಹೇಳಿವೆ.

ಅಬೆ ಅಂತ್ಯಕ್ರಿಯೆ: ಇದೇ 27ರಂದು ಜಪಾನ್‌ಗೆ ಮೋದಿ

ನವದೆಹಲಿ (ಪಿಟಿಐ): ಜುಲೈನಲ್ಲಿ ಹಂತಕನ ಗುಂಡಿಗೆ ಬಲಿಯಾದ ಜಪಾನ್‌ನ ಮಾಜಿ ಪ್ರಧಾನಿ ಶಿಂಜೊ ಅಬೆ ಅವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಇದೇ 27ರಂದು ಜಪಾನ್‌ಗೆ ತೆರಳಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ಅಬೆ ಅವರು ಜಪಾನ್‌ನ ದೀರ್ಘಾವಧಿಯ ಪ್ರಧಾನಿ ಎಂಬ ಖ್ಯಾತಿಗೆ ಪಾತ್ರರಾಗಿದ್ದಾರೆ. ಅಂತ್ಯಕ್ರಿಯೆಯಲ್ಲಿ ಭಾಗಿಯಾದ ನಂತರ ಮೋದಿ ಅವರು, ಜಪಾನ್‌ನ ಪ್ರಧಾನಿ ಫುಮಿಯೊ ಕಿಶಿದಾ ಅವರನ್ನು ಪ್ರತ್ಯೇಕವಾಗಿ ಭೇಟಿ ಮಾಡಲಿದ್ದಾರೆ ಎಂದೂ ಸಚಿವಾಲಯ ತಿಳಿಸಿದೆ.

ಲೈಂಗಿಕ ದೌರ್ಜನ್ಯ: ರಸ್ತೆಯಲ್ಲಿ ನಗ್ನವಾಗಿ ಓಡಿದ ಮಹಿಳೆ

ಮೊರಾದಾಬಾದ್ (ಉತ್ತರ ಪ್ರದೇಶ) (ಪಿಟಿಐ): ಇಲ್ಲಿ ಮಹಿಳೆಯೊಬ್ಬರ ಮೇಲೆ ಐವರು ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪ ಕೇಳಿಬಂದಿದ್ದು, ಮಹಿಳೆ ರಸ್ತೆಯಲ್ಲಿ ನಗ್ನವಾಗಿ ಓಡುತ್ತಿರುವ ವಿಡಿಯೊವನ್ನು ಸಾಮಾಜಿಕ ಮಾಧ್ಯಮದಲ್ಲಿ ಗಮನಿಸಿದ ಪೊಲೀಸರು, ಐವರ ವಿರುದ್ಧ ಅತ್ಯಾಚಾರ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸೆಪ್ಟೆಂಬರ್ 1ರಂದು ಭೋಜ್‌ಪುರ ಪೊಲೀಸ್ ಠಾಣೆ ವ್ಯಾಪ್ತಿಯ ಹಳ್ಳಿಯಲ್ಲಿ ಈ ಘಟನೆ ನಡೆದಿದೆ. ಸಂತ್ರಸ್ತೆ ಕುಟುಂಬದವರ ದೂರಿನ ಆಧಾರದ ಮೇಲೆ ಒಬ್ಬ ಆರೋಪಿಯನ್ನು ಈಗಾಗಲೇ ಬಂಧಿಸಲಾಗಿದೆ.

‘ಸೆಪ್ಟೆಂಬರ್ 1ರ ರಾತ್ರಿ ಈ ಘಟನೆ ನಡೆದಿದೆ. ಒಬ್ಬ ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಸಂತ್ರಸ್ತೆಯ ವೈದ್ಯಕೀಯ ಪರೀಕ್ಷೆಯಲ್ಲಿ ಅತ್ಯಾಚಾರ ದೃಢಪಟ್ಟಿಲ್ಲ. ತನಿಖೆ ಮುಂದುವರಿದಿದೆ’ ಎಂದು ಡಿಐಜಿ ಶಲಾಭ್ ಮಥೂರ್ ತಿಳಿಸಿದ್ದಾರೆ.

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ನಂ.2 ಕಟ್ಟಡಗಳ ವಿಭಾಗ,
1ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು.
ದೂ.: 080–22122856 ವೆಬ್‌ಸೈಟ್: www.kpwd.gov.in

ಟೆಂಡರ್ ಪ್ರಕಟಣೆ ಸಂಖ್ಯೆ 17/2022–23 ದಿನಾಂಕ : 22–09–2022

ಕಾರ್ಯಪಾಲಕ ಇಂಜಿನಿಯರ್, ನಂ.2 ಕಟ್ಟಡಗಳ ವಿಭಾಗ, ಬೆಂಗಳೂರು ರವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ–2000ರನ್ವಯ ಮತ್ತು ಕೆಡಬ್ಲ್ಯೂ–1 ಮತ್ತು ಕೆಡಬ್ಲ್ಯೂ–4 ನಿಯಮಗಳಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (http://eproc.karnataka.gov.in) ಪಿಡಬ್ಲ್ಯೂಡಿಯಲ್ಲಿ ನೊಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಒಂದು ಮತ್ತು ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. **ಟೆಂಡರ್ ಪ್ರೊಸಸಿಂಗ್ ಬೆಲೆ ಮತ್ತು ಇಎಂಡಿ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.**

(1) ಕಾಮಗಾರಿಯ ಹೆಸರು : Providing polishing and fixtures to Doors of SHT-01 of Treasury Department K.R.Circle, Bengaluru. **KPWD/2022-23/BD/WORK_INDENT151352 Call-2. ಟೆಂಡರ್‌ಗೆ ಇಟ್ಟಿರುವ ಕೆಲಸದ ಮೊತ್ತ** ರೂ. 8,69,708/– **ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಗೊಳಿಸಿರುವ ಕಾಲಾವಧಿ :** 2 ತಿಂಗಳು. **ಗುತ್ತಿಗೆದಾರರ ದರ್ಜೆ :** 4ನೇ ದರ್ಜೆ ಮೇಲ್ಪಟ್ಟು, ಮೀಸಲಾತಿ ಹಂಚಿಕೆ : ಇತರೆ.

(2) ಕಾಮಗಾರಿಯ ಹೆಸರು : Construction of Primary & Secondary School Building for KPS at Audugodi, Bengaluru South Taluk. **KPWD/2022-23/BD/WORK_INDENT156319. ಟೆಂಡರ್‌ಗೆ ಇಟ್ಟಿರುವ ಕೆಲಸದ ಮೊತ್ತ** ರೂ. 1,68,64,352/– **ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿಗೊಳಿಸಿರುವ ಕಾಲಾವಧಿ :** 11 ತಿಂಗಳು. **ಗುತ್ತಿಗೆದಾರರ ದರ್ಜೆ :** 3ನೇ ದರ್ಜೆ ಮೇಲ್ಪಟ್ಟು, ಮೀಸಲಾತಿ ಹಂಚಿಕೆ : ಇತರೆ.

(1) ಟೆಂಡರ್ ಡಾಕ್ಯುಮೆಂಟ್‌ನ್ನು ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ನಿಗದಿಪಡಿಸಿರುವ ದಿನಾಂಕ : **23.09.2022 ರಿಂದ 07.10.2022 ಸಂಜೆ 4.30 ಗಂಟೆಯವರೆಗೆ.** (2) ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ : **07.10.2022 ಸಂಜೆ 4.30 ಗಂಟೆಯವರೆಗೆ.** (3) ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ : **10.10.2022 ರಂದು ಸಂಜೆ 4.30 ಕ್ಕೆ** ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://eproc.karnataka.gov.in** ಮೂಲಕ ಪಡೆಯಬಹುದಾಗಿದೆ ಹಾಗೂ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ನಂ. 2ನೇ ಕಟ್ಟಡಗಳ ವಿಭಾಗ, ಬೆಂಗಳೂರು

ವಾಸಾಸಂಇ/ವಾ.ಪ್ರ/2341/ಶ್ರೇಷ್ಠ/2022–23

TUNGABHADRA BOARD : TB DAM
e-Procurement Long Term Tender Notice
IFB Nos.92/2022-23 & 93/2022-23 Dt.23.09.2022

Tender for 02 Nos. of Works under Dam Safety Works (DRIP) category are invited in respect of HW & HLC Division, TB Dam through `e-Procurement'.

Bid Document downloading Start Date & Time	:	23.09.2022 at 11:00 AM
Bid Document downloading End Date & Time	:	27.10.2022 at 3:00 PM
Bid Submission End Date & Time	:	27.10.2022 at 5:30 PM
Date of opening of PQ Stage	:	27.10.2022 at 6:00 PM
Date of opening of Commercial Stage*	:	04.11.2022 at 11:00 AM
Date of opening of TQ Stage	:	05.11.2022 at 11:00 AM
Preliminary Meeting Date & Time	:	30.09.2022 at 11:00 AM
Pre Bid Meeting Date & Time	:	10.10.2022 at 11:00 AM

Further details can be seen @ https://tender.apeprocurement now in
*Commencement of Reverse Tendering

08394 - 259114
Fax : 08394-259167

Sd/-
Superintending Engineer
I.B, TB Board, TB Dam

INNOVATE KARNATAKA K-tech

ಅಲ್ಪಾವಧಿ ಟೆಂಡರ್ ಅಧಿಸೂಚನೆ ಸಂಖ್ಯೆ: E-KITS/ADMN/VECH/3/2022-AA-KITS; ದಿನಾಂಕ: 22/09/2022
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮಾಸಿಕ ಬಾಡಿಗೆ ಆಧಾರದ ಮೇಲೆ 2018 ಮತ್ತು ಮೇಲ್ಪಟ್ಟ ಮಾಡೆಲ್‌ನ ಹಳದಿ ಬೋರ್ಡ್ ಹೊಂದಿರುವ ಟ್ಯಾಕ್ಸಿ ಸೇವೆಯನ್ನು ಒದಗಿಸಲು ಮಾಲೀಕರು/ಚಾಲಕರು, ಟ್ಯಾಕ್ಸಿ ಏಜೆನ್ಸಿಯವರು/ನೇರ ಮಾಲೀಕರು, ಟ್ರಾವೆಲ್ ಏಜೆನ್ಸಿಗಳು ಅಥವಾ ಇತರೆ ಟ್ಯಾಕ್ಸಿ ಸೇವೆಯನ್ನು ಒದಗಿಸುವ ಸಂಸ್ಥೆಗಳಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಹವಾ ನಿಯಂತ್ರಿತ (ಎ.ಸಿ) ವಾಹನಕ್ಕೆ ಮಾಸಿಕ ಬಾಡಿಗೆ ರೂ.40,000–00 ಹಾಗೂ ಹವಾ ನಿಯಂತ್ರಿತವಲ್ಲದ ವಾಹನಕ್ಕೆ ಮಾಸಿಕ ಬಾಡಿಗೆ ರೂ. 35,000–00 ಗಳನ್ನು ನಿಗದಿಪಡಿಸಲಾಗಿರುತ್ತದೆ.

ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲು ಕೊನೆಯ **ದಿನಾಂಕ: 15.10.2022 ಅಪರಾಹ್ನ 4.30** ಆಗಿರುತ್ತದೆ. ಟೆಂಡರ್ ಷರತ್ತು ಮತ್ತಿತರ ವಿವರಗಳು https://eproc.karnataka.gov.in ರಲ್ಲಿ ಲಭ್ಯವಿರುತ್ತದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕಿಟ್ಸ್

ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್)
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ
ಬಿಎಂಟಿಸಿ ಕೇಂದ್ರ ಕಛೇರಿಗಳ ಕಟ್ಟಡ, ಟಿಟಿಎಂಸಿ ‘ಬಿ’ ಬ್ಲಾಕ್, 4ನೇ ಮಹಡಿ, ಶಾಂತಿನಗರ, ಕೆ. ಹೆಚ್. ರಸ್ತೆ, ಬೆಂಗಳೂರು–560027.
ದೂರವಾಣಿ: 080–22231006/8. ಇ–ಮೇಲ್: kitsgok@karnataka.gov.in

ವಾ.ಸಾ.ಸಂ.ಇ/ವಾಪ್ರ/2336/ಆಕಾರ್/22–23

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ
3ನೇ ಮಹಡಿ, ಕೌಶಲ್ಯ ಭವನ, ಬನ್ನೇರುಘಟ್ಟ ರಸ್ತೆ, ಡೈರಿ ಸರ್ಕಲ್,
ಬೆಂಗಳೂರು–560029. ದೂ: 080–29522222, 29555085
e-mail: sankalp_portal@kaushalkar.com

ಸಂಖ್ಯೆ: ITE/PMKVY/SANKALP/PN/CR-23/2022-23 ದಿನಾಂಕ: 22.09.2022

ಇ–ಟೆಂಡರ್ ಅಧಿಸೂಚನೆ

ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮವು ಕರ್ನಾಟಕ ಸಾರ್ವಜನಿಕ ಸಂಗ್ರಹಣಾಯಲ್ಲಿ ಪಾರದರ್ಶಕತೆ ಅಧಿನಿಯಮ–2000 ರ ಅನ್ವಯ, ದ್ವಿ–ಲಕೋಟೆ ಪದ್ಧತಿಯಲ್ಲಿ ಸೇವೆಗಾಗಿ ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಮತ್ತು ನೋಂದಾಯಿತ ಬಿಡ್ಡುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋಟರ್ಲ್‌ನಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಟೆಂಡರ್ ಶೀರ್ಷಿಕೆಯ ಹೆಸರು **Selection of Bidders for Development, Supply, Implementation and Maintenance of Karnataka Skill Connect Portal** ಸಂಖ್ಯೆ: KSDC/PUR/ITAI/CR-04/2022-23/CALL-2 ಕೊನೆಯ ದಿನಾಂಕ: 09.10.2022 ಸಮಯ: 17.30 ಗಂಟೆ ಮತ್ತು ಇ–ಟೆಂಡರ್ ಅಧಿಸೂಚನೆ ದಾಖಲೆಗಳನ್ನು, ಟೆಂಡರ್ ಸಂಸ್ಕರಣ ಶುಲ್ಕಗಳು, ಇತರೆ ವಿವರಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://www.eproc.karnataka.gov.in ನಲ್ಲಿ ಮತ್ತು ಸಹಾಯವಾಣಿ ಸಂಖ್ಯೆ: +91–8046010000/+91–8068948777 ಅಥವಾ ಕೆಲಸದ ಸಮಯದಲ್ಲಿ ನೀವು ಈ ಕಛೇರಿಗೆ ಸಹ ಸಂಪರ್ಕಿಸಬಹುದು.

ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ಕಾರ್ಯನಿರ್ವಾಹಕ ನಿರ್ದೇಶಕರು, ಕೆ.ಎಸ್.ಡಿ.ಸಿ., ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/2340/ಆಕಾರ್/22–23

ಗದಗ ಬೆಟಗೇರಿ ನಗರಸಭೆ ಕಾರ್ಯಾಲಯ–582101, ಜಿಲ್ಲಾ ಗದಗ ರಾಜ್ಯ : ಕರ್ನಾಟಕ
ದೂರವಾಣಿ : 08372–259932 ಇ–ಮೇಲ್ : itstaff.ulb.gadag@gmail.com
ನಂ.ಗಬೆನಸ/ತಾಂ.ವಿ/ವಹಿ/ಟೆಂಡರ್/2022–23 ದಿನಾಂಕ : 22–09–2022

ಟೆಂಡರ ಪ್ರಕಟಣೆ (ಕರ್ನಾಟಕ ಪಾರದರ್ಶಕ ಅಧಿನಿಯಮ 2000 ರನ್ವಯ)

ಗದಗ–ಬೆಟಗೇರಿ ನಗರಸಭೆ ಸನ್ 2022–23 ನೇ ಸಾಲಿನ ನಗರಸಭೆ ಅನುದಾನದ ಒಟ್ಟು 05 ಕಾಮಗಾರಿಗಳ ಅಂದಾಜು ಮೊತ್ತ ರೂ. **55.50** ಲಕ್ಷಗಳಿಗೆ ಟೆಂಡರ್‌ನ್ನು ಕೆಡಬ್ಲ್ಯೂ–1 ಪ್ರಕಾರ ಆಹ್ವಾನಿಸಿದ್ದು ಇಚ್ಛೆಯುಳ್ಳ ಗುತ್ತಿಗೆದಾರರು ಬಿಡ್ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ತಾಂತ್ರಿಕ ಶಾಖೆಯಲ್ಲಿ ಕೇಳಿ ಪಡೆಯಬಹುದು.

ಪ್ಯಾ ನಂ.	ಕಾಮಗಾರಿ ಇಂಡೆಂಟ್ ನಂ.	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ	ಕಾಮಗಾರಿಯ ಕಾಲಾವಕಾಶ
ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ				
1	WORK_INDENT 135092	5.00	12500	90 ದಿನ
2	WORK_INDENT 135094	5.50	13750	90 ದಿನ
3	WORK_INDENT133782	15.00	37500	90 ದಿನ
ಪರಿಶಿಷ್ಟ ಜಾತಿ ವರ್ಗದ ಗುತ್ತಿಗೆದಾರರಿಗೆ				
4	WORK_INDENT 135091	20.00	25000	90 ದಿನ
ಪರಿಶಿಷ್ಟ ಪಂಗಡ ವರ್ಗದ ಗುತ್ತಿಗೆದಾರರಿಗೆ				
5	WORK_INDENT 135454	10.00	12500	90 ದಿನ

(1) ಟೆಂಡರ ಫಾರ್ಮ ವೆಬ್ ಸೈಟಿನಿಂದ ಡೌನ್ ಲೋಡ ಮಾಡಿಕೊಳ್ಳುವ ಪ್ರಾರಂಭದ ದಿನಾಂಕ : **23–09–2022** (2) ಭರ್ತಿ ಮಾಡಿದ ಟೆಂಡರಗಳನ್ನು ಅಪಲೋಡ್ (Upload) ಮಾಡುವ ಕೊನೆಯ ದಿನಾಂಕ : **10–10–2022** ಸಾಯಂಕಾಲ: 4:00 ಘಂಟೆಯವರೆಗೆ (3) ಟೆಂಡರಗಳನ್ನು ತೆರೆಯುವ ದಿನಾಂಕ : **11–10–2022** ರ ಸಾಯಂಕಾಲ 4.30 ಘಂಟೆಯ ನಂತರ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ **Website: www.eproc.karnataka.gov.in** ವೆಬ್‌ಸೈಟನಲ್ಲಿ ನೋಡಬಹುದು.

ಸಹಿ/– (ಶ್ರೀಮತಿ ಉಷಾ ಮಹೇಶ ದಾಸರ) ಅಧ್ಯಕ್ಷರು, ನಗರಸಭೆ, ಗದಗ–ಬೆಟಗೇರಿ
ಸಹಿ/– (ಶ್ರೀ ರಾಘವೇಂದ್ರ ಯಳವತ್ತಿ) ಚೇರಮನ್ನರು, ಸ್ಥಾಯಿ ಸಮೀತಿ, ನಗರಸಭೆ. ಗದಗ–ಬೆಟಗೇರಿ
ಸಹಿ/– (ಶ್ರೀ ರಮೇಶ ಎಸ್ ಸುಣಗಾರ) ಪೌರಾಯುಕ್ತರು, ನಗರಸಭೆ, ಗದಗ–ಬೆಟಗೇರಿ

ವಾಸಾಸಂಇ/ಗದಗ/ಎಂ.ಸಿ.ಎ/328/2022–23

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಡಾ. ಎಂ.ಹೆಚ್. ಮರಿಗೌಡ ರಸ್ತೆ, ಬೆಂಗಳೂರು–560 029.
ದೂರವಾಣಿ: 91-80-26560722 / 26560723 / 66697999 E-mail: kidwai@nic.in

No. KMIO/SME(1)/Tender/M. Equip/322/2022-23 Dated: 21.09.2022

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಈ ಕೆಳಗಿನ ಉಪಕರಣಗಳನ್ನು ಸರಬರಾಜು ಮಾಡಲು ಆನ್‌ಲೈನ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

Sl. No.	Tender No. & Date	Name of the Equipment / Works
1.	No. KMIO/SME(1)/Tender/ M.Equip /322/2022-23 Dated: 21.09.2022 (Call-3)	Request for Proposal for Installation of PET CT Scanner under PPP Model at PCC., Kalburgi with Construction of New Building.
2.	No. KMIO/SME(1)/Tender/ M.Equip/330/2022-23 Dated: 21.09.2022 (Call-3)	Request for Proposal for Installation of 128 Slice CT Scanner & MRI 1.5 Tesla under PPP Model at PCC Kalburgi with Construction of New Building
3.	No. KMIO/SME(1)/Tender/ M.Equip/333/2022-23 Dated: 21.09.2022 (Call-3)	Procurement of MRI 1.5 Tesla with Buy Back of Existing MRI Machine to KMIO., Bangalore
4.	No. KMIO/SME(1)/Tender/ M.Equip/346/2022-23 Dated: 21.09.2022 (Call-2)	Procurement of MRI Compatible Anaesthesia Work Station to KMIO.,
5.	No. KMIO/SME(1)/Tender/ Super Market/302/2022-23 Dated: 21.09.2022 (Call-2)	Establishment of Super Market at Existing Canteen Building at KMIO.,

ಆನ್‌ಲೈನ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ: **26.09.2022 ರಿಂದ 16.10.2022** ರವರೆಗೆ. ವೆಬ್‌ಸೈಟ್: **https://eproc.karnataka.gov.in** ನಲ್ಲಿ ನೋಡಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಶುಲ್ಕ **ರೂ.500/-**ನ್ನು ಪಾವತಿಸಿ, ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ **16.10.2022** ರಂದು ಮಧ್ಯಾಹ್ನ **3:00 p.m.** ಗಂಟೆಗೆ. ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರನ್ನು ಸ್ವೀಕರಿಸುವ/ತಿರಸ್ಕರಿಸುವ/ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/–
ನಿರ್ದೇಶಕರು

DIPR/CP/RO2331/AAPL/2022-23

“ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ–583101” ದೂ.ಸಂಖ್ಯೆ: 08392–277100

ಸಂ: ಜಿ.ನ.ಕೊ.ಬ/ತಾಂತ್ರಿಕ/ಕೆ.ಕೆ.ಆರ್.ಡಿ.ಬಿ/01/2022–23 ದಿನಾಂಕ : 21.09.2022

ಟೆಂಡರ್ ಪ್ರಕಟಣೆ

2022–23 ನೇ ಸಾಲಿನಲ್ಲಿ ಕೆ.ಕೆ.ಆರ್.ಡಿ.ಬಿ ಯೋಜನೆಯಡಿ ಸಂಡೂರು ಸರ್ಕಾರಿ ಪ್ರಥಮ ದರ್ಜೆ ಪಿ.ಯು. ಕಾಲೇಜು ವ್ಯಾಪ್ತಿಯಲ್ಲಿ ಪ್ರಯೋಗಾಲಯಕ್ಕೆ ಉಪಕರಣಗಳು, ಅಗತ್ಯವಿರುವ ಪೀಠೋಪಕರಣಗಳು ಮತ್ತು ಮೂಲಭೂತ ಸೌಕರ್ಯಗಳನ್ನು ಪೂರೈಸಲು ಯೋಜನಾ ವರದಿಯನ್ನು ತಯಾರಿಸಲು ಆಸಕ್ತ ಯೋಜನಾ ಸಮಾಲೋಚಕರನ್ನು ನೇಮಿಸಲು ಟೆಂಡರ್ ದಸ್ತಾವೇಜು ಅನ್ವಯ ಈ ಕೆಳಕಾಣಿಸಿದಂತೆ ಕಾಮಗಾರಿಗೆ **Public Procurement Portal** ಮೂಲಕ ಟೆಂಡರ್ ಅಹ್ವಾನಿಸಲಾಗಿರುತ್ತದೆ.

ಪ್ಯಾಕೇಜ್ ಕಾಮಗಾರಿ ವಿವರ: 01.Construction of Compound wall, Cycle stand & Chain link fencing and Supply & fixing of MODULAR PHYSICS & CHEMISTRY LABS tables for Govt Degree college Sandur in Sandur town Ballari(Dist).(DMA/2022-23/OW/WORK_INDENT134732Call-2)(Under Works Category). **ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ):** 68,40,373.46 ಸದರಿ ಕಾಮಗಾರಿಗಳಿಗೆ ಟೆಂಡರ್‌ನ್ನು ದಿನಾಂಕ :29.09.2022 ರಂದು 16.30 ಗಂಟೆವರೆಗೆ ಸಲ್ಲಿಸಬಹುದಾಗಿರುತ್ತದೆ, ಸದರಿ ಟೆಂಡರನ್ನು ದಿನಾಂಕ:01.10.2022 ರಂದು 11.00 ಗಂಟೆಗೆ ತೆರೆಯಲಾಗುವುದು, ಸದರಿ ದಿನಾಂಕಗಳಲ್ಲಿ ಆಕಸ್ಮಿಕ ರಜೆಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು, ಇ.–ಪ್ರೊಕ್ಯೂರ್‌ಮೆಂಟ್‌ರಲ್ಲಿ ಟೆಂಡರ್ ದಾಖಲಾತಿಗಳಿಗಾಗಿ ಮತ್ತು ಷರತ್ತುಗಳಿಗಾಗಿ: **https://eproc.karnataka.gov.in** / ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಟೆಂಡರ್ ಭರ್ತಿ ಮಾಡುವುದು & ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ, ಹೆಚ್ಚಿನ ವಿವರಗಳಿಗೆ ಈ ಕಛೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ ರವರ (ದೂರವಾಣಿ ಸಂಖ್ಯೆ : 7760848568) ಇವರನ್ನು ಸಂಪರ್ಕಿಸಿ ಪಡೆಯಬಹುದು.

ಸಹಿ/– ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/474/ಎಂಸಿಎ/2022–23

ಷೇರುಪೇಟೆ ವಹಿವಾಟು 337



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	17,718
ಇಂದಿನ ಅಂತ್ಯ	17,629
▼	88
ದಿನದ ಕನಿಷ್ಠ	17,722

ವಿನಿಮಯ ದರ

$ ಡಾಲರ್	80.79
£ ಪೌಂಡ್	91.3
€ ಯುರೊ	79.71
¥ ಯೆನ್ (100ಕ್ಕೆ)	57.07

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹440
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹440

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1660 (1660)
ಸೋಯಾ (ರಿಫೈನ್ಡ್)	₹1172 (1170)
ಸೂರ್ಯಕಾಂತಿ (ರಿಫೈನ್ಡ್)	₹1340 (1340)
ಪಾಮೋಲಿನ್	₹920 (930)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1000-1400
ಮಧ್ಯಮ	₹600-1000
ಸಣ್ಣ	₹200-600

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹322-671
ದ್ವಿತಳಿ (ಬಿ.ವಿ) ₹293-825

ಕೊಬ್ಬರಿ ಧಾರಣೆ

ಕೆ.ಆರ್. ಪೇಟೆ (ಇತರ)	₹8092-8092
ತುರುವೇಕೆರೆ	₹14150-14150

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವಾಟ್ಸ್ಆ್ಯಪ್, ಜೂಮ್, ಗೂಗಲ್ ಡ್ಯೊ ಇಂಟರ್ನೆಟ್ ಕರೆ ಸೇವೆಗೆ ಪರವಾನಗಿ?

ನವದೆಹಲಿ (ಪಿಟಿಐ): ಕರೆ ಮಾಡುವ ಹಾಗೂ ಸಂದೇಶ ರವಾನೆ ಸೇವೆ ಒದಗಿಸುವ ವಾಟ್ಸ್ಆ್ಯಪ್, ಜೂಮ್, ಗೂಗಲ್ ಡ್ಯೊ ಹಾಗೂ ಈ ಮಾದರಿಯ ಇತರ ಆ್ಯಪ್‌ಗಳು ದೇಶದಲ್ಲಿ ಚಟುವಟಿಕೆ ನಡೆಸಲು ಪರವಾನಗಿ ಪಡೆಯಬೇಕು ಎಂದು ಕರಡು ದೂರಸಂಪರ್ಕ ಮಸೂದೆ 2022ರಲ್ಲಿ ಹೇಳಲಾಗಿದೆ.

ಒಟಿಟಿ ವೇದಿಕೆಗಳು ಕೂಡ ದೂರಸಂಪರ್ಕ ಸೇವೆಯ ಭಾಗ ಎಂದು ಕರಡು ಮಸೂದೆಯು ಹೇಳುತ್ತದೆ. 'ದೂರಸಂಪರ್ಕ ಸೇವೆಗಳು ಮತ್ತು ದೂರಸಂಪರ್ಕ ಜಾಲಕ್ಕಾಗಿ ಸಂಸ್ಥೆ, ಕಂಪನಿಗಳು ಪರವಾನಗಿಯನ್ನು ಪಡೆದುಕೊಳ್ಳಬೇಕಾಗುತ್ತದೆ' ಎಂದು ಕರಡು ಮಸೂದೆಯಲ್ಲಿ ಹೇಳಲಾಗಿದೆ. ಇದನ್ನು ಬುಧವಾರ ಸಂಜೆ ಪ್ರಕಟಿಸಲಾಗಿದೆ.

ದೂರಸಂಪರ್ಕ ಮತ್ತು ಇಂಟರ್ನೆಟ್ ಸೇವಾ ಕಂಪನಿಗಳ ಶುಲ್ಕ ಮತ್ತು ದಂಡವನ್ನು ಮನ್ನಾ ಮಾಡುವ ಅಂಶವನ್ನು ಕೂಡ ಕೇಂದ್ರ ಸರ್ಕಾರವು ಮಸೂದೆಯಲ್ಲಿ ಸೇರಿಸಿದೆ. ದೂರಸಂಪರ್ಕ ಅಥವಾ ಇಂಟರ್ನೆಟ್ ಸೇವಾ ಕಂಪನಿಯು ತನ್ನ ಪರವಾನಗಿಯನ್ನು ವಾಪಸ್ ಮಾಡಿದರೆ, ಆ ಕಂಪನಿ ಪಾವತಿಸಿದ್ದ ಶುಲ್ಕವನ್ನು ಹಿಂದಿರುಗಿಸುವ ಪ್ರಸ್ತಾವ ಕೂಡ ಕರಡು ಮಸೂದೆಯಲ್ಲಿ ಇದೆ.

'ಕರಡು ಮಸೂದೆಯ ಬಗ್ಗೆ ಅಭಿಪ್ರಾಯ ಸಲ್ಲಿಸಬೇಕು' ಎಂದು ದೂರಸಂಪರ್ಕ ಸಚಿವ ಅಶ್ವಿನಿ ವೈಷ್ಣವ್ ಅವರು ಸಾಮಾಜಿಕ ಜಾಲತಾಣಗಳ ಮೂಲಕ ತಿಳಿಸಿದ್ದಾರೆ. ಇದಕ್ಕೆ ಸಾರ್ವಜನಿಕರು ಅಕ್ಟೋಬರ್ 20ಕ್ಕೆ ಮೊದಲು ಅಭಿಪ್ರಾಯ ತಿಳಿಸಬೇಕಿದೆ.

ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಮಾನ್ಯತೆ ಪಡೆದಿರುವ ಮಾಧ್ಯಮ ಪ್ರತಿನಿಧಿಗಳು, ಭಾರತದಲ್ಲಿ ಸುದ್ದಿ ಪ್ರಕಟಿಸುವ ಉದ್ದೇಶದಿಂದ ರವಾನಿಸುವ ಸಂದೇಶವನ್ನು ತಡೆಯುವಂತೆ ಇಲ್ಲ ಎಂದು ಕರಡಿನಲ್ಲಿ ಹೇಳಲಾಗಿದೆ.

ಆದರೆ ಸಾರ್ವಜನಿಕ ತುರ್ತು ಸಂದರ್ಭಗಳಲ್ಲಿ ಅಥವಾ ಸಾರ್ವಜನಿಕ ರಕ್ಷಣೆ, ದೇಶದ ಸಾರ್ವಭೌಮತ್ವ, ಏಕತೆ ಅಥವಾ ಭದ್ರತೆ, ವಿದೇಶಗಳೊಂದಿಗಿನ ಸ್ನೇಹ ಸಂಬಂಧ ಕಾಪಾಡುವ ಉದ್ದೇಶದಿಂದ ಸಂದೇಶವನ್ನು ತಡೆಹಿಡಿಯಲು ಅವಕಾಶ ಇರುತ್ತದೆ.

ಅಮೆರಿಕದಲ್ಲಿ ಬಡ್ಡಿ ಏರಿಕೆ: ಕುಸಿದ ಷೇರುಪೇಟೆ

ಮುಂಬೈ (ಪಿಟಿಐ): ಅಮೆರಿಕದ ಕೇಂದ್ರೀಯ ಬ್ಯಾಂಕ್ ಆಗಿರುವ ಫೆಡರಲ್ ರಿಸರ್ವ್ ಬಡ್ಡಿ ದರವನ್ನು ಶೇಕಡ 0.75ರಷ್ಟು ಹೆಚ್ಚಿಸಿದ ನಂತರದಲ್ಲಿ ಜಾಗತಿಕ ಷೇರುಪೇಟೆಗಳಲ್ಲಿ ಕುಸಿತ ಕಂಡುಬಂತು. ಇದರ ಪರಿಣಾಮ ಭಾರತದ ಷೇರುಪೇಟೆಗಳ ಮೇಲೆಯೂ ಆಗಿದ್ದು, ಸೆನ್ಸೆಕ್ಸ್ 337 ಅಂಶ ಮತ್ತು ನಿಫ್ಟಿ 88 ಅಂಶ ಇಳಿಕೆ ದಾಖಲಿಸಿದವು.

ಹಣದುಬ್ಬರ ಪ್ರಮಾಣವನ್ನು ನಿಯಂತ್ರಿಸಲು ಬಡ್ಡಿ ದರವನ್ನು ಇನ್ನಷ್ಟು ಹೆಚ್ಚಿಸುವ ಸೂಚನೆಯನ್ನು ಫೆಡರಲ್ ರಿಸರ್ವ್ ನೀಡಿದೆ.

'ಫೆಡರಲ್ ರಿಸರ್ವ್ ನಿರೀಕ್ಷೆಗಿಂತಲೂ ಹೆಚ್ಚಿನ ಬಿಗಿ ಹಣಕಾಸಿನ ನಿಲುವು ತಾಳಿದೆ. ಈ ವರ್ಷದಲ್ಲಿ ಇನ್ನು ಎರಡು ಹಂತಗಳಲ್ಲಿ ಬಡ್ಡಿ ದರವನ್ನು ಒಟ್ಟು ಶೇ 1.25ರಷ್ಟು ಹೆಚ್ಚಿಸುವ ಸಾಧ್ಯತೆ ಇದೆ. ದೇಶದ ಷೇರುಪೇಟೆಗಳು ದೊಡ್ಡ ಮಟ್ಟದ ಕುಸಿತವನ್ನು ಕಾಣಲಿಲ್ಲ. ಆದರೆ, ರೂಪಾಯಿ ಇನ್ನಷ್ಟು ದುರ್ಬಲವಾಗುತ್ತಿದ್ದರೆ ಭಾರತದ ಷೇರುಪೇಟೆಗಳು ವಿದೇಶಿ ಹೂಡಿಕೆದಾರರ ಪಾಲಿಗೆ ಅಲ್ಪಾವಧಿಗೆ ಆಕರ್ಷಣೆ ಕಳೆದುಕೊಳ್ಳುತ್ತವೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಯ ಜೊತೆ ನಂಟು ಹೊಂದಿರುವ ಐ.ಟಿ., ಲೋಹ ಮತ್ತು ಔಷಧ ವಲಯಗಳ ಷೇರುಗಳು ಆರ್ಥಿಕ ಹಿಂಜರಿತದ ಭೀತಿಯ ಕಾರಣದಿಂದಾಗಿ ಕೆಲವು ಕಾಲದವರೆಗೆ ಒತ್ತಡ ಅನುಭವಿಸಲಿವೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ಸಣ್ಣ ಹೂಡಿಕೆಗಳ ಸಂಶೋಧನಾ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕ ಹೇಳಿದ್ದಾರೆ.

ಪೈಲಟ್ ವೇತನ ಹೆಚ್ಚಿಸಿದ ಸ್ಪೈಸ್‌ಜೆಟ್

ಮುಂಬೈ (ಪಿಟಿಐ): ಸ್ಪೈಸ್‌ಜೆಟ್ ಕಂಪನಿಯು ತನ್ನ ಕ್ಯಾಪ್ಟನ್ ಹಾಗೂ ಹಿರಿಯ ಫಸ್ಟ್ ಆಫೀಸರ್‌ಗಳ ವೇತನವನ್ನು ಸರಿಸುಮಾರು ಶೇಕಡ 20ರಷ್ಟು ಹೆಚ್ಚಿಸಿದೆ. ಇದು ಅಕ್ಟೋಬರ್‌ನಿಂದ ಜಾರಿಗೆ ಬರಲಿದೆ. ಕೇಂದ್ರ ಸರ್ಕಾರ ರೂಪಿಸಿರುವ ಸಾಲ ಖಾತರಿ ಯೋಜನೆಯ ಅಡಿಯಲ್ಲಿ ಕಂಪನಿಯು ಮೊದಲ ಕಂತಿನ ನೆರವನ್ನು ಪಡೆದಿದೆ.

ಕಂಪನಿಯು ಒಟ್ಟು 80 ಪೈಲಟ್‌ಗಳನ್ನು ಮೂರು ತಿಂಗಳ ಅವಧಿಗೆ ವೇತನ ರಹಿತ ರಜೆಯ ಮೇಲೆ ಕಳುಹಿಸಿದೆ. ಸಾಲ ಖಾತರಿ ಯೋಜನೆಯ ಅಡಿಯಲ್ಲಿ ಕಂಪನಿಯು ಒಟ್ಟು ಅಂದಾಜು ₹ 225 ಕೋಟಿ ಪಡೆಯುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400- 420
ನಡುಗೋಲು	450-480
ರಾಶಿ	500- 520
ರಾಶಿ ಉತ್ತಮ	550-600
ಜರಡಿ	600 - 650
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,150-1,250
ಕಾಳು ಮೆಣಸು	485
ಬಂಟ್ವಾಳ	
ಕೋಕ	12500-25000
ಹೊಸತು	27500-47500
ಹಳತು	46000-56000
ಕಾರ್ಕಳ	
ಹೊಸತು	40000-47500
ಪುತ್ತೂರು	
ಕೋಕ	11000-26000
ಹೊಸತು	34500-47500
ಶಿರಸಿ	
ಬೆಟ್ಟೆ	29092-48499
ಬಿಳಿಗೋಟು	27199-37300
ಚಾಲಿ	37200-43799
ಕೆಂಪುಗೋಟು	29299-36121
ರಾಶಿ	43389-50999
ಕುಂದಾಪುರ	
ಹಳೆಚಾಲಿ	50000-56000
ಹೊಸಚಾಲಿ	40000-47500
ಸಾಗರ	
ಬಿಳಿಗೋಟು	8299-32889
ಚಾಲಿ	29099-40019
ಕೋಕ	12169-33989
ಕೆಂಪುಗೋಟು	24690-40899
ರಾಶಿ	41399-50899
ಸಿಪ್ಪೆಗೋಟು	4299-22463
ಶಿವಮೊಗ್ಗ	
ಗೊರಬಲು	22009-38569
ರಾಶಿ	46099-51059
ಸರಕು	61800-80736
ಸಿದ್ದಾಪುರ	
ಬಿಳಿಗೋಟು	27890-34629
ಕೋಕ	27109-34719
ಚಾಲಿ	37689-42509
ಕೆಂಪುಗೋಟು	34699-34699
ರಾಶಿ	49899-51099
ತಟ್ಟಿಬೆಟ್ಟೆ	38119-46599
ಶಿರಸಿ	
ಬೆಟ್ಟೆ	29092-48499
ಬಿಳಿಗೋಟು	27199-37300
ಚಾಲಿ	37200-43799
ರಾಶಿ	43389-50999
ಕೆಂಪುಗೋಟು	29299-36121
ಯಲ್ಲಾಪುರ	
ಬಿಳಿಗೋಟು	26099-36018
ಚಾಲಿ	37699-43320
ಕೋಕ	23618-32919
ಕೆಂಪುಗೋಟು	33400-37009
ರಾಶಿ	48819-54599
ತಟ್ಟಿಬೆಟ್ಟೆ	37100-48020

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	15800	16150	221.30 ಸೆಂಟ್ಸ್
ಎಸಿ	9100	8400	8850	
ಆರ್‌ಪಿ	9800	9800	9800	ಲಂಡನ್
ಆರ್‌ಸಿ	4800	4500	4750	2226 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

22-9-2022

ಜಾವಾ 70/80(ಹೊಸ)	11800-11850
ಜಾವಾ 80/90(ಹೊಸ)	10800-10850
ದಪ್ಪ ಮಧ್ಯಪ್ರದೇಶ(ಹೊಸ)	10350-10450
ದಪ್ಪ ಗುಜರಾತ್(ಹೊಸ)	10950-11000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1670 (1670)
ಒಂದು ವಾರದ ಡೆಲಿವರಿ	1665 (1665)
ಸೋಯಾ ಕಚ್ಚಾ	1127 (1135)
ಪಾಮ್ ವಾರದ ಡೆಲಿವರಿ	918 (928)
ಸೂರ್ಯಕಾಂತಿ ಎಣ್ಣೆ ಕಚ್ಚಾ	1270 (1270)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
49,650 (49,400)
ಬೆಳ್ಳಿ ಕೆ.ಜಿ 56,300 (56,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಶಿವಲಿಂಗದ 'ಕಾರ್ಬನ್ ಡೇಟಿಂಗ್' ಪರೀಕ್ಷೆಗೆ ಮನವಿ

ಲಖನೌ: ವಾರಾಣಸಿಯ ಜ್ಞಾನವಾಪಿ ಮಸೀದಿಯಲ್ಲಿ ಪತ್ತೆಯಾಗಿರುವ ಶಿವಲಿಂಗವನ್ನು 'ಕಾರ್ಬನ್ ಡೇಟಿಂಗ್' ಪರೀಕ್ಷೆಗೆ ಒಳಪಡಿಸಬೇಕೆಂದು ಹಿಂದೂ ಸಮುದಾಯದ ಅರ್ಜಿದಾರರು ಇಲ್ಲಿನ ಜಿಲ್ಲಾ ನ್ಯಾಯಾಲಯಕ್ಕೆ ಗುರುವಾರ ಮನವಿ ಮಾಡಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಸಕಲ ಸಿದ್ಧತೆ ಮಾಡಿಕೊಳ್ಳಲು ತಮಗೆ ಇನ್ನೂ ಕಾಲಾವಕಾಶ ಬೇಕಿದೆ. ಹೀಗಾಗಿ ವಿಚಾರಣೆಯನ್ನು ಇನ್ನೂ ಎಂಟು ವಾರಗಳ ಕಾಲ ಮುಂದೂಡಬೇಕೆಂದು ಮುಸ್ಲಿಂ ಸಮುದಾಯದ ಅರ್ಜಿದಾರರು ಕೋರಿದ್ದಾರೆ.

ಉಭಯ ಅರ್ಜಿದಾರರ ಪರ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲರ ವಾದ ಆಲಿಸಿದ ಜಿಲ್ಲಾ ನ್ಯಾಯಾಧೀಶ ಅಜಯ್ ಕೃಷ್ಣ ವಿಶ್ವೇಶ್ ಅವರು ಮುಸ್ಲಿಂ ಸಮುದಾಯದ ಅರ್ಜಿದಾರರಿಗೆ ನೋಟಿಸ್ ನೀಡಿದರು. ಬಳಿಕ ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಿದ್ದಾರೆ.

ಮುಖ್ಯಮಂತ್ರಿ ನಿವಾಸದ ಎದುರು ಪ್ರತಿಭಟನೆ ನಡೆಸಲು ಮುಂದಾದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ತಡೆದರು–ಪಿಟಿಐ ಚಿತ್ರ

ಸೆ.27ಕ್ಕೆ ಪಂಜಾಬ್ ಅಧಿವೇಶನ

ಚಂಡೀಗಡ (ಪಿಟಿಐ): ಪಂಜಾಬ್‌ನ ಆಮ್ ಆದ್ಮಿ ಪಕ್ಷದ (ಎಎಪಿ) ಸರ್ಕಾರವು ಇದೇ 27ರಂದು ವಿಧಾನಸಭೆ ಅಧಿವೇಶನ ನಡೆಸಲು ತೀರ್ಮಾನಿಸಿದೆ.

ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಬಹುಮತ ಸಾಬೀತಿಗಾಗಿ ಗುರುವಾರ ವಿಶೇಷ ಅಧಿವೇಶನ ನಡೆಸಲು ನಿರ್ಧರಿಸಿದ್ದರು. ಆದರೆ ರಾಜ್ಯಪಾಲರು ಇದಕ್ಕೆ ಅವಕಾಶ ನೀಡಿರಲಿಲ್ಲ. ಅವರ ಪ್ರಜಾಪ್ರಭುತ್ವ ವಿರೋಧಿ ನಡೆಯನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲು ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ.

ಪಂಜಾಬ್ ಸರ್ಕಾರ ಉರುಳಿಸಲು ಪ್ರಯತ್ನಿಸುತ್ತಿರುವ ಬಿಜೆಪಿ, ಇದಕ್ಕಾಗಿ ಆಡಳಿತಾರೂಢ ಪಕ್ಷದ ಶಾಸಕರನ್ನು ಸೆಳೆಯಲು ಮುಂದಾಗಿದೆ ಎಂದು ಆರೋಪಿಸಿರುವ ಎಎಪಿ ಶಾಸಕರು ಗುರುವಾರ ಪ್ರತಿಭಟನೆ ನಡೆಸಿದರು. 'ಪ್ರಜಾಪ್ರಭುತ್ವದ ಕಗ್ಗೊಲೆ ನಿಲ್ಲಿಸಿ' ಎಂಬ ಬರಹವಿರುವ ಭಿತ್ತಿಪತ್ರ ಪ್ರದರ್ಶಿಸಿದರು. ಇದಕ್ಕೆ ಪ್ರತಿಯಾಗಿ ಬಿಜೆಪಿ ಕಾರ್ಯಕರ್ತರು ಮುಖ್ಯಮಂತ್ರಿ ನಿವಾಸದ ಎದುರು ಪ್ರತಿಭಟನೆ ಕೈಗೊಂಡರು. ಪ್ರತಿಭಟನಾಕಾರರನ್ನು ಚದುರಿಸಲು ಪೊಲೀಸರು ಜಲಫಿರಂಗಿ ಪ್ರಯೋಗಿಸಿದರು.

ಸಂಕ್ಷಿಪ್ತ ಸುದ್ದಿ

ಭ್ರಷ್ಟಾಚಾರ: ಕೇಂದ್ರಕ್ಕೆ 46 ಸಾವಿರ ಅರ್ಜಿ

ನವದೆಹಲಿ (ಪಿಟಿಐ): ಕಳೆದ ಎಂಟು ತಿಂಗಳಲ್ಲಿ 46 ಸಾವಿರಕ್ಕೂ ಹೆಚ್ಚು ಭ್ರಷ್ಟಾಚಾರ ಸಂಬಂಧಿತ ಸಾರ್ವಜನಿಕ ಕುಂದುಕೊರತೆ ದೂರುಗಳನ್ನು ಕೇಂದ್ರ ಸರ್ಕಾರ ಸ್ವೀಕರಿಸಿದೆ. ಇದರಲ್ಲಿ ಹಣಕಾಸು ಸೇವೆಗಳ ಇಲಾಖೆ ವಿರುದ್ಧ (ಡಿಎಫ್‌ಎಸ್) ಬಂದಿರುವ ದೂರುಗಳೇ ಹೆಚ್ಚು ಎಂದು ಇತ್ತೀಚಿನ ಅಧಿಕೃತ ವರದಿ ಹೇಳಿದೆ.

'ಹಣಕಾಸು ಸೇವೆಗಳ ಇಲಾಖೆಯ ಬ್ಯಾಂಕಿಂಗ್ ವಿಭಾಗದ ವಿರುದ್ಧ ಗರಿಷ್ಠ ಸಂಖ್ಯೆಯಲ್ಲಿ ಭ್ರಷ್ಟಾಚಾರ ಸಂಬಂಧಿ ದೂರುಗಳು ಬಂದಿವೆ. ಈ ವಿಭಾಗದ ವಿರುದ್ಧ 14,934 ದೂರುಗಳು ಈ ವರ್ಷ ದಾಖಲಾಗಿವೆ. ಇನ್ನು ವಿಮಾ ವಿಭಾಗದ ವಿರುದ್ಧ ಈ ವರ್ಷ 3,306 ದೂರುಗಳು, ಸಿಬ್ಬಂದಿ ಮತ್ತು ತರಬೇತಿ ಇಲಾಖೆ ವಿರುದ್ಧ 2,223 ದೂರುಗಳು ಸ್ವೀಕೃತವಾಗಿವೆ' ಎಂದು ವರದಿ ಹೇಳಿದೆ.

ಸರ್ಕಾರಿ ಇಲಾಖೆಗಳಲ್ಲಿನ ಭ್ರಷ್ಟಾಚಾರದ ವಿರುದ್ಧ ನಾಗರಿಕರು ಆನ್‌ಲೈನ್ ಮೂಲಕ ದೂರು ಸಲ್ಲಿಸಲು ಕೇಂದ್ರೀಕೃತ ಸಾರ್ವಜನಿಕ ಕುಂದುಕೊರತೆ ಪರಿಹಾರ ಮತ್ತು ನಿಗಾ ವ್ಯವಸ್ಥೆಯ (ಸಿಪಿಜಿಆರ್‌ಎಎಂಎಸ್) ಪೋರ್ಟಲ್ ಮೂಲಕ ಅವಕಾಶ ಕಲ್ಪಿಸಲಾಗಿದೆ. ಭ್ರಷ್ಟಾಚಾರ ವಿಷಯವೊಂದರಲ್ಲೇ ಈ ವರ್ಷ 46,627 ದೂರುಗಳು ಸ್ವೀಕಾರವಾಗಿವೆ. ಕಳೆದ ಐದು ವರ್ಷಗಳಲ್ಲಿ ಒಟ್ಟು 19 ಲಕ್ಷ ದೂರುಗಳು ಸ್ವೀಕೃತವಾಗಿವೆ. ದೂರು ವಿಲೇವಾರಿಗೆ ವಿಧಿಸಿದ್ದ 45 ದಿನಗಳ ಗಡುವನ್ನು 30 ದಿನಗಳಿಗೆ ತಗ್ಗಿಸಲಾಗಿದೆ' ಎಂದು ಸಿಪಿಜಿಆರ್‌ಎಎಂಎಸ್‌ನ 2022ರ ಆಗಸ್ಟ್ ವರದಿಯಲ್ಲಿ ತಿಳಿಸಲಾಗಿದೆ.

ಗಾಂಜಾ ಮಾರಾಟ: ಕರ್ನಾಟಕದ ಇಬ್ಬರ ಬಂಧನ

ಪಣಜಿ (ಪಿಟಿಐ): 'ಉತ್ತರ ಗೋವಾದ ಕೊಲ್ವಾಲೆ ಗ್ರಾಮದಲ್ಲಿ 1 ಕೆ.ಜಿ.ಯಷ್ಟು ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಕರ್ನಾಟಕ ಮೂಲದ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಮಪುಸಾದ ಉಪ ಪೊಲೀಸ್ ವರಿಷ್ಠಾಧಿಕಾರಿ ಜಿವ್ಬಾ ದಳವಿ ತಿಳಿಸಿದ್ದಾರೆ. ರತನ್ ಅವಾಲೆ (20) ಮತ್ತು ಅಬ್ಬಾಸ್ ಖುರಷಿ ಬಂಧಿತ ಆರೋಪಿಗಳು.

'ಮಹಾರಾಷ್ಟ್ರದ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಗಾಂಜಾ ದೊರೆತುದುದಾಗಿ ಆರೋಪಿಗಳು ಹೇಳಿದ್ದಾರೆ. ಕೊಲ್ವಾಲೆ ಠಾಣೆಯ ಪೊಲೀಸರು ಹೆಚ್ಚಿನ ತನಿಖೆಗಾಗಿ ಶುಕ್ರವಾರ ಮಹಾರಾಷ್ಟ್ರಕ್ಕೆ ತೆರಳಲಿದ್ದಾರೆ. ರತನ್ ಹಾಗೂ ಅಬ್ಬಾಸ್ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ' ಎಂದೂ ಅವರು ಹೇಳಿದರು.

ನಿಸ್ತಾರ್, ನಿಪುಣ್ ಹಡಗುಗಳಿಗೆ ಚಾಲನೆ

ವಿಶಾಖಪಟ್ಟಣ (ಪಿಟಿಐ): ಸಮುದ್ರದ ಆಳದಲ್ಲಿ ಕಾರ್ಯಾಚರಣೆ ನಡೆಸಲು ನೆರವಾಗುವ ಉದ್ದೇಶಕ್ಕಾಗಿಯೇ ವಿಶೇಷವಾಗಿ ವಿನ್ಯಾಸಗೊಳಿಸಿರುವ ಹಾಗೂ ಸ್ವದೇಶಿ ನಿರ್ಮಿತ 'ನಿಸ್ತಾರ್' ಮತ್ತು 'ನಿಪುಣ್' ಹಡಗುಗಳಿಗೆ ಗುರುವಾರ ಇಲ್ಲಿ ಚಾಲನೆ ನೀಡಲಾಯಿತು.

'ಹಿಂದೂ ಮಹಾಸಾಗರ ಪ್ರದೇಶದಲ್ಲಿ ಜಲಾಂತರ್ಗಾಮಿಯಂತಹ ಕಠಿಣ ಕಾರ್ಯಾಚರಣೆಗಳನ್ನು ಕೈಗೊಳ್ಳಲು ಈ ಹಡಗುಗಳು ನೆರವಾಗಲಿವೆ. ಆತ್ಮನಿರ್ಭರ ಭಾರತದೆಡೆ ನಾವು ಹೆಜ್ಜೆ ಇಡುತ್ತಿರುವುದಕ್ಕೆ ಇವು ಸಾಕ್ಷಿಯಂತಿವೆ' ಎಂದು ಭಾರತೀಯ ನೌಕಾಪಡೆಯ ಚೀಫ್ ಅಡ್ಮಿರಲ್ ಆರ್. ಹರಿಕುಮಾರ್ ಹೇಳಿದ್ದಾರೆ.

ಮಳೆ ಅವಘಡ 10 ಮಂದಿ ಸಾವು

ಇಟಾವಾ (ಪಿಟಿಐ): ಉತ್ತರ ಪ್ರದೇಶದಲ್ಲಿ ಮಳೆ ಸಂಬಂಧಿತ ಅವಘಡಗಳಲ್ಲಿ 10 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಇಟಾವಾ ಜಿಲ್ಲೆಯಲ್ಲಿ 7 ಮಂದಿ, ಫಿರೋಜಾಬಾದ್‌ನಲ್ಲಿ ಇಬ್ಬರು ಹಾಗೂ ಬಲರಾಮ್‌ಪುರದಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ಅಲ್ಲದೆ ವಿವಿಧೆಡೆ ಸಿಡಿಲು ಬಡಿದು 11 ಮಂದಿ ಗಾಯಗೊಂಡಿದ್ದಾರೆ ಎಂದೂ ವಿವರಿಸಿದ್ದಾರೆ.

ಇಟಾವಾ ಜಿಲ್ಲೆಯ ಚಂದ್ರಪುರ ಗ್ರಾಮದಲ್ಲಿ ಬುಧವಾರ ರಾತ್ರಿ ಮನೆಯ ಗೋಡೆ ಕುಸಿದು ನಾಲ್ವರು ಮಕ್ಕಳು ಸಾವನ್ನಪ್ಪಿದ್ದಾರೆ. ಕೃಪಾಲ್‌ಪುರ ಗ್ರಾಮದಲ್ಲಿ ಪೆಟ್ರೋಲ್ ಬಂಕೊಂದರ ಗೋಡೆ ಕುಸಿದು ಇಬ್ಬರು ಹಾಗೂ ಚಕ್ರನಗರ ಪ್ರದೇಶದಲ್ಲಿ ಮನೆ ಕುಸಿದು ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಥಮ ಪುಣ್ಯಸ್ಮರಣೆ

ಶ್ರೀಮತಿ ಜಾನಕಮ್ಮ
(ನಿಧನ: 23.09.2021)
ನೀವು ನಮ್ಮನ್ನು ಅಗಲಿದರೂ ನಿಮ್ಮ ಪ್ರೀತಿ, ತಾಳ್ಮೆ, ತ್ಯಾಗ, ಆದರ್ಶಮಯ ಜೀವನ ನಮ್ಮ ಬದುಕಿಗೆ ದಾರಿ ದೀಪವಾಗಿದೆ.
ಪ್ರತಿದಿನವೂ, ಪ್ರತಿಕ್ಷಣವೂ ನಿಮ್ಮ ನೆನಪಿನಲ್ಲಿರುವ
ಮಕ್ಕಳು ಹಾಗೂ ಕುಟುಂಬದವರು.

ಏಳನೇ ವರ್ಷದ ಪುಣ್ಯಸ್ಮರಣೆ

ದಿ|| ಶ್ರೀಮತಿ ಹೆಚ್.ಎಂ. ಕಮಲಮ್ಮ
ಜನನ: 26-03-1950, ನಿಧನ : 23-09-2015
ನೀವು ಹಚ್ಚಿದೊಂದು ಹಣತೆ ಇನ್ನೂ ಬೆಳಗಿದೆ, ಮನಕೆ ಮಬ್ಬು ಕವಿಯದಂತೆ ಸದಾ ಕಾದಿದೆ.
ಇಂದಿಗೆ ನೀವು ನಮ್ಮನ್ನು ಅಗಲಿ ಏಳು ವರ್ಷವಾದರು, ನಿಮ್ಮ ಧ್ಯೇಯ, ಧೈರ್ಯದ ನುಡಿಗಳು, ಇಂದಿಗೂ ನೀವು ನಮ್ಮೊಂದಿಗಿರುವಂತೆ ಮಾಡಿವೆ.
ಸದಾ ನಿಮ್ಮ ಸ್ಮರಣೆಯಲ್ಲೇ ಇರುವ
ಶ್ರೀ ಎಂ.ವಿ. ಭೀಮರಾಜು (ಪತಿ),
ಶ್ರೀ ಭೀ. ಪದ್ಮನಾಭ, ಶ್ರೀಮತಿ ಎಂ.ಸಿ. ಲತಾ,
ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು
7829155592/9986811974

LOOKING TO BUILD, BUY OR SELL A PROPERTY
Please refer Classifieds on Sunday

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Accounts & Finance

REQUIRED SENIOR accountant aged 40 for manufacturing facility. Should reside around Yeshwanthpur/ Peenya.Email - cofplanter@gmail.com. 9480237094

ACCOUNTANT REQUIRED with Tally Salary 20K to 25K with 5 to 6 Experience Location Lalbagh Road Bangalore 560027 bskblore@gmail.com 9342851347

Cook

ಮಲ್ಲೇಶ್ವರಂನಲ್ಲಿ ಫೈನ್ ಡೈನಿಂಗ್ ರೆಸ್ಟೋರೆಂಟ್ ಪ್ರಾರಂಭವಾಗುತ್ತಿದ್ದು ಅನುಭವಸ್ಥ ಅಡುಗೆ ಭಟ್ಟರು ಸೌತ್/ನಾರ್ತ್ ಮಾಸ್ಟರ್ ಗಳು ಹಾಗೂ ದೋಸೆ ಭಟ್ಟರು ಬೇಕಾಗಿದ್ದಾರೆ. ಉದ್ಯಮದಲ್ಲಿ ಸಂಬಳ ಅತ್ಯುತ್ತಮವಾಗಿರುತ್ತದೆ ಸಂಪರ್ಕಿಸಿ: 9845577977/ 9632044727/ 8884442517.

Drivers

ಕೆನ್‌ಮೋರ್ ಸ್ಕೂಲ್‌ಗೆ ಚಾಲಕರು ಮತ್ತು ಭದ್ರತಾ ಸಿಬ್ಬಂದಿ ಬೇಕಾಗಿದ್ದಾರೆ. ನಂ.31, ಕನಕಪುರ, ಬಸವನಗುಡಿ, ಎಂ ಎನ್ ಕೃಷ್ಣರಾವ್ ಉದ್ಯಾನ, ಬಸವನಗುಡಿ, ಬೆಂಗಳೂರು. ಸಂಪರ್ಕಿಸಿರಿ : ಫೋನ್ : 9901501185 ವಾಟ್ಸಾಪ್

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳಲ್ಲೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡುಗಿಯರು, ಹುಡುಗರು ಬೇಕಾಗಿದ್ದಾರೆ ಊಟವಸತಿಯಿದೆ 10,000 - 15,000. 8951315839, 9880545002

Multiple Vacancy

LOOKING FOR ASM, SR & SO for a potato chips manufacturing company. Should speak one of the local languages. Attractive Packages Offered. Multiple Positions Open. Call: 9045936322/ 6364069184 Email: techorganea@gmail.com

Office Boys/ Peon

ವಿಶ್ವಾಸಕ್ಕೆ ಅರ್ಹರಾದ ಹೌಸ್ ಕೀಪಿಂಗ್ ಮಹಿಳೆಯರು ಕಛೇರಿ ಕೆಲಸಕ್ಕೆ ತುರ್ತಾಗಿ ಬೇಕಾಗಿದ್ದರೆ ಆಕರ್ಷಕ ಸಂಬಳ ನೀಡಲಾಗುವುದು.ಸಂಪರ್ಕಿಸಿ: ರಾಜಾಜಿನಗರ+ 91 6366443134

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/- ರವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000- 20000 ಗಳಿಸಿ. ಕರೆಮಾಡಿ: 9611225266/ 9611225388

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000-20000 ಗಳಿಸಿ. ಕರೆಮಾಡಿ: 9611225266/ 9611225388

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ವಯಸ್ಸಾದವರನ್ನು ನೋಡಿಕೊಳ್ಳಲು ಮಹಿಳೆಯರು ಬೇಕಾಗಿದ್ದಾರೆ 18ವರ್ಷ ಮೆಲ್ಪಟ್ಟವರಿಗೆ ಉಚಿತ ಊಟ ವಸತಿಯೊಂದಿಗೆ 13000 ರಿಂದ 16000ವರೆಗೆ ಸಂಬಳ. ಫೋ: 8139962883

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು ರೋಗಿಯನ್ನು ನೋಡಿಕೊಳ್ಳಲು ಜನರುಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- ESI, PF ಸೌಲಭ್ಯವಿರುತ್ತದೆ. ಬೆಂಗಳೂರು ಸಂಪರ್ಕಿಸಿ: 9606523337, 9606385001

ಪ್ರವಾಸ

Travel Agencies

10/11/2022 6/10 ದಿನಗಳು AC ಬಸ್ಸಿನಲ್ಲಿ ಕಾಶಿ, ಗಯಾ, ಬುದ್ಧಗಯಾ, ಅಲಹಾಬಾದ್, ಅಯೊಧ್ಯ 15500/ (ಕೆಲವೇ ಸೀಟುಗಳಿವೆ) ಅಂಡಮಾನ್ ಹವಳದ್ವೀಪ 5/8 ದಿನಗಳು ಹಡಗು/ವಿಮಾನದಲ್ಲಿ. ರಾಯಲ್ ಪ್ಯಾಕೇಜ್. ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್9739847429/ 9845560219.

Travel

ವಿಮಾನ/ A/C ಬಸ್ಸಿನಲ್ಲಿ 18.11.2022 ರಿಂದ 16 ದಿನಗಳ ಅಷ್ಟಜ್ಯೋತಿರ್ಲಿಂಗಗಳ ಪ್ರವಾಸ. ಸೋಮನಾಥ ದ್ವಾರಕ,ನಾಗೇಶಂ ಮೌಂಟ್ಅಬು ಮಹಾಕಾಳೇಶ್ವರ ಓಂಕಾರೇಶ್ವರ್,ಭಾವನಗರ ವಲ್ಲಭಭಾಯಿ ಪಟೇಲರ ಪ್ರತಿಮೆ ಇತ್ಯಾದಿ. ಸಂಪರ್ಕಿಸಿ: ಜೈರಾಮ್ ಟೂರ್ಸ್ ವಿ.ವಿ.ಪುರಂ ಬೆಂಗಳೂರು-4. 9342514289 9686721196

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ ಮೊಟ್ಟ ಮೊದಲ ಬಾರಿಗೆ A/C ಸ್ಲೀಪರ್ ಕೋಚ್ ಬಸ್/ರೈಲು/ವಿಮಾನದಲ್ಲಿ 6 ದಿನಗಳ ಕಾಶಿ,ಅಲಹಾಬಾದ್ ಗಯಾ,ನೈಮಿಶರಣ್ಯ. 15.10.2022 14.11.2022 ನೇಪಾಳ,ಪೋಕ್ರಾ ಮುಕ್ತಿನಾಥ. 10.10.2022 18.11.2022 ಸೋಮನಾಥ ದ್ವಾರಕ,ಓಂಕಾರೇಶ್ವರ್. 09.11.2022 ಕೊನೆಯ ಚಾರ್ ಧಾಮ್ ಸಮೇತ ಪ್ರವಾಸ. 10.10.2022 ರ್‍ರಾಮೇಶ್ವರ ಮಧುರೈ ಕನ್ಯಾಕುಮಾರ. 06.10.2022 ಪಂಚರಾಮ ಕ್ಷೇತ್ರ ಪ್ರವಾಸ. 11.11.2022 ಅಸ್ಸಾಂ, ಮೇಘಾಲಯಾ ಅರುಣಾಚಲ ಪ್ರವಾಸ 21.11.2022 18.12.2022 ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು.4 26574131 26573421 8317446683

ಉಜ್ಜಯಿನಿ ಓಂಕಾರೇಶ್ವರ್ ಖಜರಾವೊ ಚಿತ್ರಕೂಟ ಕಾಶಿ,ಗಯಾ,ಪ್ರಯಾಗ 21.10.2022 04.11.2022, ರಿಂದ 12/16 ದಿನಗಳು. ದೆಹಲಿ ವೈಷ್ಣವಿದೇವಿ ಶಕ್ತಿಪೀಠಗಳು ಕುಲು,ಮನಾಲಿ 31.10.2022 05.11.2022 ರಿಂದ 12/16 ದಿನಗಳು. ಸೋಮನಾಥ್ ಮಾತ್ರಗಯಾ,ದ್ವಾರಕಾ ಅಷ್ಟ ಜ್ಯೋತಿರ್ಲಿಂಗಗಳು ಅಲಹಾಬಾದ್ 31.10.2022 05.11.2022 ರಿಂದ 15/18 ದಿನಗಳು. ಗೌಹಾಟಿ,ಸಿಕ್ಕಿಂ,ಡಾರ್ಜಲಿಂಗ್ ಕೊಲ್ಕತ್ತ,ಪುರಿ ಭುವನೇಶ್ವರ್10.11.2022 25.11.2022 ರಿಂದ 14/18 ದಿನಗಳು. ಸಂಪರ್ಕಿಸಿ: 26508925, 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

ಮಾರುತಿ ಟ್ರಾವೆಲ್ಸ್. 1.10.2022 ತಮಿಳುನಾಡು 5 ದಿನಗಳು. 7.10.2022 ಕೇರಳ 5 ದಿನಗಳು. 14.10.2022 ಶಿರಡಿ 5 ದಿನಗಳು. 21.10.2022 ಆಂಧ್ರ- ತೆಲಂಗಾಣ 5 ದಿನಗಳು. 30.10.2022 ಕಾಶಿಯಾತ್ರಾ 14 ದಿನಗಳು. 9916688569

ಕಾಶಿ ಅಯೋಧ್ಯ ಅಲಹಾಬಾದ್ ಗಯಾ,ಬುದ್ಧಗಯಾ,ಕೋಲ್ಕತ ಪೂರಿಜಗನ್ನಾಥ್ ಕೊನಾರ್ಕ್ ಸೂರ್ಯ ದೇವಾಲಯಾ ಭುವನೇಶ್ವರ್ 02.12.2022 ರಿಂದ 9 ದಿನಗಳು. ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು. 9448294477

Pilgrimage Tours

ಸುವರ್ಣಯಾತ್ರ. 7 ದಿನಗಳ ಕಾಶಿ ಪ್ರವಾಸ 121022.ವೈದ್ಯನಾಥ, ನೈಮಿಷಾರಣ್ಯ, ಅಯೋಧ್ಯಾ, ಇತರೆ. 7 ದಿನಗಳ ಶಿರಡಿ ಪ್ರವಾಸ 051022ತ್ರಯಂಬಕಶ್ವರ, ಗೃಷ್ಣೇಶ್ವರ, ಭೀಮಾಶಂಕರ, ಪಂಡರಾಪುರ, ಕೊಲ್ಹಾಪುರ, ಇತರೆ. 9019462508, 9008381022

ವ್ಯಾಪಾರ

Business Offers

General

ಹೊಸ ಉದ್ಯಮ ಆರಂಭಿಸಲು ಹೊಸ ಉದ್ಯಮ ನವೀಕರಿಸಲು ಬ್ಯಾಂಕಿಂಗ್ ಮಾಹಿತಿಗಾಗಿ ಸಂಪರ್ಕಿಸಿರಿ. 7259427360, 9036046536, 9591873324

ಭವಿಷ್ಯ

Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
BOOK YOUR REAL ESTATE
Classified Advertisement
In Deccan Herald & Prajavani
SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
100	150	120	190	600

For More Details Contact:
Ph:080- 45557160 | 163 | 164 |
M: 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ಅನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ವಿಸಿಎದಲ್ಲಿ ಭಾರತ– ಆಸ್ಟ್ರೇಲಿಯಾ ಟಿ20 ಪಂದ್ಯ ಇಂದು: ಆತಿಥೇಯರಿಗೆ 'ಡೆತ್ ಓವರ್' ಸವಾಲು

ಗೆಲುವಿನ ಒತ್ತಡದಲ್ಲಿ ಭಾರತ

ನಾಗಪುರ (ಪಿಟಿಐ): ಚುಟುಕು ಕ್ರಿಕೆಟ್ ಪಂದ್ಯದ ಇನಿಂಗ್ಸ್‌ನ ಕೊನೆಯ ಹಂತದ ಮೂರು ಓವರ್‌ಗಳಲ್ಲಿ 'ಯಶಸ್ಸು' ಸಾಧಿಸುವುದು ಹೇಗೆ ಎಂಬ ಪ್ರಶ್ನೆ ಈಗ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರನ್ನು ಕಾಡುತ್ತಿದೆ.

ಮೂರು ದಿನಗಳ ಹಿಂದೆ ಮೊಹಾಲಿಯಲ್ಲಿ ನಡೆದಿದ್ದ ಆಸ್ಟ್ರೇಲಿಯಾ ಎದುರಿನ ಮೊದಲ ಟಿ20 ಪಂದ್ಯದಲ್ಲಿ ಬ್ಯಾಟಿಂಗ್ ಪಡೆಯು 200ಕ್ಕೂ ಹೆಚ್ಚು ರನ್‌ಗಳ ಗುರಿ ನೀಡಿದ್ದರೂ ಗೆಲುವು ಸಾಧ್ಯವಾಗಲಿಲ್ಲ. ಅದಕ್ಕೆ ಕಾರಣ ಬೌಲಿಂಗ್ ದೌರ್ಬಲ್ಯ. ಮಧ್ಯಮವೇಗಿ ಭುವನೇಶ್ವರ್ ಕುಮಾರ್ 19ನೇ ಓವರ್‌ನಲ್ಲಿ ಬಿಗಿ ದಾಳಿ ನಡೆಸದಿರುವುದು ಅದಕ್ಕೆ ಕಾರಣವಾಗಿತ್ತು. ಜೊತೆಗೆ ಬಿಟ್ಟ ಕ್ಯಾಚ್‌ಗಳು ಕೂಡ ದುಬಾರಿಯಾದವು. ಇದಕ್ಕೂ ಮುನ್ನ ಪಾಕಿಸ್ತಾನ, ಶ್ರೀಲಂಕಾ ಎದುರಿನ ಪಂದ್ಯಗಳಲ್ಲಿಯೂ ಅವರು ಇಂತಹದೇ ಕಳಪೆ ಪ್ರದರ್ಶನ ನೀಡಿದ್ದರು.

ಆದ್ದರಿಂದಲೇ ಈಗ ಎಲ್ಲರ ಕಣ್ಣು 'ಡೆತ್ ಓವರ್' ಪರಿಣತ ಜಸ್‌ಪ್ರೀತ್ ಬೂಮ್ರಾ ಅವರತ್ತ ನೆಟ್ಟಿದೆ. ಶುಕ್ರವಾರ ವಿದರ್ಭ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ನಡೆಯಲಿರುವ ಎರಡನೇ ಪಂದ್ಯದಲ್ಲ ಅವರು ಕಣಕ್ಕಿಳಿಯುವ ಕುರಿತು ಇನ್ನೂ ಖಚಿತವಾಗಿಲ್ಲ.

ಗಾಯದಿಂದ ಚೇತರಿಸಿಕೊಂಡಿರುವ ಅವರು ತಂಡಕ್ಕೆ ಮರಳಿದ್ದಾರೆ. ಆದರೆ ಕಣಕ್ಕಿಳಿಯುವುದು ಖಚಿತವಾಗಿಲ್ಲ. ಮೂರು ಪಂದ್ಯಗಳ ಸರಣಿ ಜಯದ ಕನಸು ಜೀವಂತ ಉಳಿಯಬೇಕಾದರೆ ರೋಹಿತ್ ಪಡೆಗೆ ಈ ಪಂದ್ಯದಲ್ಲಿ ಗೆಲುವು ಅವಶ್ಯಕ.

ಅದರಿಂದಾಗಿ ಬೌಲಿಂಗ್‌ನಲ್ಲಿ ಒಂದಿಷ್ಟು ಬದಲಾವಣೆಗಳೊಂದಿಗೆ ಕಣಕ್ಕಿಳಿಯುವ ಸಾಧ್ಯತೆ ಇದೆ. ಮೊದಲ ಪಂದ್ಯದಲ್ಲಿ ರಾಹುಲ್, ಸೂರ್ಯಕುಮಾರ್ ಹಾಗೂ ಹಾರ್ದಿಕ್ ಪಾಂಡ್ಯ ಅವರ ಅಬ್ಬರದ ಆಟ ಗಮನ ಸೆಳೆದಿತ್ತು. ಆದರೆ ಅನುಭವಿ ರೋಹಿತ್, ವಿರಾಟ್, ದಿನೇಶ್ ನಿರೀಕ್ಷೆಗೆ ತಕ್ಕಂತೆ ಆಡಲಿಲ್ಲ.

ಆದರೆ ಆ ಪಂದ್ಯದಲ್ಲಿ ಯುಡಿಆರ್‌ಎಸ್ (ಅಂಪೈರ್ ತೀರ್ಪು ಮರುಪರಿಶೀಲನಾ ವ್ಯವಸ್ಥೆ) ಅನ್ನು ತೆಗೆದುಕೊಂಡು ಯಶಸ್ವಿಯಾಗಲು ರೋಹಿತ್‌ಗೆ ವಿಕೆಟ್‌ಕೀಪರ್ ದಿನೇಶ್ ನೀಡಿದ್ದ ಸಲಹೆಗಳು ಫಲಪ್ರದವಾಗಿದ್ದವು. ಆದ್ದರಿಂದ ಅವರಿಗೆ ಮತ್ತೊಂದು ಅವಕಾಶ ಸಿಗಬಹುದು. ರಿಷಭ್ ಬೆಂಚ್ ಕಾಯಬೇಕಾಗಬಹುದು.

ಆಸ್ಟ್ರೇಲಿಯಾ ತಂಡದ ಬೌಲಿಂಗ್‌ನಲ್ಲಿಯೂ ಕೆಲವು ಲೋಪಗಳಿವೆ. ಗ್ರೀನ್ ಹೊರತುಪಡಿಸಿದರೆ ಅಗ್ರಕ್ರಮಾಂಕದ ಬ್ಯಾಟರ್‌ಗಳೂ ತಮ್ಮ ಸಾಮರ್ಥ್ಯವನ್ನು ತೋರಬೇಕಿದೆ.

ಮಳೆ ಸಾಧ್ಯತೆ

ವಿಸಿಎ ಕ್ರೀಡಾಂಗಣ ಇರುವ ಜಮ್ತಾ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಗುರುವಾರ ಭಾರಿ ಮಳೆಯಾಗಿದೆ. ಶುಕ್ರವಾರವೂ ಮಳೆ ಬರುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮೂಲಗಳು ತಿಳಿಸಿವೆ.

2019ರ ನವೆಂಬರ್‌ನಲ್ಲಿ ಇಲ್ಲಿ ಭಾರತ –ಬಾಂಗ್ಲಾ ದೇಶ ತಂಡಗಳು ಟಿ20 ಪಂದ್ಯದಲ್ಲಿ ಮುಖಾಮುಖಿಯಾಗಿದ್ದವು. ಅದರ ನಂತರ ಇಲ್ಲಿ ಯಾವುದೇ ಅಂತರರಾಷ್ಟ್ರೀಯ ಪಂದ್ಯಗಳು ನಡೆದಿಲ್ಲ. ಆದ್ದರಿಂದ ಈ ಪಂದ್ಯದ ಟಿಕೆಟ್‌ಗೆ ಭಾರಿ ಬೇಡಿಕೆ ಇತ್ತು. ಜನರೂ ಮುಗಿಬಿದ್ದು ಖರೀದಿಸಿದ್ದಾರೆ. ಆದರೆ ಮಳೆ ಬಂದು ಪಂದ್ಯ ರದ್ದಾದರೆ ಎಂಬ ಭೀತಿಯೂ ಈಗ ಅವರನ್ನು ಕಾಡುತ್ತಿದೆ.

ಕೆ.ಎಲ್. ರಾಹುಲ್ ಹಾಗೂ ವಿರಾಟ್ ಕೊಹ್ಲಿ

ಹೈದರಾಬಾದಿನಲ್ಲಿ ನೂಕುನುಗ್ಗಲು: ನಾಲ್ವರಿಗೆ ಗಾಯ

ಹೈದರಾಬಾದ್ (ಪಿಟಿಐ): ಭಾನುವಾರ ಇಲ್ಲಿ ನಡೆಯಲಿರುವ ಭಾರತ –ಆಸ್ಟ್ರೇಲಿಯಾ ಟಿ20 ಪಂದ್ಯಕ್ಕಾಗಿ ಗುರುವಾರ ಟಿಕೆಟ್ ಖರೀದಿಸಲು ಜನರ ನೂಕುನುಗ್ಗಲು ಉಂಟಾಗಿ ಇಬ್ಬರು ಮಹಿಳೆಯರೂ ಸೇರಿ ನಾಲ್ವರಿಗೆ ಗಾಯವಾಗಿದೆ.

ಜಿಮ್ಖಾನಾ ಗ್ರೌಂಡ್‌ನಲ್ಲಿ ಸುಮಾರು 15 ಸಾವಿರ ಜನರು ಟಿಕೆಟ್ ಖರೀದಿಸಲು ಸೇರಿದ್ದರು.

'ನಾವು ಬೆಳಿಗ್ಗೆಯೇ ಬಂದು ಸಾಲಿನಲ್ಲಿ ನಿಂತರೂ ಟಿಕೆಟ್ ಲಭಿಸಿಲ್ಲ. ಆದರೆ ಕಾಳಸಂತೆಯಲ್ಲಿ ಮಾರಾಟವಾಗುತ್ತಿವೆ' ಎಂದೂ ಕೆಲವರು ಆರೋಪಿಸಿದರು.

ಈ ಸಂದರ್ಭದಲ್ಲಿ ಜನರನ್ನು ಚದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ಮಾಡಿದರು.

ಹೈದರಾಬಾದಿನಲ್ಲಿ ಕ್ರಿಕೆಟ್ ಪಂದ್ಯದ ಟಿಕೆಟ್‌ಗಾಗಿ ಜನರ ನೂಕುನುಗ್ಗಲು –ಪಿಟಿಐ ಚಿತ್ರ

ಶಾರ್ದೂಲ್, ಕುಲದೀಪ್ ಮಿಂಚು

ನ್ಯೂಜಿಲೆಂಡ್ ಎ ವಿರುದ್ಧ ಭಾರತ ಎ ತಂಡಕ್ಕೆ ಗೆಲುವು

ಚೆನ್ನೈ (ಪಿಟಿಐ): ಮಧ್ಯಮವೇಗಿ ಶಾರ್ದೂಲ್ ಠಾಕೂರ್ ಹಾಗೂ ಕುಲದೀಪ್ ಸೇನ್ ಅವರ ಉತ್ತಮ ಬೌಲಿಂಗ್ ಬಲದಿಂದ ಭಾರತ ಎ ತಂಡವು ಗುರುವಾರ ಇಲ್ಲಿ ನಡೆದ ನ್ಯೂಜಿಲೆಂಡ್ ಎ ವಿರುದ್ಧದ ಏಕದಿನ ಪಂದ್ಯದಲ್ಲಿ 7 ವಿಕೆಟ್‌ಗಳಿಂದ ಗೆದ್ದಿತು.

ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಆತಿಥೇಯ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು.

ಶಾರ್ದೂಲ್ (32ಕ್ಕೆ4) ಹಾಗೂ ಕುಲದೀಪ್ (30ಕ್ಕೆ3) ಅವರ ದಾಳಿಗೆ ನ್ಯೂಜಿಲೆಂಡ್ ತಂಡವು ಆರಂಭಿಕ ಆಘಾತ ಅನುಭವಿಸಿತು. ಆದರೆ, ಎಂಟನೇ ಕ್ರಮಾಂಕದ ಮಿಚೆಲ್ ರಿಪೊನ್ (61; 104ಎ, 4X4) ತಾಳ್ಮೆಯ ಬ್ಯಾಟಿಂಗ್ ಬಲದಿಂದ ತಂಡವು 40.2 ಓವರ್‌ಗಳಲ್ಲಿ 167 ರನ್ ಗಳಿಸಿ ಆಲೌಟ್ ಆಯಿತು.

ಗುರಿ ಬೆನ್ನಟ್ಟಿದ ಭಾರತ ತಂಡವು 31.5 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 170 ರನ್ ಗಳಿಸಿತು. ಪೃಥ್ವಿ ಶಾ (17; 24ಎ) ಹಾಗೂ ಋತುರಾಜ್ (41; 54ಎ) ಮೊದಲ ವಿಕೆಟ್‌ಗೆ 35 ರನ್ ಸೇರಿಸಿದರು. ಪೃಥ್ವಿ ಔಟಾದ ಮೇಲೆ ಋತುರಾಜ್ ಹಾಗೂ ರಾಹುಲ್ ತ್ರಿಪಾಠಿ (31; 40ಎ) 56 ರನ್ ಸೇರಿಸಿದರು.

ಕುಲದೀಪ್ ಸೇನ್ –ಪಿಟಿಐ ಚಿತ್ರ

ಇವರಿಬ್ಬರ ಜೊತೆಯಾಟವನ್ನು ಮುರಿಯುವಲ್ಲಿ ರಿಪೊನ್ ಯಶಸ್ವಿಯಾದರು. ಋತುರಾಜ್ ವಿಕೆಟ್ ಪಡೆದ ಅವರು ಸಂಭ್ರಮಿಸಿದರು.

ಆದರೆ ನಾಯಕ ಸಂಜು (ಔಟಾಗದೆ 29, 32ಎ, 4X1, 6X3) ಹಾಗೂ ರಜತ್ (ಔಟಾಗದೆ 45; 41ಎ, 4X7) ತಂಡವನ್ನು ಗೆಲುವಿನ ದಡ ಸೇರಿಸಿದರು. ಈಚೆಗೆ ಬೆಂಗಳೂರಿನಲ್ಲಿ ನಡೆದಿದ್ದ 'ಟೆಸ್ಟ್'ಗಳಲ್ಲಿಯೂ ರಜತ್ ಉತ್ತಮವಾಗಿ ಆಡಿದ್ದರು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್ ಎ: 40.2 ಓವರ್‌ಗಳಲ್ಲಿ 167 (ರಾಬರ್ಟ್ ಒ ಡೊನೆಲ್ 22, ರಿಪೊನ್ 61, ಜೋ ವಾಕರ್ 36, ಶಾರ್ದೂಲ್ ಠಾಕೂರ್ 32ಕ್ಕೆ4, ಕುಲದೀಪ್ ಸೇನ್ 30ಕ್ಕೆ3) ಭಾರತ ಎ: 31.5 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 170 (ಋತುರಾಜ್ ಗಾಯಕವಾಡ 41, ರಾಹುಲ್ ತ್ರಿಪಾಠಿ 31, ಸಂಜು ಸ್ಯಾಮ್ಸನ್ ಔಟಾಗದೆ 29, ರಜತ್ ಪಾಟೀದಾರ ಔಟಾಗದೆ 45, ಲೊಗಾನ್ ವ್ಯಾನ್ ಬೀಕ್ 38ಕ್ಕೆ1) ಫಲಿತಾಂಶ: ಭಾರತ ಎ ತಂಡಕ್ಕೆ 7 ವಿಕೆಟ್‌ಗಳ ಜಯ. ಸರಣಿಯಲ್ಲಿ 1–0 ಮುನ್ನಡೆ

'ಹೋಮ್ ಆ್ಯಂಡ್ ಅವೇ' ಮಾದರಿಯಲ್ಲಿ ಪಂದ್ಯಗಳು

ಮೊದಲ ಸ್ವರೂಪದಲ್ಲಿಯೇ ಐಪಿಎಲ್

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ 2023ರ ಆವೃತ್ತಿಯಲ್ಲಿ ಮತ್ತೆ 'ಹೋಮ್ ಆ್ಯಂಡ್ ಅವೇ' ಮಾದರಿಯಲ್ಲಿ ಪಂದ್ಯಗಳ ಆಯೋಜನೆ ನಡೆಯಲಿವೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅಧ್ಯಕ್ಷ ಸೌರವ್ ಗಂಗೂಲಿ ರಾಜ್ಯ ಸಂಸ್ಥೆಗಳಿಗೆ ತಿಳಿಸಿದ್ದಾರೆ.

2020ರಲ್ಲಿ ಕೋವಿಡ್ –19 ಕಾರಣದಿಂದಾಗಿ ಐಪಿಎಲ್ ಟೂರ್ನಿಯು ದುಬೈ, ಶಾರ್ಜಾ ಹಾಗೂ ಅಬುಧಾಬಿಯಲ್ಲಿ ನಡೆದಿತ್ತು. ಪ್ರವಾಸವನ್ನು ಮೊಟಕುಗೊಳಿಸಿ ಕೆಲವೇ ಸ್ಥಳಗಳಲ್ಲಿ ಪಂದ್ಯಗಳ ಆಯೋಜನೆಗೆ ಒತ್ತು ನೀಡಲಾಗಿತ್ತು. 2021ರಲ್ಲಿ ಭಾರತದಲ್ಲಿಯೇ ಐಪಿಎಲ್ ನಡೆದಿತ್ತು. ಆದರೆ, ದೆಹಲಿ, ಅಹಮದಾಬಾದ್, ಮುಂಬೈ ಹಾಗೂ ಚೆನ್ನೈ ನಗರಗಳಲ್ಲಿ ಪಂದ್ಯಗಳು ನಡೆದಿದ್ದವು.

ಸೌರವ್ ಗಂಗೂಲಿ

ಇದೀಗ ಕೋವಿಡ್ ನಿಯಂತ್ರಣದಲ್ಲಿರುವುದರಿಂದ ಜನಜೀವನವೂ ಮೊದಲಿನಂತೆ ಸಹಜ ಸ್ಥಿತಿಗೆ ಬರುತ್ತಿದೆ. ಆದ್ದರಿಂದ ಮುಂದಿನ ವರ್ಷದ ಐಪಿಎಲ್ ಪಂದ್ಯಗಳನ್ನು ಫ್ರ್ಯಾಂಚೈಸಿಗಳು ತಮ್ಮ ತವರಿನಲ್ಲಿ ಆಯೋಜಿಸಲು ಅವಕಾಶ ನೀಡಲಾಗುತ್ತಿದೆ.

ಇದರಿಂದಾಗಿ ಬೆಂಗಳೂರು, ಲಖನೌ, ಹೈದರಾಬಾದ್ ನಗರಗಳಲ್ಲಿಯೂ ಐಪಿಎಲ್ ಪಂದ್ಯಗಳು ನಡೆಯಲಿವೆ.

ಮುಂದಿನ ವರ್ಷ ಮಹಿಳೆಯರ ಐಪಿಎಲ್ ಕೂಡ ಆರಂಭವಾಗುವ ನಿರೀಕ್ಷೆ ಇದೆ.

ಈ ಬಾರಿ ಪೂರ್ಣಪ್ರಮಾಣದ ದೇಶಿ ಟೂರ್ನಿಗಳನ್ನೂ ಆಯೋಜಿಸಲಾಗುತ್ತಿದೆ. ಅಲ್ಲದೇ ಇದೇ ಮೊದಲ ಬಾರಿಗೆ 15 ವರ್ಷದೊಳಗಿನ ಬಾಲಕಿಯರ ಕ್ರಿಕೆಟ್ ಟೂರ್ನಿಯನ್ನೂ ಆಯೋಜಿಸಲಾಗುತ್ತಿದೆ. ಡಿಸೆಂಬರ್ 26 ರಿಂದ ಜನವರಿ 12ರವರೆಗೆ ಬೆಂಗಳೂರು, ರಾಂಚಿ, ರಾಜ್‌ಕೋಟ್, ಇಂದೋರ್, ರಾಯಪುರ ಹಾಗೂ ಪುಣೆಯಲ್ಲಿ ಪಂದ್ಯಗಳು ನಡೆಯಲಿವೆ.

ಟಿಟಿ: ಸನಿಲ್, ಶರತ್‌ಗೆ ಜಯ

ಸೂರತ್ (ಪಿಟಿಐ): ಸನಿಲ್ ಶೆಟ್ಟಿ, ಜಿ.ಸತ್ಯನ್ ಮತ್ತು ಅಚಂತಾ ಶರತ್ ಕಮಲ್ ಅವರು ರಾಷ್ಟ್ರೀಯ ಕ್ರೀಡಾಕೂಟದ ಟೇಬಲ್ ಟೆನಿಸ್ ಟೂರ್ನಿಯ ಮೂರನೇ ಸುತ್ತು ಪ್ರವೇಶಿಸಿದರು.

ಪುರುಷರ ಸಿಂಗಲ್ಸ್ ವಿಭಾಗದ ಸ್ಪರ್ಧೆಯಲ್ಲಿ ಮೂರನೇ ಶ್ರೇಯಾಂಕದ ಸನಿಲ್ 11-5, 7-11, 9-11, 11-8, 11-9, 7-11, 11-9 ರಲ್ಲಿ ಉತ್ತರ ಪ್ರದೇಶದ ದಿವ್ಯಾನ್ಶ್ ಶ್ರೀವಾಸ್ತವ ಎದುರು ಪ್ರಯಾಸದಿಂದ ಗೆದ್ದರು.

ಪ್ರಬಲ ಪೈಪೋಟಿ ನಡೆದ ಪಂದ್ಯದ ನಿರ್ಣಾಯಕ ಗೇಮ್‌ನಲ್ಲಿ 9–9 ರಲ್ಲಿ ಸಮಬಲ ಕಂಡುಬಂದಿತು. ಒತ್ತಡವನ್ನು ಮೆಟ್ಟಿನಿಂತ ಸನಿಲ್ ಸತತ ಎರಡು ಪಾಯಿಂಟ್ ಕಲೆಹಾಕಿ ಗೆಲುವು ಒಲಿಸಿಕೊಂಡರು.

ಸತ್ಯನ್ 13-11, 11-6, 11-4, 11-5 ರಲ್ಲಿ ಹರಿಯಾಣದ ವೆಸ್ಲಿ ರೊಸೆರಿಯೊ ವಿರುದ್ಧ ಗೆದ್ದರೆ, ಶರತ್ 11-9, 11-6, 11-6, 17-15 ರಲ್ಲಿ ಮಹಾರಾಷ್ಟ್ರದ ರವೀಂದ್ರ ಕೋಟ್ಯಾನ್ ಅವರನ್ನು ಮಣಿಸಿದರು. ಸ್ಥಳೀಯ ಪ್ರತಿಭೆಗಳಾದ ಹರ್ಮೀತ್ ದೇಸಾಯಿ ಮತ್ತು ಮಾನವ್ ಠಕ್ಕರ್ ಅವರೂ ಮೂರನೇ ಸುತ್ತು ಪ್ರವೇಶಿಸಿದರು.

ಮಿಶ್ರ ಡಬಲ್ಸ್‌ನಲ್ಲಿ ಮಾನವ್ ಮತ್ತು ಫಿಲ್ಜಾ ಫಾತಿಮಾ ಖಾದ್ರಿ ಅವರು ಅಗ್ರಶ್ರೇಯಾಂಕದ ಸನಿಲ್ ಶೆಟ್ಟಿ ಹಾಗೂ ರೀತ್‌ಶ್ರಿಯಾ ಟೆನಿಸನ್ ಅವರಿಗೆ ಆಘಾತ ನೀಡಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಕುಸ್ತಿ: ಸತೀಶ, ಆಕಾಶಗೆ ಬೆಳ್ಳಿ

ದಾವಣಗೆರೆ: ನಗರದ ಕ್ರೀಡಾ ವಸತಿನಿಲಯದ ಕುಸ್ತಿಪಟುಗಳಾದ ಸತೀಶ ಎಚ್.ಬಿ. ಹಾಗೂ ಆಕಾಶ ಸಾಗೋಟಿ ಅವರು ದೆಹಲಿಯಲ್ಲಿ ಬುಧವಾರ ನಡೆದ 17 ವರ್ಷದೊಳಗಿನ ಫೆಡರೇಷನ್ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದ್ದಾರೆ.

ಗ್ರಿಕೊ ರೋಮನ್ ಕುಸ್ತಿಯ 92 ಕೆ.ಜಿ. ವಿಭಾಗದ ಫೈನಲ್ ಪಂದ್ಯದಲ್ಲಿ ಸತೀಶ ಎಚ್.ಬಿ. ಅವರು ದೆಹಲಿಯ ಸೋನು ಎದುರು 4–6ರಲ್ಲಿ ಪರಾಭವಗೊಂಡರು.

65 ಕೆ.ಜಿ. ವಿಭಾಗದ ಫೈನಲ್ ಪಂದ್ಯದಲ್ಲಿ ಆಕಾಶ ಸಾಗೋಟಿ ಅವರು ಹರಿಯಾಣದ ರೋಹಿತ್ ಎದುರು ಸೆಣಸುತ್ತಿದ್ದಾಗ ಗಾಯಗೊಂಡಿದ್ದರಿಂದ ಮಧ್ಯದಲ್ಲೇ ಕಣದಿಂದ ಹಿಂದಕ್ಕೆ ಸರಿದಿದ್ದರಿಂದ ಬೆಳ್ಳಿ ಪದಕ ಲಭಿಸಿತು.

ಸತೀಶ ಎಚ್‌.ಬಿ. (ಎಡಿ) ಹಾಗೂ ಆಕಾಶ ಸಾಗೋಟಿ

ಕ್ರಿಕೆಟ್: ಇಂದ್ರಜಿತ್ ಶತಕ; ಪಾಂಡೆ, ಗೌತಮ್ ಆಸರೆ

ದಕ್ಷಿಣ ವಲಯಕ್ಕೆ ಇನಿಂಗ್ಸ್ ಮುನ್ನಡೆ

ಕೊಯಮತ್ತೂರು (ಪಿಟಿಐ): ಬಾಬಾ ಇಂದ್ರಜಿತ್ ಗಳಿಸಿದ ಶತಕ (118) ಮತ್ತು ಕರ್ನಾಟಕದ ಆಟಗಾರರಾದ ಮನೀಷ್ ಪಾಂಡೆ ಹಾಗೂ ಕೆ.ಗೌತಮ್ ಅವರ ಉಪಯುಕ್ತ ಆಟದ ನೆರವಿನಿಂದ ದಕ್ಷಿಣ ವಲಯ ತಂಡ, ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಪಶ್ಚಿಮ ವಲಯ ವಿರುದ್ಧ ಇನಿಂಗ್ಸ್ ಮುನ್ನಡೆ ಪಡೆದಿದೆ.

ಪಶ್ಚಿಮ ವಲಯ ತಂಡ ಗುರುವಾರ ತನ್ನ ಮೊದಲ ಇನಿಂಗ್ಸ್‌ನಲ್ಲಿ 270 ರನ್‌ಗಳಿಗೆ ಆಲೌಟಾಯಿತು. ಎರಡನೇ ದಿನದಾಟದ ಅಂತ್ಯಕ್ಕೆ ದಕ್ಷಿಣ ವಲಯ 7 ವಿಕೆಟ್‌ಗೆ 318 ರನ್ ಗಳಿಸಿದೆ. ಹನುಮ ವಿಹಾರಿ ನೇತೃತ್ವದ ತಂಡ ಒಟ್ಟು 48 ರನ್‌ಗಳಿಂದ ಮುನ್ನಡೆಯಲ್ಲಿದೆ.

ದಕ್ಷಿಣ ವಲಯ ತಂಡ ರೋಹನ್ ಕುನ್ನುಮಲ್ (31) ಮತ್ತು ಮಯಂಕ್ ಅಗರವಾಲ್ (9) ಅವರನ್ನು ಬೇಗನೇ ಕಳೆದುಕೊಂಡಿತು. ಇಂದ್ರಜಿತ್ ಅವರು ಸೊಗಸಾದ ಆಟದ ಮೂಲಕ ತಂಡದ ನೆರವಿಗೆ ನಿಂತರು.

ಬಾಬಾ ಇಂದ್ರಜಿತ್– ಸಂಗ್ರಹ ಚಿತ್ರ

ಮನೀಷ್ ಪಾಂಡೆ (48 ರನ್, 69 ಎ., 4X4, 6X2) ಮತ್ತು ಇಂದ್ರಜಿತ್ ನಾಲ್ಕನೇ ವಿಕೆಟ್‌ಗೆ 105 ರನ್ ಸೇರಿಸಿದರು. ಇವರು ಬೆನ್ನುಬೆನ್ನಿಗೆ ಔಟಾದಾಗ ದಕ್ಷಿಣ ವಲಯ 243 ರನ್‌ಗಳಿಗೆ ಆರು ವಿಕೆಟ್ ಕಳೆದುಕೊಂಡು ಒತ್ತಡಕ್ಕೆ ಒಳಗಾಯಿತು.

ಆದರೆ ಆಲ್‌ರೌಂಡರ್‌ಗಳಾದ ಗೌತಮ್ (43 ರನ್, 55 ಎ., 4X3, 6X3) ಮತ್ತು ರವಿ ತೇಜ (ಬ್ಯಾಟಿಂಗ್ 26) ಅವರು ಏಳನೇ ವಿಕೆಟ್‌ಗೆ 16.2 ಓವರ್‌ಗಳಲ್ಲಿ 63 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಪಶ್ಚಿಮ ವಲಯ: 96.3 ಓವರ್‌ಗಳಲ್ಲಿ 270. ದಕ್ಷಿಣ ವಲಯ: 81 ಓವರ್‌ಗಳಲ್ಲಿ 7 ವಿಕೆಟ್‌ಗೆ 318 (ರೋಹನ್ ಕುನ್ನುಮಲ್ 31, ಹನುಮ ವಿಹಾರಿ 25, ಬಾಬಾ ಇಂದ್ರಜಿತ್ 118, ಮನೀಷ್ ಪಾಂಡೆ 48, ಕೆ.ಗೌತಮ್ 43, ಜಯದೇವ್ ಉನದ್ಕತ್ 52ಕ್ಕೆ 3)

ಜ.8ರಂದು ಗ್ರೇಟ್ ಬೆಂಗಳೂರು 10ಕೆ ಓಟ

ಬೆಂಗಳೂರು: ಮುಂದಿನ ಜನವರಿ 8ರಂದು ಬೆಂಗಳೂರಿನಲ್ಲಿ ಗ್ರೇಟ್ ಬೆಂಗಳೂರು 10 ಕೆ ಓಟ ನಡೆಯಲಿದೆ.

ರಾಜ್ಯ ಯುವ ಸಬಲೀಕರಣ ಹಾಊ ಕ್ರೀಡಾ ಇಲಾಖೆ, ಕರ್ನಾಟಕ ಒಲಿಂಪಿಕ್ಸ್ ಸಂಸ್ಥೆ ಹಾಗೂ ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆಗಳ ಆಶ್ರಯದಲ್ಲಿ ಈ ಓಟ ನಡೆಯಲಿದೆ.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ರಾಜ್ಯದ ಯುವಸಬಲೀಕರಣ ಹಾಗೂ ಕ್ರೀಡಾ ಸಚಿವ ನಾರಾಯಣಗೌಡ, 'ಆರೋಗ್ಯಪೂರ್ಣ ಜೀವನಶೈಲಿ ರೂಢಿಸಿಕೊಂಡರೆ ಎಲ್ಲ ಕಾಯಿಲೆಗಳನ್ನೂ ದೂರವಿಡಬಹುದು. ಜೊತೆಗೆ ಕ್ರೀಡಾಪ್ರತಿಭಾವಂತರಿಗೂ ಒಂದು ವೇದಿಕೆ ನೀಡುವ ಉದ್ದೇಶದಿಂದ ಇದೇ ಮೊದಲ ಬಾರಿಗೆ ಈ ಓಟವನ್ನು ಆಯೋಜಿಸಲಾಗುತ್ತಿದೆ' ಎಂದರು.

ಇದೇ ಸಂದರ್ಭದಲ್ಲಿ ಹಾಜರಿದ್ದ ಕೆಒಎ ಅಧ್ಯಕ್ಷ ಗೋವಿಂದರಾಜ್, 'ಮಕ್ಕಳು, ಹಿರಿಯರು ಮತ್ತು ಕುಟುಂಬದ ಎಲ್ಲರೂ ಭಾಗವಹಿಸಲು ಅವಕಾಶವಿದೆ. ಸುಮಾರು 10 ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸುವರು' ಎಂದರು.

ಸುದ್ದಿಗೋಷ್ಠಿಯಲ್ಲಿ ಕೆಒಎ ಪ್ರಧಾನ ಕಾರ್ಯದರ್ಶಿ ಅನಂತರಾಜು, ಕ್ರೀಡಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಹಾಜರಿದ್ದರು.

ಚೆಸ್: ಎಂಟರಘಟ್ಟಕ್ಕೆ ಎರಿಗೈಸಿ, ಪ್ರಗ್ನಾನಂದ

ನ್ಯೂಯಾರ್ಕ್ (ಪಿಟಿಐ): ಭಾರತದ ಯುವ ಆಟಗಾರರಾದ ಅರ್ಜುನ್ ಎರಿಗೈಸಿ ಮತ್ತು ಆರ್.ಪ್ರಗ್ನಾನಂದ ಅವರು ಜೂಲಿಯಸ್ ಬೇರ್ ಜೆನರೇಷನ್ ಕಪ್ ಆನ್‌ಲೈನ್ ರ್‍ಯಾಪಿಡ್ ಚೆಸ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಗುರುವಾರ ಕೊನೆಗೊಂಡ ಪ್ರಿಲಿಮಿನರಿ ಹಂತದ ಸ್ಪರ್ಧೆಗಳ ಬಳಿಕ ಅರ್ಜುನ್ ಅವರು 25 ಪಾಯಿಂಟ್‌ಗಳೊಂದಿಗೆ ಎರಡನೇ ಸ್ಥಾನ ಪಡೆದರೆ, ಪ್ರಗ್ನಾನಂದ 23 ಪಾಯಿಂಟ್‌ಗಳೊಂದಿಗೆ ನಾಲ್ಕನೇ ಸ್ಥಾನ ಗಳಿಸಿದರು.

ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಅವರು ಪ್ರಿಲಿಮಿನರಿ ಹಂತದ 15 ಸುತ್ತುಗಳಲ್ಲಿ ಒಟ್ಟು 34 ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನದೊಂದಿಗೆ ನಾಕೌಟ್ ಹಂತ ಪ್ರವೇಶಿಸಿದರು. ಅಮೆರಿಕದ ಹಾನ್ಸ್ ನೀಮನ್ (24 ಪಾಯಿಂಟ್ಸ್) ಮೂರನೇ ಸ್ಥಾನ ಪಡೆದರು.

19 ವರ್ಷದ ಎರಿಗೈಸಿ 15 ಸುತ್ತುಗಳಲ್ಲಿ ಏಳರಲ್ಲಿ ಗೆದ್ದರೆ, ನಾಲ್ಕರಲ್ಲಿ ಸೋತರು. ನಾಲ್ಕು ಪಂದ್ಯಗಳನ್ನು ಡ್ರಾ ಮಾಡಿಕೊಂಡರು. ಗುರುವಾರ ನಡೆದ ಪಂದ್ಯಗಳಲ್ಲಿ ಅವರು ಜರ್ಮನಿಯ ವಿನ್ಸೆಂಟ್ ಕೇಮರ್ ಹಾಗೂ ನೆದರ್ಲೆಂಡ್ಸ್‌ನ ಅನೀಶ್ ಗಿರಿ ಎದುರು ಸೋತರೆ, ಪೋಲೆಂಡ್‌ನ ರೊಡೊಸ್ಲಾವ್ ಜತೆ ಡ್ರಾ ಮಾಡಿಕೊಂಡರು.

ಪ್ರಗ್ನಾನಂದ ಅವರು ಐದರಲ್ಲಿ ಗೆಲುವು ಪಡೆದರೆ, ಎಂಟು ಪಂದ್ಯಗಳನ್ನು ಡ್ರಾ ಮಾಡಿಕೊಂಡರು. ಎರಡು ಪಂದ್ಯಗಳನ್ನು ಎದುರಾಳಿಗೆ ಒಪ್ಪಿಸಿದರು. ಗುರುವಾರ ನಡೆದ 13ನೇ ಸುತ್ತಿನಲ್ಲಿ ಅವರು ಅಮೆರಿಕದ ಲೆವೊನ್ ಅರೋನಿಯನ್ ಎದುರು ಸೋತರು. 14ನೇ ಸುತ್ತಿನಲ್ಲಿ ಅನೀಶ್ ಗಿರಿ ಜತೆ ಡ್ರಾ ಮಾಡಿಕೊಂಡರು. 15ನೇ ಹಾಗೂ ಕೊನೆಯ ಸುತ್ತಿನಲ್ಲಿ ಕ್ರೊಯೇಷ್ಯದ ಇವಾನ್ ಸರಿಚ್ ಅವರನ್ನು ಮಣಿಸಿದರು.

ಕಣದಲ್ಲಿದ್ದ ಭಾರತದ ಇನ್ನೊಬ್ಬ ಸ್ಪರ್ಧಿ ಅಧಿಬನ್ ಅವರು 16ನೇ ಹಾಗೂ ಸ್ಥಾನ ಪಡೆದರು.

ಪ್ರಭಾವಿ ಆಟವಾಡಲು ವಿಫಲರಾದ ಅವರು ಕೇವಲ ಒಂದು ಗೆಲುವು ಪಡೆದರು. ಏಳು ಪಂದ್ಯಗಳಲ್ಲಿ ಸೋತರೆ, ಏಳು ಪಂದ್ಯಗಳನ್ನು ಡ್ರಾ ಮಾಡಿಕೊಂಡರು.

ಅ.18ರಂದು ಬಿಸಿಸಿಐ ವಾರ್ಷಿಕ ಮಹಾಸಭೆ

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ವಾರ್ಷಿಕ ಮಹಾಸಭೆಯು (ಎಜಿಎಂ) ಅಕ್ಟೋಬರ್ 18ರಂದು ಮುಂಬೈನಲ್ಲಿ ನಡೆಯಲಿದೆ.

ಈ ಸಭೆಯ ನಡಾವಳಿ ಪತ್ರವನ್ನು ಗುರುವಾರ ಸಂಜೆ ಎಲ್ಲ ರಾಜ್ಯಕ್ರಿಕೆಟ್ ಸಂಸ್ಥೆಗಳಿಗೆ ಕಳಿಸಲಾಗಿದೆ. ಸಭೆಯಲ್ಲಿ ಮಂಡಳಿಯ ಪದಾಧಿಕಾರಿಗಳ (ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ, ಜಂಟಿ ಕಾರ್ಯದರ್ಶಿ ಹಾಗೂ ಖಜಾಂಚಿ) ಚುನಾವಣೆ ಕೂಡ ನಡೆಯಲಿದೆ.

ಇದೇ ಸಂದರ್ಭದಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಗೆ ಭಾರತದ ಪ್ರತಿನಿಧಿಯನ್ನು ಆಯ್ಕೆ ಮಾಡಲಾಗುವುದು. 77 ವರ್ಷದ ಎನ್. ಶ್ರೀನಿವಾಸನ್ ಹಾಗೂ ಬಿಸಿಸಿಐನ ಪ್ರಸ್ತುತ ಅಧ್ಯಕ್ಷ ಸೌರವ್ ಗಂಗೂಲಿ ಅವರಲ್ಲಿ ಒಬ್ಬರನ್ನು ಈ ಸ್ಥಾನಕ್ಕೆ ಆಯ್ಕೆ ಮಾಡುವ ಕುರಿತು ಮಾತುಗಳು ಕೇಳಿಬಂದಿವೆ.

29 ವಿಷಯಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಸುವ ನಿರೀಕ್ಷೆ ಇದೆ.

ಭಾರತ ಕ್ರಿಕೆಟಿಗರ ಸಂಘ (ಐಸಿಎ) ಅಪೆಕ್ಸ್ ಕೌನ್ಸಿಲ್‌ನಲ್ಲಿ ಇಬ್ಬರು ಪ್ರತಿನಿಧಿಗಳನ್ನು (ಪುರುಷ ಹಾಗೂ ಮಹಿಳೆ) ಇದೇ ವೇಳೆ ನೇಮಕ ಮಾಡಲಾಗುವುದು.

ಝೆಲೆನ್‌ಸ್ಕಿ ಪ್ರತಿಜ್ಞೆ: ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೆಗೆ ರಷ್ಯಾ ಅಧ್ಯಕ್ಷ ಪುಟಿನ್ ಗೈರು

ಶತ್ರುಸೇನೆ ದ್ವಿಗುಣವಾದರೂ ಗೆಲುವು ನಮ್ಮದೇ

ವಿಶ್ವಸಂಸ್ಥೆ (ಎಪಿ/ಎಎಫ್‌ಪಿ): ಆಕ್ರಮಣ ನಡೆಸುತ್ತಿರುವ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರನ್ನು ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡಿಸಿ ಶಿಕ್ಷಿಸಬೇಕು ಎಂದು ವಿಶ್ವ ನಾಯಕರನ್ನು ಒತ್ತಾಯಿಸಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ, 'ಯುದ್ಧದ ಪ್ರಯತ್ನ ದ್ವಿಗುಣಗೊಳಿಸುವ ಮಾಸ್ಕೊ ನಿರ್ಧಾರದ ಹೊರತಾಗಿಯೂ ನಮ್ಮ ನೆಲದ ಪ್ರತಿ ಇಂಚು ಪ್ರದೇಶವನ್ನು ಮರಳಿ ಗೆಲ್ಲುತ್ತೇವೆ' ಎಂದು ಪ್ರತಿಜ್ಞೆ ಮಾಡಿದರು.

ಮೀಸಲು ಯೋಧರನ್ನು ಸೇರಿಸಿಕೊಂಡು ಸೇನೆಯನ್ನು ಭಾಗಶಃ ಸನ್ನದ್ಧಗೊಳಿಸಲು ಪುಟಿನ್ ಬುಧವಾರ ಆದೇಶಿಸಿದ ಕೆಲವೇ ಗಂಟೆಗಳ ನಂತರ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯನ್ನು ಉದ್ದೇಶಿಸಿ ವಿಡಿಯೊ ಮೂಲಕ ಝೆಲೆನ್‌ಸ್ಕಿ ಮಾತನಾಡಿದರು.

'ಯುದ್ಧ ಕೊನೆಗೊಳಿಸಲು ಮಾತುಕತೆಗೆ ಪುಟಿನ್ ಆಡಳಿತ ಕಚೇರಿ ಕ್ರೆಮ್ಲಿನ್ ಸಿದ್ಧವಿಲ್ಲ ಎಂಬುದಕ್ಕೆ ಸಾಕ್ಷಿಯಾಗಿ ಸೇನೆಯ ಮರುಸಂಯೋಜಿಸುವ ಘೋಷಣೆ ಹೊರಡಿಸಿದ್ದಾರೆ. ಏನೇ ಆದರೂ ನಮ್ಮ ರಾಷ್ಟ್ರ ಮೇಲುಗೈ ಸಾಧಿಸಲಿದೆ' ಎಂದು ಹೇಳಿದರು.

ಚಳಿಗಾಲ ಮುಗಿದ ನಂತರ ಉಕ್ರೇನ್‌ನಲ್ಲಿ ಹೊಸ ಆಕ್ರಮಣ ನಡೆಸಲು ಬಯಸಿರುವ ಮಾಸ್ಕೊ ತನ್ನ ಪಡೆಗಳನ್ನು ಸನ್ನದ್ಧಗೊಳಿಸುತ್ತಿದೆ. ವಿಶ್ವಸಂಸ್ಥೆ ಮತ್ತು ಭದ್ರತಾ ಮಂಡಳಿಯಲ್ಲಿ ರಷ್ಯಾ ಹೊಂದಿರುವ ವೀಟೊ ಅಧಿಕಾರವನ್ನು ರದ್ದುಪಡಿಸಬೇಕು ಎಂದು ಝೆಲೆನ್‌ಸ್ಕಿ ಅವರು ವಿಶ್ವ ನಾಯಕರಲ್ಲಿ ಒತ್ತಾಯಿಸಿದರು.

ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರ ಭಾಷಣವೂ ಉಕ್ರೇನ್ ಯುದ್ಧವನ್ನೇ ಕೇಂದ್ರೀಕರಿಸಿತ್ತು. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಭದ್ರತಾ ಮಂಡಳಿ ಸಭೆಯಲ್ಲಿ ಭಾಗವಹಿಸಲಿಲ್ಲ.

ಉಕ್ರೇನಿನ ಹಾರ್ಕಿವ್ ಪ್ರದೇಶದ ಕಿತ್ಸಿವ್ಕಾದ ಬಳಿ ರಷ್ಯಾದ ಕ್ಷಿಪಣಿ ದಾಳಿಗೆ ಸೇತುವೆ ಧ್ವಂಸಗೊಂಡಿದೆ– ಎಎಫ್‌ಪಿ ಚಿತ್ರ

> **ನಮ್ಮ ಇಡೀ ಪ್ರದೇಶದಲ್ಲಿ ರಾಷ್ಟ್ರ ಧ್ವಜವನ್ನು ಮತ್ತೆ ಹಾರಿಸಬಹುದು. ಇದನ್ನು ನಮ್ಮ ಸೇನಾ ಶಕ್ತಿಯಿಂದ ಸಾಧಿಸಬಹುದು. ಆದರೆ, ಇದಕ್ಕೆ ನಮಗೆ ಸಮಯಬೇಕು**
> **ವೊಲೊಡಿಮಿರ್ ಝೆಲೆನ್‌ಸ್ಕಿ,** ಉಕ್ರೇನ್ ಅಧ್ಯಕ್ಷ

'ಭಾರತ, ಉಕ್ರೇನ್‌ಗೆ ಭದ್ರತಾ ಮಂಡಳಿಯಲ್ಲಿ ಕಾಯಂ ಸ್ಥಾನ ಏಕಿಲ್ಲ': ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತ, ಜಪಾನ್, ಬ್ರೆಜಿಲ್ ಮತ್ತು ಉಕ್ರೇನ್ ರಾಷ್ಟ್ರಗಳಿಗೆ ಕಾಯಂ ಸ್ಥಾನ ಏಕಿಲ್ಲ ಎಂದು ಉಕ್ರೇನ್ ಅಧ್ಯಕ್ಷ ಝೆಲೆನ್‌ಸ್ಕಿ ಪ್ರಶ್ನಿಸಿದ್ದಾರೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯನ್ನು ವಿಡಿಯೊ ಮೂಲಕ ಉದ್ದೇಶಿ ಮಾಡಿರುವ ಭಾಷಣದಲ್ಲಿ ಝೆಲೆನ್‌ಸ್ಕಿ ಈ ಪ್ರಶ್ನೆ ಎತ್ತಿದ್ದಾರೆ.

ವಿಶ್ವಸಂಸ್ಥೆಯಲ್ಲಿ ಸುಧಾರಣೆಯ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿವೆ. ಯಾವುದೇ ಪರಿಹಾರವಾಗಿಲ್ಲ. ಈ ಬಗ್ಗೆ ಉಕ್ರೇನ್ ಧ್ವನಿ ಎತ್ತುತ್ತದೆ. ರಷ್ಯಾ ಎಂದಾದರೂ ಇಂತಹ ಬೇಡಿಕೆ ಇಟ್ಟಿದೆಯಾ? ರಷ್ಯಾಕ್ಕೆ ಯಾವುದೋ ಕಾರಣದಿಂದಾಗಿ ಭದ್ರತಾ ಮಂಡಳಿಯ ಕಾಯಂ ಸ್ಥಾನ ಸಿಕ್ಕಿದೆ. ಆದರೆ ಯಾವ ಕಾರಣಕ್ಕಾಗಿ ಭಾರತ, ಜಪಾನ್, ಬ್ರೆಜಿಲ್, ಟರ್ಕಿ, ಜರ್ಮನಿ ಮತ್ತು ಉಕ್ರೇನ್‌ಗೆ ಕಾಯಂ ಸ್ಥಾನವಿಲ್ಲ. ಈ ಸಮಸ್ಯೆ ಬಗೆಹರಿಸುವ ದಿನ ಬರಲಿದೆ ಎಂದು ಝೆಲೆನ್‌ಸ್ಕಿ ಹೇಳಿದರು.

ಪ್ರಮುಖಾಂಶಗಳು

- ಉಕ್ರೇನ್‌ನಲ್ಲಿ ಯುದ್ಧ ತೀವ್ರಗೊಳಿಸಲು ಸೇನೆಯ ಭಾಗಶಃ ಸನ್ನದ್ಧತೆಗೆ ಪುಟಿನ್ ನೀಡಿದ ಆದೇಶ ಖಂಡಿಸಿರುವ ಜಿ7 ವಿದೇಶಾಂಗ ಸಚಿವರಿಂದ ರಷ್ಯಾ ವಿರುದ್ಧ ಮತ್ತಷ್ಟು ಹೊಸ ನಿರ್ಬಂಧಗಳನ್ನು ಮುಂದುವರಿಸುವ ಘೋಷಣೆ
- ಉಕ್ರೇನ್ ಮೇಲೆ ಯುದ್ಧ ಸಾರಿರುವ ರಷ್ಯಾ ವಿರುದ್ಧ ಅಮೆರಿಕ ಮತ್ತು ಅದರ ಮಿತ್ರ ರಾಷ್ಟ್ರಗಳು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ತೀವ್ರ ಟೀಕಾ ಪ್ರಹಾರ ನಡೆಸಲು ಯೋಜಿಸಿವೆ. ರಷ್ಯಾ ಕ್ರಮವನ್ನು ಬಲವಾಗಿ ಖಂಡಿಸುವಂತೆ ಇತರ ರಾಷ್ಟ್ರಗಳಿಗೂ ಒತ್ತಾಯ

ಪುಟಿನ್ ಮಿತ್ರನಿಗಾಗಿ 200 ಕೈದಿಗಳ ಬಿಡುಗಡೆ

ರಷ್ಯಾದ ವಶದಲ್ಲಿದ್ದ ಮರಿಯುಪೊಲ್ ರಕ್ಷಕ ಯೋಧರನ್ನು ಬಂಧಮುಕ್ತಗೊಳಿಸಲು ಉಕ್ರೇನ್ ಗುರುವಾರ ಯುದ್ಧ ಕೈದಿಗಳ ವಿನಿಮಯ ಘೋಷಿಸಿತು. ಸೌದಿ ಅರೆಬಿಯಾ ಮತ್ತು ಟರ್ಕಿಯ ಮಧ್ಯಸ್ಥಿಕೆಯಲ್ಲಿ ಪುಟಿನ್ ಅವರ ಆಪ್ತಮಿತ್ರ, ರಷ್ಯಾ ಪರವಿರುವ ವಿರೋಧ ಪಕ್ಷದ ನಾಯಕ ವಿಕ್ಟರ್ ಮೆಡ್ವೆಡ್‌ಚುಕ್ ಮತ್ತು ಪ್ರಮುಖ 55 ಯುದ್ಧ ಕೈದಿಗಳನ್ನು ಬಿಡುಗಡೆ ಮಾಡಲಾಯಿತು.

ಇದಕ್ಕೆ ಪ್ರತಿಯಾಗಿ, ಮರಿಯುಪೊಲ್‌ನ ಅಜೋವ್‌ಸ್ಟಾಲ್ ಉಕ್ಕಿನ ಸ್ಥಾವರದಲ್ಲಿ ಸೆರೆ ಹಿಡಿದಿದ್ದ 215 ಮಂದಿ ಉಕ್ರೇನ್ ಯೋಧರು ಮತ್ತು ಇತರ ವಿದೇಶಿ ಪ್ರಜೆಗಳನ್ನು ರಷ್ಯಾ ಪಡೆ ಹಸ್ತಾಂತರಿಸಿತು. ಯುದ್ಧ ಆರಂಭವಾದ ನಂತರ ವಿಕ್ಟರ್ ಮೆಡ್ವೆಡ್‌ಚುಕ್ ಉಕ್ರೇನ್‌ನಿಂದ ತೊರೆಯಲು ಯತ್ನಿಸಿದ್ದರು. ಅವರನ್ನು ವಶಕ್ಕೆ ಪಡೆದು ಉಕ್ರೇನ್ ಸರ್ಕಾರ ಗೃಹ ಬಂಧನದಲ್ಲಿರಿಸಿತ್ತು.

'ನಾನು ಸಾಯಲು ಬಯಸೆನು'

ಉಕ್ರೇನ್ ವಿರುದ್ಧದ ಯುದ್ಧದಲ್ಲಿ ಸೇವೆ ಸಲ್ಲಿಸುವುದನ್ನು ತಪ್ಪಿಸಿಕೊಳ್ಳಲು ರಷ್ಯಾದಿಂದ ಸಾವಿರಾರು ಜನರು ಪಲಾಯನ ಮಾಡುತ್ತಿದ್ದಾರೆ. ಪತ್ನಿ ಮತ್ತು ಮಕ್ಕಳ ಜತೆಗೆ ಬಗಲಲ್ಲಿ ಒಂದು ಸಣ್ಣ ಚೀಲ ಹಿಡಿದುಕೊಂಡು ಅರ್ಮೇನಿಯಾಗೆ ಹಾರಿದ ಡಿಮಿಟ್ರಿ ಎಂಬಾತ. 'ನಾನು ಯುದ್ಧಕ್ಕೆ ಹೋಗಲು ಸಿದ್ಧನಿಲ್ಲ. ಈ ಪ್ರಜ್ಞಾಶೂನ್ಯ ಯುದ್ಧದಲ್ಲಿ ನಾನು ಸಾಯಲು ಬಯಸುವುದಿಲ್ಲ. ಇದು ಭ್ರಾತೃ ಹತ್ಯೆಯ ಯುದ್ಧ' ಎಂದು ಸುದ್ದಿಸಂಸ್ಥೆಯ ಪ್ರತಿನಿಧಿಗೆ ತಿಳಿಸಿದ್ದಾರೆ.

ಸೇನೆಯ ಭಾಗಶಃ ಸನ್ನದ್ಧತೆಗೆ ಪುಟಿನ್ ಅವರು ಆದೇಶಿಸಿದ ಕೆಲವೇ ಸಮಯದಲ್ಲಿ ರಷ್ಯಾದಿಂದ ಪಲಾಯನ ಮಾಡುತ್ತಿರುವವರಿಂದಾಗಿ ವಿದೇಶಗಳಿಗೆ ಹೊರಟ ವಿಮಾನಗಳು ಕ್ಷಿಪ್ರಗತಿಯಲ್ಲಿ ಭರ್ತಿಯಾಗುತ್ತಿವೆ. ದೇಶದ ಗಡಿಗಳಲ್ಲಿ ನಾಗರಿಕರ ನಿರ್ಗಮನವೂ ಗಣನೀಯ ಸಂಖ್ಯೆಯಲ್ಲಿ ಹೆಚ್ಚುತ್ತಿದೆ. ಅಲ್ಲದೇ, ದೇಶದಾದ್ಯಂತ ಅಪರೂಪಕ್ಕೆ ನಡೆದ ಯುದ್ಧ ವಿರೋಧಿ ಪ್ರತಿಭಟನೆಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ನಾಗರಿಕರನ್ನು ರಷ್ಯಾ ಭದ್ರತಾ ಸಿಬ್ಬಂದಿ ಬಂಧಿಸಿದ್ದಾರೆ.

'ಭಾರತಕ್ಕೆ ಕಾಯಂ ಸದಸ್ವತ್ವ ಸಿಗದಿರುವುದರಿಂದ ವಿಶ್ವಸಂಸ್ಥೆಗೇ ನಷ್ಟ'

ನ್ಯೂಯಾರ್ಕ್ (ಪಿಟಿಐ): 'ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಕಾಯಂ ಸದಸ್ಯತ್ವ ಸಿಗದೇ ಇರುವುದು ಒಳ್ಳೆಯ ಬೆಳವಣಿಗೆಯಲ್ಲ. ಇದರಿಂದ ಮಂಡಳಿಗೇ ನಷ್ಟ' ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ.

ಕೊಲಂಬಿಯಾ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಇಂಟರ್‌ನ್ಯಾಷನಲ್ ಆ್ಯಂಡ್ ಪಬ್ಲಿಕ್ ಅಫೈರ್ಸ್‌ನಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಅವರು ಕೊಲಂಬಿಯಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಅರವಿಂದ್ ಪನಗರಿಯಾ ಅವರೊಂದಿಗೆ ಸಂವಾದ ನಡೆಸಿದರು.

ಭಾರತವು ಭದ್ರತಾ ಮಂಡಳಿಯ ಕಾಯಂ ಸದಸ್ಯತ್ವ ಪಡೆಯಲು ಇನ್ನೆಷ್ಟು ವರ್ಷಗಳು ಬೇಕಾಗಬಹುದು ಎಂಬ ಪ್ರಶ್ನೆಗೆ, 'ಈ ದಿಸೆಯಲ್ಲಿ ನಾವು ಗಂಭೀರ ಪ್ರಯತ್ನ ನಡೆಸುತ್ತಿದ್ದೇವೆ' ಎಂದಿದ್ದಾರೆ.

'ಭದ್ರತಾ ಮಂಡಳಿಯಲ್ಲಿ ಸುಧಾರಣೆ ತರಬೇಕೆಂದು ವಿಶ್ವಸಂಸ್ಥೆಯ ಮೇಲೆ ಒತ್ತಡ ಹೇರುತ್ತಿರುವ ರಾಷ್ಟ್ರಗಳ ಪೈಕಿ ನಾವು ಮುಂಚೂಣಿಯಲ್ಲಿದ್ದೇವೆ. ಮಂಡಳಿಯ ಕಾಯಂ ಸದಸ್ಯತ್ವ ಪಡೆಯಲು ಭಾರತವು ಅರ್ಹವಾಗಿದೆ' ಎಂದು ಹೇಳಿದ್ದಾರೆ.

ರಷ್ಯಾ, ಬ್ರಿಟನ್, ಚೀನಾ, ಫ್ರಾನ್ಸ್ ಮತ್ತು ಅಮೆರಿಕ ಕಾಯಂ ಸದ ಸ್ಯತ್ವ ಪಡೆದಿವೆ. 10 ರಾಷ್ಟ್ರಗಳು ಕಾಯಂ ಅಲ್ಲದ ಸದಸ್ಯತ್ವ ಹೊಂದಿವೆ. ಮಂಡಳಿಯ ಕಾಯಂ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಬೇಕೆಂಬ ಕೂಗು ಕೇಳಿಬಂದಿದೆ.

ಬೈಡನ್ ಬೆಂಬಲ : 'ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಕಾಯಂ ಸದಸ್ಯರನ್ನಾಗಿ ಭಾರತ, ಜರ್ಮನಿ ಹಾಗೂ ಜಪಾನ್ ರಾಷ್ಟ್ರಗಳನ್ನೂ ಸೇರ್ಪಡೆ ಮಾಡುವುದಕ್ಕೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ಬೆಂಬಲ ವ್ಯಕ್ತಪಡಿಸಿದ್ದಾರೆ' ಎಂದು ಶ್ವೇತ ಭವನದ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಅಮೆರಿಕದ ನಾಸಾ ಸಂಸ್ಥೆಯ ಜೇಮ್ಸ್ ವೆಬ್ ಬ್ಯಾಹ್ಯಾಕಾಶ ದೂರದರ್ಶಕವು ಸೆರೆ ಹಿಡಿದಿರುವ ಉಂಗುರಗಳಿರುವ ನೆಪ್ಚೂನ್ ಗ್ರಹ – ಪಿಟಿಐ ಚಿತ್ರ

ನೆಪ್ಚೂನ್‌ನಲ್ಲೂ ಉಂಗುರ: ಚಿತ್ರ ಸೆರೆ ಹಿಡಿದ ಜೇಮ್ಸ್ ವೆಬ್ ದೂರದರ್ಶಕ

ವಾಷಿಂಗ್ಟನ್ (ಪಿಟಿಐ): ನಾಸಾದ ಜೇಮ್ಸ್ ವೆಬ್ ಬಾಹ್ಯಾಕಾಶ ದೂರದರ್ಶಕವು ಮೊದಲ ಬಾರಿಗೆ ನೆಪ್ಚೂನ್ ಗ್ರಹದ ಚಿತ್ರವನ್ನು ಅತ್ಯಂತ ಸ್ಪಷ್ಟವಾಗಿ ಸೆರೆ ಹಿಡಿದಿದೆ.

ಮೂರು ದಶಕಗಳ ನಂತರ ದೂರದ ಈ ಗ್ರಹದ ಸ್ಪಷ್ಟ ನೋಟ ಜೇಮ್ಸ್ ವೆಬ್ ದೂರದರ್ಶಕದಲ್ಲಿ ಸೆರೆಯಾಗಿದೆ. ಗ್ರಹದ ಸುತ್ತಲಿನ ಉಂಗುರಗಳ ಪ್ರಕಾಶಮಾನದ ನೋಟ ಈ ಚಿತ್ರದ ವಿಶೇಷತೆಯಾಗಿದೆ.

ನಾಸಾದ ವಾಯೇಜರ್ 2 ಬಾಹ್ಯಾಕಾಶ ನೌಕೆಯು 1989 ರಲ್ಲಿ ನೆಪ್ಚೂನ್ ಗ್ರಹವನ್ನು ಮೊದಲ ಬಾರಿಗೆ ಪತ್ತೆ ಹಚ್ಚಿತ್ತು. ಆಗ ನೆಪ್ಚೂನ್ ಗ್ರಹದ ಸುತ್ತಲಿನ ವಿಶಿಷ್ಟವಾದ ಉಂಗುರಗಳು ಕಂಡುಬಂದಿರಲಿಲ್ಲ ಎಂದು ನಾಸಾ ಹೇಳಿದೆ.

ಜೇಮ್ಸ್ ವೆಬ್ ಸೆರೆ ಹಿಡಿದ ಚಿತ್ರದಲ್ಲಿ ನೆಪ್ಚೂನ್ ಗ್ರಹವು ಪ್ರಕಾಶಮಾನವಾಗಿದ್ದು, ಕಿರಿದಾದ ಉಂಗುರಗಳ ಜೊತೆಗೆ ಮಸುಕಾದ ಧೂಳಿನ ಪಟ್ಟಿ ಗೋಚರವಾಗಿದೆ. 'ಈ ಮಸುಕಾದ, ಧೂಳಿನ ಉಂಗುರಗಳನ್ನು ಕೊನೆಯದಾಗಿ ನೋಡಿ ಮೂರು ದಶಕಗಳಾದವು. ಇದೇ ಮೊದಲ ಬಾರಿಗೆ ನೆಪ್ಚೂನ್ ಗ್ರಹವನ್ನು ಕಡುಗೆಂಪಿನಲ್ಲಿ ನೋಡುತ್ತಿದ್ದೇವೆ' ಎಂದು ನೆಪ್ಚೂನ್ ಕುರಿತು ಅಧ್ಯನ ನಡೆಸಿರುವ ಪರಿಣತ ಮತ್ತು ಅಂತರ್‌ಶಿಸ್ತೀಯ ವಿಜ್ಞಾನಿ ಹೈಡಿ ಹ್ಯಾಮೆಲ್ ಹೇಳಿರುವುದಾಗಿ ಜೇಮ್ಸ್ ವೆಬ್‌ನ ಹೇಳಿಕೆಯಲ್ಲಿ ತಿಳಿಸಿದೆ.

ಮೆಕ್ಸಿಕೊದಲ್ಲಿ ಭೂಕಂಪ: 2 ಸಾವು

ಮೆಕ್ಸಿಕೊ ಸಿಟಿ: ಮೆಕ್ಸಿಕೊದಲ್ಲಿ ಗುರುವಾರ ಪ್ರಬಲ ಭೂಕಂಪ ಸಂಭವಿಸಿದ್ದು, ಇಬ್ಬರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭೂಕಂಪದ ತೀವ್ರತೆ ರಿಕ್ಟರ್ ಮಾಪಕದಲ್ಲಿ 6.8ರಷ್ಟು ದಾಖಲಾಗಿದೆ. ಪೆಸಿಫಿಕ್ ಕರಾವಳಿಯ ಮೈಕೊವಾಕನ್ ರಾಜ್ಯದಲ್ಲಿ ಕಂಪನದ ಕೇಂದ್ರ ಬಿಂದುವನ್ನು ಗುರುತಿಸಲಾಗಿದೆ. ಮೆಕ್ಸಿಕೊ ಸಿಟಿಯಲ್ಲಿ ಮಹಿಳೆಯೊಬ್ಬರು ಮನೆಯ ಮೆಟ್ಟಿಲುಗಳಿಂದ ಬಿದ್ದು ಹಾಗೂ ಇನ್ನೊಬ್ಬರು ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭೂಕಂಪದಿಂದಾಗಿ ಉರುವಾಪನ್ ನಗರದಲ್ಲಿ ಕಟ್ಟಡವೊಂದಕ್ಕೆ ಹಾನಿಯಾಗಿದೆ.

ಡಬಲ್ಸ್: ಫೆಡರರ್– ರಫಾ ಕಣಕ್ಕೆ

ಇಂದಿನಿಂದ ಲೇವರ್ ಕಪ್ ಟೆನಿಸ್: ದಿಗ್ಗಜ ಆಟಗಾರನಿಗೆ ಕೊನೆಯ ಟೂರ್ನಿ

ಲಂಡನ್ (ರಾಯಿಟರ್ಸ್/ಎಎಫ್‌ಪಿ): ಟೆನಿಸ್ ದಿಗ್ಗಜ ಆಟಗಾರ ರೋಜರ್ ಫೆಡರರ್ ಅವರು ವೃತ್ತಿಜೀವನದ ಕೊನೆಯ ಟೂರ್ನಿಯಲ್ಲಿ ತಮ್ಮ 'ಬದ್ಧ ವೈರಿ' ಸ್ಪೇನ್‌ನ ರಫೆಲ್ ನಡಾಲ್ ಜತೆಗೂಡಿ ಆಡಲಿದ್ದು, ಅಭಿಮಾನಿಗಳಲ್ಲಿ ರೋಮಾಂಚನ ಮೂಡಿಸಿದೆ.

ಲೇವರ್ ಕಪ್ ಬಳಿಕ ಟೆನಿಸ್‌ನಿಂದ ವಿರಮಿಸುವುದಾಗಿ 41 ವರ್ಷದ ಫೆಡರರ್ ಕಳೆದ ವಾರ ಪ್ರಕಟಿಸಿದ್ದರು. ಮೂರು ದಿನಗಳ ಲೇವರ್ ಕಪ್ ಟೂರ್ನಿ ಶುಕ್ರವಾರ ಆರಂಭವಾಗಲಿದ್ದು, 'ಟೀಮ್ ಯುರೋಪ್' ಮತ್ತು 'ಟೀಮ್ ವರ್ಲ್ಡ್' ಪರಸ್ಪರ ಎದುರಾಗಲಿವೆ.

ಬಲ ಮಂಡಿನೋವಿನಿಂದ ಬಳಲುತ್ತಿರುವ ಫೆಡರರ್ ಅವರು ಇಲ್ಲಿ ಸಿಂಗಲ್ಸ್‌ನಲ್ಲಿ ಆಡದಿರಲು ನಿರ್ಧರಿಸಿದ್ದು, ಡಬಲ್ಸ್‌ನಲ್ಲಿ ಮಾತ್ರ ಕಣಕ್ಕಿಳಿಯಲಿದ್ದಾರೆ.

ಲಂಡನ್‌ನ ಒ2 ಅರೆನಾದಲ್ಲಿ ನಡೆಯಲಿರುವ ಪಂದ್ಯದಲ್ಲಿ ಫೆಡರರ್– ನಡಾಲ್ ಜೋಡಿ, 'ಟೀಮ್ ವರ್ಲ್ಡ್' ತಂಡದ ಅಮೆರಿಕದ ಜಾಕ್ ಸಾಕ್ ಮತ್ತು ಫ್ರಾನ್ಸೆಸ್ ಟೈಫೊ ಅವರನ್ನು ಎದುರಿಸಲಿದೆ. ಭಾರತೀಯ ಕಾಲಮಾನ ಶುಕ್ರವಾರ ರಾತ್ರಿ 11ರ ಬಳಿಕ ಈ ಪಂದ್ಯ ನಡೆಯಲಿದೆ.

'ಮಂಡಿನೋವನ್ನು ನಿಭಾಯಿಸಬಹುದೇ ಎಂಬುದು ತಿಳಿದಿಲ್ಲ. ಆದರೂ ಪ್ರಯತ್ನಿಸುತ್ತೇನೆ' ಎಂದು ಫೆಡರರ್ ಪಂದ್ಯದ ಮುನ್ನಾದಿನ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ರಫಾ ಜತೆಗೂಡಿ ಆಡಲಿರುವುದು ಭಿನ್ನ ಅನುಭವ ನೀಡಲಿದೆ. ನಾವಿಬ್ಬರು ಒಂದೇ ತಂಡದಲ್ಲಿರುವುದು ಸಂತಸದ ಸಂಗತಿ. ಗೆಲುವು ಪಡೆಯಲು ನನ್ನ ಅತ್ಯುತ್ತಮ ಪ್ರಯತ್ನ ಮಾಡುತ್ತೇನೆ' ಎಂದರು.

'ಈ ಪಂದ್ಯ ನನಗೆ ಅದ್ಭುತ ಮತ್ತು ಮರೆಯಲಾಗದ ಅನುಭವ ನೀಡಲಿದೆ. ಆ ಕ್ಷಣವನ್ನು ಉತ್ಸುಕತೆಯಿಂದ ಎದುರುನೋಡುತ್ತಿದ್ದೇನೆ' ಎಂದು ನಡಾಲ್ ಪ್ರತಿಕ್ರಿಯಿಸಿದ್ದಾರೆ.

ಬ್ಯೋರ್ನ್ ಬರ್ಗ್ ನೇತೃತ್ವದ ಯೂರೋಪ್ ತಂಡದಲ್ಲಿ ನಡಾಲ್ ಮತ್ತು ಫೆಡರರ್ ಅಲ್ಲದೆ ನೊವಾಕ್ ಜೊಕೊವಿಚ್, ಆ್ಯಂಡಿ ಮರೆ, ಸ್ಟೆಫಾನೊಸ್ ಸಿಟ್ಸಿಪಾಸ್ ಮತ್ತು ಕ್ಯಾಸ್ಪರ್ ರೂಡ್ ಇದ್ದಾರೆ. ಜಾನ್ ಮೆಕೆನ್ರೊ ನಾಯಕತ್ವದ ವಿಶ್ವ ತಂಡದಲ್ಲಿ ಜಾಕ್ ಸಾಕ್, ಫ್ರಾನ್ಸೆಸ್ ಟೈಫೊ, ಫೆಲಿಕ್ಸ್ ಉಜೆರ್ ಅಲಿಯಾಸಿಮ್, ಟೇಲರ್ ಫ್ರಿಟ್ಜ್, ಡಿಯಾಗೊ ಶ್ವಾರ್ಟ್ಸ್‌ಮನ್ ಮತ್ತು ಅಲೆಕ್ಸ್ ಡಿ ಮಿನೌರ್ ಇದ್ದಾರೆ.

ಶುಕ್ರವಾರ ಸಿಂಗಲ್ಸ್ ಪಂದ್ಯಗಳಲ್ಲಿ ಕ್ಯಾಸ್ಪರ್ ರೂಡ್– ಜಾಕ್ ಸಾಕ್, ಸಿಟ್ಸಿಪಾಸ್– ಶ್ವಾರ್ಟ್ಸ್‌ಮನ್ ಮತ್ತು ಮರೆ– ಮಿನೌರ್ ಎದುರಾಗಲಿದ್ದಾರೆ.

ಪಂದ್ಯಗಳ ನೇರ ಪ್ರಸಾರ: ಸೋನಿ ಟೆನ್ 1 (ಮೊದಲ ಸೆಷನ್ ಸಂಜೆ 5 ರಿಂದ, ಎರಡನೇ ಸೆಷನ್ ರಾತ್ರಿ 11 ರಿಂದ)

'ಟೀಮ್ ಯುರೋಪ್' ತಂಡದ ಆ್ಯಂಡಿ ಮರೆ, ನೊವಾಕ್ ಜೊಕೊವಿಚ್, ರೋಜರ್ ಫೆಡರರ್ ಮತ್ತು ರಫೆಲ್ ನಡಾಲ್ ಅವರು ಗುರುವಾರ ಅಭ್ಯಾಸದ ವೇಳೆ ಜತೆಯಾಗಿ ಕಾಣಿಸಿಕೊಂಡರು –ಎಎಫ್‌ಪಿ ಚಿತ್ರ

ಐಒಎ ನಿಯಮಾವಳಿಗೆ ತಿದ್ದುಪಡಿ: 'ಸುಪ್ರೀಂ' ಕ್ರಮ

ನಾಗೇಶ್ವರ ರಾವ್ ನೇಮಕ

ನವದೆಹಲಿ (ಪಿಟಿಐ): ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ನಿಯಮಾವಳಿ ತಿದ್ದುಪಡಿಗೆ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಲ್.ನಾಗೇಶ್ವರ ರಾವ್ ಅವರನ್ನು ನೇಮಿಸಲಾಗಿದೆ.

ನಿಯಮಾವಳಿ ತಿದ್ದಪಡಿಗೆ ಮಾರ್ಗಸೂಚಿ ಸಿದ್ಧಪಡಿಸುವ ಜತೆಯಲ್ಲೇ 2022ರ ಡಿ.15ರ ಒಳಗಾಗಿ ಚುನಾವಣೆಗೆ ಅನುವು ಮಾಡಿಕೊಡಲು ಮತದಾರರ ಪಟ್ಟಿ ಅಂತಿಮಗೊಳಿಸುವಂತೆಯೂ, ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಹಿಮಾ ಕೊಹ್ಲಿ ಅವರನ್ನೊಳಗೊಂಡ ಸುಪ್ರೀಂಕೋರ್ಟ್ ಪೀಠ ಗುರುವಾರ ನಾಗೇಶ್ವರ ರಾವ್ ಅವರಿಗೆ ಸೂಚಿಸಿತು.

ಸೆ.27 ರಂದು ನಡೆಯಲಿರುವ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ) ಸಭೆಯಲ್ಲಿ ಪಾಲ್ಗೊಳ್ಳಲು ಐಒಎ ಕಾರ್ಯದರ್ಶಿ ರಾಜೀವ್ ಮೆಹ್ತಾ ಮತ್ತು ಉಪಾಧ್ಯಕ್ಷ ಆದಿಲ್ ಸುಮರಿವಾಲಾ ಅವರಿಗೆ ಪೀಠ ಅನುಮತಿ ನೀಡಿತು.

'ನಾಗೇಶ್ವರ ರಾವ್ ಅವರಿಗೆ ಬೇಕಾದ ಎಲ್ಲ ಸಹಕಾರವನ್ನು ಐಒಎ ಜಂಟಿ ಕಾರ್ಯದರ್ಶಿ ಮತ್ತು ಕೇಂದ್ರ ಕ್ರೀಡಾ ಸಚಿವಾಲಯ ಒದಗಿಸಿಕೊಡಬೇಕು' ಎಂದು ಹೇಳಿತು.

ಡಿಸೆಂಬರ್ ಒಳಗಾಗಿ ಚುನಾವಣೆ ನಡೆಸಿ ಹೊಸ ಆಡಳಿತ ಮಂಡಳಿ ಅಸ್ತಿತ್ವಕ್ಕೆ ಬರದಿದ್ದರೆ, ಐಒಎಯನ್ನು ಅಮಾನತು ಮಾಡುವುದಾಗಿ ಐಒಸಿ ಸೆ.8 ರಂದು ಅಂತಿಮ ಎಚ್ಚರಿಕೆ ನೀಡಿತ್ತು.

ಐಒಎಗೆ 'ಹಂಗಾಮಿ/ ಮಧ್ಯಂತರ ಅಧ್ಯಕ್ಷ'ರನ್ನು ನೇಮಿಸಿದರೆ ಅದನ್ನು ಅಂಗೀಕರಿಸುವುದಿಲ್ಲ. ರಾಜೀವ್ ಮೆಹ್ತಾ ಅವರೊಂದಿಗೆ ಮಾತ್ರ ನಾವು ವ್ಯವಹರಿಸುತ್ತೇವೆ ಎಂದೂ ಸ್ಪಷ್ಟಪಡಿಸಿತ್ತು.

ಐಒಎ ಚುನಾವಣೆ ಕಳೆದ ಡಿಸೆಂಬರ್‌ನಲ್ಲಿ ನಡೆಯಬೇಕಿತ್ತು. ಆದರೆ ನಿಯಮಾವಳಿಯ ತಿದ್ದುಪಡಿ ಪ್ರಕ್ರಿಯೆ ನಡೆದ ಕಾರಣ ಚುನಾವಣೆ ನಡೆದಿರಲಿಲ್ಲ. ಈ ವರ್ಷದ ಮೇ ತಿಂಗಳಲ್ಲಿ ನರೀಂದರ್ ಬಾತ್ರಾ ಅವರನ್ನು ಐಒಎ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಲಾಗಿತ್ತು.

ಮುಖ್ಯಾಂಶಗಳು

- ಡಿ.15ರ ಒಳಗಾಗಿ ಚುನಾವಣೆ ನಡೆಸಲು ಕ್ರಮವಹಿಸಿ
- ಸುಪ್ರೀಂಕೋರ್ಟ್ ಪೀಠ ಸೂಚನೆ
- ಐಒಸಿ ಸಭೆಯಲ್ಲಿ ಪಾಲ್ಗೊಳ್ಳಲು ರಾಜೀವ್ ಮೆಹ್ತಾಗೆ ಅನುಮತಿ

ಮಿಸಾಕ ಯುನೈಟೆಡ್ ತಂಡಕ್ಕೆ ಜಯ

ಬೆಂಗಳೂರು: ಮಿಸಾಕ ಯುನೈಟೆಡ್ ಎಫ್‌ಸಿ ತಡದವರು ಇಲ್ಲಿ ನಡೆಯುತ್ತಿರುವ ಕೆಎಸ್‌ಎಫ್‌ಎ ಮಹಿಳಾ ಫುಟ್‌ಬಾಲ್ ಲೀಗ್‌ನಲ್ಲಿ ಗೆಲುವು ಪಡೆದರು.

ಗುರುವಾರ ನಡೆದ ಪಂದ್ಯದಲ್ಲಿ ಮಿಸಾಕ ಯುನೈಟೆಡ್ 1–0 ಗೋಲಿನಿಂದ ಪರಿಕ್ರಮ ಎಫ್‌ಸಿ ತಂಡವನ್ನು ಮಣಿಸಿತು. ನಿಶಾಲಿಯಾ ಅವರು 41ನೇ ನಿಮಿಷದಲ್ಲಿ ಗೆಲುವಿನ ಗೋಲು ಗಳಿಸಿದರು.

ಏಕಾಗ್ರತೆ ಭಂಗ: ಬಜರಂಗ್ ದೂರು

ನವದೆಹಲಿ (ಪಿಟಿಐ): ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ತಮ್ಮ ತಲೆಗೆ ಆಗಿದ್ದ ಗಾಯಕ್ಕೆ ಸ್ಥಳದಲ್ಲಿದ್ದ ವೈದ್ಯರು ಪಟ್ಟಿಯನ್ನು ಬಿಗಿಯಾಗಿ ಕಟ್ಟಿದ್ದರಿಂದ ಏಕಾಗ್ರತೆಗೆ ಭಂಗವಾಯಿತು ಎಂದು ಭಾರತದ ಕುಸ್ತಿಪಟು ಬಜರಂಗ್ ಪೂನಿಯಾ ಬೇಸರ ವ್ಯಕ್ತಪಡಿಸಿದ್ದಾರೆ.

ಪ್ರಶಸ್ತಿ ಗೆಲ್ಲುವ ವಿಶ್ವಾಸದಲ್ಲಿದ್ದ ಬಜರಂಗ್ ಈ ಟೂರ್ನಿಯ ಮೊದಲ ಸುತ್ತಿನ ಪಂದ್ಯದಲ್ಲಿ ಕ್ಯೂಬಾದ ಅಲೆಜಾಂಡ್ರೊ ಎನ್ರಿಕ್ ವ್ಲಾಡೆಸ್ ಟೊಬೀರ್ ವಿರುದ್ಧ ಸೆಣಸಿದ್ದರು. ಈ ಸಂದರ್ಭದಲ್ಲಿ ಬಜರಂಗ್ ತಲೆಗೆ ಗಾಯವಾಗಿ ರಕ್ತ ಸುರಿಯಿತು.

ಆಗ ಸ್ಥಳದಲ್ಲಿದ ವೈದ್ಯರು ಪ್ರಥಮ ಚಿಕಿತ್ಸೆ ನೀಡಿದ್ದರು. ರಿಜಿಡ್ ಟೇಪ್ ಕಟ್ಟಿದ್ದರು. ಟೆನಿಸ್ ಹಾಗೂ ಬ್ಯಾಸ್ಕೆಟ್‌ಬಾಲ್ ಆಟಗಾರರಿಗೆ ಗಾಯವಾದಾಗ ಈ ರೀತಿಯ ಟೇಪ್ ಬಳಸಲಾಗುತ್ತದೆ. ಅದರಲ್ಲೂ ಮೊಣಕಾಲು ಮತ್ತು ಪಾದಕ್ಕೆ ಗಾಯವಾದಾಗ ಬಳಸುತ್ತಾರೆನ್ನಲಾಗಿದೆ.

ಬೆಂಗಳೂರು ಯುನೈಟೆಡ್‌ಗೆ ಗೆಲುವು

ಬೆಂಗಳೂರು: ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವು ಪಡೆದರು.

ಗುರುವಾರ ನಡೆದ ಪಂದ್ಯದಲ್ಲಿ ಬೆಂಗಳೂರು ಯುನೈಟೆಡ್ ತಂಡ 5–0 ಗೋಲುಗಳಿಂದ ಯಂಗ್ ಚಾಲೆಂಜರ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಇರನ್ ಯದ್ವಡ್ ಅವರು ಎರಡು ಗೋಲುಗಳನ್ನು ಗಳಿಸಿ (3 ಮತ್ತು 26ನೇ ನಿ.) ಮಿಂಚಿದರು. ಜೈರೊ ರಾಡ್ರಿಗಸ್ (7), ಶಾಜನ್ ಫ್ರಾಂಕ್ಲಿನ್ (79) ಮತ್ತು ಚೆಸ್ಟರ್ ಪೌಲ್ ಲಿಂಗ್ಡೊ (65) ಅವರು ತಲಾ ಒಂದು ಗೋಲು ತಂದಿತ್ತರು.

ಆರಂಭದಿಂದಲೇ ಆಕ್ರಮಣಕಾರಿ ಆಟವಾಡಿದ ಬೆಂಗಳೂರು ಯುನೈಟೆಡ್ ತಂಡದ ಆಟಗಾರರು ಚೆಂಡಿನ ಮೇಲೆ ಪೂರ್ಣ ನಿಯಂತ್ರಣ ಸಾಧಿಸಿದರು. ಯಂಗ್ ಚಾಲೆಂಜರ್ಸ್ ತಂಡ ಹೊಂದಾಣಿಕೆಯ ಆಟವಾಡಲು ವಿಫಲವಾಯಿತು.

ದಿನದ ಇನ್ನೊಂದು ಪಂದ್ಯದಲ್ಲಿ ರೂಟ್ಸ್ ಎಫ್‌ಸಿ 2–0 ಗೋಲುಗಳಿಂದ ಕೊಡಗು ಎಫ್‌ಸಿ ತಂಡವನ್ನು ಮಣಿಸಿತು. ರೂಟ್ಸ್ ತಂಡದ ಎರಡೂ ಗೋಲುಗಳನ್ನು ಅಹ್ಮದ್ ಶಾಹಿಬ್ ತಂದಿತ್ತರು.

ಪಂದ್ಯದ ಮೊದಲ ಅವಧಿ ಗೋಲುರಹಿತವಾಗಿತ್ತು. ಅಹ್ಮದ್ ಅವರು 50ನೇ ನಿಮಿಷದಲ್ಲಿ ಗೋಲಿನ ಖಾತೆ ತೆರೆದರು. ಒಂಬತ್ತು ನಿಮಿಷಗಳ ಬಳಿಕ ತಮ್ಮ ಎರಡನೇ ಗೋಲು ಗಳಿಸಿದರು.

ಶುಕ್ರವಾರ ನಡೆಯುವ ಪಂದ್ಯಗಳಲ್ಲಿ ಎಂಇಜಿ ಮತ್ತು ಸೆಂಟರ್– ಬಿಎಫ್‌ಸಿ ಹಾಗೂ ಎಎಸ್‌ಸಿ ಮತ್ತು ಸೆಂಟರ್– ಬಿಯುಎಫ್‌ಸಿ ತಂಡಗಳು ಪೈಪೋಟಿ ನಡೆಸಲಿವೆ.

ಬೆಂಗಳೂರು ಯುನೈಟೆಡ್‌ನ ಸೆಲ್ವಿನ್ ಮಿರಾಂಡ (ಎಡ), ಯಂಗ್ ಚಾಲೆಂಜರ್ಸ್‌ನ ದೀಪಕ್ ಪೈಪೋಟಿ ನಡೆಸಿದರು ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

ಬಾಬರ್ ಶತಕ: ಪಾಕ್ ಜಯಭೇರಿ

ಕರಾಚಿ (ರಾಯಿಟರ್ಸ್): ನಾಯಕ ಬಾಬರ್ ಅಜಂ ಅವರ ಶತಕ (ಅಜೇಯ 110, 66 ಎ) ಮತ್ತು ಮೊಹಮ್ಮದ್ ರಿಜ್ವಾನ್ (ಅಜೇಯ 88, 51 ಎ) ಗಳಿಸಿದ ಅರ್ಧಶತಕದ ನೆರವಿನಿಂದ ಪಾಕಿಸ್ತಾನ ತಂಡ ಇಂಗ್ಲೆಂಡ್ ವಿರುದ್ಧದ ಎರಡನೇ ಟಿ20 ಪಂದ್ಯದಲ್ಲಿ 10 ವಿಕೆಟ್‌ಗಳ ಜಯ ಸಾಧಿಸಿತು.

ಕರಾಚಿಯಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಇಂಗ್ಲೆಂಡ್ 5 ವಿಕೆಟ್‌ಗೆ 199 ರನ್ ಗಳಿಸಿತು. ಪಾಕ್ 19.3 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ ಗೆಲುವಿನ ಗುರಿ ತಲುಪಿತು. ಏಳು ಪಂದ್ಯಗಳ ಸರಣಿ ಇದೀಗ 1–1 ರಲ್ಲಿ ಸಮಬಲದಲ್ಲಿದೆ.

ಸಂಕ್ಷಿಪ್ತ ಸ್ಕೋರ್: ಇಂಗ್ಲೆಂಡ್: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 199 (ಫಿಲ್ ಸಾಲ್ಟ್ 30, ಡಕೆಟ್ 43, ಹ್ಯಾರಿ ಬ್ರೂಕ್ 31, ಮೊಯೀನ್ ಅಲಿ ಅಜೇಯ 55, ದಹಾನಿ 37ಕ್ಕೆ 2, ರವೂಫ್ 30ಕ್ಕೆ 2)

ಪಾಕಿಸ್ತಾನ: 19.3 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 203 (ಮೊಹಮ್ಮದ್ ರಿಜ್ವಾನ್ ಅಜೇಯ 88, ಬಾಬರ್ ಅಜಂ ಅಜೇಯ 110)

ಲೈಂಗಿಕ ಸಮಸ್ಯೆಗೆ ಹರ್ಬಲ್ ಪರಿಹಾರ
ಸಣ್ಣ ಇಂದ್ರಿಯ, ಉತ್ತೇಜನ ಸಮಸ್ಯೆ, ಸೆಕ್ಸ್ ಸಮಯ ಹೆಚ್ಚಿಸಲು ಆಯುರ್ವೇದಿಕ ಉಪಚಾರ. ಸಲಹೆ ಉಚಿತ.
8097004844

ಲೈಂಗಿಕ ಸಮಸ್ಯೆ
ಪೌರುಷ ದೌರ್ಬಲ್ಯ ದೂರ ಮಾಡಿಕೊಳ್ಳಿ. ಇಂದ್ರಿಯದ ಆಕಾರ ಹೆಚ್ಚಿಸಿಕೊಳ್ಳಿ. ದಾಂಪತ್ಯ ಜೀವನದ ಅಸಲಿ ಆನಂದ ಪಡೆಯಿರಿ.
ನಿಮ್ಮ ಸಮಸ್ಯೆಗೆ ಸತ್ಯ ಹಾಗೂ ಆಯುರ್ವೇದಿಕ ಔಷಧಿ ಪಡೆಯಿರಿ ಮತ್ತು ಆನಂದಮಯ ಜೀವನ ನಿಮ್ಮದಾಗಿಸಿಕೊಳ್ಳಿ
8006973372
7506062785

ನಿಮ್ಮ ಯಶಸ್ಸಿನ ಓಟಕ್ಕೆ ಕಾಲು ನೋವೇ ಅಡ್ಡಗಾಲಾಗಿದೆಯೆ?
ಬೃಹತ್ರಿ ಜಾಯಿಂಟ್ ಪೇನ್ ರಿಲೀಫ್ ಆಯಿಲ್ | ಇದನ್ನು ಬಳಸಿ; ನೋವನ್ನು ಕಳಿಸಿ
Rs. 249
BRIHATRI Joint Pain Relief Oil GAULTHERIA PLUS OIL
AyurCentral
ಆಯುರ್ವೇದಿಕ್ ಮೆಡಿಕಲ್ ಶಾಪುಗಳು
www.ayurcentral.com
ಬೆಂಗಳೂರಿನಲ್ಲಿ 60+ ಆಯುರ್ ಸೆಂಟ್ರಲ್ ಶಾಪುಗಳಿವೆ
ಆಯುರ್ ಸೆಂಟ್ರಲ್ ಅಂಗಡಿಗಳಲ್ಲಿ ಮಾತ್ರ ಸಿಗುತ್ತದೆ
ಬೆಂಗಳೂರಿನಿಂದ ಹೊರಗಿರುವವರು ಆನ್‌ಲೈನ್ ಮೂಲಕ ತರಿಸಿಕೊಳ್ಳಿ: ayurcentralonline.com

ಬೈದ್ಯನಾಥ್
ಅಸಲಿ ಆಯುರ್ವೇದ
ಮಲಬದ್ಧತೆ ಹಾಗೂ ಮೂಲವ್ಯಾಧಿ ನಿವಾರಣೆಗೆ ಸಹಕಾರಿಯಾಗಿದೆ
ಸಿಡ್‌ಪೈಲ್ಸ್ ಟ್ಯಾಬ್ಲೆಟ್
ಗುದದ್ವಾರದ ಭಾಗದಲ್ಲಿನ ಊತ ಮತ್ತು ನೋವು, ಉರಿತದ ಅನುಭವ, ತುರಿಕೆ ಮತ್ತು ಮಲಬದ್ಧತೆ ನಿವಾರಿಸಲು ಸಹಕಾರಿಯಾಗಿದೆ.
Siddhayu SIDPILES TABLET (Previously Pilorhoids) For Piles Baidyanath Since 1917
ಅಭಯಾಮೃತ
ದೀರ್ಘಕಾಲೀನ ಮಲಬದ್ಧತೆ ನಿವಾರಿಸಲು ಹಾಗೂ ಜೀರ್ಣಕ್ರಿಯೆ ಹೆಚ್ಚಿಸಲು ನೆರವಾಗುತ್ತದೆ
I. NO. MP/25E/08/040/137
Customer Care: 8448444935
www.baidyanath.co

Hero
ನವರಾತ್ರಿ ಪ್ರೀ-ಬುಕ್ಕಿಂಗ್ ಕೊಡುಗೆ
ನವರಾತ್ರಿಯ ಸಮಯದಲ್ಲಿ ಖಚಿತವಾದ ಡೆಲಿವರಿಗಾಗಿ ಈಗಲೇ ಬುಕ್ ಮಾಡಿ
ಹೀರೊ ಟೂ-ವ್ಹೀಲರ್* ಗೆಲ್ಲುವ ಅವಕಾಶ
ಪ್ರತಿ ಖರೀದಿಯ ಮೇಲೆ* ಖಚಿತ ಉಡುಗೊರೆ
ಕೇವಲ ₹501/- ರಿಂದ* ಬುಕ್ಕಿಂಗ್ ಪ್ರಾರಂಭವಾಗುತ್ತಿದೆ
25ನೇ ಸೆಪ್ಟೆಂಬರ್ 2022ರ ವರೆಗಿನ ಬುಕ್ಕಿಂಗ್‌ಗಳಿಗೆ ಮಾತ್ರ ಕೊಡುಗೆಯು ಮಾನ್ಯವಾಗಿರುತ್ತದೆ. 26ನೇ ಸೆಪ್ಟೆಂಬರ್‌ನಿಂದ 5ನೇ ಅಕ್ಟೋಬರ್ 2022ರ ನಡುವೆ ಡೆಲಿವರಿಯಾಗುತ್ತದೆ.
ಶೀಘ್ರದಲ್ಲಿಯೇ ಬರುತ್ತಿದೆ
Hero GIFT Grand Indian Festival of Trust 26th Sep - 5th Oct
ಈಗಲೇ ಖರೀದಿಸಿ 2023ರಲ್ಲಿ ಪಾವತಿಸಿ | ಸ್ಕೂಟರ್‌ಗಳಿಗೆ ಲೋನ್ @ 0% | ಕಡಿಮೆ EMI ಪ್ರತಿ ₹1000 ಲೋನ್‌ಗೆ ₹30 ರಿಂದ ಆರಂಭ
ಆಧಾರ್‌ನ ಆಧಾರದ ಮೇಲೆ ಲೋನ್ & ಕ್ಯಾಶ್ EMI | ಫೆಸ್ಟೀವ್ ಕ್ಯಾಶ್ ಬೆನಿಫಿಟ್ ₹2100 ವರೆಗೆ | ಎಕ್ಸ್‌ಚೇಂಜ್ ಬೆನಿಫಿಟ್ ₹5000 ವರೆಗೆ

70116 70116
TO INSTANTLY CONNECT GIVE A MISSED CALL TO 83677 96950
CALL TOLL-FREE 1800 266 0018
Hero 100 MILLION** | WORLD'S NO.1 21 YEARS IN A ROW$
HeroMotoCorp.com
Hero GoodLife | Enroll and get benefit of ₹6500 T&C apply
5% EXTRA CASHBACK# SBI card | #Min. Trxn.: ₹20,000; Max. Cashback on one Trxn. per card during the offer period: ₹5,000. per card. Valid only on EMI Trxn. Validity: 01 Oct - 31 Dec 2022. T&C Apply.
Exchange Powered By Wheels of Trust^^ | ಯಾವುದೇ ಹಳೆಯ ದ್ವಿಚಕ್ರ ವಾಹನವನ್ನು ಅತ್ಯುತ್ತಮ ರೀಸೇಲ್ ಮೌಲ್ಯಕ್ಕೆ ಹೊಸ ಹೀರೊದೊಂದಿಗೆ ವಿನಿಮಯ ಮಾಡಿಕೊಳ್ಳಿ. ಹೆಚ್ಚಿನ ವಿವರಗಳಿಗಾಗಿ www.wheelsoftrust.comಗೆ ಭೇಟಿ ನೀಡಿ.
SCAN FOR BEST^^ RESALE VALUE
Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet or call our toll-free no.: 1800 266 0018 or visit us on www.HeroMotoCorp.com. Accessories and features shown may not be a part of standard fitment. Always wear a helmet while riding a two-wheeler. **As per cumulative dispatch numbers till 31st January, 2021. $Highest Two-wheeler sales in a year by a single corporate entity. Data source: DNA Consult Advisory and Society of Indian Automobile Manufacturers. Based on Two-Wheeler Market Reports for CY2021 published by DNA Consult Advisory; and SIAM's Auto Industry Sales figures for CY2021 ^^Based on offers from empaneled dealers on Wheels of Trust platform. #Available at select dealerships. An SBI offer, subject to its exclusive T&Cs. ~Finance scheme is at the sole discretion of financiers & subject to its respective terms & conditions. ~~Offer is for limited period or till stock lasts. Offers amount & combination of offers may vary for model/variant & states. For more details please visit your nearest authorised Hero outlet. ˇOffer is in association with Hero Fincorp Ltd. T&C apply. Finance scheme is at the sole discretion of financiers & subject to its respective terms & conditions. *T&C apply.
AUTHORISED DEALERS - BENGALURU - MAGADI ROAD: POORNA HERO - PH: 9289923212. MARATHALLI: VAAYURATHA HERO - PH: 9289923811. BANASHANKARI: SAI HERO - PH: 9289922476. BANASWADI: BHAGATH HERO - PH: 9289922738. BYATARAYANAPURA: BIMAL HERO - PH: 9289922863. Doddaballapur : Bimal Hero 9742202125, HOSUR ROAD: RT KRISHNA HERO - PH: 9289923177. LALBAGH ROAD: PRAKASH HERO - PH: 9289922117. PEENYA: SAI HERO - PH: 9289922830. RAJAJI NAGAR: MAX HERO - PH: 9289923023. HOSKOTE: BHAGATH HERO - PH: 8884600051. K R PURAM: BHAGATH HERO - PH: 9513353807. TUMKUR: SAI HERO - PH: 9289922986. TIPTUR: SAI HERO PH. 9164840456. KUNIGAL: SAI HERO - PH: 7022752858. SHIMOGA: SREE KARTHIK HERO - PH: 9289922509. MYTHRI HERO - PH: 9289922635. CHICKMAGALUR: NAYANA HERO, PH: 9289922120. SAGAR: PRAJWAL HERO - PH: 9289922399. MANGALORE: WEST COAST HERO - PH: 9289922606. TRIBHUVAN HERO - Ph: 9289923203. CHITRADURGA: MAHESH HERO - PH: 9289922126. DAVANAGERE: RUTVII HERO - PH: 9289923174. PRAKASHA HERO - PH: 9289922501. MYSORE: DYUTHI MYSORE HERO (B.M.HOSPITAL) - Ph: 9289922475. SHAH MYSORE HERO (NAZARBAD CITY) - Ph: 9289922518. MANDYA: DAYANAND HERO - Ph: 9289922123. CHAMARAJNAGAR: YEPIYES HERO - Ph: 9289922828. HASSAN: VENKATESHWARA HERO, Ph: 9289922121. BELGAUM: NAGSHANTI HERO - PH: 9289922502 NAGSHANTI - 2 UNIT - PH. 9289923173. CHIKODI: SHREE RENUKA MOTORS - PH: 9289922884. GOKAK: CHINMAY HERO - PH: 9289922673. GULBARGA: SRI VENKATESH HERO - Ph: 9289922118. BIDAR: KAILASH HERO - Ph: 9289922124. YADGIR: SRI VENKATESH HERO - Ph: 9289922875. BELLARY: ANNAPOORNA HERO - PH: 9289922125. KOPPAL: VIJAYA HERO - PH: 9289922985. SINDHANUR: ANAND HERO - PH: 9289922943. RAICHUR: SRI VENKKATESHWARA HERO - PH: 9289922944. HOSPET: ANNAPOOORNA AUTOMOTIVES - PH: 9289923165. HUBLI: CHADHA HERO - PH: 9289922119. GADAG: CHADHA HERO: - PH - 8050041033. BELLAD HERO - PH: 9289922565. DHARWAD: BELLAD HERO - PH: 9686204480. HAVERI: BAHADDUR DESAI HERO - PH: 9289922977. SIRSI: SHAKTI HERO - PH: 9289922391. BIJAPUR: VIJAY HERO - PH: 9289922122. SINDAGI: JOGUR MOTORS - PH: 9289922964. MUDHOL: KUMAR HERO - PH: 9289922633. BAGALKOT: CHINMAY HERO - PH: 9289923049.
WT.5062.2022KAN